

ವಸಂತ ಪ್ರಕಾಶನ

ಆದಿವಾಸಿ ಬದುಕಿನ ಒಳಸುಳಿಗಳು

ಸಂಪಾದಕರು:

ಪ್ರೊ. ಶಿರಗಾನಹಳ್ಳಿ ಶಾಂತಾನಾಯ್ಕ

ಆದಿವಾಸಿ ಬದುಕಿನ ಒಳಸುಳಿಗಳು

ಆದಿವಾಸಿ ಬದುಕಿನ ಒಳಸುಳಿಗಳು

ಸಂಪಾದಕರು

ಪ್ರೊ. ಶಿರಗಾನಹಳ್ಳಿ ಶಾಂತಾನಾಯ್ಕ

ವಸಂತ ಪ್ರಕಾಶನ
ನಂ. 360, 10ನೇ 'ಬಿ' ಮುಖ್ಯರಸ್ತೆ, 3ನೇ ಬ್ಲಾಕ್
ಜಯನಗರ, ಬೆಂಗಳೂರು – 560 011

Aadivaasi Badukina Olasuligalu (Kannada) : a collection of articles about Karnataka Adivasi Lifestyle, edited by Prof. Shiraganahalli Shanthanaik; published by Vasantha Prakashana, No. 360, 10th 'B' Main, Jayanagar 3rd Block, Bangalore - 560 011, India.
Telephone : 080-40917099, Mob: 7892106719
e-mail: vasantha_prakashana@yahoo.com
www.vasanthaprakashana.com

First print : 2021
Copyright © Author

ಪ್ರಥಮ ಮುದ್ರಣ : 2021
ಉಪಯೋಗಿಸಿದ ಕಾಗದ : 70 ಜಿಎಸ್ಎಂ ಮ್ಯಾಪ್‌ಲಿಥೊ
ಪುಟಗಳು : 132 ಬೆಲೆ : ರೂ. 110

ಮುಖಪುಟ ಮತ್ತು ಪುಟ ವಿನ್ಯಾಸ : ವಸಂತ ಪ್ರಕಾಶನ
ಮುದ್ರಣ : ರೀಗಲ್ ಪ್ರಿಂಟರ್ಸ್

ಸಂಪಾದಕರ ನುಡಿ

ಆದಿವಾಸಿ ಬದುಕು ಸ್ಥಿತ್ಯಂತರಗೊಳ್ಳುತ್ತಿರುವ ಈ ಸಂದರ್ಭದಲ್ಲಿ ವಾಸ್ತವ ಮತ್ತು ಭೂತಕಾಲದ ಒಳಪಲ್ಲಟಗಳನ್ನು ಅನೇಕ ಲೇಖಕರು, ಸಂಶೋಧಕರು ಅರ್ಥೈಸುವ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದಾರೆ. ಭಾರತದವರಷ್ಟೇ ಅಲ್ಲ ಬ್ರಿಟೀಷರ ಕೆಲವು ಅಧಿಕಾರಿಗಳು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಅವರು ಹೋದ ಮೇಲೆ ಅವರ ಮಾರ್ಗ ಮತ್ತು ಉಪಕರಣ ಬಳಸಿ ಒಂದು ವರ್ಗದ ಬುದ್ಧಿವಂತ ಜನರು ಬುಡಕಟ್ಟು, ಆದಿವಾಸಿ ಜನರ ಬದುಕು, ಬವಣೆಗಳನ್ನು ಆರಂಭಿಕ ದಿನಗಳಲ್ಲಿ ತಾವೆ ಸೃಷ್ಟಿಸಿದಂತೆ ಬರೆದುಕೊಂಡು ಅವರನ್ನು ಶೋಷಣೆಗೊಳಪಡಿಸಿ ರಾಜ್ಯ ಮಟ್ಟದ, ರಾಷ್ಟ್ರ ಮಟ್ಟದ ಬಹುಮಾನಗಳನ್ನ ಗಳಿಸಿರುವುದು ಜಗಜಾಹಿರಾತಾಗಿದೆ. ಈ ಎಲ್ಲಾ ಅಡೆತಡೆಗಳ ನಡುವೆ ಶಿಕ್ಷಣವನ್ನು ಪಡೆಯಲು ಮತ್ತು ಬದುಕನ್ನು ಅರ್ಥೈಸಿಕೊಳ್ಳಲು ದಶಕಗಳೆ ಕಳೆದು ಹೋದವು. ಅವರು ವಿದ್ಯೆಯನ್ನು ಪಡೆದು ವಿಚಾರವಂತರಾಗಿ ತಮ್ಮ ಪರಿಸರ, ತಮ್ಮ ಪೂರ್ವಜರ ಬದುಕಿನ ಇತಿಹಾಶ, ಅವರು ಪಟ್ಟ ಭವಣೆಯನ್ನು ಕುತೂಹಲದಿಂದ ನೋಡಿದ ಮೊದಲ ತಲೆಮಾರಿನ ವಿದ್ಯಾವಂತರಿಗೆ ಎಲ್ಲವೂ ಕುತೂಹಲವಾಗಿತ್ತು. ಬುಡಕಟ್ಟು ಜನರ ಕಟ್ಟಿಗೆ ಮಾರಾಟ, ಕಾಡಿಂದ ಅಂಟು ತಂದು ಶ್ರೀಮಂತ ಮಾರ್ವಾಡಿಗಳಿಗೆ ಮಾರುವುದು, ಕವಳಿ ಹಣ್ಣು, ಕಂಚಿನ ಹಣ್ಣು, ಕಾಡುಬೋರೆ ಹಣ್ಣು ಮುಂತಾದ ಕಾಡಿನ ಉತ್ಪನ್ನಗಳನ್ನು ಮಾರಾಟ ಮಾಡಿ ಹೊಟ್ಟೆ ಹೊರೆಯುತ್ತಿದ್ದ ಕಾಲ ಎಷ್ಟು ಬೇಗನೆ ಬದಲಾಯಿತು. 2021ನೇ ಇಸ್ವಿಯ ವೇಳೆ 140 ಕೋಟಿಯಷ್ಟು ಜನಸಂಖ್ಯೆ ಇರಬಹುದು. ಈ ಜನಸಂಖ್ಯೆಗೆ ಯಾವ ಕಾಡು, ಯಾವ ಬೆಟ್ಟ, ಯಾವ ಜಮೀನು ಯಾವ ನಗರ ಸಾಲಬಹುದು? ಬುದ್ಧಿವಂತ ಮಂದಿ ಅಮೇರಿಕ, ಇಂಗ್ಲೆಂಡ್, ಜರ್ಮನಿ, ಜಪಾನ್ ದೇಶಗಳಿಗೆ ವಲಸೆ ಹೋದರು. ಈಗ ಮಂಗಳನ ಅಂಗಳಕ್ಕೂ ಹೋಗಿ ಚಹಾ ದುಕಾನ್ ತೆರೆಯುವ ಹುನ್ನಾರ ನಡೆಸಿರುವ ಹಿನ್ನೆಲೆಯಲ್ಲಿ ಅವಿದ್ಯಾವಂತ ಮೇಧಾವಿಗಳ ಕುರಿತು, ಆಲೋಚನೆ ಮಾಡಬೇಕಾಗಿದೆ. ಕೇವಲ ಗಿಡಮೂಲಿಕೆಯಿಂದ ಅಗಲಿದ ಮನಸ್ಸುಗಳನ್ನು ಒಂದು ಮಾಡಬಹುದಾದರೆ, ನರಜೋಡಿಸುವ, ಎಲಬು ಜೋಡಿಸುವ, ಮನಸ್ಸು ಜೋಡಿಸುವ ಬಳ್ಳಿಗಳು, ಗಿಡಮೂಲಿಕೆಗಳು ಪ್ರಕೃತಿಯಲ್ಲಿದ್ದಾವೆ ಎಂದು ಬಲ್ಲ ಪಂಡಿತರು ದೊಡ್ಡವರೂ ಇಲ್ಲ ಕೇವಲ ನಾಕು ಅಕ್ಷರಗಳನ್ನು ಓದಲು ಮತ್ತು ಬರೆಯಲು ಕಲಿತ ತಕ್ಷಣ ತಾನೆ ಪಂಡಿತ ಎಂದುಕೊಂಡು ಬೀಗುವ ಜನರಿಗೆ ಏನು ಹೇಳಬೇಕು?

ದಾರ, ಸೂಜಿ, ಪಿನ್ನ, ಉಸರು ಬುಲ್ಡಿ ಮಾರುವ ಹಂದಿ ಜೋಗಿ ಮೈಗೆ ಬಾರಿಸಿಕೊಳ್ಳುವ ದುರಮುರುಗೊರು, ಹನುಮಪ್ಪ, ರಾಮ, ಸೀತೆಯಂತೆ ವೇಷ ಹಾಕಿ ಭಿಕ್ಷೆ ಎತ್ತುವ ಹಗಲು ವೇಷಗಾರರು, ಗೊಂದಲಿಗರು, ಗರಾಸಿಯಾ, ವಾಗ್ರಿ, ಕಾಡು ಕುರುಬ, ಜೇನು ಕುರುಬ, ಮಲೆ ಕುಡಿಯಾ, ಸೋಲಿಗ, ಹಾಲಕ್ಕಿ ಒಕ್ಕಲಿಗ, ಲಂಭಾಣಿ, ಕೊರಚ, ಕೊರಮರಿಂದ ಹಿಡಿದು ಆದಿ ದ್ರಾವೀಡ, ಆದಿ ಕರ್ನಾಟಕದ ಜನರು ಒಂದಲ್ಲಾ ಒಂದು ಹಿನ್ನೆಲೆಯಲ್ಲಿ ಬುಡಕಟ್ಟು ಜನರೆ ಆಗಿದ್ದರು. ಹೀಗಾಗಿ ಅವರ ಅನುಭವ ದಾಖಲಾಗುವುದು ಅವಶ್ಯವಾಗಿದೆ. ಹೀಗಾಗಿ ಈ ಸಂಕಲನದಲ್ಲಿ ಬರುವ ಸುಮಾರು ಹದಿನಾಕು ಲೇಖನಗಳು ಅತ್ಯಂತ ವೈವಿಧ್ಯಮಯವಾಗಿರುವುದು ಶ್ಲಾಘನೀಯ. ಮೊದಲನೆ ಲೇಖನ ಆದಿವಾಸ ಆಹಾರ ಪದ್ಧತಿ ಮತ್ತು ಫಾಸ್ಟ್‌ಫುಡ್ ಸಂಸ್ಕೃತಿದಿಂದ, ಆದಿವಾಸಿಗಳ ಬದುಕಿಗೆ ಬೆಳಕನ್ನು ಚೆಲ್ಲುವ ಮಲಾಣ್ ಕಾದಂಬರಿಯ ವಿಮರ್ಶೆಯವರೆಗೆ ವಿವಿಧ ಆಯಾಮಗಳನ್ನ ಹೊಂದಿರುವ ವಿಮರ್ಶೆ, ವೈಚಾರಿಕತೆ, ಸಂಶೋಧನೆ ಮೂರು ಪ್ರಕಾರಗಳ ಲೇಖನಗಳನ್ನ ಈ ಸಂಕಲನದಲ್ಲಿ ಕಾಣಬಹುದಾಗಿದೆ. ಈ ಮೂರು ಪ್ರಕಾರದ ಲೇಖನಗಳನ್ನ ಬರೆದಿರುವ ಬರಹಗಾರರು ಬಹಳ ಪ್ರಾಮಾಣಿಕತೆಯಿಂದ ಆ ಸಮುದಾಯಗಳಿಗೆ ನ್ಯಾಯ ಒದಗಿಸುವ ಹಿನ್ನೆಲೆಯಲ್ಲಿ ಬರೆದಿರುವುದು ಕಂಡು ಬರುತ್ತದೆ. ಹಾಗಾಗಿ ಇದೊಂದು ವಿಶಿಷ್ಟವಾದ ಲೇಖನಗಳ ಸಂಗ್ರಹವಾಗಿದ್ದು ಓದುಗರಿಗೆ ಒಂದು ಒಳ್ಳೆಯ ಅನುಭವವನ್ನು ಕೊಡುವುದರಲ್ಲಿ ಎರಡು ಮಾತಿಲ್ಲ. ಈ ಸಂಕಲನಕ್ಕೆ ತಮ್ಮ ಪ್ರಬಂಧಗಳನ್ನು ಬರೆದುಕೊಟ್ಟ ಎಲ್ಲ ಲೇಖಕರು ಅತ್ಯಂತ ಪ್ರಬುದ್ಧರು. ನಾಡು, ನುಡಿ, ಭಾಷೆಗಾಗಿ ಸದಾ ಕಾರ್ಯತತ್ಪರರಾಗಿದ್ದು ಅನೇಕ ಕೃತಿಗಳನ್ನು ಪ್ರಕಟಿಸಿದಂತಹವರು ಪಾಂಡಿತ್ಯವಲಯದಲ್ಲಿ ಈಗಾಗಲೆ ಸಾಕಷ್ಟು ಹೆಸರು ಮಾಡಿರುವಂತಹವರು. ಇವರೆಲ್ಲರ ಅನುಭವದ ಮೂಸೆಯಿಂದ ಬಂದಿರುವ ಈ ಎಲ್ಲಾ ಪ್ರಬಂಧಗಳನ್ನು ಕನ್ನಡದ ಓದುಗರು ಆಹ್ಲಾದಿಸಲಿ ಎನ್ನುವುದೆ ನನ್ನ ಆಶಯ. ಅಲ್ಲದೆ ಈ ಪ್ರಬಂಧ ಸಂಕಲನ ಪ್ರಕಟಿಸಲು ಮುಂದೆ ಬಂದ ಮುರಳಿಯವರಿಗೂ, ಸಲಹೆ ಸಹಕಾರ ನೀಡಿದ ಎಲ್ಲಾ ಓದುಗರಿಗೂ ವಂದನೆಗಳು.

20.09.2021 — **ಶಾಂತನಾಯ್ಕ**

ಬಳ್ಳಾರಿ

ಪರಿವಿಡಿ

1. ಆದಿವಾಸಿ ಆಹಾರ ಪದ್ಧತಿ ಮತ್ತು ಫಾಸ್ಟ್‌ಫುಡ್ ಸಂಸ್ಕೃತಿ
– ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ 1

2. ಜೇನುಕುರುಬರ ಜೀವನ ಸಂಸ್ಕೃತಿ
– ಡಾ. ವಿಜಯಲಕ್ಷ್ಮಿ 11

3. ಆದಿವಾಸಿ ಔಷಧೋಪಚಾರಗಳು
– ಡಾ. ಹೆಚ್. ಮಲ್ಲಿಕಾರ್ಜುನ 29

4. ಕಾಡು ಮತ್ತು ಆದಿವಾಸಿಗಳ ಅಸ್ತಿತ್ವದ ಸವಾಲುಗಳು
– ಡಾ. ಅನ್ನಪೂರ್ಣ ಗುಡುದೂರು 32

5. ಆದಿವಾಸಿ ಸಮುದಾಯ ಎದುರಿಸುತ್ತಿರುವ ಸವಾಲುಗಳು
– ಡಾ. ವನಜಾಕ್ಷಿ ಆರ್ ಹಳ್ಳಿಯವರ 35

6. ಬುಡಕಟ್ಟು ಜನಾಂಗ ಮತ್ತು ಫಾಸ್ಟ್‌ಫುಡ್
– ಡಾ. ಅಶ್ವತ್ತಮ್ಮ ಕೆ. 41

7. ಅಲೆಮಾರಿ ರಾಜಗೊಂಡ ಬುಡಕಟ್ಟಿನ ಔಷದ್ಯೋಪಚಾರ
– ವಿವೇಕ ವಿಶಾಲ 46

8. ಸಾಹಿತ್ಯ ಮತ್ತು ಪುರಾಣಗಳಲ್ಲಿ ವಾಲ್ಮೀಕಿ ಸಮುದಾಯದ ಚಿತ್ರಣ
– ಡಾ. ಕಾವ್ಯಶ್ರೀ. ಜಿ. 56

9. ಹಗಲುವೇಷಗಾರ ಪರಂಪರೆ ಮತ್ತು ಸಾಂಸ್ಕೃತಿಕ ಪಲ್ಲಟಗಳು
– ಡಾ. ಮುಮ್ತಾಜ್ ಬೇಗಂ 65

10. ಶ್ರಮಸಂಸ್ಕೃತಿಯ ಕಥನ : ಗೋರ್‌ಮಾಟಿ
– ಡಾ. ಮಲ್ಲಯ್ಯ ಸಂಡೂರು 74

11. ಮೀನು ಮತ್ತು ಹುಡುಗಿ – ಒಂದು ನೋಟ
– ಡಾ. ನಾಯಕರ ಹುಲುಗಪ್ಪ 82

12. ಬಂಜಾರ ಸಾಹಿತ್ಯದ ಒಳಸುಳಿಗಳು
– ಪ್ರೊ. ಶಿರಗಾನಹಳ್ಳಿ ಶಾಂತನಾಯ್ಕ 89

13. ವಲಸೆಯ ಹಾದಿಯಲ್ಲಿ
– ಶ್ರೀದೇವಿ ಕೆರೆಮನೆ 101

14. ಪ್ರೊ.ಎಸ್. ಶಾಂತನಾಯ್ಕರವರ ಆಯ್ದ ನಾಟಕಗಳಲ್ಲಿ
ಬುಡಕಟ್ಟು ಪ್ರಜ್ಞೆ
– ಡಾ. ಅಣ್ಣಾಜಿ ಕೃಷ್ಣಾರೆಡ್ಡಿ 106

15. ಜಾಗತೀಕರಣ : ಬುಡಕಟ್ಟು ಸಮುದಾಯಗಳ
ಬಡತನದ ಶ್ರೇಣೀಕರಣ
– ಡಾ. ಹೊನ್ನೂರಾಲಿ ಐ. 112

1

ಆದಿವಾಸಿ ಆಹಾರ ಪದ್ಧತಿ ಮತ್ತು ಫಾಸ್ಟ್‌ಫುಡ್ ಸಂಸ್ಕೃತಿ

ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ
ಸಹಾಯಕ ಪ್ರಾಧ್ಯಾಪಕರು,
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ವಿದ್ಯಾಸಂಗಮ, ಬೆಳಗಾವಿ.
ಮೊ: 9880839382/8904882873
Email : dr.maitra2011@gmail.com

ಪೀಠಿಕೆ

ಆದಿವಾಸಿಗಳು ವಿಶಿಷ್ಟವಾದ ಸಾಂಸ್ಕೃತಿಕ ಚಹರೆಯನ್ನು ಹೊಂದಿದ್ದಾರೆ. ಅಗ್ರವರ್ಣ ಹಿಂದೂ ಪದ್ಧತಿಯಲ್ಲಿ ಬುಡಕಟ್ಟು ಸಮಾಜವನ್ನು ವನವಾಸಿ, ಆದಿವಾಸಿಗಳೆಂದು ವರ್ಗೀಕರಿಸಿದರೂ ಕೂಡಾ ಇಂದಿಗೂ ಸಮಾಜ ಮತ್ತು ಸಂಸ್ಕೃತಿಗಳ ಆದಿಮ ಮಾನವ ಜ್ಞಾನದ ಶ್ರೀಮಂತ ವಾರಸುದಾರರಾಗಿಯೇ ಆದಿವಾಸಿಗಳು ಗುರುತಿಸಲ್ಪಟ್ಟಿದ್ದಾರೆ. ಗೊಂಡರು, ಗೊಲ್ಲರು, ಚೆಂಚರೂ, ನಾಯಕರು, ಲಂಬಾಣಿಗರು, ಕುರುಬರು, ಕೊಂಡರೆಡ್ಡಿಗಳು, ಕಾಡುಕುರುಬ, ಕಾಡುಗೊಲ್ಲರು, ಮಾಲಮಾದಿಗರು ಮುಂತಾದವರನ್ನು ವನವಾಸಿಗಳು ಅಥವಾ ಆದಿವಾಸಿಗಳೆಂದು ಗುರುತಿಸಿದ್ದಾರೆ.

ಆದಿವಾಸಿ ಇಲ್ಲವೇ ಗಿರಿಜನರು ತಮ್ಮ ಸಂಸ್ಕೃತಿ, ಸೃಜನಶೀಲತೆ, ಉತ್ಪಾದಕತೆಯ ಹೆಚ್ಚುಗಾರಿಕೆಯಿಂದ ಭಾರತೀಯ ಸಮಾಜದಲ್ಲಿ ಆದಿಗುರುಗಳೆಂದೇ ಪರಿಗಣಿಸಲ್ಪಟ್ಟಿದ್ದಾರೆ. ಇವರ ಜನಜೀವನ, ಆಹಾರ ಪದ್ಧತಿ, ರೂಢಿ, ನೈತಿಕ ನಿಯಮಗಳು, ಆಚರಣೆಗಳೆಲ್ಲವೂ ನಾಗರಿಕತೆಯ ತೊಟ್ಟಿಲುಗಳೇ ಆಗಿವೆ. ಆದಿವಾಸಿಗಳ ಸಾಮಾಜಿಕ, ಆರ್ಥಿಕ ಸ್ಥಿತಿ–ಗತಿ, ಸಾಂಸ್ಕೃತಿಕ ಜನಜೀವನ ಮತ್ತು ಆಹಾರ ಪದ್ಧತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದರೆ, ಸುಂದರ ಜೀವನಶೈಲಿಗೆ ಹಾಗೂ ಆರೋಗ್ಯವಂತ ನಾಗರಿಕ ಸಮಾಜ ನಿರ್ಮಾಣಕ್ಕೆ ಅವರ ಕೊಡುಗೆ ಅಪೂರ್ವವೆನಿಸುತ್ತದೆ. “ಬದುಕುವುದಕ್ಕೆ ತಿನ್ನು, ತಿನ್ನುವುದಕ್ಕೆ

ಬದುಕುವುದಲ್ಲ" ಎಂಬ ಅವರ ಸಹಜ ಜೀವನಕ್ರಮ ಅನುಕರಣೀಯ. ಆಧುನಿಕ ಆಹಾರ ಪದ್ಧತಿಯಿಂದ ನಾಗರಿಕ ಸಮಾಜ ಗುಣಮುಖರಾಗದ ಅನೇಕ ರೋಗಕ್ಕೆ ತುತ್ತಾಗುತ್ತಿದ್ದಾರೆ. ಆದಿವಾಸಿ ಆಹಾರ ಪದ್ಧತಿ, ಜಾತಿ, ವೃತ್ತಿ ಮತ್ತು ಆಚರಣೆಗಳಿಗನುಗುಣವಾಗಿತ್ತು. ಹೀಗಾಗಿ ಅದೊಂದು ನಿಸರ್ಗೋಪಚಾರದಂತೆ ಬಳಕೆಯಲ್ಲಿತ್ತು. ಸರ್ವಋತುಗಳಿಗನುಗುಣವಾದ ಆಹಾರ ಪದ್ಧತಿಯು ಕೃಷಿ ಕೃಷಿಯೇತರವಾಗಿಯೂ ವರ್ಗೀಕರಿಸಲ್ಪಟ್ಟಿತ್ತು. ಭಾರತೀಯ ಔಷಧಿ ತತ್ವಗಳ ಆಹಾರ ಪದ್ಧತಿಗಳಲ್ಲಿ ಆದಿವಾಸಿ ಆಹಾರ ಪದ್ಧತಿ ಶ್ರೀಮಂತ ಇತಿಹಾಸವನ್ನು ಹೊಂದಿದೆ. ಆಧುನಿಕ ಫಾಸ್ಟ್‌ಫುಡ್ ಸಂಸ್ಕೃತಿಯಿಂದ ಉಂಟಾಗುತ್ತಿರುವ ರಕ್ತಹೀನತೆಯಂತಹ ರೋಗಗಳಿಂದ ಮುಕ್ತರಾಗಲೂ ಆದಿವಾಸಿಗಳ ಆಹಾರ ಪದ್ಧತಿ ಅನುಕರಣೀಯವಾಗಿದೆ.

ಆದಿವಾಸಿ ಆಹಾರ ಸಂಸ್ಕೃತಿ

ಆದಿವಾಸಿ ಸಂಸ್ಕೃತಿಯೂ ಜನರ ಆಹಾರ ಕ್ರಮದಿಂದಲೂ ಹೆಚ್ಚುಗಾರಿಕೆ ಹೊಂದಿದೆ. ಸಮುದಾಯ, ಕುಲ, ಸಮಾಜಗಳ ಪಾಲನೆ ಪೋಷಣೆಗಳಿಗೆ ಇವರ ಆಹಾರ ಪದ್ಧತಿಯು ಸೈದ್ಧಾಂತಿಕ ನೆಲೆಯನ್ನು ಒದಗಿಸುತ್ತದೆ. ಆದಿಮ ಸಂಸ್ಕೃತಿಯ ಒಳಗೊಳ್ಳುವಿಕೆಯ ಮಾನದಂಡಗಳಲ್ಲಿ ಪ್ರಧಾನ ಸಂಸ್ಕೃತಿಯ ಹೇರಿಕೆ ಮತ್ತು ಆಚರಣೆಗಳು, ಆದಿವಾಸಿ ಆಹಾರ ಪದ್ಧತಿಗೆ ಪರ್ಯಾಯತೆಯನ್ನು ಕಲ್ಪಿಸುವಲ್ಲಿ ಯಶಸ್ವಿಯಾಗಿಲ್ಲ.

ಶಾಖಾಹಾರಿ ಮತ್ತು ಮಾಂಸಾಹಾರಗಳು ಪ್ರಚಲಿತವಾಗಿರುವ ಆಹಾರ ಪದ್ಧತಿಗಳು ಹಂದಿ, ದನ, ಉಡ, ಪಶು-ಪಕ್ಷಿ, ಎಲೆ ಬಳ್ಳಿ, ಕುರಿ, ಕೋಳಿ, ಎತ್ತು, ಆಕಳು, ಎಲೆ, ಬೇರು, ಗಡ್ಡೆ-ಗೆಣಸು, ಹಣ್ಣು-ತರಕಾರಿಗಳನ್ನು ತಿಂದು ಜನರ ಆಹಾರದ ಕ್ರಮವನ್ನು ಆದಿವಾಸಿಗಳು ಸಾಮಾಜೀಕರಿಸಿದರು. ಸಸ್ಯಹಾರಿ, ಪವಿತ್ರವು ಮತ್ತು ನಾಗರಿಕವಾದುದೆಂದು ಶಿಷ್ಟರು ಪರಿಗಣಿಸಿದರೆ, ಪರಿಶಿಷ್ಟರು ಆಹಾರದ ಮೂಲವನ್ನು ಗಿರಿಜನರೀಕರಣಗೊಳಿಸಿದರು. ಇತರರಿಗೂ ಹಲವು ಬಗೆಯ ಆಹಾರದ ರುಚಿಯನ್ನು ಹಾಗೂ ರೋಗ ನಿರ್ಮೂಲನೆ ಮತ್ತು ಶಕ್ತಿಯುತ ದೈಹಿಕ ಸಾಮರ್ಥ್ಯ ಹೊಂದಲು, ಮಾಂಸಾಹಾರವು ಪೂರಕವಾದುದೆಂದು, ಈ ಆಹಾರ ಪದ್ಧತಿ ಅನಾಗರಿಕವಲ್ಲವೆಂಬುದನ್ನು ಸಾಬೀತುಪಡಿಸಿದ್ದಾರೆ. ಮಾಂಸ ಸೇವನೆ ನಾಲಿಗೆಗೆ ರುಚಿಯಿದ್ದಂತೆ ದೇಹಕ್ಕೂ ಉಪಯುಕ್ತ, ಹಲವು ರೋಗಗಳಿಗೆ ಉಡದ ಮಾಂಸವು ದಿವ್ಯೌಷಧ, ಆದರೆ ನಾಗರಿಕ ಜೀವನ ನಡೆಸುವವರು ಇದನ್ನು ತಿರಸ್ಕರಿಸಿದರೂ ಸಂಸ್ಕಾರ ಹೊಂದಿದ ಪ್ರಧಾನ ಸಂಸ್ಕೃತಿಯ ನಾಗರಿಕರು ಇದನ್ನು "ಗಿರಿಜನರೀಕರಣಗೊಂಡವರು" ಅಥವಾ ಪಾಶ್ಚಾತ್ತೀಕರಣಗೊಂಡವರೆಂದು ಗುರುತಿಸುವ ಮೂಲಕ ಆಹಾರ ಕ್ರಮದಿಂದ ಜಾತಿವ್ಯವಸ್ಥೆಯನ್ನು ಬಲಪಡಿಸಿದ್ದು ವಿಪರ್ಯಾಸ.

ಆಧುನಿಕ ಯಾವುದೇ ವೈದ್ಯಕೀಯ ಸೌಲಭ್ಯಗಳಿಲ್ಲದ ಆ ಕಾಲದಲ್ಲಿ ರೋಗಗಳಿಗೆ ಔಷಧಿ ಗುರುತು ಮಾಡಿಕೊಂಡುದು ಆದಿವಾಸಿಗಳು ಆಹಾರ ಸಂಸ್ಕೃತಿಗೆ ನೀಡಿದ ಕೊಡುಗೆ. ಆಹಾರದ ರುಚಿಯೊಂದಿಗೆ ಆರೋಗ್ಯದ ಗುಟ್ಟುಗಳು, ಆದಿವಾಸಿ ಸಾಮಾಜಿಕ ಆಹಾರ ಪದ್ಧತಿಯ ಶ್ರೇಷ್ಠತೆಯನ್ನು ಸಾರಿದೆ. ಯಾವುದೇ ಪ್ರಾಣಿ-ಪಕ್ಷಿಗಳನ್ನು ಆಹಾರವಾಗಿ ಸೇವಿಸುವ ಮೊದಲು ಅದನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ಪರಿಶೀಲಿಸಿ ಅದರ ಪರಿಣಾಮಗಳನ್ನು ತಿಳಿಸುತ್ತಾ ಹಲವು ಪ್ರಯೋಗದೊಂದಿಗೆ ಆ ಪ್ರಾಣಿಗಳ ಆಹಾರದ ಕ್ರಮಗಳನ್ನು ಅಧ್ಯಯನ ಮಾಡಿದ್ದಾರೆ. ಉದಾಹರಣೆಗೆ: ಹಾವು, ಮುಂಗುಸಿಗಳು ಹೋರಾಡಿದ ನಂತರ ಮುಂಗುಸಿ ಟೀಕಿ ತಪ್ಪಲವನ್ನು ಹುಡುಕಿಕೊಂಡು ಹೋಗುತ್ತದೆ. 'ಟೆಕ್ಕೆದ ಕಸ' ವೆಂದು ಸಾಮಾನ್ಯವಾಗಿ ಎಲ್ಲಡೆ ಬೆಳೆಯುವ ತಪ್ಪಲ. ಹಿಡಿದ ತಕ್ಷಣ ಬಳ್ಳಿ ಮುರಿಯುವ ಗುಣದಿಂದ ಅದಕ್ಕೆ "ಸೊಂಟಮುರಿ ತಪ್ಪಲು" ಎಂದು ವಾಡಿಕೆ. ಮುಂಗುಸಿ ಹಾವಿನ ವಿಷ ಏರದಿರಲೆಂದು ಈ ತಪ್ಪಲನ್ನು ತಿನ್ನುತ್ತದೆ ಎಂಬುದು ಬಹುತೇಕವಾಗಿ ಖಾತ್ರಿ ಆದ ನಂತರವೇ ನಂಜು ಏರದಿರಲು ಈ ತಪ್ಪಲ ಪ್ರಯೋಗ ಆದಿವಾಸಿಗಳಲ್ಲಿ ಮನ್ನಣೆ ಪಡೆದಿದೆ.

"ಆದಿವಾಸಿಗಳಂತೆ ಇಂದಿನ ಆಧುನಿಕ ನಾಗರಿಕ ಸಮಾಜವು ಯಾವುದೇ ಬಗೆಯ ಮಾಂಸಗಳ ಪ್ರಯೋಗಮಾಡಿ ಹೊಸತನ್ನು ಆವಿಷ್ಕರಿಸಿಲ್ಲ. ಪ್ರಾಚೀನ ಆಹಾರಕ್ಕಿದ್ದ ಪ್ರಾಥಮಿಕ ಮೌಲ್ಯ ಇಂದಿಗೂ ಸರ್ವಮಾನ್ಯ. ಭಾರತೀಯರಿಗೆ ಮಾಂಸಾಹಾರ ಮಾತ್ರವಲ್ಲ ಸಸ್ಯಹಾರ ಸಂಸ್ಕೃತಿಯನ್ನು ಪರಿಚಯಿಸಿದ್ದು ಆದಿವಾಸಿಗಳೇ. ಆಫ್ರೀಕಾದ ನಾಗರಿಕತೆಯನ್ನು ಮಾನವ "ಮಾತೃ ನಾಗರಿಕತೆ" ಯೆಂದು ಪರಿಗಣಿಸುತ್ತಾರೆ. ಇದೇ ತೆರನಾಗಿ ಮಾನವನ ಆಹಾರ ಸಂಸ್ಕೃತಿಗೆ ಆದಿವಾಸಿಗಳೇ "ಮಾತೃ ಮೂರ್ತಿಗಳು" ಎಂದು ಹೇಳಬಹುದು. ಆಹಾರ ಸಂಸ್ಕೃತಿಗೆ ಭಾರತೀಯ ಆದಿವಾಸಿಗಳು ತಮ್ಮದೇ ಆದ ವಿಶಿಷ್ಟ ಸೇವೆಯನ್ನು ಮಾಡಿದ್ದಾರೆ. ವೈವಿಧ್ಯತೆ ರುಚಿ, ಆರೋಗ್ಯದಿಂದ ಕೂಡಿದ ಅವರ ಆಹಾರ ಸಂಶೋಧನೆ ಭಾರತೀಯ ವ್ಯಕ್ತಿತ್ವ ವಿಕಾಸಕ್ಕೆ ಮಾರ್ಗಸೂಚಿಯಾಯಿತು."[1]

ಆಹಾರವಾಗಿ ಸೇವಿಸುತ್ತಿರುವ ಅನೇಕ ಪ್ರಕಾರದ ಹಣ್ಣುಗಳು, ಗಡ್ಡೆ-ಕಾಯಿಗಳಲ್ಲಿರುವ ಎಷ್ಟೋ ಪೋಷಕಾಂಶಗಳ ಬಗೆಗೆ ಆದಿವಾಸಿಗಳು ಚೆನ್ನಾಗಿ ಅರಿತಿದ್ದಾರೆ. ನೈಸರ್ಗಿಕವಾಗಿ ಬೆಳೆದ ಹಣ್ಣು ಹಂಪಲು, ಗಿಡಮೂಲಿಕೆಗಳಿಗೆ ಚರಿತ್ರಾತ್ಮಕ ಆಹಾರಗಳೆಂದು ಪರಿಗಣಿಸಿ, ಔಷಧಿಯ ಗುಣಗಳುಳ್ಳ ಇವುಗಳ ಬಳಕೆಯನ್ನು ಜನಸಾಮಾನ್ಯರಿಗೆ ತಲುಪಿಸಿದವರು ಆದಿವಾಸಿಗಳು. ಬಾರಿ, ಕಾರಿ, ಕಕ್ಕೆ, ಬಿಕ್ಕೆ, ಕವಳಿ, ಕೇರುಹಣ್ಣು ಹಲಸುಗಳಲ್ಲಿನ ಪೋಷಕಾಂಶಗಳನ್ನು ಅರುಹಿದ್ದಾರೆ. ಕೋಸು, ಸುವರ್ಣಗಡ್ಡೆ, ನವಿಲುಕೋಸು ಮುಂತಾದ ಗಡ್ಡೆಗಳಲ್ಲಿರುವ ಆರೋಗ್ಯಕರ ಅಂಶಗಳನ್ನು ನಾಗರಿಕತೆಗೆ ಪರಿಚಯಿಸಿದ್ದಾರೆ.

ಆಹಾರ ಮತ್ತು ಔಷಧಿ ತತ್ವ

ಭಾರತೀಯರ ಶ್ರೇಷ್ಠವಾದ ಆಹಾರ ಪದ್ಧತಿಗಳಲ್ಲಿ ನಿರರ್ಥಕ ಆಹಾರಗಳೆಂದು ಹಾಗೂ ದೇವಾಲಯಗಳಲ್ಲಿ ನಿಷಿದ್ಧ, ನೈವೈದ್ಯಗಳಿಗೆ ವರ್ಜ್ಯವೆಂದು ಪರಿಗಣಿಸುವ ಹುನ್ನಾರಗಳಿಂದ ಆದಿವಾಸಿಗಳ ಆಹಾರ ಪದ್ಧತಿಯ ಶ್ರೇಷ್ಠತೆ ನಮ್ಮ ಅರಿವಿಗೆ ಬಂದಿಲ್ಲ. ದೇಹದ ಒಳಗಿರುವ ರೋಗಗಳನ್ನು ವಾಸಿ ಮಾಡಬಹುದಾದಂತೆ ದೇಹದ ಹೊರಗಿನ ಗಾಯಗಳಿಗೂ ಔಷಧಿಯ ರೂಪದಲ್ಲಿ ಉಪಯೋಗಿಸಬಹುದಾದ ಹಣ್ಣು ಗಿಡಮೂಲಿಕೆಗಳನ್ನು ಆಹಾರ ರೂಪದಲ್ಲೇ ಬಳಸುತ್ತಿದ್ದರು. ಉದಾ: ಗರ್ಭಿಣಿ ಸ್ತ್ರೀಯ ರಕ್ತಹೀನತೆಯನ್ನು ತಡೆಗಟ್ಟಲು ಬೀಟ್‌ರೂಟ್, ಬಾಣಂತಿಗೆ ಚೆನ್ನಾಗಿ ಹಾಲು ಬರಲು ನುಗ್ಗೆಸೊಪ್ಪನ್ನು, ಬೊಜ್ಜು ಕರಗಲು ಸೊರೆಕಾಯಿಯನ್ನು ಮಧುಮೇಹಿಗಳಿಗೆ ಹಾಗಲಕಾಯಿಯನ್ನು ಒಳಮೈ ಜ್ವರ ಕಡಿಮೆ ಮಾಡಲು ಬೇವಿನಸೊಪ್ಪನ್ನು ಹೀಗೆ ಆರೋಗ್ಯ ಸಂಬಂಧಿ ಆಹಾರ ಪದ್ಧತಿಗಳನ್ನು ಪಾಲಿಸುತ್ತಿದ್ದರು. ತುಳಸಿ, ಕರಿಮೆಣಸುಗಳ ಉಪಯುಕ್ತ ಬಳಕೆಯನ್ನು ಪರಿಚಯಿಸಿದವರು ಆದಿವಾಸಿಗಳಾಗಿದ್ದಾರೆ.

ಭಾರತದಲ್ಲಿ ಕುಲ, ವೃತ್ತಿಗಳನ್ನವಲಂಭಿಸಿ ಆಹಾರ ಪದ್ಧತಿ ಸಂಸ್ಕೃತಿ ರೂಪಗೊಂಡಿದೆ. ಆಧುನಿಕ ನಾಗರಿಕತೆ ಯಾವುದನ್ನು ನಾಗರಿಕ ಆಹಾರವೆಂದು ಪರಿಗಣಿಸಿದೆಯೇ ಅದರಿಂದಲೇ ಅನೇಕ ಗುಪ್ತರೋಗಗಳು ಉಲ್ಬಣಿಸುತ್ತಿವೆ. ಒಂದು ಜನಾಂಗದ ಅಥವಾ ಸಮಾಜದ ಆಹಾರ ಪದ್ಧತಿ ಇನ್ನೊಂದಕ್ಕೆ ಅನಾಗರಿಕವೆನಿಸಿದರೂ ಆಯಾ ಪ್ರದೇಶ, ಕಾಲ, ಆಚರಣೆ, ಪ್ರಕೃತಿ ಹಾಗೂ ದೈನಂದಿನ ಜನ ಜೀವನಕ್ಕೆ ಪೂರಕವಾಗಿರುವುದನ್ನು ಕಾಣಬಹುದು.

ನಮ್ಮ ದೇಶದ ಅನೇಕ ಪ್ರಾದೇಶಿಕ ಆದಿವಾಸಿಗಳಲ್ಲಿ ಏಡಿ, ಅಣಬೆ, ಅನೇಕ ಪ್ರಕಾರಗಳ ಮೀನುಗಳನ್ನು ಆಹಾರವಾಗಿ ಬಳಸುತ್ತಾರೆ. ಆಕಳು, ಎತ್ತು, ಎಮ್ಮೆ, ಹಂದಿಗಳಲ್ಲದೆ, ಪಾರಿವಾಳ, ಮೊಲ, ಗಿಳಿ, ಸಾಂಬಾರ ಕಾಗೆ (ಪಕ್ಷಿಮಾಂಸ)ಗಳನ್ನು ಪ್ರಾದೇಶಿಕತೆ ಮತ್ತು ಹವಾಮಾನಗಳಿಗನುಗುಣವಾಗಿ ಸೇವಿಸುತ್ತಾರೆ. ಶಾಖಾಹಾರದ ಬಗ್ಗೆ ಅವರಿಗೆ ಗೊತ್ತಿಲ್ಲವೆಂದಲ್ಲ. ಅವರ ದೈನಂದಿನ ದೈಹಿಕ ಶ್ರಮಕ್ಕೆ ಕಾಯಿಪಲ್ಯ ಮತ್ತು ಸೊಪ್ಪುಗಳಿಗಿಂತ ಮಾಂಸಾಹಾರದಿಂದ ಅಧಿಕ ಶಕ್ತಿ ದೊರಕುತ್ತದೆಂಬ ಅನಿಸಿಕೆ ಅವರಿಗಿರುವುದೆ ಕಾರಣ.

ಆಹಾರ ಪದ್ಧತಿ ಮತ್ತು ಆರ್ಥಿಕ ಚಿಂತನೆ

ಗೊಂಡರು, ಲಂಬಾಣಿಗರು, ಕೊಂಡರೆಡ್ಡಿಗಳು, ನಾಯಕರು, ಕೊರಚರು, ಕಾಡುಗೊಲ್ಲರು, ಜೇನುಕುರಬರು ಮುಂತಾದವರು. ಆಹಾರದೊಂದಿಗೆ ವಿಶಿಷ್ಟ ಪಾನೀಯಗಳನ್ನು ಉತ್ಪಾದಿಸುವುದನ್ನು ಕಾಣಬಹುದು. ಗಿಡದಿಂದ ಮದ್ಯ ತೆಗೆಯುವುದು. ಜೇನುಗೂಡಿನಿಂದ ತುಪ್ಪ, ತಾಳೆಹೆಂಡ, ಈಚಲು

ಹೆಂಡ, ಬೇವಿನ ಹೆಂಡಗಳು ಶ್ರೇಷ್ಠ ಆರೋಗ್ಯಕರ ಪಾನೀಯಗಳು. ಇವುಗಳಿಗೆ ಶರೀರವನ್ನು ಪುನರುತ್ತೇಜನಗೊಳಿಸುವ ಶಕ್ತಿಯಿದೆ. ಗರ್ಭಿಣಿಯರಿಗೆ ಜೇನು ಮತ್ತು ಬೇವಿನ ರಸಗಳು ಶಕ್ತಿವರ್ಧಕಗಳಂತೆ ಉಪಯೋಗಿಸುತ್ತಾರೆ. ಆದಿವಾಸಿಗಳ ಆಹಾರ ಸಂಗ್ರಹವು ಅಷ್ಟೇ ವಿಶಿಷ್ಟವಾದುದು. ಪ್ರಕೃತಿ ವಿಕೋಪಗಳಿಂದಲೂ ರಕ್ಷಿಸಲ್ಪಡುವ ಹಾಗೂ ಆಯಾ ಕಾಲದ ವಾತಾವರಣಕ್ಕೆ ಒಗ್ಗುವ ಆಹಾರ ಶೇಖರಣೆಯ ಸಮಯೋಚಿತ ಜ್ಞಾನವು ಅವರಿಗಿದೆ. ಕೃಷಿ, ಬೇಟೆ, ಪಶು ಸಂಗೋಪನೆಗಳಿಗನುಗುಣವಾದ ಆಹಾರ ಪದ್ಧತಿಗಳು ಆದಿವಾಸಿಗಳಲ್ಲಿ ಪ್ರಚಲಿತವಾಗಿವೆ. ಬೇಳೆ–ಕಾಳು, ಜೋಳ, ಬಾರ್ಲಿ ಮುಂತಾದ ಕೃಷಿ ಮೂಲದ ಆಹಾರಗಳ ಜೊತೆಯಲ್ಲಿ ಸಂಗೋಪನಾ ಪ್ರಾಣಿ ಪಕ್ಷಿಗಳನ್ನು ಆಹಾರವನ್ನಾಗಿ ಬಳಸುತ್ತಾರೆ.

ಶ್ರಮ ಸಂಸ್ಕೃತಿಯ ಆಹಾರ ಪದ್ಧತಿ ಆದಿವಾಸಿಗಳ ಅಸ್ಮಿತೆಯ ಪ್ರತಿಬಿಂಬ. ಗ್ರಾಮ ಜೀವನ, ಕಾಡು ಜೀವನಗಳಲ್ಲಿಯೇ ಕ್ರಿಯಾಶೀಲ ಮತ್ತು ಸೃಜನಶೀಲ ಜೀವನ ಜ್ಞಾನ ಇವರ ಪ್ರತಿಭೆಗೆ ಕನ್ನಡಿ. ಆರ್ಥಿಕಾಭಿವೃದ್ಧಿಗೂ ಪೂರಕವಾಗಬಲ್ಲ ಆಹಾರ ಉತ್ಪಾದನಾ ಕೌಶಲ್ಯ ಆದಿವಾಸಿಗಳ ಜೀವನಕ್ರಮವನ್ನು ನಿರೂಪಿಸುತ್ತದೆ. ಹಾಲುಡುವ ಸಾಕು ಪ್ರಾಣಿಗಳ ಸಂಗೋಪನೆಯ ಲಾಭ ಮತ್ತು ಹಾಲಿನಿಂದ ಆಗುವ ಆರೋಗ್ಯ ಭಾಗ್ಯ ಕುರಿತು ಅರುಹಿದವರು ಯಾದವರು. ಇವರು (ಮೀಟ್ ಅಂಡ್ ಮಿಲ್ಕ್ ಎಕನಾಮಿಸ್ಟ್) ಮಾಂಸ–ಹಾಲು ಆರ್ಥಿಕ ತಜ್ಞರಾಗಿ ಗುರುತಿಸಲ್ಪಟ್ಟಿದ್ದಾರೆ. ಆದಿವಾಸಿಗಳ ಆಹಾರ ಪದ್ಧತಿ, ಸಮಾಜೋ–ಆರ್ಥಿಕ–ರಾಜಕೀಯ ದೃಷ್ಟಿಕೋನಗಳಲ್ಲಿಯೂ ಮಹತ್ವಪೂರ್ಣ ಕೊಡುಗೆಯನ್ನು ನೀಡಿದೆ.

ಆದಿವಾಸಿಗಳ ಆಹಾರ ಸಂಸ್ಕೃತಿ ಆರ್ಥಿಕ ಕುಶಲತೆಗೂ ಪೂರಕವಾಗಿದೆ. ಸಂಗೋಪನಾ ಕೌಶಲ್ಯವು ಜನ ಜೀವನದ ಸಾಮಾನ್ಯ ಕ್ರಮವಾಗಿದ್ದರೂ ನಿರ್ವಹಣೆಯ ಬಹುದೊಡ್ಡ ಆರ್ಥಿಕ ಶಕ್ತಿಯೂ ಆಗಿದೆ. ಆದಿವಾಸಿಯೇತರ ಆಹಾರ ಸಂಸ್ಕೃತಿಯನ್ನು ಆಧ್ಯಾತ್ಮಿಕ ಜೀವನದ ಸಾತ್ವಿಕ ಆಹಾರ ಮತ್ತು ನಾಗರಿಕ ಆಹಾರವೆಂದು ಮಾನ್ಯ ಮಾಡುವ ಮೂಲಕ, ಬುಡಕಟ್ಟು ಆಹಾರದ ಶ್ರೇಷ್ಠತೆ ಹಾಗೂ ಮೌಲ್ಯವನ್ನು ಕೆಳದರ್ಜೆಗೆ ತಳ್ಳಲಾಗಿದೆ.

ಭಾರತೀಯ ಸಂದರ್ಭದಲ್ಲಿ ಆಯಾ ಧಾರ್ಮಿಕ ಬೋಧನೆಗಳ ಕಾಲಘಟ್ಟಗಳಲ್ಲಿ ಆಯಾ ಧರ್ಮಗಳು ಪ್ರಚುರಪಡಿಸಿದ ಆಹಾರ ಪದ್ಧತಿಗಳೇ ಶ್ರೇಷ್ಠ ಹಾಗೂ ಮಾನ್ಯತೆಯನ್ನು ಪಡೆದಿದ್ದವು. ಶಿಷ್ಟ, ಪರಿಶಿಷ್ಟ ಮತ್ತು ವಿಶಿಷ್ಟ ಆಹಾರ ಸಂಸ್ಕೃತಿಗಳ ಮಾನದಂಡದಲ್ಲಿ ಶ್ರೇಷ್ಠ ಮತ್ತು ಕನಿಷ್ಠ ಆಹಾರ ಪದ್ಧತಿಗಳೆಂದು ಗುರುತಿಸಲ್ಪಟ್ಟವು. ಇದರಿಂದ ಪೋಷಕಯುಕ್ತ ಮಾಂಸೋತ್ಪಾದನೆ, ಗಿರಿಜನ ಆಹಾರ ಪದ್ಧತಿಗಳು, ವರ್ಗೀಕರಣಕ್ಕೆ ಒಳಪಟ್ಟವು. ಆಹಾರದ ಮಾನದಂಡದಿಂದಲೇ ಶಕ್ತಿ ಮತ್ತು ಸಾಂಸ್ಕೃತಿಕ ವಾರಸುದಾರಿಕೆಯನ್ನು ಋಜುವಾತು ಪಡಿಸಲು ಹೊರಟ

ಶಿಷ್ಟರು, ಆದಿವಾಸಿಗಳನ್ನು ಸಾಂಸ್ಕೃತಿಕ ಚಹರೆಗಳಿಂದ ದೂರವಿಟ್ಟುದು ಕೂಡಾ ಗಮನಿಸಬಹುದು.

"ಯಾದವರು ವಿಜ್ಞಾನಶಾಸ್ತ್ರದಲ್ಲಿ ಪ್ರಾಣಿಗಳ ದೇಹದಿಂದ ದೊರೆಯುವ ಮಾಂಸ, ಹಾಲು ಮನುಷ್ಯನಿಗೆ ಆಹಾರವಾಗುತ್ತವೆಂದು ಕಂಡುಕೊಂಡದ್ದಲ್ಲದೇ ಹಲವು ಬಗೆಯ ಔಷಧೀಯ ಮೂಲಿಕೆಗಳು ಮನುಷ್ಯ-ಪ್ರಾಣಿಗಳ ರೋಗವನ್ನು ವಾಸಿ ಮಾಡುತ್ತವೆ. ಇದು ಭಾರತದಲ್ಲಿ ಆದಿವಾಸಿಗಳು ಕಂಡುಹಿಡಿದ ಹೊಸತನದ ಆವಿಷ್ಕಾರ"[2]

ಆದಿವಾಸಿಗಳು ಪಶು ಸಾಕಾಣಿಕೆಯೊಂದಿಗೆ ಪಶುವೈದ್ಯಕೀಯದಲ್ಲಿಯೂ ಎತ್ತಿದ ಕೈ, ಧಾರ್ಮಿಕ ಗೌರವ ಹಾಗೂ ಆರ್ಥಿಕ ಮೌಲ್ಯದ ವಿನಿಯೋಗಗಳಲ್ಲಿ ಪಶುಪಾಲನಾ ತಜ್ಞರಾಗಿಯೂ ಪರಿಣಿತರಾಗಿದ್ದಾರೆ. ಕ್ಷೀರೋತ್ಪಾದನೆ ಆದಿವಾಸಿ ಆಹಾರ ಸಂಸ್ಕೃತಿಯ ಶ್ರೀಮಂತಿಕೆಯ ಲಕ್ಷಣವಾಗಿದೆ. ಇದರೊಂದಿಗೆ ಸಾಮಾನ್ಯ ಮತ್ತು ಸಾಂಪ್ರದಾಯಿಕ ಪದ್ಧತಿಗಳಾದ ಅರಿಶಿಣದ ಉಪಯೋಗ ಹಾಗೂ ಅರಿಶಿಣದ ಎಲೆಯ ಬಳಕೆಯಂತಹವುಗಳು ಪ್ರಮುಖವಾಗಿವೆ. ರೋಗ ನಿರೋಧಕ ಶಕ್ತಿಯನ್ನು ಅತೀ ಹೆಚ್ಚು ಹೊಂದಿದ ಅರಿಶಿಣವು ನಿತ್ಯ ಆಹಾರ ಪದ್ಧತಿಯಾಗಿ ಬಳಸಲ್ಪಡುವಲ್ಲಿ ಆದಿವಾಸಿಗಳ ಕೊಡುಗೆ ನಿಜಕ್ಕೂ ಅವೀಸ್ಮರಣೆಯ. ಧಾರ್ಮಿಕ, ಭೌತಿಕ ಜೀವನದಲ್ಲಿ ದೇಹಶುದ್ಧಿ ಮತ್ತು ಮನಶುದ್ಧಿಗಳಿಗಾಗಿ ಬೇವು ಹಾಗೂ ಅರಿಶಿಣಗಳ ಬಳಕೆ ಹೆಚ್ಚುಗಾರಿಕೆಯೆನ್ನು ಪಡೆದಿದೆ. ಆದಿವಾಸಿ ಮಹಿಳಾ ಲೋಕದ ಕೊಡುಗೆಯೂ ಇದರಲ್ಲಿ ಬಹುಪಾಲು ಇದೆ. ಭೂಮಿ ಹದ ಮಾಡುವುದು, ಬೀಜ ವೂರುವುದು, ಕಳೆ ತೆಗೆಯುವುದು, ಬೆಳೆ ಕೊಯ್ಯುವುದು, ಕಣ ಮಾಡುವುದು, ಹಕ್ಕಲು ಆಯುವುದು ಮುಂತಾದ ಪ್ರಧಾನ ಕೆಲಸಗಳು ಆಹಾರ ಉತ್ಪಾದನೆಯ ಪೂರಕ ಶ್ರಮಗಳಿಗೆ ಸ್ತ್ರೀಯರು ಹೆಗೆಲೆಣೆಯಾಗಿ ದುಡಿಯುತ್ತಿದ್ದರು. ಆರೋಗ್ಯ ಸಂರಕ್ಷಣೆಗೆ ಅಗತ್ಯವಾದ ಆಹಾರ ಪದ್ಧತಿಗಳು ಚಾಚುತಪ್ಪದೆ ಪರಿಪಾಲಿಸುವಲ್ಲಿ ಇವರ ಯೋಗದಾನವಿದೆ.

ಫಾಸ್ಟ್‌ಪುಡ್ ಸಂಸ್ಕೃತಿ

ಆಧುನಿಕ ಯಾಂತ್ರಿಕ ಬದುಕಿನಲ್ಲಿ ಧಾವಂತದ ಜೀವನ ಶೈಲಿಗೆ ಫ್ಯಾಷನ್ ಆಗಿ ಇಂದಿನ ಆಹಾರ ಪದ್ಧತಿ ಮಾಡರ್ನಿಜಂನ ಹೆಸರಿನಲ್ಲಿ ಪ್ರಚಲಿತವಾಗುತ್ತಿದೆ. ಪಾಶ್ಚಾತ್ಯ ಅನುಕರಣೆಯ ಭರಾಟೆಯಲ್ಲಿ ದೇಶಿ ಆಹಾರ ಸಂಸ್ಕೃತಿಗಳ ಉಪಯುಕ್ತ ಜ್ಞಾನದ ಕೊರತೆಯಿಂದ ಅನೇಕ ರೋಗಗಳಿಗೆ ಜನರು ಈಡಾಗುತ್ತಿದ್ದಾರೆ. ಮೈದಾ, ಉಪ್ಪು, ಸಕ್ಕರೆ ಇವು ಮೂರು ಬಿಳಿ ವಿಷಗಳೆಂದು "ವೈಟ್ ಪಾಯಿಜನ್" ಎಂದು ಪರಿಗಣಿಸಲಾಗಿದೆ. ಇಂದು ಮನುಷ್ಯನಲ್ಲಿ ಮಧುಮೇಹ, ರಕ್ತದೊತ್ತಡ, ಹೃದಯ ಕಾಯಿಲೆ, ಬೊಜ್ಜು, ವಾತ ಬಹಳ ದೊಡ್ಡ ಪ್ರಮಾಣಗಳಲ್ಲಿ ಕಂಡುಬರುತ್ತಿವೆ.

ಆಧುನಿಕ ಫಾಸ್ಟ್‌ಫುಡ್ ಸಂಸ್ಕೃತಿಯಿಂದ ರಕ್ತ ಹೀನತೆಯೊಂದಿಗೆ ಪೌಷ್ಠಿಕಾಂಶಗಳ ಕೊರತೆಯನ್ನು ಕಾಣುತ್ತಿದ್ದೇವೆ.

ಪಿಜಾ, ಬರ್ಗರ್, ಪಾನಿಪುರಿ, ಬೇಲ್‌ಪುರಿ, ವಡಾಪಾವ್, ಪಾವ್‌ಬಾಜಿ, ಗೊಬಿಮಂಚೂರಿ, ನೂಡಲ್ಸ್, ಪಾಸ್ತಾ, ಸೇವಪುರಿ, ಕಚ್ಚಾದಾಬೋಲಿ, ಮಿರ್ಚಿ ಬಜಿ, ಮಿಸಳ್‌ಗಳಂತಹ ಫಾಸ್ಟ್‌ಫುಡಗಳು ಇಂದು ಅತ್ಯಂತ ಭರ್ಜರಿಯಾಗಿ ಮಾರುಕಟ್ಟೆಗಳನ್ನು ಆಕ್ರಮಿಸಿವೆ.

"ಗ್ಲೋಬಲ್ ವಿಲೇಜ್" ಮಾನದಂಡದಲ್ಲಿ ನಗರ, ಪಟ್ಟಣ, ಗ್ರಾಮೀಣ ಪ್ರದೇಶಗಳಲ್ಲಿಯೂ ಲಘು ಆಹಾರ ಪದ್ಧತಿ ಲಗ್ಗೆ ಇಟ್ಟಿದೆ. ಆಯಾ ಪ್ರಾದೇಶಿಕ ಇಂತಹ ಆಹಾರ ಪದ್ಧತಿಗಳು ಆರ್ಥಿಕ ಲಾಭದಾಯಕ ದೃಷ್ಟಿಕೋನದಿಂದ ನಡೆಸಲ್ಪಡುತ್ತಿವೆ. ರುಚಿಗೆ ಮಾತ್ರ ಒತ್ತು ಕೊಡುವ ಇಂತಹ ಆಹಾರಗಳು ಬಹುಬೇಗ ಜನಪ್ರಿಯತೆಯನ್ನು ಪಡೆದುಕೊಂಡಿವೆ. ಎಲ್ಲಾ ವಯೋಮಾನದವರನ್ನು ಆಕರ್ಷಿಸುವ ಮೂಲಕ ಮನುಷ್ಯನ ಜೀವಿತ ಅವಧಿಗೆ ಸಂಚಕಾರ ತಂದಿರುವುದು ಸತ್ಯ.

ಮುಖ್ಯವಾಗಿ ಶ್ರಮ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಿರುವ ಆಧುನಿಕ ಜಗತ್ತು ಕಾರ್ಪೋರೇಟ್ ವಲಯವನ್ನು ಫಾಸ್ಟ್‌ಫುಡ್ ಸಂಸ್ಕೃತಿ ಪ್ರತಿಶತ 80%ರಷ್ಟು ಆವರಿಸಿದೆ. ಸಮಯದ ಉಳಿತಾಯ, ದೈಹಿಕ ಆಯಾಸ, ಬಹುಬೇಗ ಹಸಿವನ್ನು ನಿವಾರಿಸಿಕೊಳ್ಳವ ಬಗೆ, ನಿದ್ದೆಯನ್ನು ತಡೆಹಿಡಿಯುವ ಕ್ರಮ, ರುಚಿಗೆ ಆಧ್ಯತೆಯಂತಹ ನೆಪಗಳಿಂದ ಆರೋಗ್ಯಕ್ಕಿಂತ ಅಹಾರ ಸೇವನೆಗೆ ಹೆಚ್ಚುವಾಲಿರುವುದು ಅಪಾಯಕಾರಿ ಸಂಗತಿ.

ಟೆನ್ಷನ್‌ನಿಂದ ಹೆಲ್ತ್ ನಾನ್ಸೆನ್ಸ್ ಆಗುತ್ತಿರುವ ಕುರಿತು ಯಾರು ಗಂಭೀರವಾಗಿ ಆಲೋಚಿಸುತ್ತಿಲ್ಲ. ಫಾಸ್ಟ್‌ಫುಡ್‌ನ ಸಹಜ ಬಳಕೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ದೇಹದಲ್ಲಿ ಅತಿಯಾದ ಟಾಕ್ಸಿನ್ ಸೇರ್ಪಡೆಗೊಂಡು ದೈಹಿಕ ಬಳಲಿಕೆಗಳು ಹೆಚ್ಚಾಗುತ್ತಿವೆ. "ಅದರಕ್ಕೆ ಕಹಿ ಉದರಕ್ಕೆ ಸಿಹಿ" ಎಂಬ ಗಾದೆಯನ್ನು ಗಾಳಿಗೆ ತೂರಿ ಆಧುನಿಕ ಆಹಾರ ಶೈಲಿಯನ್ನು ಹೆಚ್ಚು ಪ್ರೀತಿಸುತ್ತಿದ್ದಾರೆ. ನಾಲಿಗೆಗೆ ರುಚಿಯಾದುದು ಹೊಟ್ಟೆಗೆ ಹಾನಿಕಾರಕವೆಂದು ಗೊತ್ತಿದ್ದರು ಉದಾಸೀನತೆಯಿದೆ. ಎಲ್ಲಾ ರೋಗಗಳಿಗೂ ಸುಲಭವಾಗಿ ಔಷಧಿಗಳು ಲಭ್ಯವಿರುವುದರಿಂದ ಜನಸಾಮಾನ್ಯರು ಆತಂಕ ಪಡುತ್ತಿಲ್ಲ.

ರಸ್ತೆಯ ಬದಿಗಳಲ್ಲಿ ಈಗಂತೂ ಎಲ್ಲೆಂದರಲ್ಲಿ ಫಾಸ್ಟ್‌ಫುಡ್ ಅಂಗಡಿಗಳು ತಲೆ ಎತ್ತಿವೆ. ಹೆಲ್ತ್ ಅಂಡ್ ಹೈಜನಿಕ್ ಸೂತ್ರವನ್ನು ಅಲಕ್ಷಿಸಿ, ಚಿಕ್ಕ ಚಿಕ್ಕ ಮಕ್ಕಳಿಗೂ ಜಂಕ್‌ಫುಡ್‌ಗಳನ್ನು ತಿನ್ನಿಸುವ ಮೂಲಕ ಅನಾರೋಗ್ಯ ನಾಗರಿಕರನ್ನಾಗಿ ಪರಿವರ್ತಿಸುತ್ತಿರುವ ಫಾಸ್ಟ್‌ಫುಡ್ ಸಂಸ್ಕೃತಿ ಅಪಾಯಕಾರಿಯಾದುದಾಗಿದೆ.

ಆಧುನಿಕ ಸೂಪರ್ ಮಾರ್ಕೆಟ್‌ಗಳ ಭರಾಟೆಯಿಂದ ಹೋಂ ಡೆಲಿವರಿ ಸೌಲಭ್ಯಗಳು, ಆನ್‌ಲೈನ್ ಹಾಗೂ ಮೊಬೈಲ್ ಸರ್ವಿಸಸ್‌ಗಳಂತಹ ಸುಲಭ ಸೌಕರ್ಯಗಳಿಂದ ಎಲ್ಲೆಂದರಲ್ಲಿ ಸೇವೆಯನ್ನು ಪಡೆಯಬಹುದು. ಇಲ್ಲಿ ಆಹಾರದ ಗುಣಮಟ್ಟದ ಪರೀಕ್ಷೆಗಳಾಗಲಿ, ಸಂಸ್ಕರಣೆಯ ಮಾನದಂಡಗಳಾಗಲಿ ತಯಾರಿಸಿದ ದಿನಾಂಕದ ಕಡೆಗೆ ಗಮನ ಗೌಣ. ಆರೋಗ್ಯಕ್ಕೆ ಹಾನಿಕಾರಕ, ವಿಷಕಾರಿ, ಕೃತಕ ಬಣ್ಣಗಳ ಬಳಕೆಯಿಂದ ದೇಹದಲ್ಲಿ ಲವಲವಿಕೆ ಅಂಶ ಕಡಿಮೆಯಾಗುತ್ತಿದೆ. ತುಂಬಾ ಸರಳ ಮತ್ತು ತ್ವರಿತಗತಿಯ ಫಾಸ್ಟ್‌ಫುಡ್ ಸರ್ವಿಸಸ್‌ಗಳು ಜನಸಾಮಾನ್ಯರ ಮೆಚ್ಚುಗೆ ಪಡೆದಿವೆ.

ಇದರೊಂದಿಗೆ ಕೇಕ್, ಐಸ್‌ಕ್ರೀಂ, ಚಿಪ್ಸ್ ಒಳಗೊಂಡಂತೆ ನೂರಾರು ತರಹದ ಲಘು ಉಪಹಾರಗಳ ಮಾರಾಟ ಹೆಚ್ಚಾಗಿದೆ. ಅವಧಿ ಮುಗಿದ, ಸಂಸ್ಕರಣೆಗೆ ಒಳಪಡದ, ಹೈಜನಿಕ ಅಂಶಗಳಿಂದ ದೂರವಾದ ಇಂತಹ ಆಹಾರ ಸೇವನೆಯಿಂದ ಅನೇಕ ಗುಪ್ತರೋಗಗಳಿಗೆ ತುತ್ತಾಗುತ್ತಿದ್ದಾರೆ. ಅಲ್ಸರ, ಕ್ಯಾನ್ಸರ, ಮಲಬದ್ಧತೆ, ಅಲರ್ಜಿ, ಕ್ಯಾಲ್ಸಿಯಂ ಲೋ. ದೈಹಿಕ ಬೆಳವಣಿಗೆಯಲ್ಲಿ ಕುಂಟಿತ, ಕೂದಲು ಉದುರುವಿಕೆ, ಚರ್ಮರೋಗಗಳಂತಹ ರೋಗಗಳಿಗೆ ತುತ್ತಾಗುತ್ತಿದ್ದಾರೆ.

ಫಾಸ್ಟ್‌ಫುಡ್ ಇಂದು ಫ್ಯಾಷನ್ ಜಗತ್ತಿನ ರಾಯಭಾರಿಯಾಗಿದೆ. ಆರ್ಥಿಕತೆಯ ಲಾಭದಾಯಕ ಟ್ರೆಂಡ್‌ಗಳತ್ತ ವಾಲಿದ ನಾಗರಿಕರಿಗೆ, "ಟ್ರೆಂಡ್ ಅಂಡ್ ಟೇಸ್ಟ್"ಗಳಿಗೆ ಮಾರು ಹೋಗಿ ರೋಗ ನಿರೋಧಕ ಶಕ್ತಿಯನ್ನು ಕುಂಟಿತಗೊಳಿಸುತ್ತಿರುವ ಈ ಸಂಸ್ಕೃತಿಯು ರೋಗಗ್ರಸ್ತ ಅಶಕ್ತ ನಾಗರಿಕರನ್ನು ಹುಟ್ಟು ಹಾಕುತ್ತಿದೆ. ಹೆಲ್ತ್ ಡ್ರಿಂಕ್ಸ್ ಎಂದು ಬಳಕೆಯಲ್ಲಿರುವ ಹಾನಿಕಾರಕ ಪೇಯ ನಿಜಕ್ಕೂ ಅಪಾಯಕಾರಿ ಆಹಾರ. ಜಾಗತಿಕ ಆಹಾರ ತಜ್ಞರ ಸಮೀಕ್ಷೆ ಪ್ರಕಾರ, "ಹೆಲ್ತ್ ಎಕನಾಮಿಕ್ಸ್ ಥೇರಿ" ಹೇಳುವಂತೆ ಮುಂದಿನ ದಿನಗಳಲ್ಲಿ ಆರೋಗ್ಯವಂತ ಯುವಕರ ಕೊರತೆಯಿಂದ ದೇಶದ ಆರ್ಥಿಕ ಸ್ಥಿತಿಯು ಕುಂಟಿತಗೊಳ್ಳುವ ಸಂಭವವಿದೆ. ಶುದ್ಧ ಮತ್ತು ಆರೋಗ್ಯಯುಕ್ತ ಆಹಾರ ಪಡೆದುಕೊಳ್ಳದ ಜನಸಾಮಾನ್ಯರು ಕ್ರಿಯಾಶೀಲರಾಗದೆ ದುಡಿಮೆಗಳಲ್ಲಿಯೂ ಹಿಂದೆ ಬೀಳುತ್ತಿದ್ದಾರೆ. ಮಾನಸಿಕ ಒತ್ತಡ, ಶೀಘ್ರ ಕೋಪ, ಒತ್ತಡ ನಿರ್ವಹಣಾ ಕೌಶಲ್ಯಗಳ ವೈಫಲ್ಯಗಳಿಂದ ಶ್ರಮ ಸಂಸ್ಕೃತಿಯಿಂದ ವಿಮುಖರಾಗುತ್ತಿದ್ದಾರೆ. ಫಾಸ್ಟ್‌ಫುಡ್ ಸಂಸ್ಕೃತಿ ಆರ್ಥಿಕ ಹಿಂಜರಿಕೆಗೂ ಪ್ರಮುಖ ಕಾರಣವಾಗುವುದರಲ್ಲಿ ಸಂದೇಹವಿಲ್ಲ.

ಫಲಿತ

ನಗರ ಜೀವನದಿಂದ ನಾಗರಿಕ ಆಹಾರ ಪದ್ಧತಿ ಮಾನ್ಯತೆ ಪಡೆಯಿತು ಎಂಬ ಮಾನದಂಡದಿಂದ ಹೊರಬಂದಾಗ ಮಾತ್ರ, ಶ್ರೇಷ್ಠ ಆಹಾರ ಪದ್ಧತಿಗಳ ಪ್ರಾಮುಖ್ಯತೆ ತಿಳಿಯುತ್ತದೆ. ಆದಿವಾಸಿ ಅಥವಾ ಗಿರಿಜನರ ಆಹಾರ ಪದ್ಧತಿಗಳು

ಶ್ರಮ ಸಂಸ್ಕೃತಿಯ ಪ್ರತಿನಿಧೀಕರಣಗಳಾಗಿವೆ. ಆರ್ಷೇಯ ಕಾಲದಿಂದಲೂ ಕೃಷಿ ಮತ್ತು ಕಾಡು ಪ್ರಧಾನ ಜೀವನ ಕ್ರಮಗಳಲ್ಲಿನ ಆಹಾರ ಪದ್ಧತಿ ಔಷಧಿ ಮತ್ತು ಆರೋಗ್ಯದ ಬಳುವಳಿಗಳಾಗಿಯೇ ಮಾನ್ಯತೆ ಪಡೆದಿವೆ. ವೇದ, ಪುರಾಣ, ಶಾಸ್ತ್ರ, ಆಗಮ, ಸ್ಮೃತಿ, ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳಲ್ಲಿಯೂ ಆದಿವಾಸಿಗಳ ಆಹಾರ ಸಂಸ್ಕೃತಿಯ ಹೆಚ್ಚುಗಾರಿಕೆ ಕುರಿತು ಉಲ್ಲೇಖಗಳಿವೆ. ನಿಸರ್ಗೋಪಚಾರಗಳ ಮಹತ್ವ ಕುರಿತು ದಾಖಲೆಗಳಿವೆ. ಯುದ್ಧಗಳ ಸಂದರ್ಭಗಳಲ್ಲಿ ಗಿಡಮೂಲಿಕೆಗಳ ಬಳಕೆಯಿಂದ ಆರೋಗ್ಯ ರಕ್ಷಿಸಿಕೊಂಡ ಸಾಕ್ಷಿಗಳಿವೆ. ಉದಾ: ಲಕ್ಷ್ಮಣ ಮೂರ್ಛೆ ಹೋದಾಗ ಹನುಮಂತ ಸಂಜೀವಿನಿ ವನೌಷಧ ತಂದ ಕಥೆ ರಾಮಾಯಣದಲ್ಲಿ ಕಾಣುತ್ತೇವೆ.

ಭಾರತೀಯ ಗಿರಿಜನ ಅಥವಾ ಆದಿವಾಸಿಗಳ ಆಹಾರ ಪದ್ಧತಿಯಂತೆ ಜಗತ್ತಿನ ಅನೇಕ ರಾಷ್ಟ್ರಗಳ ಬುಡಕಟ್ಟು ಜನಾಂಗದಲ್ಲಿಯೂ ಆಹಾರ ಪದ್ಧತಿ ಶ್ರೇಷ್ಠತೆ ಹೊಂದಿದೆ. ಭಾರತೀಯ ಸನಾತನ ನಂಬಿಕೆ ಆಚರಣೆಗಳಿಗನುಗುಣವಾದ ಆಹಾರ ಬಳಕೆ ಮೂಲದಲ್ಲಿ ಕೃಷಿ, ಗ್ರಾಮೀಣ ಅಥವಾ ಬುಡಕಟ್ಟು ಜನಾಂಗಗಳ ಆಹಾರ ಪದ್ಧತಿಯನ್ನೆ ಅಳವಡಿಸಿಕೊಂಡಿದೆ. ಪತಂಜಲಿ, ಧನ್ವಂತರಿಯಂತಹ ಪ್ರಾಚೀನ ಋಷಿಗಳು ಕಾಡು ಮೇಡಗಳಲ್ಲಿನ ವನೌಷಧಿಗಳ ಬಳಕೆಯ ಮಹತ್ವ ಸಾರಿದ್ದಾರೆ. ಆಯುರ್ವೇದ, ಹೋಮಿಯೋಪತಿಗಳಂತಹ ನಿಸರ್ಗ ಚಿಕಿತ್ಸೆಗಳನ್ನು ಪ್ರಚುರಪಡಿಸಿದವರು ವನವಾಸಿಗಳೇ, ಇವರ ಆಹಾರ ಸಂಸ್ಕೃತಿಯು ಆರೋಗ್ಯಯುತವಾಗಿರುವುದಲ್ಲದೇ ಔಷಧಿಯ ಗುಣಗಳನ್ನು ಹೊಂದಿರುವುದು ಹೆಚ್ಚುಗಾರಿಕೆ.

ಸರ್ವಋತುಗಳಿಗನುಗುಣವಾದ ಆದಿವಾಸಿ ಆಹಾರ ಸಂಸ್ಕೃತಿಯೂ, ಜಾತಿ, ವೃತ್ತಿ, ಕೃಷಿ ಹಾಗೂ ಜನಾಂಗಗಳಿಗನುಗುಣವಾಗಿ ಅನುಸರಿಸಲ್ಪಟ್ಟಿದೆ. ಹಬ್ಬ ಹರಿದಿನ ದೇವರು, ದೈವ, ನಂಬಿಕೆ, ಆಚರಣೆಗಳಿಗೂ ಅನ್ವಯಿಸಿದ ಆಹಾರ ಪದ್ಧತಿಗಳು ಆಯಾ ಪ್ರಾದೇಶಿಕ ಸಾಂಸ್ಕೃತಿಕ ಮೌಲ್ಯವನ್ನು ಉನ್ನತೀಕರಿಸಿವೆ. ಬುಡಕಟ್ಟು ಜನರ ಶ್ರಮ ಸಂಸ್ಕೃತಿಯನ್ನು ಪರೋಕ್ಷವಾಗಿ ಪ್ರತಿನಿಧಿಸುವ ಆಹಾರ ಸಂಸ್ಕೃತಿಯೂ ಆರ್ಥಿಕ ವ್ಯವಸ್ಥೆಗೂ ಬೆನ್ನೆಲುಬಾಗಿರುವುದು ಸತ್ಯ.

ಆಧುನಿಕ ಫಾಸ್ಟ್‌ಫುಡ್ ಸಂಸ್ಕೃತಿಯಿಂದ ಆರೋಗ್ಯದ ಗುಣಮಟ್ಟ ಕುಸಿಯುತ್ತಿದೆ. ಚಹಾಎಲೆ, ಕಾಫಿ ಬೀಜಗಳಂತಹ ಆರೋಗ್ಯ ಪಾನೀಯಗಳಿಗಿಂತ ಉತ್ತೇಜನ ಪಾನೀಯಗಳ ಬಳಕೆ ಹೆಚ್ಚಾಗುತ್ತಿದೆ. ಮೊಟ್ಟೆಗಳ ಬಳಕೆ ಆರೋಗ್ಯಕ್ಕೆ ಪೂರಕವಾಗಿದ್ದು. ಮೊಟ್ಟೆಗಳಿಂದ ತಯಾರಿಸಿದ ಹಾಯ್‌ಕ್ಯಾಲೋರಿ ಮತ್ತು ಜಂಕ್‌ಫುಡ್‌ಗಳ ಬಳಕೆ ಹೆಚ್ಚಾಗಿದೆ. ಸದೃಢತೆಯ ಕೊರತೆ, ಬ್ರೇನ್‌ಫುಡ್ ಕೊರತೆಗಳಿಂದ ಡಿಪ್ರೆಶನ್, ಮತ್ತು ಮನೋವೈಕಲ್ಯಗಳಂತಹ ಮಾನಸಿಕ ರೋಗಗಳಿಗೂ ತುತ್ತಾಗುತ್ತಿರುವ ಎಲ್ಲಾ ವಯೋಮಾನದ ನಾಗರಿಕರು ಆಹಾರ

ಸಂಸ್ಕೃತಿಯಿಂದ ವಂಚಿತರಾಗಿದ್ದಾರೆ. ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಸದೃಢ ನಾಗರಿಕರು ಅವಶ್ಯಕ. ಕ್ರಿಯಾಶೀಲತೆಗೆ ಪೂರಕವಾಗುವ ಆಹಾರ ಪದ್ಧತಿ ಮಾತ್ರ ನಾಗರಿಕ ಜನಾಂಗವನ್ನು ಸಮಾಜೋ-ಆರ್ಥಿಕ ಅವನತಿಯಿಂದ ರಕ್ಷಿಸಬಹುದಾಗಿದೆ.

ಪರಾಮರ್ಶನ ಗ್ರಂಥಗಳು

1. ಹಿಂದೂ ಧರ್ಮೋತ್ತರ ಭಾರತ, ಲೇ: ಡಾ. ಜಾಜಿ ದೇವೇಂದ್ರಪ್ಪ, ಪ್ರ: ಲಡಾಯಿ ಪ್ರಕಾಶನ, ಗದಗ – 2018.
2. ನಿಸರ್ಗೋಪಚಾರಗಳು, ಲೇ: ಎಲ್.ಎಸ್. ಶಾಸ್ತ್ರೀ, ಪ್ರ: ಸಿ.ವಿ.ಜಿ ಇಂಡಿಯಾ ಬೆಂಗಳೂರು – 2011.
3. ಜಾನಪದ ಸಂಪದ, ಡಾ. ಎಮ್.ಎಸ್. ಸುಂಕಾಪುರ ಅಭಿನಂದನಾ ಗ್ರಂಥ, ಸಂ: ಡಾ. ಮಲ್ಲಿಕಾರ್ಜುನ ಲಠ್ಠೆ, ಪ್ರ: ಡಾ. ಎಮ್.ಎಸ್. ಸುಂಕಾಪುರ ಅಭಿನಂದನಾ ಸಮಿತಿ, ಕಲಬುರ್ಗಿ – 1982.
4. ಕನ್ನಡ ವಿಷಯ ವಿಶ್ವಕೋಶ; ಜಾನಪದ, ಪ್ರ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ – 2006.
5. ಬುಡಕಟ್ಟು ಸಂಸ್ಕೃತಿ ಮಾಲೆ, ಪ್ರ ಕನ್ನಡ ಮತ್ತು ಸಂಸ್ಕ್ರತಿ ಇಲಾಖೆ, ಬೆಂಗಳೂರು – 2005.

ಅಡಿಟಿಪ್ಪಣಿಗಳು:

1. ಹಿಂದೂ ಧರ್ಮೋತ್ತರ ಭಾರತ, ಲೇ: ಡಾ. ಜಾಜಿ ದೇವೇಂದ್ರಪ್ಪ; ಅಧ್ಯಾಯ 1 ಉಚಿತ ಶಿಕ್ಷಕರು ಪುಟ–8.
2. ಹಿಂದೂ ಧರ್ಮೋತ್ತರ ಭಾರತ, ಲೇ: ಡಾ. ಜಾಜಿ ದೇವೇಂದ್ರಪ್ಪ; ಅಧ್ಯಾಯ 6 ಮಾಂಸ ಹಾಲು ಆರ್ಥಿಕ ತಜ್ಞರು ಪುಟ–110.

2

ಜೇನುಕುರುಬರ ಜೀವನ ಸಂಸ್ಕೃತಿ

ಡಾ.ವಿಜಯಲಕ್ಷ್ಮಿ
ಸಹಾಯಕ ಪ್ರಾಧ್ಯಾಪಕಿ, ಜಾನಪದ ವಿಭಾಗ
ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು–570005. ಮೊ: 9535963799
Email : dr.maitra2011@gmail.com

ಪೀಠಿಕೆ

ಜಗತ್ತಿನಾದ್ಯಂತ ಸಮಾಜ, ಸಂಸ್ಕೃತಿ, ಚರಿತ್ರೆ, ಇತಿಹಾಸ, ವಿವೇಚನೆಗಳು ಮೇಲ್ ಸಂಸ್ಕೃತಿ ನಿಷ್ಠವಾಗಿಯೇ ಆಲೋಚನೆಗೊಳಪಡುತ್ತಾ ಬಂದ ಪರಿಣಾಮವಾಗಿ ಮಾನವ ಸಮುದಾಯದ ಸಂವರ್ಧನೆಯಲ್ಲಿ ಬುಡಕಟ್ಟುಗಳ ಅಂತಃಶಕ್ತಿ, ಮತ್ತು ಅವರ ಸಾಂಸ್ಕೃತಿಕ ಅನನ್ಯತೆಯನ್ನು ನಿರ್ಲಕ್ಷಿಸಲಾಗಿದೆ. ಮಹಾಪರಂಪರೆಯ ಚಿಂತನೆಗಳು ಬುಡಕಟ್ಟು ಸಂಸ್ಕೃತಿಯ ರಚನಾತ್ಮಕ ಆಕೃತಿ, ಜೀವವೈವಿಧ್ಯತೆಯನ್ನು ಕಡೆಗಣಿಸಿರುವುದರಿಂದ ಒಟ್ಟು ಮಾನವ ಸಂಸ್ಕೃತಿಯ ಸಮಗ್ರತತ್ವ ಈ ನೆಲದಲ್ಲಿ ದಾಖಲಾಗದೆ ಹೋಗಿರುವುದು ಚಿಂತನಾರ್ಹ ಸಂಗತಿ. ಇದಕ್ಕೆ ಜೇನುಕುರುಬ ಬುಡಕಟ್ಟು ಸಮುದಾಯ ಹೊರತಲ್ಲ. ಅಂದರೆ ಈ ದೇಶದಲ್ಲಿ ಆದಿವಾಸಿಗಳ ಚರಿತ್ರೆಯೇ ನಿಖರವಾಗಿ ದಾಖಲಾಗದೆ ಅದು ಅವ್ಯಕ್ತವಾಗಿ ಕಾಲಗರ್ಭದಲ್ಲಿ ಹೂತುಹೋಗಿದೆ ಎಂದರೆ ತಪ್ಪಾಗಲಾರದು. ಆದರೆ ಕಾಲಕಳೆದಂತೆ ರಾಜಮಹಾರಾಜರ, ಮೇಲ್ವರ್ಗದವರ ಜೀವನ ವಿಧಾನಗಳೇ ಈ ನೆಲದ ಭವ್ಯ ಇತಿಹಾಸ ಎಂದು ಸಾರುತ್ತಾ ನಂಬಿಸಿಕೊಂಡು ಬಂದ ಚರಿತ್ರೆಗೆ ಪ್ರತಿಯಾಗಿ ನೆಲಮೂಲಿಗರ, ಆದಿಮರ, ಅಲಕ್ಷಿತರ ಜೀವನ ವಿಧಾನಗಳು, ಅವರ ಬದುಕಿನ ಒಳನೋಟಗಳು ಇತ್ತೀಚೆಗೆ ಇತಿಹಾಸಕಾರರ, ಅಧ್ಯಯನಕಾರರ, ಸಂಶೋಧಕರ, ವಿಶ್ವವಿದ್ಯಾನಿಲಯ, ಸರ್ಕಾರದ ಕಣ್ಣು ತೆರೆಸಿವೆ. ಈ ಹಿನ್ನೆಲೆಯಲ್ಲಿ ಬಹುಮುಖಿ ಸಂಸ್ಕೃತಿ, ಜೀವನ ವಿಧಾನಗಳನ್ನು ಪ್ರತಿನಿಧಿಸುವ ಜೇನುಕುರುಬ ಬುಡಕಟ್ಟು ಸಮುದಾಯವು ಒಂದು ನಿರ್ದಿಷ್ಟ ಸಮೂಹದ ಜ್ಞಾನ ಪರಂಪರೆಯಾಗಿ

ಲೋಕದೃಷ್ಟಿ (Worldview)ಯ ಹಿನ್ನೆಲೆಯಲ್ಲಿ ತೆರೆದುಕೊಂಡಿರುವುದನ್ನು ಕಾಣಬಹುದು. ಆದ್ದರಿಂದ ಪ್ರಸ್ತುತ ಆಧುನಿಕತೆಯ ಬದಲಾವಣೆಯ ನಡುವೆಯೂ ತನ್ನದೇ ಸಾಂಸ್ಕೃತಿಕ ಅನನ್ಯತೆಯನ್ನು ಒಡಲಲ್ಲಿ ಹುದುಗಿಸಿಕೊಂಡು ಉಸಿರಾಡುತ್ತಿರುವ ಜೇನುಕುರುಬ ಬುಡಕಟ್ಟಿನ ಜೀವನ ಸಂಸ್ಕೃತಿಯನ್ನು ನನ್ನ ಅಧ್ಯಯನಕ್ಕೆ ಒಳಗು ಮಾಡಿಕೊಂಡಿದ್ದೇನೆ.

ಅಧ್ಯಯನದ ಉದ್ದೇಶ

ನಾಡಿಗೆ ಸೇರಿದ ಆದರೆ "ನಾಗರಿಕ" ಸಮಾಜದಿಂದ ದೂರದ ಕಾಡಿನಲ್ಲಿ ತಮ್ಮದೇ ಸಂಸ್ಕೃತಿಯ ಚಹರೆಗಳನ್ನು ಮೈಮೇಲೆ ಹೊದ್ದುಕೊಂಡು ಪ್ರಕೃತಿಯ ಜೋಗುಳ-ವಿಕೋಪ ಎರಡನ್ನೂ ಸಮಾನವಾಗಿ ಅನುಭವಿಸುತ್ತಾ, ತಮ್ಮ ವಂಶವನ್ನು ಬೆಳೆಸುತ್ತಾ ತಮ್ಮದೇ ಅಸ್ತಿತ್ವ, ವ್ಯಕ್ತಿತ್ವ, ಅಸ್ಮಿತೆಯನ್ನು ಕಾಪಿಟ್ಟುಕೊಂಡು ವೈವಿಧ್ಯಮಯ ಜೀವನ ಸಂಸ್ಕೃತಿಯನ್ನು ತಮ್ಮದಾಗಿಸಿಕೊಂಡಿರುವ ಜೇನುಕುರುಬ ಬುಡಕಟ್ಟು ಹುಟ್ಟಿನಿಂದ ಸಾವಿನವರೆಗಿನ ಅನೇಕ ಜೀವನಾವರ್ತನ ಆಚರಣೆಗಳನ್ನು ಕಾಪಿಟ್ಟುಕೊಂಡುಬರುತ್ತಿದೆ. ಇವು ಆ ಸಮುದಾಯದ ಅವಿಭಾಜ್ಯ ಅಂಗವಾಗಿದ್ದು ಪ್ರಶ್ನಾತೀತವಾಗಿವೆ. ಈ ಆಚರಣೆಗಳು ಇವರ ಸಂಸ್ಕೃತಿಯನ್ನು ಪೋಷಿಸುವಲ್ಲಿ, ರೂಪಿಸುವಲ್ಲಿ, ಬದುಕನ್ನು ನೈತಿಕತೆಯತ್ತ ಕೊಂಡೊಯ್ಯುವ ಮಾರ್ಗಸೂಚಿಗಳಂತೆ ಕೆಲಸ ಮಾಡುತ್ತವೆ. ಪ್ರಸ್ತುತ ಆಧುನಿಕತೆಯ ಬದಲಾವಣೆಯ ಗಾಳಿ ಬೀಸುತ್ತಿದ್ದು ಕಾಂಕ್ರಿಟ್ ಸಂಸ್ಕೃತಿ ಕಾಡುಗಳನ್ನೆಲ್ಲ ಕಬಳಿಸುತ್ತಿದ್ದಂತೆ ಇವರ ಜೀವನಕ್ರಮದಲ್ಲಿಯೂ ಬದಲಾವಣೆ ಎಡತಾಕಿದೆ. ಆದರೂ ಜೇನುಕುರುಬರು ತಲತಲಾಂತರದಿಂದ ರೂಢಿಸಿಕೊಂಡು ಬರುತ್ತಿರುವ ಜೀವನಾವರ್ತನ ಆಚರಣೆಗಳು ಸಾಮಾಜಿಕವಾಗಿ ಶಾಸನಬದ್ಧ ಮುದ್ರೆ ಪಡೆದು ಅಲಿಖಿತ ಕಾನೂನುಗಳೇ ಆಗಿ ಪರಿಣಮಿಸಿರುವುದು ಸೋಜಿಗದ ಸಂಗತಿ. ಈ ಸಮುದಾಯದ ಒಟ್ಟು ಮನಃಸ್ಥಿತಿ ಇಂತಹ ಆಚರಣೆಗಳ ಮುಂದುವರಿಕೆಗೆ ಕಾರಣವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರಾಚೀನ ಕಾಲದಿಂದ ಅನೂಚಾನವಾಗಿ ನಡೆದುಬಂದ ಈ ಆಚರಣೆಗಳನ್ನು ಬದಲಾಯಿಸಲು ಸಾಧ್ಯವೇ ಇಲ್ಲ. ಏಕೆಂದರೆ ಇವರಲ್ಲಿ ಯಾರಾದರೂ ತಮ್ಮ ಜನನ, ಮದುವೆ, ಸಾವು ಮುಂತಾದ ಕ್ರಿಯಾವಿಧಿಗಳಲ್ಲಿ ಅವರ ಸಮುದಾಯದಲ್ಲಿ ಒಪ್ಪಿಗೆಯಾಗದಿದ್ದವುಗಳನ್ನು ಅನುಸರಿಸಿದರೆ ಬಹಿಷ್ಕಾರ ಹಾಕುವುದುಂಟು. ಹೀಗಾಗಿ ಇವರು ತಾವು ಒಪ್ಪಿರುವ ಮೌಲ್ಯಗಳನ್ನು ಇಟ್ಟುಕೊಂಡೇ ಬದುಕು ಸಾಗಿಸುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಜೀವನದಲ್ಲಿ ಸುಖ-ಶಾಂತಿ, ಸಂತೃಪ್ತಿ-ಸಂಮೃದ್ಧಿಗಳು ನೆಲೆಸುತ್ತವೆಂಬ ನಂಬಿಕೆಯಿಂದ ಆಚರಣೆಗೊಳ್ಳುವ ಇವುಗಳ ಭಾವನಾತ್ಮಕ ಜಗತ್ತಿನ ಒಳಾವರಣದ ಅನಾವರಣ ಹಾಗೂ ವಿಶ್ವಾಸಾತ್ಮಕ ನೆಲೆಯ ಹುಡುಕಾಟದ ಮೂಲಕ ಒಂದು ಸಾಂಸ್ಕೃತಿಕ ಗುಂಪಿನ (Cultural Group) ದೇಶಿ ಚಹರೆಗಳನ್ನು ಗುರುತಿಸುವುದು ನನ್ನ

ಪ್ರಬಂಧದ ಉದ್ದೇಶವಾಗಿದೆ.

ಸಂಶೋಧನಾ ವಿಧಾನಗಳು

- ಸಂದರ್ಶನ ವಿಧಾನ
- ಅವಲೋಕನ ವಿಧಾನ
- ಅರಚಿತ ಪ್ರಶ್ನಾವಳಿ ವಿಧಾನ
- ಗುಂಪು ಚರ್ಚೆ

ಹಾಗೆಯೇ ಪ್ರಸ್ತುತ ವಿಷಯ ಕುರಿತು ಇದುವರೆಗೆ ಪ್ರಕಟಗೊಂಡಿರುವ ಪುಸ್ತಕಗಳು, ಲೇಖನಗಳನ್ನು ಪರಾಮರ್ಶನ ಮಾಡಲಾಗಿದೆ.

ಜೇನುಕುರುಬರ ಉಗಮ–ಇತಿಹಾಸ

ಕರ್ನಾಟಕದ ಆದಿವಾಸಿಗಳಲ್ಲಿಯೇ ಅತ್ಯಂತ ಪ್ರಾಚೀನ ಬುಡಕಟ್ಟೆಂದರೆ ಈ ಜೇನುಕುರುಬ. ಇವರ ಬಗ್ಗೆ ಮಿಶ್ರ (1975:75) ರವರು ಹೀಗೆ ಬರೆಯುತ್ತಾರೆ. ಕಾಡುಕುರುಬರು ಪಲ್ಲವರ ಸಂತತಿಯಾಗಿ ದಕ್ಷಿಣ ಭಾರತದ ಕೆಲವು ಭಾಗದಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಕ್ರಿ.ಶ 7ನೇ ಶತಮಾನದಲ್ಲಿ ಬಲಿಷ್ಠ ಚಕ್ರಾಧಿಪತಿಗಳಾದ ಕಂಗೋ, ಚೋಳ ಮತ್ತು ಚಾಲುಕ್ಯರು ಪಲ್ಲವರಾದ ಕುರುಬರ ರಾಜ್ಯಭಾರವನ್ನು ಸಹಿಸದೆ ಸದೆಬಡಿದರು. ಆ ಯುದ್ಧದಲ್ಲಿ ಅನೇಕ ಕುರುಬರು ಸತ್ತರು. ಬದುಕುಳಿದವರು ಚೆಲ್ಲಾಪಿಲ್ಲಿಯಾಗಿ ತಲೆಮರೆಸಿಕೊಳ್ಳಲು ಕಾಡುಬೆಟ್ಟಗಳನ್ನು ಹೊಕ್ಕರು. ಬೆಟ್ಟಗುಡ್ಡಗಳಲ್ಲಿ ನೆಲೆಸಿದ ಅವರ ಸಂತತಿಯು ಹೊರ ಸಂಪರ್ಕವಿಲ್ಲದೆ ಕಾಡಿನಲ್ಲಿಯೇ ವಂಶಾಭಿವೃದ್ಧಿ ಮಾಡುತ್ತಾ ಆದಿವಾಸಿಗಳಾಗಿಯೇ ಉಳಿದರು. ಅವರ ಪ್ರತಿನಿಧಿಗಳೇ ಕರ್ನಾಟಕದಲ್ಲಿ ವಾಸಿಸುತ್ತಿರುವ ಕುರುಬರು. ಆದಿವಾಸಿಗಳಾದ ಕುರುಬರು ವಾಸಿಸುತ್ತಿದ್ದ ಉತ್ತರ ಮಲಬಾರ್ (North Malabar) ಕುರುಬರ ನಾಡೆಂದೇ ಹೆಸರುವಾಸಿಯಾಗಿತ್ತು. ದಕ್ಷಿಣ ಭಾರತದಲ್ಲಿ ಬಹಳ ಪ್ರಭಾವಶಾಲಿಯಾಗಿದ್ದ ಇವರ ಆಳ್ವಿಕೆ 7ನೇ ಶತಮಾನದಲ್ಲಿ ಉಚ್ಛ್ರಾಯಸ್ಥಿತಿಯಲ್ಲಿತ್ತು. ಆದರೆ ತದನಂತರದಲ್ಲಿ 8ನೇ ಶತಮಾನದಲ್ಲಿ ಚೋಳರ ರಾಜ ಇವರ ಪ್ರಾಬಲ್ಯವನ್ನು ಹತ್ತಿಕ್ಕಿದನು. ನಂತರ ಚೆಲ್ಲಾಪಿಲ್ಲಿಯಾದ ಇವರು ಮಲಬಾರ್, ನೀಲಗಿರಿ ಬೆಟ್ಟಗಳಲ್ಲಿ, ವೈನಾಡ್, ಕೊಡಗು, ಮೈಸೂರು, ಚಾಮರಾಜನಗರ ಕಡೆಗಳಲ್ಲಿ ಹರಡಿಕೊಂಡಿದ್ದಾರೆ. ಪ್ರಸ್ತುತ ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ, ಹುಣಸೂರು, ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು ಹಾಗೂ ಕೊಡುಗು ಜಿಲ್ಲೆಯ ಮಡಿಕೇರಿ, ವಿರಾಜಪೇಟೆ, ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಅನಾದಿಕಾಲದಿಂದಲೂ ನೆಲೆಸಿದ್ದಾರೆ. ಈ ಕುರುಬರಲ್ಲಿಯೇ ಊರುಕುರುಬ

ಮತ್ತು ಕಾಡುಕುರುಬ ಎಂಬ ಎರಡು ಗುಂಪುಗಳನ್ನು ಕಾಣಬಹುದು. ಈ ಕಾಡುಕುರುಬರಲ್ಲಿ ಜೇನುಕುರುಬ ಮತ್ತು ಬೆಟ್ಟಕುರುಬ ಎಂಬ ಎರಡು ಪಂಗಡಗಳಿವೆ. ಈ ಜೇನು ಕುರುಬರು ಕಾಡಿನಲ್ಲಿ ಜೇನು ಸಂಗ್ರಹಿಸುವುದರಿಂದ ಇವರಿಗೆ ಆ ಹೆಸರು ಅನ್ವರ್ಥಕವಾಗಿದೆ. ಒಟ್ಟಾರೆ ಈ ಕಾಡಿನ ಮಕ್ಕಳು ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದು, ಇನ್ನೂ ಕೂಡ ನಗರ ಜೀವನದ ನೆರಳೂ ಸೋಕದ ಈ ಮಂದಿ ಇರುವುದು – ಇಲ್ಲದರ ನಡುವೆಯೇ ತಮ್ಮದೇ ಆದ ಸಾಂಸ್ಕೃತಿಕ ಬದುಕನ್ನು ನಡೆಸುತ್ತಿದ್ದಾರೆ.

ವಿಷಯದ ಹರವು

ಜೇನುಕುರುಬರು ವಾಸಿಸುವ ಪ್ರದೇಶಕ್ಕೆ 'ಹಾಡಿ'ಗಳೆಂದು ಕರೆಯುವುದು ರೂಢಿ. ಬಡತನ ಹಾಗೂ ಶಿಕ್ಷಣದ ಮಹತ್ವದ ಅರಿವಿನ ಕೊರತೆಯಿಂದಾಗಿ ಇನ್ನೂ ಸಾಂಪ್ರದಾಯಿಕ ಬದುಕನ್ನು ಬದುಕುತ್ತಿದ್ದಾರೆ. ನಾಗರಿಕ ಬದುಕನ್ನು ಪ್ರೀತಿಸುವ ಇವರು ಬದಲಾವಣೆಯ ಹೊಸ್ತಿಲಿನಲ್ಲಿಯೂ ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಹಪಹಪಿಸುತ್ತಾ ಮಂದಗತಿಯಲ್ಲಿ ನಾಗರಿಕತೆಯತ್ತ ಹೆಜ್ಜೆಯಿಟ್ಟವರು. ಆದರೂ ಈ ಬುಡಕಟ್ಟುಗಳು ತಲತಲಾಂತರದಿಂದ ಕಾಪಿಟ್ಟುಕೊಂಡು ಬಂದ ಜೀವನಸಂಸ್ಕೃತಿಯನ್ನು 21ನೆಯ ಶತಮಾನದಲ್ಲಿ ಮುನ್ನುಗ್ಗುತ್ತಿರುವ ಇಂದಿಗೂ ಉಳಿಸಿ ಬೆಳೆಸಿಕೊಂಡು ಬರುತ್ತಿರುವುದು ಅವರ ಸಾಂಸ್ಕೃತಿಕ ಪಳೆಯುಳಿಕೆಗಳಾಗಿ ಕಂಡುಬರುತ್ತವೆ. ಉದಾ:– ನ್ಯಾಯಪದ್ಧತಿ, ಆಹಾರ ಪದ್ಧತಿ, ನುಡಿಚಹರೆ, ವೈದ್ಯ, ಪದ್ಧತಿ ಇತ್ಯಾದಿ. ಅಲ್ಲದೆ ಇವರು ಹುಟ್ಟಿನಿಂದ ಸಾವಿನವರೆಗೆ ಅನೇಕ ಧಾರ್ಮಿಕ ಆಚರಣೆಗಳನ್ನು ಮಾಡುತ್ತಾರೆ. ಇವುಗಳನ್ನು ಜೀವನಾವರ್ತನ ಆಚರಣೆ (Life Cycle Rituals)ಗಳೆಂದು ಹೆಸರಿಸಬಹುದು. ಈ ಆಚರಣೆಗಳು ಇವರ ಸಂಸ್ಕೃತಿಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಇವು ಈ ಜನರ ಆಲೋಚನ ಕ್ರಮ, ದುಷ್ಟಶಕ್ತಿಯ ನಿಗ್ರಹ, ಸತ್‌ಶಕ್ತಿಯನ್ನು ಜಾಗೃತಗೊಳಿಸುವ ವಿಧಿನಿಷೇಧಗಳ ಹಿನ್ನೆಲೆಯಲ್ಲಿ ಹುಟ್ಟಿದವುಗಳಾಗಿವೆ. ಅವರ ಜೀವನ ಸಂಸ್ಕೃತಿಯ ಒಳ–ಹೊರಗನ್ನು ಹೀಗೆ ಪರಾಮರ್ಶಿಸಬಹುದು.

ನ್ಯಾಯ ಪದ್ಧತಿ

ಜೇನುಕುರುಬರ ನ್ಯಾಯ ಪದ್ಧತಿ ಅತ್ಯಂತ ವಿಶೇಷವಾದುದು, ಸಮುದಾಯದಲ್ಲಿ ಜರುಗುವ ಎಲ್ಲಾ ಸಮಸ್ಯೆಗಳನ್ನು ಸಮುದಾಯದ ಒಳಗೇ ಬಗೆಹರಿಸಿಕೊಳ್ಳುತ್ತಾರೆ. ವ್ಯಕ್ತಿ, ಕುಟುಂಬ, ಹಾಡಿ–ಹಾಡಿಗಳ ನಡುವೆ ನಡೆಯುವ ಸಂಘರ್ಷ ಎಲ್ಲವನ್ನು ಹಾಡಿಪಂಚಾಯಿತಿಯ ಮೂಲಕವೇ ಬಗೆಹರಿಸಿಕೊಳ್ಳುತ್ತಾರೆ. ವೈವಾಹಿಕ ಸಂಬಂಧ, ಆಹಾರ ಸಂಗ್ರಹಣೆ, ಸಂಪನ್ಮೂಲಗಳ ರಕ್ಷಣೆ, ಅತಿಕ್ರಮ ಪ್ರವೇಶ, ಇವೆಲ್ಲವೂ ಹಾಡಿನ್ಯಾಯಾಲಯದ ವ್ಯಾಪ್ತಿಗೆ ಬರುತ್ತವೆ.

ಈ ಹಾಡಿಪಂಚಾಯಿತಿಗೆ ಹಾಡಿಯಜಮಾನನೇ ಮುಖ್ಯ ನ್ಯಾಯಾಧೀಶ. ವ್ಯಕ್ತಿ ಸಂಬಂಧಿ ಸಮಸ್ಯೆಯಾದರೆ ಎರಡೂ ಕಡೆಯ ವಿಷಯಗಳನ್ನು ಸವಿವರವಾಗಿ ಪಂಚಾಯಿತಿಯಲ್ಲಿ ಆಲಿಸಲಾಗುತ್ತದೆ. ಸಾಕ್ಷಿ ಆಧಾರಗಳನ್ನು ಪರಿಶೀಲಿಸಿ ಸತ್ಯ ಹಾಗೂ ಸುಳ್ಳನ್ನು ಒರೆಗೆ ಹಚ್ಚಿ ಸರಿಯಾದ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ತಪ್ಪು ಮಾಡಿದವನಿಗೆ ಬುದ್ಧಿಹೇಳಿ ನೊಂದವರಿಗೆ ಸಾಂತ್ವನಿಸಿ ಯಾವುದೇ ದ್ವೇಷ, ಅಹಿತಕರ ಘಟನೆಗಳು ಸಂಭವಿಸದಂತೆ ಇಬ್ಬರಿಗೂ ಎಚ್ಚರಿಕೆ ಕೊಡಲಾಗುತ್ತದೆ. ಹಾಗೆಯೇ ಹಾಡಿ–ಹಾಡಿಗಳಿಗೆ ಸಂಬಂಧಿಸಿದ ವಿಷಯವಾದರೆ ಎರಡೂ ಹಾಡಿಗಳ ಸಮ್ಮುಖದಲ್ಲಿ ನ್ಯಾಯಪಂಚಾಯಿತಿ ಜರುಗುತ್ತದೆ. ಅಲ್ಲಿಯೂ ಬಗೆಯಹರಿಯದಿದ್ದಲ್ಲಿ ಗಡಿನ್ಯಾಯಕ್ಕೆ ಒಪ್ಪಿಸುತ್ತಾರೆ. ಈ ಗಡಿನ್ಯಾಯ ಹತ್ತಾರು ಹಾಡಿಗಳು ಸೇರಿ ನಿಗದಿ ಪಡಿಸಿರುವ ಸ್ಥಳದಲ್ಲಿ ನಡೆಯುತ್ತದೆ. ಇಲ್ಲಿನ ತೀರ್ಮಾನಗಳನ್ನು ಉಲ್ಲಂಘಿಸಿದವರಿಗೆ ಬಹಿಷ್ಕಾರ ಹಾಕುವ ಕಠಿಣ ಪದ್ಧತಿಯೂ ಇವರಲ್ಲಿದೆ. ಯಜಮಾನಿಕೆ ಅತ್ಯಂತ ಸರಳ ಪದ್ಧತಿಯಾಗಿದ್ದರೂ ಹಾಡಿಯನ್ನು ಸುಭದ್ರವಾಗಿ ನಡೆಸಿಕೊಂಡು ಹೋಗಲು ಇದು ಸಹಕಾರಿ ಪ್ರಸ್ತುತ ಆಧುನಿಕ ಸಂದರ್ಭದಲ್ಲಿಯೂ ಜೇನುಕುರುಬರು ಅತ್ಯಂತ ಸರಳ, ಸಹಮತ, ಸೌಹಾರ್ದಯುತ ನ್ಯಾಯಪಂಚಾಯಿತಿ ವ್ಯವಸ್ಥೆಯನ್ನು ಉಳಿಸಿಕೊಂಡಿರುವುದು ಅವರ ಸಾಂಸ್ಕೃತಿಕ ಹೆಗ್ಗುರುತಿಗೆ ಸಾಕ್ಷಿಯಾಗಿದೆ.

ಪಾರಂಪರಿಕ ಆಹಾರ ಪದ್ಧತಿ

ನಮ್ಮದು ಬಹುಮುಖಿ ಸಂಸ್ಕೃತಿಯ ನೆಲ. ಭೌಗೋಳಿಕವಾಗಿ ಎಲ್ಲೆಲ್ಲಿ ಜನರು ನೆಲೆಸಿರುವರೋ ಅಲ್ಲಲ್ಲಿಯೇ ವಿಶಿಷ್ಟವಾದ, ವೈವಿಧ್ಯಮಯವಾದ ಆಹಾರ ಪದ್ಧತಿಗಳನ್ನು ಕಾಣಬಹುದು. ಕಾಡಿನಲ್ಲಿ ಸಿಗುವ ಆಹಾರ ಜೀವನಾಧಾರ. ಅದು ಋತುಮಾನಕ್ಕನುಗುಣವಾಗಿರುತ್ತದೆ, ಹಸಿರು ಸಸಿಗಳು, ನದಿಕೊಳ್ಳಗಳಲ್ಲಿ ಸಿಗುವ ಮೀನು, ಏಡಿ, ಗೆಡ್ಡೆಗೆಣಸು, ಅಣಬೆ, ಕೀಟಗಳು ಇವು ಪೌಷ್ಠಿಕ ಕೊರತೆಯನ್ನು ಹೋಗಲಾಡಿಸುತ್ತವೆ. ಅಲ್ಲದೆ ಇವು ಔಷಧೀಯ ಗುಣವುಳ್ಳ ಆಹಾರವಾಗಿರುತ್ತವೆ. ಇವುಗಳನ್ನು ತುಂಬ ಶ್ರಮ, ಚಾತುರ್ಯದಿಂದ ಸಂಗ್ರಹ ಮಾಡಬೇಕಾಗುತ್ತದೆ. ಇವುಗಳು ಸುಲಭವಾಗಿ ಲಭ್ಯವಾಗದಿರುವಂತಹವು, ಅಂಗಡಿಗಳಲ್ಲಿ ಸಿಗಲಾರದಂತಹವು, ಬೆಳೆಯಲಾಗದಿರುವಂತಹವು, ಈ ಆಹಾರ ಕೇವಲ ಜೈವಿಕವಾಗಿರದೆ ಅದಕ್ಕಿಂತಲೂ ಒಂದು ಹೆಜ್ಜೆ ಮುಂದು. ಇಂತಹ ಪ್ರಕೃತಿಯಲ್ಲಿ ಸಿಗುವ ಆಹಾರವನ್ನು ನೇರವಾಗಿ ಪಡೆದು ಜೀವನಾಧಾರಕ್ಕೆ ಉಪಯೋಗಿಸುತ್ತಾರೆ, ಅದರಲ್ಲೂ ಜೇನುಕುರುಬರು ಜೇನು ಸಂಗ್ರಹಿಸಿ ಆಹಾರವಾಗಿ ಬಳಸುತ್ತಾರೆ. ಜೇನು ಬೇಟೆಯಲ್ಲದೆ ಇವರು ವ್ಯವಹಾರ ಹಾಗೂ ಆಹಾರದ ದೃಷ್ಟಿಯಿಂದ ಕೋಳಿ, ದನ ಸಾಕಾಣಿಕೆ ಮಾಡುತ್ತಾರೆ.

ಈ ಬಗೆಯ ಆಹಾರವನ್ನು ಕಾಡಿನಿಂದ ಪಡೆಯುವ ಜೇನುಕುರುಬರು ಮಣ್ಣಿನ ಗುಣ, ನೀರಿನ ಮೂಲ, ವಾತಾವರಣದಲ್ಲಾಗುವ ಬದಲಾವಣೆ, ಆಯಾ

ಪರಿಸರದಲ್ಲಿ ಬೆಳೆಯುವ ಸಸಿಗಳ ಬಗ್ಗೆ ಬಲ್ಲವರಾಗಿರುತ್ತಾರೆ. ನದಿಯ ಮಾಲಿನ್ಯ ಗುರುತಿಸುವ ಇವರು ಕಾಡಿನ ಮರಗಳು ಹಾಳಾಗಿರುವ ಬಗ್ಗೆ, ಮಳೆ ಬರದಿರುವ, ಮರಗಿಡಗಳಲ್ಲಿ ಹೂ, ಹಣ್ಣು, ಕಾಯಿ, ಬಿಡುವ ಕಾಲದ ಬಗ್ಗೆ ತಿಳಿದಿರುತ್ತಾರೆ. ಒಟ್ಟಾರೆ ನಮ್ಮ ವಿಜ್ಞಾನಿಗಳು ಹೇಳುವ ಲೆಕ್ಕಚಾರಕ್ಕಿಂತ ಜೀವನಾನುಭವದಿಂದ ಇವರು ಹೇಳುವ ಮಾಹಿತಿ ಹೆಚ್ಚು ಕರಾರುವಕ್ಕಾಗಿರುತ್ತದೆ. ಈ ಬಗೆಯ ಕೌಶಲ್ಯ, ಬುದ್ಧಿವಂತಿಕೆಯನ್ನು ಮುಂದಿನ ತಲೆಮಾರಿಗೆ ರವಾನಿಸುವುದು ಹಿರಿಯರ ಆದ್ಯ ಕರ್ತವ್ಯ, ಆಗ ಮಾತ್ರ ಪರಂಪರೆಯಿಂದ ಬಂದ ಸಾಂಸ್ಕೃತಿಕ ಸಂಪತ್ತು ಉಳಿಯಲು ಸಾಧ್ಯ.

ಜೇನುಕುರುಬರ ನುಡಿಚಹರೆ

ಒಂದು ಕುಟುಂಬವನ್ನು ಅವರಾಡುವ ಭಾಷೆಯ ಮೂಲಕ ನಿರ್ಧರಿಸಬಹುದಂತೆ. ಅಮೆರಿಕಾದಲ್ಲಿರುವ ಕಪ್ಪು ಜನರು ಮಾತನಾಡುವ ಕಪ್ಪು ಇಂಗ್ಲಿಷ್ ಈ ಮಾತನ್ನು ಸ್ಪಷ್ಟಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಭಾಷೆ ಮತ್ತು ಜನಾಂಗದ ಸಂಬಂಧ ಅವಿನಾಭಾವವಾದುದು. ಭಾರತವು ಬುಡಕಟ್ಟು ಭಾಷಿಕ ಸಮುದಾಯಗಳ ನಾಡು. ಅಂತಹ ಭಾಷಿಕ ಸಮುದಾಯಗಳಲ್ಲಿ ಜೇನುಕುರುಬ ಬುಡಕಟ್ಟು ಒಂದು. ಇವರ ಭಾಷೆಗೂ, ವೃತ್ತಿಗೂ ಅಂಟಿದೆ ನಂಟಿದೆ. ಜೇನು ಇಳಿಸುವುದು ಇವರ ಕುಲಕಸುಬಾದುದರಿಂದ ಆ ಬಗೆಗಿನ ವೃತ್ತಿ ಸಂಬಂಧಿ ಪದ ಪರಿಭಾಷೆಗಳು ಇವರ ಭಾಷೆಯಲ್ಲಿಯೂ ಬಳಕೆಯಲ್ಲಿವೆ. ಜೇನು ಬೇಟೆ ಇವರ ಪ್ರಧಾನ ವೃತ್ತಿ. ಜೇನು ಹಾರುವ ವೇಗವನ್ನು ಗಮನಿಸಿಯೇ ಯಾವ ಕಾಲದಲ್ಲಿ ಎಷ್ಟು ಜೇನು ಸಿಗಬಹುದೆಂದು ಅಂದಾಜು ಮಾಡುವ ಚಾಣಾಕ್ಷ ಸಮುದಾಯವಿದು. ಇವರು ವೃತ್ತಿಯಲ್ಲಿ ಜೇನು ಇಳಿಸುವವರಾದರೂ ಆನೆಗಳನ್ನು ಹಿಡಿದು ಪಳಗಿಸುವುದು ಇವರ ಕಾಯಕ. ಈ ಸಂಬಂಧವಾದ ನುಡಿಚಹರೆ ಭಾಷಿಕವಾಗಿ ಮೌಲ್ಯ ಪಡೆದುಕೊಂಡಿದೆ.

ಉದಾ:–

ಅ. ಪದಾಂತ್ಯದ 'ಎ' ಕಾರ 'ಆ' ಕಾರವಾಗುತ್ತದೆ.

ಬರಹ ಕನ್ನಡ	ಜೇನುಕುರುಬರ ಕನ್ನಡ
ಆನೆ	ಆನ
ಮನೆ	ಮನ
ಆಸೆ	ಆಸ
ಆಗಿದೆ	ಆಗದ

ಆ. ಪದಾದಿಯ 'ಬ' ಕಾರದ ನಂತರದ 'ಎ' ಕಾರ 'ಆ' ಕಾರವಾಗುತ್ತದೆ.

ಬೆಟ್ಟ – ಬಟ್ಟ

ಇ. ಪದಾದಿಯ 'ತ' ಕಾರದ ನಂತರದ 'ಅ' ಕಾರ ಜೇನುನುಡಿಯಲ್ಲಿ 'ಎ' ಕಾರವಾಗುತ್ತದೆ. ಹಾಗೆಯೇ ಬರಹ ಕನ್ನಡ ಎರಡನೇ ಅಕ್ಷರದ 'ಎ' ಕಾರ ಜೇನುನುಡಿಯಲ್ಲಿ 'ಅ' ಕಾರವಾಗುತ್ತದ.

ತಲೆ – ತೆಲ

ಈ. ಮೂಲ ದ್ರಾವಿಡದ 'ಚ' ಕಾರ ಕನ್ನಡದಲ್ಲಿ 'ಸ' ಕಾರವಾಗುತ್ತದೆ. ಜೇನುನುಡಿಯಲ್ಲಿ 'ಚ' ಕಾರ 'ಸ' ಕಾರವಾಗುತ್ತದೆ.

ಚಿನ್ನ – ಸಿನ್ನ

ಚೆಂಬು – ಸೆಂಬು

ಚಪ್ಪರ – ಸಪ್ಪರ

ಉ. ಪದಮಧ್ಯದಲ್ಲಿ 'ಳ' ಕಾರ 'ಣ' ಕಾರವಾಗುತ್ತದೆ.

ಬೆಳಕು – ಬೆಣಕು

ಬೆಳಗಾಯಿತು – ಬೆಣಕ್ಕರಿತು

ಹೀಗೆ ಜೇನುಕುರುಬರ ಜೇನುನುಡಿ ವಿಶಿಷ್ಟವಾಗಿದೆ. ಆದರೆ ಪ್ರಸ್ತುತ ನಗರೀಕರಣ, ಆಧುನೀಕರಣದ ಒತ್ತಡದಿಂದ ಅವರ ಮಾತಿನಲ್ಲಿ ಇಂಗ್ಲಿಷ್ ರೂಪಗಳು ಎಡತಾಕಿ ಈ ಭಾಷೆ ಅಳಿವಿನಂಚಿಗೆ ಸಾಗುತ್ತಿದೆ. ಇವರ ಜೀವನ ವಿಧಾನ ಬದಲಾದಂತೆ ಭಾಷೆಯೂ ಬದಲಾಗಿದೆ. ಬರಬರುತ್ತಾ ಈ ಜನ ತಮ್ಮ ಭಾಷೆಯನ್ನು ಮರೆಯುತ್ತಿದ್ದಾರೆ. ಇದು ಹೀಗೆ ಮುಂದುವರಿದರೆ ಭಾಷೆಯ ಜೊತೆಗೆ ಒಂದು ಸಂಸ್ಕೃತಿ ನಾಶವಾಗುವುದರಲ್ಲಿ ಅನುಮಾನವಿಲ್ಲ. ಹೀಗಾದರೆ ಜೇನುಕುರುಬರು ತಮ್ಮ ನೆಲದಲ್ಲೇ ತಾವು ಪರಕೀಯರಾಗುವುದರಲ್ಲಿ ಎರಡು ಮಾತಿಲ್ಲ. ಆದುದರಿಂದ ಈ ಭಾಷೆಯನ್ನು ಪುನರುಜ್ಜೀವನಗೊಳಿಸಲು ಅದು ಮತ್ತೆ ಬದುಕಿನಲ್ಲಿ ಉಳಿಯಲು ದಾಖಲೀಕರಣ ಮಾಡಬೇಕು. ಅಲ್ಲದೆ ಆ ಭಾಷೆಯ ವ್ಯಾಕರಣ, ನಿಘಂಟು, ಮೌಖಿಕ ಸಂಪ್ರದಾಯವನ್ನು ದಾಖಲು ಮಾಡಬೇಕು. ಒಟ್ಟಾರೆ ಜೇನುಕುರುಬರ ಸಮುದಾಯಲ್ಲಿರುವ ಜನಪದ ಗೀತೆಗಳು, ಹಬ್ಬ-ಹರಿದಿನಗಳ ಆಚರಣೆ, ಲೋಕದೃಷ್ಟಿ, ವೈದ್ಯವಿಜ್ಞಾನ, ಆರೋಗ್ಯ ರಕ್ಷಣೆಯ ವಿಧಿವಿಧಾನಗಳು ಮತ್ತು ಜ್ಞಾನ ಪರಂಪರೆಯನ್ನು ಸಂಗ್ರಹಿಸುವ ಮೂಲಕ ಆ ಭಾಷೆಗೆ ಶಕ್ತಿ ತುಂಬಬಹುದಾಗಿದೆ.

ಜೇನುಕುರುಬರ ಜನಪದ ವೈದ್ಯ

ವೈದ್ಯವಿದ್ಯೆ ಬುಡಕಟ್ಟು ಸಮುದಾಯಗಳು ಧ್ಯಾನಸ್ಥ ಸ್ಥಿತಿಯಲ್ಲಿದ್ದಾಗ ರೂಪುಗೊಂಡ ಜ್ಞಾನಪರಂಪರೆ. ಈ ವೈದ್ಯವಿದ್ಯೆ ಮಾನವನಷ್ಟೇ ಪ್ರಾಚೀನವಾದುದು. ಪ್ರಸ್ತುತ ಆಧುನಿಕತೆ, ಜಾಗತೀಕರಣ, ವೈಜ್ಞಾನಿಕರಣ... ಹೀಗೆ ಕರಣಗಳ ಕಠೋರತೆಯು ಬುಡಕಟ್ಟುಗಳ ಮೇಲೆ ಎಷ್ಟೇ ದಾಳಿ ನಡೆಸಿದರೂ ಅವು ತಮ್ಮ ಪಾರಂಪರಿಕ ಜ್ಞಾನದ ಹಿನ್ನೆಲೆಯಲ್ಲೇ ಬದುಕುತ್ತಿರುವುದನ್ನು ಕಾಣಬಹುದು. ಇದಕ್ಕೆ ಜೇನುಕುರುಬ ಸಮುದಾಯ ಹೊರತಲ್ಲ. ಇಂದು ನಾವು ಎದುರಿಸುತ್ತಿರುವ ಅನೇಕ ರೋಗಗಳಿಗೆ ಪರಿಹಾರ ಕಂಡುಕೊಳ್ಳಲು ಇವರ ಪಾರಂಪರಿಕ ಜ್ಞಾನದ ಕಡೆಗೆ ಮುಖಮಾಡಬೇಕಾಗಿದೆ. ಆ ಸಮುದಾಯದ ಆಳದಲ್ಲಿರುವ ಪಾರಂಪರಿಕ ವೈದ್ಯಪದ್ಧತಿಯನ್ನು ಅಧ್ಯಯನ ಮಾಡಬೇಕಾಗಿದೆ.

ಜೇನುಕುರುಬರಲ್ಲಿ ಕಂಡುಬರುವ ವೈದ್ಯಪದ್ಧತಿ ಎರಡು ರೀತಿಯದಾಗಿದೆ.

1. ಮಂತ್ರ-ತಂತ್ರದಿಂದ ಮಾಡುವ ವೈದ್ಯ ವಿಧಾನ
2. ಗಿಡ-ಮೂಲಿಕೆಗಳಿಂದ ಮಾಡುವ ವೈದ್ಯ ವಿಧಾನ

1. ಮಂತ್ರ-ತಂತ್ರದಿಂದ ಮಾಡುವ ವೈದ್ಯ ವಿಧಾನ

ಮನುಷ್ಯ ಮತ್ತು ಪಶು-ಪಕ್ಷಿಗಳಿಗೆ ಬರುವ ರೋಗ-ರುಜಿನಗಳಿಗೆ ದೇವ-ದೇವತೆಗಳು, ಭೂತ ಪ್ರೇತಗಳು ಕಾರಣ ಎಂಬ ನಂಬಿಕೆ ಇವರದು. ದೇವದೇವತೆಗಳು, ಭೂತಪ್ರೇತಗಳು ಕೋಪಿಸಿಕೊಂಡರೆ ಅವು ರೋಗಗಳನ್ನು ಮಾನವನ ಮೇಲೆ ಪ್ರಯೋಗಿಸುತ್ತವೆ ಎಂಬುದು ಇವರ ತಿಳುವಳಿಕೆ. ಆದ್ದರಿಂದಲೇ ಜೇನುಕುರುಬರು ಕಾಯಿಲೆ-ಕಸಾಲೆ ಇತರೆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಬುರುಡೆ(ದೆವ್ವ) ಕರೆಸುತ್ತಾರೆ. ಅವರ ಚಾವಡಿಯಲ್ಲಿ ಅಗ್ನಿಕುಂಡದ ಸುತ್ತ ಒಂದು ವರ್ತುಲವಿರುತ್ತದೆ. ಈ ವರ್ತುಲವನ್ನು ಯಾರೂ ಪ್ರವೇಶಿಸಬಾರದೆಂಬ ನಿರ್ಬಂಧವಿರುತ್ತದೆ. ಅಗ್ನಿಕುಂಡದ ಎದುರಿಗೆ ಕುಳಿತ ಮಂತ್ರವಾದಿಯು ಸಮಸ್ಯೆಗಳನ್ನು ಬಗೆಹರಿಸಲು ಗಾಳಿ ಅಥವಾ ಕೆಟ್ಟ ಆತ್ಮಗಳನ್ನು ಆಹ್ವಾನಿಸಲು ಕೈಯಲ್ಲಿ ಸೋರೆಬುರುಡೆ ಹಿಡಿದು ಕುಳಿತುಕೊಂಡಿರುತ್ತಾನೆ. ಅವನ ಎದುರಿಗೆ ಕುಳಿತ ಇಬ್ಬರು ಅಥವಾ ಮೂರು ಜನ ಹೆಣ್ಣು ಮಕ್ಕಳು ಸೊಲ್ಲು ಹೇಳಲು ಪ್ರಾರಂಭಿಸಿದ ಮೇಲೆ ಮಂತ್ರವಾದಿ ಸೋರೆಬುರುಡೆಯನ್ನು ತಿರುಗಿಸುತ್ತಾ ಆತ್ಮಗಳನ್ನು ಕರೆದು ಮೈದುಂಬಿಸಿಕೊಂಡು ಅದರ ಮುಂದೆ ಸಮಸ್ಯೆಗಳನ್ನು ಹೇಳಿ ಪರಿಹಾರ ಕಂಡುಕೊಳ್ಳುತ್ತಾನೆ. ಈ ಮಂತ್ರವಾದಿಯು ಹೇಳುವ ಗಿಡ-ಮೂಲಿಕೆ, ಆಹಾರಗಳನ್ನು ಬಳಸಿ ಕಾಯಿಲೆಗಳನ್ನು ಗುಣಪಡಿಸಿಕೊಳ್ಳುವ ಪದ್ಧತಿ ಜೇನುಕುರುಬರಲ್ಲಿ ಇಂದಿಗೂ ರೂಢಿಯಲ್ಲಿದೆ.

ಮಂತ್ರದಂತೆ ಯಂತ್ರದ ಮೂಲಕ ಮನುಷ್ಯನ ಮಾನಸಿಕ ರೋಗವನ್ನು

ಗುಣಪಡಿಸುವ ಪದ್ಧತಿ ಜೇನುಕುರುಬರಲ್ಲಿದೆ. ಇದು ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಸಾಮಾನ್ಯವಾಗಿ ತಾಮ್ರ, ಹಿತ್ತಾಳೆ, ಹಾಳೆ, ಮಣ್ಣು, ಹಿಟ್ಟಿನ ಗೊಂಬೆ, ಎಲುಬು, ಕಟ್ಟಿಗೆಗಳ ಮೇಲೆ ಯಂತ್ರ ಸಾಹಿತ್ಯ ಬರೆಯುತ್ತಾರೆ. ಈ ಯಂತ್ರಗಳನ್ನು ವ್ಯಕ್ತಿಯ ಶರೀರಕ್ಕೆ ತಾಗುವಂತೆ ಕಟ್ಟುತ್ತಾರೆ. ದೆವ್ವ, ಭೂತ, ಕ್ಷುದ್ರ ದೇವತೆಗಳಿಂದ ಪರಿಹಾರ ಕಂಡುಕೊಳ್ಳುವ ಈ ಯಂತ್ರಗಳನ್ನು ರಕ್ತದಿಂದಲೂ ಬರೆಸುತ್ತಾರೆ. ಒಟ್ಟಾರೆ ಮಂತ್ರ-ಯಂತ್ರಗಳ ಕೈವಾಡ ಜೇನುಕುರುಬರಲ್ಲಿ ಇಂದಿಗೂ ರೂಢಿಯಲ್ಲಿರುವುದು ಗಮನಿಸಬೇಕಾದ ಸಂಗತಿ.

2. ಗಿಡ-ಮೂಲಿಕೆಗಳಿಂದ ಮಾಡುವ ವೈದ್ಯ ವಿಧಾನ

ಜೇನುಕುರುಬರಿಗೆ ಜೇನು ತೆಗೆಯುವಾಗ ಜೇನುಹುಳು ಕಚ್ಚುವುದು ಸರ್ವೇಸಾಮಾನ್ಯ. 4 ರಿಂದ 5 ಹುಳು ಕಚ್ಚಿದರೆ ಏನು ಆಗುವುದಿಲ್ಲ. ಆದರೆ 20ರಿಂದ 30ಕ್ಕಿಂತಲೂ ಹೆಚ್ಚು ಕಚ್ಚಿದರೆ ಅಪಾಯ. ಇಂತಹ ಸಮಯದಲ್ಲಿ ಹುಳು ಕಚ್ಚಿರುವ ಜಾಗದಲ್ಲಿ ಇವರು ಮುಳ್ಳುಗಳನ್ನು ತೆಗೆದುಹಾಕಿ, ಬೆಂಕಿಯಲ್ಲಿ ಮೈಬಿಸಿ ಮಾಡಿಕೊಂಡರೆ ಜೇನ್ನೊಣಗಳು ಕಚ್ಚಿದ ವಿಷದ ಪ್ರಭಾವ ಕಡಿಮೆ ಆಗುತ್ತದೆ. ಇಲಿ ಕಚ್ಚಿದಾಗ ಹಾಗೆ ಬಿಟ್ಟರೆ ಮನುಷ್ಯ ವೃದ್ಧಿ ಹೊಂದುವುದಿಲ್ಲ ಎನ್ನುವ ಮಾತಿದೆ. ಆದ್ದರಿಂದ ಇಲಿ ಕಚ್ಚಿದ ಜಾಗದಲ್ಲಿ ಬೆಣ್ಣೆ ಹಚ್ಚಿ ಬೆಕ್ಕಿನಿಂದ ನೆಕ್ಕಿಸುತ್ತಾರೆ.

ಕಾಡುಗಳಲ್ಲಿ ವಾಸಿಸುವ ಜೇನುಕುರುಬರಿಗೆ ಬದುಕು ನಿತ್ಯನಿರಂತರ ಸಂಘರ್ಷಮಯವಾದುದು. ಅವರು ಬೇಟೆ, ಗೆಡ್ಡೆ-ಗೆಣಸು, ಜೇನುಸಂಗ್ರಹಣೆ ಮುಂತಾದ ಕೆಲಸಗಳಲ್ಲಿ ತೊಡಗಿಕೊಂಡಾಗ ದುಷ್ಟ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು, ಮರಹತ್ತಿದಾಗ ಆಕಸ್ಮಿಕ ಮರದಿಂದ ಬಿದ್ದು, ಕಾಡಿನಲ್ಲಿ ಸುತ್ತಾಡುವಾಗ ವಿಷ ಜಂತುಗಳಿಂದ ಕಚ್ಚಿಸಿಕೊಂಡು... ಹೀಗೆ ಅನೇಕ ತೊಂದರೆಗಳಿಗೆ ಒಳಗಾದಾಗ ಪರಿಹಾರ ಕಂಡುಕೊಳ್ಳಲು ಪ್ರಕೃತಿಯ ಮೊರೆ ಹೋಗುತ್ತಾರೆ. ತಮ್ಮ ದೇಹಕ್ಕೆ ಬಂದೊದಗಿದ ಗಾಯ, ಕಾಯಿಲೆಗಳಿಂದ ಮುಕ್ತಿ ಪಡೆಯಲು ಪ್ರಕೃತಿಯಲ್ಲಿ ಸಿಗುವ ಸೊಪ್ಪು, ನಾರು-ಬೇರುಗಳನ್ನು ಅರೆದು ಗಾಯಕ್ಕೆ ಹಚ್ಚಿ, ಅದರ ರಸವನ್ನು ಕುಡಿದು ಅದರಿಂದ ವಾಸಿಯಾಗದಿದ್ದರೆ, ಅದು ಮಾಯುವವರೆಗೂ ಸೊಪ್ಪು, ನಾರು-ಬೇರುಗಳಿಂದ ಪ್ರಯೋಗಗಳನ್ನು ಮಾಡುತ್ತಲೇ ಇರುತ್ತಾರೆ. ಗಾಯ ವಾಸಿಯಾದ ನಂತರ ಪರಿಹಾರ ಕಂಡುಕೊಂಡ ಸೊಪ್ಪು, ನಾರು-ಬೇರನ್ನು ಜ್ಞಾಪಕದಲ್ಲಿಟ್ಟುಕೊಂಡು ಮರುಪ್ರಯೋಗ ಮಾಡಿ ಆ ಗಿಡ-ಮೂಲಿಕೆಗಳ ಬಗ್ಗೆ ಖಚಿತ ಪಡಿಸಿಕೊಳ್ಳುತ್ತಾರೆ. ಹೀಗೆ ಜೇನುಕುರುಬರು ಪರಂಪರಾಗತವಾಗಿ ಕಾಪಿಟ್ಟುಕೊಂಡು ಬಂದ ವೈದ್ಯ ಪದ್ಧತಿಯ ಚಿಂತನ ಕ್ರಮವನ್ನು ಇಂದಿಗೂ ಜೀವಂತವಿರಿಸಿಕೊಂಡಿದ್ದಾರೆ.

ಹೀಗೆ ಜೇನುಕುರುಬರು ಚಲನಶೀಲವಾದ ಜೀವನ ಸಂಸ್ಕೃತಿಯನ್ನು ಒಳಎಚ್ಚರದಿಂದ ಕಾಪಾಡುವುದರ ಜೊತೆ-ಜೊತೆಗೆ ಹುಟ್ಟಿನಿಂದ ಸಾವಿನವರೆಗೆ

ಅನೇಕ ಜೀವನಾವರ್ತನ ಆಚರಣೆ (Life Cycle Rituals)ಗಳನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಅವು ಈ ಕೆಳಕಂಡಂತಿವೆ.

ಜನನ ಸಂಸ್ಕಾರ

ಜನನದಂತಹ ಸಂತೋಷದಾಯಕ ಸಮಾರಂಭವನ್ನು ಇವರು ಸಂಭ್ರಮದಿಂದ ಆಚರಿಸುತ್ತಾರೆ. ಜೇನುಕುರುಬರಲ್ಲಿ ಇದು ಸ್ತ್ರೀ ಗರ್ಭಿಣಿಯಾದ ದಿನದಿಂದಲೇ ಪ್ರಾರಂಭವಾಗಿ, ಈ ಸಂದರ್ಭದಲ್ಲಿ ಸೂತಕ, ಮುಟ್ಟು ಮೈಲಿಗೆಯನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಗರ್ಭಧರಿಸಿದ ಹೆಣ್ಣಿಗೆ ಪ್ರತ್ಯೇಕ ಗುಡಿಸಲನ್ನು ನಿರ್ಮಿಸಿರುತ್ತಾರೆ. ಅದಕ್ಕೆ 'ಪೆಳ್ಳಿ' ಎಂದು ಹೆಸರು. ಮೂರನೆಯ ತಿಂಗಳಿನಿಂದಲೇ ಗರ್ಭಿಣಿ ಮಹಿಳೆ ಆ ಪ್ರತ್ಯೇಕ ಗುಡಿಸಿಲಿನಲ್ಲಿ ವಾಸಿಸಬೇಕು. ಅವಳ ಬೇಕು-ಬೇಡಗಳನ್ನು ಪೂರೈಸಲು ಹಾಡಿಯ ವಯಸ್ಸಾದ ಹೆಂಗಸೊಬ್ಬಳನ್ನು ಜೊತೆಗೆ ಇಟ್ಟಿರುತ್ತಾರೆ. ಈ ಗುಡಿಸಿಲಿಗೆ ವಯಸ್ಸಾದ ಹೆಂಗಸರಿಗೆ ಮಾತ್ರ ಪ್ರವೇಶ. ಉಳಿದವರಿಗೆ ನಿಷೇಧ. ಮಗುವಿನ ಜನನದ ನಂತರವಷ್ಟೇ ಮತ್ತೆ ಆಕೆ ಮನೆಗೆ ಮರಳ ಬೇಕಾಗುತ್ತದೆ. ಇವರಲ್ಲಿ ಏಳು ಅಥವಾ ಒಂಬತ್ತು ದಿನಗಳವರೆಗೆ ಮೈಲಿಗೆ ಇರುತ್ತದೆ. ಹೆಣ್ಣನ್ನು ಗರ್ಭಧರಿಸಿದ ದಿನದಿಂದ ಹೆರಿಗೆಯಾಗಿ ಶುದ್ಧಳಾಗುವವರೆಗೆ 'ಮೈಲಿಗೆಯವಳು' ಎಂದು ಕಲ್ಪಿಸಿಕೊಂಡಿರುವುದನ್ನು ಕಾಣಬಹುದು. ಗರ್ಭಧರಿಸಿದ ಹೆಣ್ಣು ಗಂಡನನ್ನು ಸೇರಬಾರದು ಎಂಬ ನಿಷೇಧವೂ ಇದೆ. ಬಸುರಿ ಹೆಣ್ಣು ಗಂಡನೊಂದಿಗೆ ಲೈಂಗಿಕ ಕ್ರಿಯೆ ನಡೆಸಿದರೆ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಪಿಂಡಕ್ಕೆ ತೊಂದರೆಯಾಗುತ್ತದೆ ಎಂಬ ಅರಿವಿನಿಂದ ಪತಿ-ಪತ್ನಿಯನ್ನು ಬೇರೆಯಾಗಿರಿಸಲು ಈ ನಿಷೇಧ ಹೇರಿರಬಹುದು, ಬಸುರಿ ಹೆಂಗಸು ಯಾವ ಮಂಗಳಕರ ಕಾರ್ಯಗಳಲ್ಲಿಯೂ ಭಾಗವಹಿಸಬಾರದೆಂಬ ನಿಯಮಗಳಿರುವುದು ಕಂಡುಬರುತ್ತದೆ. ಒಟ್ಟಾರೆ ಮೈಲಿಗೆಯನ್ನು ಕಟ್ಟುನಿಟ್ಟಿನಿಂದ ಆಚರಿಸುವ ಇವರು ಮೈಲಿಗೆಯನ್ನು ಮೂರು, ಐದು, ಏಳು, ಒಂಬತ್ತು, ಹತ್ತು, ಹದಿನಾರು ಇಪ್ಪತ್ತೊಂದು ಅಷ್ಟೇ ಏಕೆ ಒಂದು ತಿಂಗಳವರೆಗೂ ಪಾಲಿಸುತ್ತಾರೆ. ಮಗು ಜನಿಸಿದ ಮೇಲೆ ಬಾಣಂತಿ ಮಾಸನ್ನು ಗಡಿಗೆಯಲ್ಲಿ ತುಂಬಿ ಭೂಮಿಯಲ್ಲಿ ಹೂಳುವ ಇವರು, ನಾಯಿ-ನರಿ ಕೆದರದಂತೆ ಎಚ್ಚರವಹಿಸುತ್ತಾರೆ. ಮಾಸು ಹೂಳಿದ ಸ್ಥಳದಲ್ಲಿ ಬಾಳೆ ಮತ್ತು ತೆಂಗಿನ ಗಿಡಗಳನ್ನು ನೆಡುವ ಪದ್ಧತಿ ಇದೆ. ಮಗುವಿನ ನಾಮಕರಣ ಸಂದರ್ಭದಲ್ಲಿ ಹಾಡಿಯ ಯಜಮಾನ ಬುರುಡೆ ಕರೆದು ಹೆಸರು ಸೂಚಿಸುತ್ತಾನೆ. ಇಲ್ಲಿ ಹಿರೀಕರು ಇಟ್ಟುಕೊಂಡು ಬಂದಿರುವ ಹೆಸರುಗಳನ್ನೇ ಇಡುವುದು ರೂಢಿ. ಆ ಹೆಸರುಗಳನ್ನು ಬಿಟ್ಟು ಶಿಶುವಿಗೆ ಬೇರೆ ಹೆಸರು ಇಟ್ಟರೆ ಆ ಶಿಶು ಅಲ್ಪಾಯುವಾಗುತ್ತದೆ ಎಂಬುದು ಅವರ ಬಲವಾದ ನಂಬಿಕೆ. ಒಂದೇ ಹೆಸರನ್ನುಳ್ಳ ವ್ಯಕ್ತಿಗಳಿದ್ದ ಸಂದರ್ಭದಲ್ಲಿ ಅವರನ್ನು ಗುರುತಿಸುವ ಪ್ರಶ್ನೆ ಕಾಡಿದಾಗ ತಿಳಿಯಲು ಅನುವಾಗುವಂತೆ

ಪೆರಿಯ(ದೊಡ್ಡ) ಚಿರಿಯ(ಸಣ್ಣ/ಚಿಕ್ಕ) ಎಂಬ ವಿಶೇಷಣಗಳನ್ನು ಹೆಸರಿನೊಂದಿಗೆ ಸೇರಿಸಿ ಕಟ್ಟುತ್ತಾರೆ. ಉದಾಹರಣೆಗೆ

ಗಂಡು ಮಗು

1. ಗಿರಿಯ	ದೊಡ್‌ಗಿರಿಯ	ಚಿಕ್‌ಗಿರಿಯ	ಸಣ್‌ಗಿರಿಯ
2. ಮರಿ	ದೊಡ್‌ಮರಿ	ಚಿಕ್‌ಮರಿ	ಸಣ್‌ಮರಿ
3. ಮರಿಯ	ದೊಡ್‌ಮರಿಯ	ಚಿಕ್‌ಮರಿಯ	ಸಣ್‌ಮರಿಯ
4. ಮಾದ	ದೊಡ್‌ಮಾದ	ಚಿಕ್‌ಮಾದ	ಸಣ್‌ಮಾದ
5. ಮಾರ	ದೊಡ್‌ಮಾರ	ಚಿಕ್‌ಮಾರ	ಸಣ್‌ಮಾರ
6. ಮೂಡ್ಲ	ದೊಡ್‌ಮೂಡ್ಲ	ಚಿಕ್‌ಮೂಡ್ಲ	ಸಣ್‌ಮೂಡ್ಲ
7. ಸಿಂಗ್ರಿ	ದೊಡ್‌ಸಿಂಗ್ರಿ	ಚಿಕ್‌ಸಿಂಗ್ರಿ	ಸಣ್‌ಸಿಂಗ್ರಿ

ಹೆಣ್ಣುಮಗು

8. ಮಾದಿ	ದೊಡ್‌ಮಾದಿ	ಚಿಕ್‌ಮಾದಿ	ಸಣ್‌ಮಾದಿ
9. ಮಾರಿ	ದೊಡ್‌ಮಾರಿ	ಚಿಕ್‌ಮಾರಿ	ಸಣ್‌ಮಾರಿ
10. ಮಾಸ್ತಿ	ದೊಡ್‌ಮಾಸ್ತಿ	ಚಿಕ್‌ಮಾಸ್ತಿ	ಸಣ್‌ಮಾಸ್ತಿ

ಹೀಗೆ ಜೇನುಕುರುಬರಲ್ಲಿ ಹೆಸರಿಡುವುದು ಆ ಸಮಾಜದ ಸಾಂಸ್ಕೃತಿಕ ವೈಲಕ್ಷಣ ಹಾಗೂ ಭಾಷವೈವಿಧ್ಯತೆಯನ್ನು ಸಾರುತ್ತದೆ. ಉಳಿದಂತೆ ಪ್ರಾಣಿಸಂಬಂಧಿ, ದೈವಸಂಬಂಧಿ, ಪ್ರಕೃತಿಸಂಬಂಧಿ, ಬಣ್ಣಕ್ಕೆ ಸಂಬಂಧಿಸಿದಂತೆ ಹೆಸರಿಡುವ ಪದ್ಧತಿ ರೂಢಿಯಲ್ಲಿದೆ.

ಪ್ರೌಢಾವಸ್ಥೆ

ಜೇನುಕುರುಬ ಸಮುದಾಯದಲ್ಲಿ ಹೆಣ್ಣು ಋತುಮತಿಯಾದರೆ ಅದನ್ನು ಮೈಲಿಗೆ ಎಂದು ಭಾವಿಸುತ್ತಾರೆ. ಹೆಣ್ಣು ಋತುಮತಿಯಾಗುವುದು ಪ್ರಾಕೃತಿಕ ಸಹಜ ನಿಯಮ. ಈ ಋತುಸಂಸ್ಕಾರವನ್ನು ಅವರವರ ಆರ್ಥಿಕ ಸ್ಥಿತಿಗತಿಗನುಗುಣವಾಗಿ ಆಚರಿಸುತ್ತಾರೆ. ಜೇನುಕುರುಬರಲ್ಲಿ ಹಾಡಿಯ ಯಜಮಾನನಿಂದ ಋತುಮತಿಯಾದ ಹೆಣ್ಣಿಗೆ ಪ್ರತ್ಯೇಕ ಗುಡಿಸಲನ್ನು ನಿರ್ಮಿಸಲಾಗುತ್ತದೆ. ಇದನ್ನು ಸೂತಕವೆಂದು ಪರಿಭಾವಿಸುವ ಇವರು ಪ್ರತ್ಯೇಕ ಗುಡಿಸಲಿನಲ್ಲಿ ಹೆಣ್ಣನ್ನು ಅವಳ ಸಹಾಯಕಿ ಬಾಲಕಿಯ ಜೊತೆ ಇರಿಸಲಾಗುತ್ತದೆ. ಈ ಯುವತಿಯ ಮುಖವನ್ನು ಪುರುಷರು

ನೋಡಬಾರದೆಂಬ ನಿಷೇಧವಿದೆ. ಇದು ಸೂತಕದ ಪ್ರತೀಕವಾಗಿರುವುದರಿಂದ ಪುರುಷರು ನೋಡಿದರೆ ತಮ್ಮ ದೇವತೆಗಳಿಗೆ ಕೋಪ ಬಂದು ವಂಶಕ್ಕೆ ನಾಶವಾಗುತ್ತದೆಂಬ ನಂಬಿಕೆ ಇವರದು. ಹೆಣ್ಣು ಹೊರಗಡೆ ಓಡಾಡಬಾರದು ಎಂದು ಅವಳಿರುವ ಸ್ಥಳಕ್ಕೆ ಆಹಾರ ಸರಬರಾಜು ಮಾಡಲಾಗುತ್ತದೆ. ಋತುವಾದ ಮೂರು ತಿಂಗಳು ಕಳೆದ ನಂತರ ಪ್ರೌಢಾವಸ್ಥೆಯ ಸಂಸ್ಕಾರವನ್ನು ಆಚರಿಸುತ್ತಾರೆ. ಅಂದು ತಮ್ಮ ಶಕ್ತ್ಯಾನುಸಾರ ಹಾಡಿಯವರಿಗೆ, ರಕ್ತಸಂಬಂಧಿಕರಿಗೆಲ್ಲ ಊಟ ಏರ್ಪಡಿಸಲಾಗುತ್ತದೆ. ಹೆಣ್ಣು ಋತುಮತಿಯಾದರೆ ಅವಳು ಅಪವಿತ್ರಳು ಎಂದು ಜೇನುಕುರುಬರು ಭಾವಿಸುತ್ತಾರೆ. ದೊಡ್ಡವಳಾದ ಹುಡುಗಿ ಹೊರಗಡೆ ತಿರುಗಾಡಿದರೆ ಅವಳಿಗೆ ಭೂತಪ್ರೇತಗಳು ಬೆನ್ನುಹತ್ತುತ್ತವೆ ಮತ್ತು ಸೋಂಕು ತಗಲುತ್ತದೆ ಎಂಬ ಕಲ್ಪನೆ ಇರುವುದರಿಂದ ಅವಳನ್ನು ಗುಡಿಸಲಿನಲ್ಲಿಯೇ ಇಡುತ್ತಾರೆ. ಹೆಣ್ಣು ಮೈನೆರೆಯುವುದು ಸಂತೋಷದ ಸಂಗತಿ. ಆದರೆ ಕಡುಬಡವರಾದ ಇವರು ತಮ್ಮ ಶಕ್ತ್ಯಾನುಸಾರ ಋತುಸಂಸ್ಕಾರ ಆಚರಿಸಿ ತೃಪ್ತಿಪಡುತ್ತಾರೆ. ಮೈಲಿಗೆ ತೆಗೆಯುವ ದಿನ ಅವಳನ್ನು ಕೆರೆ, ಹಳ್ಳಕ್ಕೆ ಕರೆದುಕೊಂಡು ಹೋಗಿ ಒನಕೆ ದಾಟಿಸುತ್ತಾರೆ. ಆ ಸಂದರ್ಭದಲ್ಲಿ ಅನೇಕ ಹೊಸಗೆ ಹಾಡುಗಳನ್ನು ಹಾಡುತ್ತಾರೆ. ಮೈಲಿಗೆ ಕಳೆಯುವ ದಿನ ಹೆಣ್ಣಿಗೆ ಹೊಸ ಬಟ್ಟೆ ಕೊಡುತ್ತಾರೆ. ಎಲ್ಲರನ್ನು ಕರೆದು ಊಟ ಹಾಕುತ್ತಾರೆ. ಒಟ್ಟಾರೆ ಈ ಜೇನುಕುರುಬರ ಪ್ರೌಢ ಸಂಸ್ಕಾರವು ದುಬಾರಿಯಾಗಿದೆ. ಬಡತನದ ಬೇಗೆಯಿಂದ ಬಳಲುವವರಿಗೆ ಇದು ಕ್ಲಿಷ್ಟವಾದ ವಿಧಿಯಾಗಿದೆ. ಆದರೆ ಉಪಾಯವಿಲ್ಲ. ಇಲ್ಲಿ ಏನಾದರೂ ತಕರಾರು ತೆಗೆದಲ್ಲಿ ಅವರ ಯಜಮಾನ ಈ ಬಗ್ಗೆ ಗಂಭೀರವಾಗಿ ತೆಗೆದುಕೊಂಡು, ಕುಲಪಂಚಾಯತಿಗೆ ಪ್ರಕರಣ ಒಪ್ಪಿಸುವಲ್ಲಿ ಹಿಂದೆ ಮುಂದೆ ನೋಡುವುದಿಲ್ಲ. ಆ ಭಯದಲ್ಲಿ ಕಷ್ಟವಾದರೂ ಇಷ್ಟಪಟ್ಟು ಪ್ರೌಢಸಂಸ್ಕಾರ ನೆರವೇರಿಸುತ್ತಾರೆ.

ಮದುವೆ

ಜೇನುಕುರುಬ ಸಮುದಾಯದಲ್ಲಿ ವಿವಾಹಕಾರ್ಯ ಅಷ್ಟೇನೂ ಅದ್ದೂರಿಯಾಗಿ ನಡೆಯುವುದಿಲ್ಲ. ಶಕ್ತ್ಯಾನುಸಾರ ತಮ್ಮ ಮನೆಯ ಮುಂದೆ ಹಸಿರುಚಪ್ಪರ ಹಾಕಿ, ಬಂಧುಬಳಗದವರನ್ನು ಕರೆಯಿಸಿ ಹಾಡಿಯ ಯಜಮಾನ ಹಾಗೂ ಕುಲಸ್ಥರ ಸಮ್ಮುಖದಲ್ಲಿ ಮದುವೆ ಏರ್ಪಡುತ್ತದೆ. ಇವರಲ್ಲಿ ಅತ್ತೆ-ಮಾವಂದಿರ ಮಕ್ಕಳನ್ನು ಕೊಡು-ಕೊಳ್ಳುವ ಒಳಬಾಂಧವ್ಯ ವಿವಾಹ ಪದ್ಧತಿ ರೂಢಿಯಲ್ಲಿದೆ. ಹದಿನೈದು ವಯಸ್ಸು ತುಂಬಿದ ಹುಡುಗ-ಹುಡುಗಿಯರಿಗೆ ಮದುವೆ ಮಾಡುತ್ತಾರೆ. 'ಏಕಪತ್ನಿತ್ವ' ಪದ್ಧತಿಯನ್ನು ರೂಢಿಸಿಕೊಂಡಿರುವ ಜೇನುಕುರುಬರಲ್ಲಿ ಗಂಡಸತ್ತರೆ ಆ ಹೆಣ್ಣು ಬೇರೆಯವನನ್ನು 'ವಿಧವಾ ವಿವಾಹ' ಮಾಡಿಕೊಳ್ಳಲು ಅವಕಾಶವಿದೆ. ಇದು 'ಕೂಡಾವಳಿ' ರೂಪದಲ್ಲಿ ಜರುಗುತ್ತದೆ. ಇವರಲ್ಲಿ ಲೈಂಗಿಕ ಅಪರಾಧವೆಸಗಿದ ಗಂಡಸು ಮತ್ತು ಹೆಂಗಸನ್ನು

ಒಂದುಗೂಡಿಸಲು ಅಥವಾ ವಿವಾಹ ವಿಚ್ಛೇದನಕ್ಕೆ ಅವರ ಗುಂಪಿನ ಯಜಮಾನನ ಮೂಲಕ ತೀರ್ಮಾನ ತೆಗೆದುಕೊಳ್ಳುತ್ತಾರೆ. ಅದ್ಧೂರಿ ಮದುವೆ ಸಮಾರಂಭಗಳು ಇವರಲ್ಲಿ ಇಲ್ಲವೆನ್ನಬಹುದು. ಇದಕ್ಕೆ ಪರ್ಯಾಯವಾಗಿ ಪಲಾಯನ ಪದ್ಧತಿ ರೂಢಿಯಲ್ಲಿದೆ. ಒಂದೇ ಕುಲದವರನ್ನು ಅಣ್ಣತಮ್ಮಂದಿರೆಂದು ಭಾವಿಸಿ ಅಂತಹ ಮದುವೆಗೆ ಅವಕಾಶ ನೀಡುವುದಿಲ್ಲ. ಒಂದು ವೇಳೆ ಹುಡುಗನು, ಹುಡುಗಿಯನ್ನು ಕರೆದೊಯ್ಯುವುದಕ್ಕಿಂತ ಮೊದಲು ಅವಳ ಕುಲದ ಬಗೆಗೆ ತಿಳಿದುಕೊಂಡಿರಬೇಕಾಗುತ್ತದೆ. ಗಂಡು-ಹೆಣ್ಣು ಒಬ್ಬರನ್ನೊಬ್ಬರು ಅರಿತುಕೊಂಡು ಮತ್ತು ಕುಲಗೋತ್ರಗಳ ಬಗೆಗೆ ವಿಚಾರಿಸಿಕೊಂಡೇ 'ಪಲಾಯನ ಪದ್ಧತಿ'ಗೆ ಮುಂದಾಗುತ್ತಾರೆ. ಏಕೆಂದರೆ ಜೇನುಕುರುಬರು ಆರ್ಥಿಕವಾಗಿ ಬಹಳ ಹಿಂದುಳಿದ ಸಮುದಾಯ. ಉಪಜೀವನ ನಡೆಸುವುದೇ ಕಷ್ಟವಾಗಿರುವಾಗ ಮದುವೆ, ಮುಂಜಿ ಮುಂತಾದ ಆಚರಣೆಗಳಿಗೆ ನಮ್ಮಿಂದ ಖರ್ಚು ಮಾಡಲು ಸಾಧ್ಯವಿಲ್ಲ ಎಂಬುದನ್ನರಿತೇ ಇಂತಹ ಮದುವೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದಿರಬಹುದು. ಆದರೆ ಇತ್ತೀಚೆಗೆ ಈ ಪದ್ಧತಿಯೂ ಕಡಿಮೆಯಾಗಿದೆ. ತಂದೆ-ತಾಯಿಗಳೇ ಹೆಣ್ಣು ನಿಶ್ಚಯಿಸಿ ಮದುವೆ ಮಾಡುವ ಸಂಪ್ರದಾಯ ಬೆಳೆಸಿಕೊಂಡಿದ್ದಾರೆ. ಒಂದು ವೇಳೆ ಒಂದೇ ಕುಲಕ್ಕೆ ಸೇರಿದ ಹೆಣ್ಣು-ಗಂಡು ಮದುವೆಯಾದರೆ ಅವರನ್ನು ಕುಲದಿಂದ ಮತ್ತು ಹಾಡಿಯಿಂದ ಬಹಿಷ್ಕರಿಸುವ ಪದ್ಧತಿ ಕಟ್ಟುನಿಟ್ಟಾಗಿ ರೂಢಿಯಲ್ಲಿದೆ. ಜೇನುಕುರುಬರಲ್ಲಿ 'ತೆರಪದ್ಧತಿ' ಕಂಡುಬರುತ್ತದೆ. ಮದುವೆಯ ಸಂದರ್ಭದಲ್ಲಿ ಕನ್ಯಾಶುಲ್ಕವನ್ನು ನೀಡುವಂತಹ ಸಂಪ್ರದಾಯವಿದ್ದು, ತೆರಕಟ್ಟು ಎಂದರೆ ಹೆಣ್ಣಿನ ಕಡೆಯವರಿಗೆ ಗಂಡಿನ ಕಡೆಯವರು ವಸ್ತುರೂಪದಲ್ಲೊ, ಧನದರೂಪದಲ್ಲೋ ಕೊಡುವ ಕನ್ಯಾಶುಲ್ಕ. ಇದನ್ನು ಏಕೆ ಪಡೆಯುತ್ತೀರಿ ಎಂದು ಕೇಳಿದರೆ ಗಂಡು-ಹೆಣ್ಣುಗಳ ಸಂಬಂಧ ವಿವಾಹ ಮೂಲಕ ಗಟ್ಟಿಯಾಗಿ ಉಳಿದಿರಲಿ ಎನ್ನುತ್ತಾರೆ. ಇವರಲ್ಲಿ ಬಾಲ್ಯ ವಿವಾಹ ಪದ್ಧತಿ ಇಲ್ಲ. ಆದರೆ ಬಹುಪತ್ನಿತ್ವ ಬಳಕೆಯಲ್ಲಿದೆ. ತನ್ನ ಮೊದಲ ಹೆಂಡತಿಗೆ ಮಕ್ಕಳಾಗದಿದ್ದರೆ ಅಥವಾ ತೀರಿಕೊಂಡರೆ ತನ್ನ ಹೆಂಡತಿಯ ತಂಗಿಯನ್ನೇ ಮದುವೆಯಾಗುವ ಸಂಪ್ರದಾಯವಿದೆ. ಇವರಲ್ಲಿ ತಾಳಿ ಕಟ್ಟುವ ಸಂಪ್ರದಾಯ ಇತ್ತೀಚೆಗೆ ರೂಢಿಗೆ ಬಂದಂತಿದೆ. ಮುಂಚೆ ತಾಳಿಗೆ ಅಷ್ಟೇನೂ ಮಹತ್ವವಿರಲಿಲ್ಲ. ಆದರೆ ಇತರ ಸಮುದಾಯಗಳನ್ನು ನೋಡಿ ತಾಳಿ ಕಟ್ಟುವ ಸಂಪ್ರದಾಯ ಬೆಳೆಸಿಕೊಂಡಿದ್ದಾರೆ. ನೀರು ಹಾಕುವ ಶಾಸ್ತ್ರ, ಹಸೆಮಣೆ ಶಾಸ್ತ್ರ, ಮದುವೆಗೆ ಬಂದವರಿಗೆ ವಧು-ವರರು ಎಲೆ-ಅಡಿಕೆ ಕೊಡುವ ಶಾಸ್ತ್ರ ಮುಂತಾದ ಸಂಪ್ರದಾಯಗಳು ಇವರಲ್ಲಿವೆ. ವಧು-ವರರು ಹಾಡಿಯ ಯಜಮಾನ ಮತ್ತು ಹಿರಿಯರಿಗೆ ನಮಸ್ಕರಿಸಿದ ನಂತರ ದಂಪತಿಗಳನ್ನು ಗಂಡನ ಮನೆಗೆ ಕರೆದೊಯ್ಯಲಾಗುವುದು. ಅಲ್ಲಿಯೂ ವಧುವನ್ನು ಮನೆ ತುಂಬಿಸಿಕೊಳ್ಳುವ ಶಾಸ್ತ್ರ ಮಾಡುತ್ತಾರೆ. ಇದಕ್ಕೆ ಜೇನುಕುರುಬರಲ್ಲಿ 'ಹೊಸಲ್‌ದಾಟ್' ಶಾಸ್ತ್ರ ಎಂದು ಹೆಸರು. ಇನ್ನು ಪ್ರಸ್ಥದ ಶಾಸ್ತ್ರ ನಡೆಯುತ್ತದೆ. ಈ ಸಂದರ್ಭದಲ್ಲಿ 'ಕ್ವಾಳಿಬೋಗು' –

ಅಂದರೆ ನೂತನ ದಂಪತಿಗಳಿಂದ ಕರಿಮಣಿ ಪೋಣಿಸುವ ಕ್ರಿಯೆ ಮಾಡಿಸುತ್ತಾರೆ. ವಧುವಿನ ಮನೆಯಲ್ಲಿ ಈ ಎಲ್ಲ ಶಾಸ್ತ್ರಗಳು ಮುಗಿದ ನಂತರ ವರನ ಮನೆಗೆ ಹೋಗುತ್ತಾರೆ. ಒಟ್ಟಾರೆ ಒಂದೇ ಸಮುದಾಯದವರಾದರೂ ಜೇನುಕುರುಬ ಮತ್ತು ಬೆಟ್ಟಕುರುಬರಲ್ಲಿ ವಿವಾಹ ಸಂಬಂಧ ಏರ್ಪಡುವುದಿಲ್ಲ. ಮಿತಿಮೀರಿ ಏನಾದರೂ ವಿರೋಧದ ನಡುವೆಯೂ ಮದುವೆ ನಡೆದರೆ ಅವರ ತಂದೆ-ತಾಯಿ, ಬಂಧು-ಬಳಗದವರ ಸಂಪರ್ಕ ಕಡಿದುಕೊಳ್ಳುತ್ತಾರೆ. ಹೀಗೆ ಜೇನುಕುರುಬರ ಸಾಮಾಜಿಕ ವ್ಯವಸ್ಥೆಯಲ್ಲಿ ಮದುವೆ ಮಹತ್ವಪೂರ್ಣ ಸಂಸ್ಕಾರವಾಗಿದೆ. ಇವರ ವಿವಾಹಾದಿ ಮಂಗಳಕಾರ್ಯಗಳಲ್ಲಿ ಪುರೋಹಿತನಿಗಾಗಲಿ, ವೈದಿಕ ಮಂತ್ರಗಳಿಗಾಗಲಿ ಪ್ರವೇಶವಿಲ್ಲ. ಹಾಡಿಯ ಮುಖಂಡರು ಮಂಗಳ ಕಾರ್ಯಗಳ ನೇತೃತ್ವ ವಹಿಸುವುದು ವಾಡಿಕೆ.

ಮರಣ ಸಂಸ್ಕಾರ

ಶವಸಂಸ್ಕಾರದ ವಿಧಿಗಳು ಆಯಾ ಬುಡಕಟ್ಟಿನ ನಂಬಿಕೆ ಮತ್ತು ಕಲ್ಪನೆಗನುಗುಣವಾಗಿರುತ್ತವೆ. ಜೇನುಕುರುಬರಲ್ಲಿ ಹೆಣವನ್ನು ಹೂಳುವ ಮತ್ತು ಸುಡುವ ಪದ್ಧತಿಗಳೆರಡೂ ಚಾಲ್ತಿಯಲ್ಲಿವೆ. ವ್ಯಕ್ತಿ ಸಹಜವಾಗಿ ಸತ್ತರೆ ಅಂತವರನ್ನು ಹೂಳುತ್ತಾರೆ. ವ್ಯಕ್ತಿ ದುಷ್ಟಪ್ರಾಣಿಗಳಿಂದ, ದೊಡ್ಡ-ದೊಡ್ಡ ರೋಗಗಳು ಬಂದು ಸತ್ತರೆ, ದುರ್ಮರಣಕ್ಕೆ ತುತ್ತಾದರೆ ಅಂತವರನ್ನು ಸುಡುತ್ತಾರೆ. ಕೆಲ ಸಂದರ್ಭಗಳಲ್ಲಿ ದೊಡ್ಡ-ದೊಡ್ಡ ರೋಗಗಳು ಬಂದು ಮೇಲಿಂದ ಮೇಲೆ ಜನರು ಸಾಯುತ್ತಿದ್ದರೆ (ಪ್ಲೇಗು, ಕಾಲರಾ, ಗಂಟು, ದಡಾರ) ಆ ಪ್ರದೇಶಕ್ಕೆ ಬೆಂಕಿ ಹಾಕಿ ಆ ಸ್ಥಳವನ್ನೇ ಬಿಟ್ಟು ಹೋಗುತ್ತಿದ್ದರೆಂದು ಕ್ಷೇತ್ರ ಕಾರ್ಯ ಮಾಹಿತಿಯಿಂದ ತಿಳಿಯುತ್ತದೆ. ಇವರಲ್ಲಿ ಸತ್ತ ಮೂರನೇ ದಿನಕ್ಕೆ ಹಾಲು-ತುಪ್ಪ, ಹನ್ನೆರಡನೇ ದಿನಕ್ಕೆ ತಿಥಿ ಆಚರಿಸುವ ಸಂಪ್ರದಾಯವಿದೆ. ಸತ್ತವರು ಗಾಳಿಯಾಗಿ(ದೆವ್ವ) ತನ್ನ ಕುಟುಂಬದ ಜೀವಂತ ಮಕ್ಕಳಿಗೆ ಕಾಯಿಲೆ ಕೊಡುತ್ತಾರೆ ಎಂದು ನಂಬುವ ಇವರು, ಸತ್ತಿರುವ ಮನೆಯಲ್ಲಿ ಯಾರಿಗಾದರು ಕಾಯಿಲೆ ರೋಗ-ರುಜಿನಗಳು ಬಂದರೆ ಎಲ್ಲರೂ ಮನೆಯಿಂದ ಬಯಲಿಗೆ ಬಂದು ಬೆಂಕಿಯ ಸುತ್ತಾ ಕುಳಿತು 'ಹಾಡಿಯ ಗಾಳಿ' (ದೆವ್ವ) ಕರೆಯುವವನನ್ನು ಕರೆಸಿ ಅವನಿಂದ ಕೊರತೆಗಳನ್ನು ನೀಗಿಸಿಕೊಳ್ಳುವುದು ರೂಢಿಯಲ್ಲಿದೆ. ಇವರಲ್ಲಿ ಯಾರಾದರು ಸತ್ತರೆ ಹೆಣಕ್ಕೆ ಸ್ನಾನ ಮಾಡಿಸಿ ಹೊಸ ಬಟ್ಟೆ ಹಾಕಿ ತಲೆಯನ್ನು ದಕ್ಷಿಣಕ್ಕೆ, ಪಾದವನ್ನು ಉತ್ತರಕ್ಕೆ ಮಾಡಿ ಮಲಗಿಸುವುದು ರೂಢಿ. ಈ ರೀತಿ ಮಣ್ಣು ಮಾಡಿದ ಮೇಲೆ ಸಮಾಧಿಯ ಕಡೆ ಹಿಂತಿರುಗಿ ನೋಡದೆ ಹೊಳೆಯಲ್ಲಿ ಸ್ನಾನ ಮಾಡಿ ಮಣ್ಣು ಮಾಡುವಾಗ ಬಳಸಿದ ಹಣ್ಣು-ಕಾಯಿ, ಕಡ್ಲೆಪುರಿ, ಎಲೆ-ಅಡಿಕೆ ಎಲ್ಲವನ್ನು ಅಲ್ಲಿಯೇ ತಿಂದು ಮನೆಗೆ ಮರಳುತ್ತಾರೆ. ಯಾವ ವಸ್ತುಗಳನ್ನು ಮನೆಗೆ ತೆಗೆದುಕೊಂಡು ಹೋಗುವುದಿಲ್ಲ. ಮಣ್ಣು ಮಾಡಿದ ಸ್ಥಳದಲ್ಲಿ ಕಲ್ಲು ನೆಡುವುದು ರೂಢಿ. ಈ ಕಲ್ಲು ಜೋಡಿಸುವ

ಆಚರಣೆಯನ್ನು 'ಕಲ್ಲುಸೇವೆ' ಎನ್ನುವರು. ಸತ್ತ ಸೂತಕವನ್ನು ಹನ್ನೊಂದನೇ ದಿನಕ್ಕೆ ಕಳೆಯುತ್ತಾರೆ. ಅಲ್ಲದೆ ಸತ್ತ ಎರಡು ದಿನಗಳವರೆಗೂ ಗುಡಿಸಿಲಿನಲ್ಲಿ ಆಹಾರ ಬೇಯಿಸುವಂತಿಲ್ಲ. ಸತ್ತ ವ್ಯಕ್ತಿಯ ಹಿರಿಯ ಮಗ ತಲೆಕೂದಲನ್ನು ತೆಗೆಸಬೇಕು. ಹನ್ನೊಂದನೇ ದಿನದಲ್ಲಿ ಸತ್ತ ವ್ಯಕ್ತಿ ಇಷ್ಟಪಡುತ್ತಿದ್ದ ಸಾಮಗ್ರಿಗಳನ್ನು ಸಮಾಧಿ ಮೇಲಿಟ್ಟು ಪೂಜಿಸುತ್ತಾರೆ. ಹನ್ನೆರಡನೇ ದಿನ ತಿಥಿ ಮಾಡಿ ಕಾಗೆಗಳಿಗೆ ಎಡೆ ಇಡುತ್ತಾರೆ. ಕಾಗೆಗಳು ಎಡೆ ತಿಂದ ಮೇಲೆಯೇ ಕುಲಬಾಂಧವರನ್ನು ಕರೆದು ಊಟ ಹಾಕುವುದು ರೂಢಿ ಇದು ಅವರವರ ಶಕ್ತ್ಯಾನುಸಾರ ಜರುಗುತ್ತದೆ. ಅಲ್ಲದೆ ಮದುವೆ, ಮುಂಜಿ, ಹಬ್ಬ-ಹರಿದಿನಗಳಲ್ಲಿ ಸತ್ತ ವ್ಯಕ್ತಿಗಳನ್ನು ನೆನೆದು ತಮ್ಮ ಗುಡಿಸಲಿನ ಮೇಲೆ ಅನ್ನವನ್ನು ಇಡುವ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಹಾಗೆಯೇ ಜೇನುಕುರುಬರಲ್ಲಿ ತಿಥಿ ಕಾರ್ಯ ಸಮಾಪ್ತಿಯಾಗುವವರೆಗೂ ಕುಟುಂಬದ ಸದಸ್ಯರು ಉಪ್ಪು, ಹುಳಿ, ಖಾರವಿಲ್ಲದ ಅಡುಗೆ ಮಾಡಿಕೊಂಡು ಊಟ ಮಾಡುವ ಪ್ರವೃತ್ತಿಯಿದೆ. ಕರಿದ ತಿಂಡಿ-ತಿನಿಸು, ಮಾಂಸ ಸೇವನೆಗೂ ಕಡಿವಾಣ ಹಾಕುತ್ತಾರೆ. ಇದಲ್ಲದೆ ಬೀಡಿ, ಎಲೆ-ಅಡಿಕೆ, ತಂಬಾಕು, ಕುಡಿತಕ್ಕೂ ಎಳ್ಳು-ನೀರು ಬಿಡುತ್ತಾರೆ(ತ್ಯಜಿಸುವುದು). ಯಾವುದೇ ಮಂಗಳಕರ ಕಾರ್ಯಗಳನ್ನು ಮಾಡುವುದಾಗಲಿ, ವಸ್ತುಗಳನ್ನು ಧರಿಸುವುದಿಲ್ಲ. ಹೀಗೆ ಜೇನುಕುರುಬರು ಹುಟ್ಟಿನಿಂದ ಸಾವಿನವರೆಗಿನ ಜೀವನಾವರ್ತನಾ ಆಚರಣೆಗಳನ್ನು ಬಹಳ ಕಟ್ಟುನಿಟ್ಟಾಗಿ ಇಂದಿಗೂ ಪಾಲಿಸುತ್ತಿದ್ದಾರೆ. ಈ ಆಚರಣೆಗಳಲ್ಲಿ ಧನಾತ್ಮಕ-ಋಣಾತ್ಮಕ ಅಂಶಗಳಿರುವುದು ಕ್ಷೇತ್ರ ಕಾರ್ಯದಿಂದ ತಿಳಿದು ಬರುತ್ತದೆ.

ಜೇನುಕುರುಬರ ಸಾಂಸ್ಕೃತಿಕ ಸ್ಥಿತ್ಯಂತರ

ಯಾವುದೇ ಸಂಸ್ಕೃತಿಯು ಒಡಲಲ್ಲಿ ತನ್ನದೇ ಅಸ್ತಿತ್ವವನ್ನು ಹೊಂದಿದ್ದು. ಇತರ ಸಂಸ್ಕೃತಿಗಳಿಗಿಂತ ಪ್ರತ್ಯೇಕವಾದ ವಿಶಿಷ್ಠಾಂಶಗಳನ್ನು ಪ್ರಕಟ ಪಡಿಸುತ್ತಿದ್ದರೆ ಅಂತಹ ಅಂಶಗಳನ್ನು ಆ ಸಂಸ್ಕೃತಿಯ ಅನನ್ಯತೆ ಎಂದು ಕರೆಯಬಹುದು. ಈ ಅನನ್ಯ ಅಂಶಗಳು ಒಂದು ಗೊತ್ತಾದ ಸಮುದಾಯಕ್ಕೆ ಮಾತ್ರ ವಿಶಿಷ್ಟವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಜೇನು ಕುರುಬ ಬುಡಕಟ್ಟು ಸಮುದಾಯ ಸಾಮಾಜಿಕ, ಸಾಂಸ್ಕೃತಿಕ ಅನನ್ಯತೆಯನ್ನು ನಿರಂತರವಾಗಿ ಕಾಯ್ದುಕೊಂಡು ಜೀವಿಸುತ್ತಿದೆ. ಈ ಸಾಂಸ್ಕೃತಿಕ ಅನನ್ಯ ಅಂಶಗಳೇ ಇವರ ಬದುಕಿಗೆ ಉರುಳಾಗಿ ಪರಿಣಮಿಸುತ್ತಿರುವುದು ಗಮನಿಸಬೇಕಾದ ಸಂಗತಿ. ಬದಲಾವಣೆ ಜಗದ ನಿಯಮ. ಜೀವನದ ವಿವಿಧ ಆಯಾಮಗಳು ತೀವ್ರವಾಗಿ ಬದಲಾವಣೆಗೊಳಗಾಗುತ್ತಿರುವುದು ಈ ಕಾಲದ ಅಗತ್ಯವೂ ಆಗಿದೆ. ಜೇನುಕುರುಬರ ಸಾಂಸ್ಕೃತಿಕ ಅನನ್ಯತೆ ಅವರ ಬದುಕನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದರೆ ಅದರಿಂದ ಹೆಚ್ಚಿನ ಪ್ರಯೋಜನ ಸಾಧ್ಯ. ಆದರೆ ಆ ಅನನ್ಯತೆಗಳೇ ಬದುಕನ್ನು ಅಧಃಪತನಕ್ಕೆ ಈಡುಮಾಡಿದರೆ ಅಂತಹ

ಸಾಂಸ್ಕೃತಿಕ ಅಂಶಗಳನ್ನು ತ್ಯಜಿಸುವುದೇ ಮೇಲು. ಉದಾ:- ಇವರಲ್ಲಿ ಹೆಣ್ಣು ಮೈನೆರೆದಾಗ ಅಪವಿತ್ರ ಎಂದು ಪರಿಗಣಿಸಲ್ಪಡುತ್ತಾಳೆ. ಗರ್ಭಧರಿಸಿದ ಮೂರನೇ ತಿಂಗಳಿನಿಂದಲೇ ಬಸುರಿಯನ್ನು ಪ್ರತೇಕ ಗುಡಿಸಿಲಿನಲ್ಲಿ ಇರಿಸುವುದು. ಅಲ್ಲಿಗೆ ವಯಸ್ಸಾದ ಹೆಂಗಸರಿಗೆ ಮಾತ್ರ ಪ್ರವೇಶ. ಮಗುವಿನ ಜನನದ ನಂತರವಷ್ಟೇ ಆಕೆ ವಾಸದ ಮನೆಗೆ ಮರಳಬೇಕು ಎನ್ನುವ ಹೆಣ್ಣಿನ ಬಗೆಗಿನ ಆಚರಣೆಗಳು ಜೀವ ವಿರೋಧಿ ನೀತಿಯಾಗಿದ್ದು, ಮುಟ್ಟು-ತಟ್ಟು, ಮಡಿ-ಮೈಲಿಗೆ ಎನ್ನುವುದು ಸಂಸ್ಕೃತಿಯ ಹೆಸರಿನಲ್ಲಿ ಅವಳ ಮೇಲೆ ನಡೆಯುತ್ತಿರುವ ಶೋಷಣೆ ಎಂದರೆ ತಪ್ಪಾಗಲಾರದು. ಹಾಗೆಯೇ "ಪಾಲಭೋದಕಜ" ಎಂಬ ಸಸ್ಯವನ್ನು ಬಾಣಂತಿಯ ತಲೆಯ ಹತ್ತಿರ ಇಟ್ಟರೆ ಮಗುವಿಗೆ ತಾಯಿ ಎದೆಹಾಲು ಹೆಚ್ಚು ಒದಗಿ ಬರುತ್ತದೆ ಎಂಬುದು ಇವರ ನಂಬಿಕೆ. ಇದು ವೈಜ್ಞಾನಿಕವಾಗಿ ಸಾಬೀತಾಗಿಲ್ಲ. ಬಾಣಂತಿಯು ಪೌಷ್ಟಿಕ ಆಹಾರ ಸೇವಿಸಿದರೆ ಮಗುವಿಗೆ ತಾಯಿ ಎದೆ ಹಾಲು ಹೆಚ್ಚು ಲಭ್ಯವಾಗುತ್ತದೆ ಎಂಬುದು ವಿಜ್ಞಾನ ಹೇಳುವ ಸತ್ಯ. ಆದರೆ ಅವಕಾಶ, ಅಧಿಕಾರಹೀನ ಜೇನುಕುರುಬ ಸಮುದಾಯ ಇಂತಹ ಸಂಸ್ಕೃತಿಯ ಕಣ್ಕಟ್ಟಿನಿಂದ ಅತ್ತ ಸಾಂಪ್ರದಾಯಿಕ ಜ್ಞಾನಪರಂಪರೆಯ ಬದುಕನ್ನು ಉಳಿಸಿಕೊಳ್ಳಲಾಗದೆ ಇತ್ತ ಆಧುನಿಕತೆಯ ಸುಸಂಪನ್ನ ಬದುಕಿಗೂ ತೆರೆದುಕೊಳ್ಳಲಾಗದೆ ಅತಂತ್ರರಾಗಿದ್ದಾರೆ. ಆರೋಗ್ಯ, ಅಕ್ಷರದ ಕೊರತೆಯಿಂದ ಸಮಸ್ಯೆಗಳನ್ನೇ ಹಾಸಿಹೊದ್ದುಕೊಂಡು ಕಾಡಿನಿಂದ ಹೊರದೂಡಲ್ಪಟ್ಟು ನೀರಿನಿಂದ ಹೊರತೆಗೆದ ಮೀನುಗಳಂತಾಗಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ಕೈಗಾರಿಕೆ, ಗಣಿಗಾರಿಕೆ, ಶಕ್ತಿಸ್ಥಾವರಗಳನ್ನು ಸ್ಥಾಪಿಸುವ ಹುನ್ನಾರದಿಂದ ಜೇನುಕುರುಬರನ್ನು ಸ್ಥಳಾಂತರಗೊಳಿಸಲಾಗುತ್ತಿದೆ. ಇದರಿಂದ ಕಾಡುನಾಶವಾಗಿ ಪ್ರಕೃತಿ ಸೌಂದರ್ಯವನ್ನು ಕಳೆದುಕೊಳ್ಳುವಂತಾಗಿದೆ. ಕಾರ್ಖಾನೆಗಳಿಂದ ಹೊರಹೊಮ್ಮುವ ವಿಷಕಾರಿ ಅನಿಲ ಅನೇಕ ರೋಗಗಳನ್ನು ಹುಟ್ಟುಹಾಕಿದೆ. ಸ್ಥಳಾಂತರದಿಂದ ಪಟ್ಟಣಕ್ಕೆ ಬಂದ ಜೇನುಕುರುಬರು ಅನೇಕ ರೋಗ-ರುಜಿನಗಳಿಗೆ ತುತ್ತಾಗುತ್ತಿದ್ದಾರೆ. ಕಾಡಿನ ನಾಶದಿಂದ ಇವರ ಆರೋಗ್ಯ ಅಶಕ್ತವಾಗಿದೆ. ಆಧುನಿಕ ಯೋಜನೆಗಳಿಂದ ನೈಸರ್ಗಿಕ ಸಂಪತ್ತಿಗೆ ಹೊಡೆತ ಬಿದ್ದು ಬದುಕು ಛಿದ್ರವಾಗಿದೆ. 1972ರ ವನ್ಯಜೀವಿ ಸಂರಕ್ಷಣೆ ಕಾಯಿದೆಯ ಅಡಿಯಲ್ಲಿ ಅರಣ್ಯದಿಂದ ಹೊರಹಾಕಿ, ಅಮಾನವೀಯವಾಗಿ ಅವರನ್ನು ಬೇರು ಕಿತ್ತ ಮರದಂತೆ ಉರುಳಿಸಲಾಯಿತು, ವ್ಯವಸಾಯದ ಭೂಮಿ ಕಿತ್ತುಕೊಂಡು, ಮತ್ತೆ-ಮತ್ತೆ ಒಕ್ಕಲೆಬ್ಬಿಸಲಾಯಿತು, ಅಣೆಕಟ್ಟುಗಳ ನಿರ್ಮಾಣದಿಂದಾಗಿ ಇವರ ಬದುಕು ಮುಳುಗಿ ಮೂರಾಬಟ್ಟೆಯಾಯಿತು. 70ರ ದಶಕದಲ್ಲಿ ಹೆಚ್.ಡಿ. ಕೋಟೆ ತಾಲೂಕಿನಲ್ಲಿಯೇ 3 ಅಣೆಕಟ್ಟುಗಳು ನಿರ್ಮಾಣವಾದವು. ಇದರ ಹವಾಕ್ಕೆ ಕಾಕನಕೋಟೆ ಅರಣ್ಯದಲ್ಲಿದ್ದ 14 ಬುಡಕಟ್ಟು ಹಾಡಿಗಳು, 1000 ಕುಟುಂಬಗಳು ಮುಳುಗಡೆಯಾದವು. ಭೂಮಂಜೂರಾತಿ ಎನ್ನುವುದು ಇವರ ಪಾಲಿಗೆ ಗೊಂದಲದ ಗೂಡಾಯಿತು. ಈ ಬಗ್ಗೆ ಇತ್ತೀಚೆಗಷ್ಟೇ ನೇರಳೆಕುಪ್ಪೆ 1 ಮತ್ತು

2ನೇ ಹಾಡಿಯ ಜನರು ಪ್ರತಿಭಟನೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಹೀಗೆ ನಗ್ನರಾಗಿ ಹೊರಗಟ್ಟಿಸಿಕೊಂಡು, ಹಸಿವಿನಿಂದ ಬಳಲಿ, ಸಾಂಸ್ಕೃತಿಕ ತಾಕಲಾಟದಿಂದ ಕಳೆದುಕೊಂಡ ಅರಣ್ಯ ಹಕ್ಕಿನ ನೋವಿನ ಕುರುಹಾಗಿ 2016–17ರಲ್ಲಿ ಕೊಡಗಿನಲ್ಲಿ ಭೂಮಿ ಹಾಗೂ ಪುನರ್ವಸತಿಗಾಗಿ ನಡೆದ "ದಿಡ್ಡಳ್ಳಿ" ಹೋರಾಟವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕೊನೆಯ ಮಾತು

ಇತ್ತೀಚೆಗೆ ಜೇನುಕುರುಬ ಸಮುದಾಯದ ಸಾಂಸ್ಕೃತಿಕ ಅನನ್ಯತೆಯ ವಿಷಯವನ್ನು ತುಂಬ 'ಅತಿ'ಗೆ ಕೊಂಡೊಯ್ದು 'ವಿಶಿಷ್ಠತೆ'ಯ ಆರಾಧನೆಯಲ್ಲಿ ಕೆಲವರು ತೊಡಗಿಸಿಕೊಂಡಂತಿದೆ. ಜಾಗತೀಕರಣ ಪ್ರವಾಹದಲ್ಲಿ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಅನನ್ಯತೆ ಅಳಿಸಿ ಹೋಗಬಾರದು ಎಂಬುದು ಎಷ್ಟು ಮುಖ್ಯವೋ, ಅವು ರಾಷ್ಟ್ರಪ್ರಭುತ್ವವನ್ನು ಒಪ್ಪಿಕೊಂಡು ಜನತಾಂತ್ರಿಕ ಬಹುಸಂಸ್ಕೃತಿ ವ್ಯವಸ್ಥೆಯಲ್ಲಿ ತಮ್ಮ ಬದುಕನ್ನು ಅಭಿವೃದ್ಧಿ ಪಥದತ್ತ ರೂಪಿಸಿಕೊಳ್ಳಬೇಕೆಂಬ ತುಡಿತವೂ ಅಷ್ಟೇ ಮುಖ್ಯ. ಏಕೆಂದರೆ ಬುಡಕಟ್ಟುಗಳ ಜೀವನವಿಧಾನದ ಬಗ್ಗೆ ಇದುವರೆಗೆ ಭ್ರಮಾತ್ಮಕ ನೆಲೆಯಲ್ಲಿ ಅಧ್ಯಯನ ನಡೆದಿರುವುದುಂಟು. ಮೊದಲು ಬದುಕು ಆ ಮೇಲೆ ಸಂಸ್ಕೃತಿ. ಭಾರತ ಸಂವಿಧಾನ ದೇಶವಾಸಿಗಳಿಗೆ ಘನತೆ, ಗೌರವ, ಸ್ವಾಭಿಮಾನದಿಂದ ಜೀವಿಸುವ ಹಕ್ಕನ್ನು ದಯಪಾಲಿಸಿದೆ. ಆದರೆ ಸಮಾಜದಲ್ಲಿ ಜೇನುಕುರುಬ ಬುಡಕಟ್ಟು ಘನತೆ, ಗೌರವ, ಸ್ವಾಭಿಮಾನದಿಂದ ಬದುಕುತ್ತಿದೆಯೇ ಎಂದು ಪ್ರಶ್ನೆ ಹಾಕಿಕೊಂಡರೆ ನಮಗೆ ಶೂನ್ಯ ಎದುರಾಗುತ್ತದೆ. ಈ ಹಿನ್ನೆಲೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು. "ವೈವಿಧ್ಯತೆಯ ಹೆಸರಿನಲ್ಲಿ ಭಾರತದ ಹೇಯ ಸಾಮಾಜಿಕ ನಿಯಮಗಳನ್ನು ಅಂಬೇಡ್ಕರ್‌ರವರು ಜೀವನದುದ್ದಕ್ಕೂ ವಿರೋಧಿಸಿದರು. ಈ ಕಾರಣಕ್ಕಾಗಿಯೇ ಅವರು "ಸಂಸ್ಕೃತಿ" ಎಂಬುದು ಉಳಿಸಿಕೊಳ್ಳಬೇಕಾದ ಮೌಲ್ಯವೇನಲ್ಲ ಎಂದಿದ್ದಾರೆ. ಆತ್ಮ ಪ್ರತ್ಯಯವೇ ಇಲ್ಲದ ಅಸಹಾಯಕ ಸಮುದಾಯವೊಂದು ತನ್ನ ಹುಟ್ಟನ್ನೇ ದ್ವೇಷಿಸಿಕೊಳ್ಳುವ ಈ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವ ಮತ್ತು ಯಾರ ಸಂಸ್ಕೃತಿ ಉಳಿಯಬೇಕು? ಎಂದು ಅಂಬೇಡ್ಕರ್ ಪ್ರಶ್ನಿಸುತ್ತಾರೆ. ತನ್ನ ಬದುಕನ್ನೇ ದ್ವೇಷಿಸುವಂತೆ ಮಾಡಿರುವ ಅವರ ಜೀವನ ವಿಧಾನ ಯಾಕಾಗಿ ಸಂರಕ್ಷಿಸಲ್ಪಡಬೇಕು. ಆದಿವಾಸಿಗಳ ಬದುಕು, ಕಾಡಿನೊಂದಿಗಿನ ಒಡನಾಟ ನಾಗರೀಕರಿಗೆ ವಿಲಕ್ಷಣ ಅಥವಾ ಸುಂದರವಾಗಿ ಕಾಣಬಹುದು. ಆದರೆ ದಿನನಿತ್ಯ ಬದುಕಿನಲ್ಲಿ ಎದುರಿಸುವ ಕಷ್ಟಕೋಟಲೆಗಳಿಗೆ ಅವರ ಸಂಸ್ಕೃತಿ ಎಂದಿಗೂ ನೆರವಾಗಲಾರದು. ಆದ್ದರಿಂದ ಘನತೆ, ಗೌರವದಿಂದ ಬದುಕಲು ಅನುವು ಮಾಡಿಕೊಡದ ಜೀವನ ವಿಧಾನವನ್ನೇ 'ಸಂಸ್ಕೃತಿ, ಸಾಂಸ್ಕೃತಿಕ ಅನನ್ಯತೆ' ಎನ್ನುವುದಾದರೆ ಅದು ನಾಶಕ್ಕೆ ಅರ್ಹವಾದುದು ಎನ್ನುತ್ತಾರೆ.

ಆದ್ದರಿಂದ ಸಂಸ್ಕೃತಿಯನ್ನು ಕೇವಲ ಭಾವನಾತ್ಮಕ ನೆಲೆಯಲ್ಲಿ ಕಾಣುವುದಕ್ಕಿಂತ ವಾಸ್ತವದ ಅಭಿವೃದ್ಧಿಯ ಮಾನದಂಡವಾಗಿ ಪರಿಗಣಿಸಬೇಕಾಗಿದೆ. ಹಾಗಾಗಿ ಇನ್ನಾದರೂ ಜೇನುಕುರುಬ ಬುಡಕಟ್ಟನ್ನು ತಾಯ್ತನದ ಮಮತೆಯಿಂದ ನೋಡಬಲ್ಲ ಗುಣ ಸರ್ಕಾರಕ್ಕೆ, ಜನಸಮುದಾಯಗಳಿಗೆ ಬರಬೇಕಾಗಿದೆ. ಆಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ, ಸಮಾನತೆಗಳಿಗೆ ಅರ್ಥ ಬಂದೀತು.

●

3

ಆದಿವಾಸಿ ಔಷಧೋಪಚಾರಗಳು

ಡಾ. ಹೆಚ್. ಮಲ್ಲಿಕಾರ್ಜುನ
ಮುಖ್ಯಸ್ಥರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೋಕಾ,
ಮೊ: 9483011488.
Email : drmalli80@gmail.com

ಆಧುನಿಕೋತ್ತರ ಮತ್ತು ಆಧುನಿಕ ಪೂರ್ವದಲ್ಲಿ ಮಾನವನು ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ತನ್ನದೇ ಆದ ಔಷಧವನ್ನು ಕಂಡು ಸಾವಿರಾರು ವರ್ಷಗಳಿಂದ ಮುಂದುವರೆದುಕೊಂಡು ಬಂದಿದ್ದಾನೆ. ಹಾಗೆಯೆ ಭಾರತದಲ್ಲಿಯೂ ಮಾನವನು ಔಷಧೋಪಚಾರವನ್ನು ಕಂಡುಕೊಂಡಿದ್ದಾನೆ. ಆದರೆ ನಾಗರೀಕತೆ ಬೆಳೆದಂತೆ ಮಾನವನು ಒಂದೆಡೆ ನೆಲೆ ನಿಂತು ಗ್ರಾಮವಾಸಿಗಳಾದರು. ನಂತರ ನಾಗರೀಕತೆಯ ಸಂಸ್ಕೃತಿ ಬೆಳೆದು ಆಧುನಿಕ ಔಷಧೋಪಚಾರ ಬೆಳೆದು ಬಂದಿದೆ. ಆದರೆ ಭಾರತದಲ್ಲಿ ಆದಿವಾಸಿಗಳ ಸಂಸ್ಕೃತಿಯನ್ನು ಗಮನಿಸಿದಾಗ ಪ್ರಸ್ತುತ ದಿನಗಳಲ್ಲಿಯೂ ಆದಿವಾಸಿಗಳು ತಮ್ಮದೇ ಆದ ಔಷಧೀಯ ಪದ್ಧತಿಯನ್ನು ರೂಢಿಸಿಕೊಂಡು ಮುಂದುವರೆಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಆದಿವಾಸಿಗಳು ಭಾರತೀಯ ಪರಂಪರೆಯ ಮೂಲನಿವಾಸಿಗಳು. ಇವರು ಆದಿಗರು, ಅರಣ್ಯವಾಸಿಗಳು, ವನವಾಸಿಗಳು ಹಾಗೂ ನಾಗರಿಕ ಸಂಸ್ಕೃತಿಗಿಂತ ಭಿನ್ನವಾದವರು. ನಾಡಿನ ಕಾನೂನಿಗಿಂತ ಭಿನ್ನವಾದ ಸಂಪ್ರದಾಯಗಳನ್ನು ಇಂದಿಗೂ ಪಾಲಿಸಿಕೊಂಡು ಬರುತ್ತಿರುವ ಜನರೇ ಆದಿವಾಸಿಗಳು. ಒಂದೇ ಪ್ರದೇಶದಲ್ಲಿ ವಾಸಿಸುತ್ತಾ ಒಂದೇ ರೀತಿಯ ಪದ್ಧತಿಗಳನ್ನು ಆಚರಿಸುತ್ತಾ ಏಕ ಸಮುದಾಯದ ಭಾವನೆಗಳಲ್ಲಿ ಬದುಕುವ ಕುಟುಂಬಗಳ ಒಂದು ಗುಂಪು. ಆದಿವಾಸಿಗಳಿಗೆ ತನ್ನದೇ ಆದ ಭಾಷಿಕ ಚೌಕಟ್ಟು, ಸಾಂಸ್ಕೃತಿಕ ಚೌಕಟ್ಟು, ಸಾಮಾಜಿಕ ಹಾಗೂ ಧಾರ್ಮಿಕ ನೆಲೆಗಳಿವೆ.

ಏಕರೂಪದ ಪದ್ಧತಿಗಳನ್ನು ಅನುಸರಿಸುತ್ತಾ ನಾಡಿನ ಸಮಾಜದ ಭಾಗವಾಗದೆ ಪ್ರತ್ಯೇಕವಾಗಿರುವ ಜನರ ಯಾವುದೇ ಗುಂಪಿಗೆ ಆದಿವಾಸಿ ಗುಂಪು ಎಂದು

ಕರೆಯುತ್ತಾರೆ. ಸಾಮಾನ್ಯವಾಗಿ ಆದಿವಾಸಿಗಳಲ್ಲಿ ಹಳೇ ಕಾಲದ ಪ್ರಾದೇಶಿಕ ವೈದ್ಯ ಪದ್ಧತಿಗಳು ರೂಢಿಯಲ್ಲಿದ್ದವು. ಸ್ತ್ರೀಯರಿಗೆ, ಮಕ್ಕಳಿಗೆ, ಪುರುಷರಿಗೆ ಅನೇಕ ಕಾಯಿಲೆಗಳಿಗೆ ಗಿಡಮೂಲಿಕೆಯ ಔಷಧ ಕೊಡುತ್ತಿದ್ದರು. ಹೊಟ್ಟೆ ನೋವು, ಗರ್ಭ ಕಾಮಲೆ, ಗರ್ಭ ನಿಲ್ಲದೇ ಇರುವುದು, ಬಿಳಿ ಮುಟ್ಟು ಹೋಗುವುದು, ರಕ್ತ ಸ್ರಾವ, ಕುರುಹು, ಇವುಗಳನ್ನು ಅರಣ್ಯದಲ್ಲಿ ಸಿಗುವ ವನಮೂಲಿಕೆಗಳಿಂದ ವಾಸಿ ಮಾಡುತ್ತಿದ್ದರು. ಮದ್ದಾಲೆ ಮರದ ಚೆಕ್ಕೆಯನ್ನು ದೀಪಾವಳಿಯ ಬೂರೆಯ ಹಿಂದಿನ ದಿವಸ ತಂದು ಕುಟ್ಟಿ ನೀರಿನಲ್ಲಿ ನೆನೆಸಿ ಕಷಾಯ ಮಾಡಿ ಬೂರೆಯ ದಿವಸ ಕುಡಿಯುತ್ತಾರೆ. ಬೂರೆಯ ದಿವಸ ಮದ್ದಾಲೆ ಮರದ ಕಷಾಯ ಕುಡಿದರೆ ವರ್ಷವೆಲ್ಲಾ ಮದ್ದು ಮಾಡುವ ಅಗತ್ಯವಿಲ್ಲವೆಂಬ ನಂಬಿಕೆ ಈ ಜನಾಂಗದಲ್ಲಿದೆ. ಪಾರ್ಶ್ವವಾಯು, ನೆಗಡಿ, ಕೆಮ್ಮು, ಮುಂತಾದ ರೋಗ ರುಜಿನಗಳಿಗೆ ಗಿಡಮೂಲಿಕೆಯ ನಾಟಿ ವೈದ್ಯಪದ್ಧತಿ ಆದಿವಾಸಿಗಳಲ್ಲಿ ಇನ್ನೂ ಜೀವಂತವಿದೆ. ಆಧುನಿಕ ಪದ್ಧತಿಯಿಂದ ಮನುಷ್ಯನ ದೇಹದಲ್ಲಿ ಅಡ್ಡ ಪರಿಣಾಮಗಳು ಉಂಟಾಗುತ್ತವೆ. ಆದರೆ ಆದಿವಾಸಿ ಔಷಧೋಪಚಾರದಿಂದ ಯಾವುದೇ ರೀತಿಯ ಅಡ್ಡಪರಿಣಾಮಗಳಿಲ್ಲದೆ ಶಾಶ್ವತವಾಗಿ ರೋಗ ವಾಸಿಯಾಗುತ್ತದೆ. ಮತ್ತು ಅದು ಪುನರಾವರ್ತನೆಯಾಗುವುದಿಲ್ಲ ಎಂಬ ನಂಬಿಕೆ ಇದೆ. ಭಾರತದ ಇತರ ರಾಜ್ಯಗಳಲ್ಲಿರುವಂತೆ, ಗಿಡಮೂಲಿಕೆಗಳು ಅಥವಾ ಸಸ್ಯಗಳು ಆರೋಗ್ಯ ಮತ್ತು ರೋಗ ತಡೆಗಟ್ಟುವಿಕೆ ಮತ್ತು ಚಿಕಿತ್ಸೆಯ ಪ್ರಚಾರಕ್ಕಾಗಿ ಬಳಸಲ್ಪಟ್ಟಿವೆ. ಬೇರುಗಳು, ಕಾಂಡಗಳು, ಎಲೆಗಳು, ಹೂವುಗಳು, ಅಥವಾ ಹಣ್ಣುಗಳಂತಹ ಸಸ್ಯಗಳ ಭಾಗಗಳಿಂದ ಮಿಶ್ರಣ ಅಥವಾ ಕಷಾಯವನ್ನು ಹೆಚ್ಚಾಗಿ ಬಳಸಲಾಗುತ್ತಿತ್ತು. ಗಿಡಮೂಲಿಕೆಗಳ ಜೊತೆಯಲ್ಲಿ, ಪ್ರಾಚೀನ ಕಾಲದಲ್ಲಿ, ಮಾನವ ಸಂಕಷ್ಟಗಳು ಮತ್ತು ಅದರ ನಿವಾರಣೆ ವಿಷಯವು ಧರ್ಮ, ಪುರಾಣ ಮತ್ತು ಮಾಯಾಗಳೊಂದಿಗೆ ನಿಕಟವಾಗಿ ಸಂಬಂಧಿಸಿದೆ. ಕೆಲವು ಬೀಜಗಳು, ಬೇರುಗಳು, ಸಸ್ಯಗಳು ಮತ್ತು ಅನೇಕ ಮಾಂತ್ರಿಕ ಗುಣಲಕ್ಷಣಗಳೊಂದಿಗೆ ಸಂಬಂಧಿಸಿದ ಗಿಡಮೂಲಿಕೆಗಳ ಆಧಾರದ ಮೇಲೆ ಮೌಖಿಕ ಸಂಪ್ರದಾಯದ ಚಿಕಿತ್ಸೆ ಕೂಡ ಇದೆ. ಈ ಎಲ್ಲಾ ವ್ಯವಸ್ಥೆಗಳು ಆದಿವಾಸಿ ಸಂಶೋಧನೆಗಳನ್ನು ಕೈಗೊಳ್ಳಲು ಪ್ರೇರೇಪಿಸಿವೆ. ಆದಿವಾಸಿ ಔಷಧಿಗಳ ಅವಶ್ಯಕ ಸ್ವರೂಪವು ಜನರ ರೋಗ, ಇಡೀ ರೋಗದ ಪ್ರಕರಣಗಳಷ್ಟೇ ಅಲ್ಲದೆ, ಪ್ರತ್ಯೇಕ ವ್ಯಕ್ತಿಯಾಗಿರುತ್ತದೆ. ಆದಿವಾಸಿ ಔಷಧಿ ಸಸ್ಯದ ವಸ್ತುಗಳಿಂದ ಮಾತ್ರ ತಯಾರಿಸಲ್ಪಟ್ಟಿದೆಯಾದರೂ, ಇದು ಆಯುರ್ವೇದಿಕ್ ಅಥವಾ ಯುನಾನಿ ಪದ್ಧತಿಯಂತಹ ಕ್ರೋಢೀಕೃತ ವ್ಯವಸ್ಥೆಯಾಗಿಲ್ಲ. ಈ ವ್ಯವಸ್ಥೆಯು ಮಾನವ ನಾಗರಿಕತೆಯಷ್ಟು ಹಳೆಯದಾಗಿದ್ದರೂ, ಆದಿವಾಸಿ ಸಮಾಜದಲ್ಲಿ ಇದು ಒಂದು ಹೊಸ ದೃಷ್ಟಿಕೋನವಾಗಿದೆ. ಇತ್ತೀಚಿನ ಸಂಶೋಧನಾ ಅಧ್ಯಯನದ ಪ್ರಕಾರ, ಹಸಿರು ಚಹಾ, ಬೆಳ್ಳುಳ್ಳಿ, ಆಮ್ಲಾದಲ್ಲಿ ಪ್ರಬಲವಾದ ಸ್ವತಂತ್ರ ರಾಡಿಕಲ್ ಪದಾರ್ಥಗಳು ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿವೆ.

ಪ್ರಾಚೀನ ಔಷಧಿ ಗಿಡಮೂಲಿಕೆಗಳ ಕುರಿತಾದ ದಾಖಲೆಗಳ ಅನುಪಸ್ಥಿತಿಯಲ್ಲಿ

ಗಿಡಮೂಲಿಕೆಗಳು, ಸಸ್ಯಗಳು, ಹಣ್ಣುಗಳು, ಆಹಾರಗಳು ಮತ್ತು ಹಣದ ಬೆಳೆಗಳ ಚಿಕಿತ್ಸೆಯ ಮೌಲ್ಯವನ್ನು ನಾನು ವ್ಯಾಪಕವಾಗಿ ಅಧ್ಯಯನ ಮಾಡಿದ್ದೇನೆ. ಔಷಧೀಯ ಅಲೋಪಥಿಕ್ ವ್ಯವಸ್ಥೆಗಳ ಪರಿಣಾಮದಿಂದಾಗಿ, ಆಧುನಿಕ ವೈಜ್ಞಾನಿಕ ಪ್ರಗತಿಯಿಂದ ಮತ್ತು ಆಧುನಿಕ ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸೆಯ ಹರಡುವಿಕೆಯಿಂದಾಗಿ, ಆದಿವಾಸಿ ಔಷಧಿಗಳಲ್ಲಿನ ನಂಬಿಕೆಯಿಂದಾಗಿ, ಜಾನಪದ ಔಷಧವು ನಿಧಾನವಾಗಿ ಕುಸಿಯುತ್ತಿದೆ ಎಂದು ಅಧಿಕೃತವಾಗಿ ತಿಳಿದಿದೆ. ಹೇಗಾದರೂ, ವಿಶ್ವ ಆರೋಗ್ಯ ಸಂಸ್ಥೆಯು ತನ್ನ ಅಂದಾಜಿನ ಪ್ರಕಾರ ಮೂಲಿಕೆ ಔಷಧಿಗಳ ಬಳಕೆಯನ್ನು ಎರಡು ಅಥವಾ ಮೂರು ಪಟ್ಟು ಆಧುನಿಕ ಔಷಧಿಗಳನ್ನು ಮೀರಿಸುತ್ತದೆ. ಘನವಾದ ವೈಜ್ಞಾನಿಕ ಸಾಕ್ಷ್ಯವನ್ನು ಎದುರಿಸಿದರೆ, ಈಗ ವಿಜ್ಞಾನಿಗಳು ಪ್ರಕೃತಿಯ ಸರಳ ಪರಿಹಾರಗಳ ಪರಿಣಾಮಕಾರಿತ್ವವನ್ನು ಮರುಶೋಧಿಸುತ್ತಿದ್ದಾರೆ ಮತ್ತು ನಮ್ಮ ಪೂರ್ವಜರ ಸರಳ ಕೌಶಲ್ಯಗಳನ್ನು ಪುನಃ ಕಲಿಯುತ್ತಿದ್ದಾರೆ ಎಂಬುದನ್ನು ಮನಗಾಣಬಹುದಾಗಿದೆ.

ಆದಿವಾಸಿಗಳು ಭಾರತದ ಮೂಲ ನಿವಾಸಿಗಳಾಗಿದ್ದು, ಇವರೆಲ್ಲರೂ ಕಾಡಿನಲ್ಲಿಯೇ ಜೀವಿಸುತ್ತಿದ್ದಾರೆ. ಆದರೆ ಅವರು ತಮ್ಮ ಆರೋಗ್ಯ ರಕ್ಷಣೆಗಾಗಿ ಏನೇನು ಮಾಡುತ್ತಿದ್ದರು ಎಂಬುದು ಇಂದಿನ ಆಧುನಿಕ ಕಾಲದಲ್ಲಿ ಒಂದು ರೋಚಕ ಸಂಗತಿಯಾಗಿದೆ. ಪ್ರಸ್ತುತ ಕಾಲದಲ್ಲಿ ಎಷ್ಟೇ ವೈಜ್ಞಾನಿಕವಾಗಿ ಮುಂದುವರೆದಿದ್ದರೂ ನಾಗರಿಕತೆಯ ಉತ್ತುಂಗ ಸ್ಥಾನಕ್ಕೆ ಹೋಗಿರುವ ಮನುಷ್ಯನು ಮತ್ತೆ ಆಯುರ್ವೇದಿಕ್ ಅಥವಾ ಯುನಾನಿ, ನಾಟಿ ಪದ್ಧತಿಗಳಿಗೆ ಮೊರೆ ಹೋಗುತ್ತಿದ್ದಾರೆ. ಈಗಲೂ ಅನೇಕ ರೋಗಗಳು ಆದಿವಾಸಿ ಜನಾಂಗದವರು ಕಂಡುಕೊಂಡಿರುವ ಔಷಧೋಪಚಾರಗಳಿಂದಲೇ ಗುಣಮುಖರಾಗುತ್ತಿರುವುದು ತಿಳಿದು ಬರುತ್ತದೆ. ಪ್ರಸ್ತುತ ಲೇಖನವು ಆದಿವಾಸಿ ಸಮುದಾಯದ ನಾಟಿ ವೈದ್ಯಪದ್ಧತಿಯನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡುವುದು ಈ ಲೇಖನದ ಉದ್ದೇಶವಾಗಿದೆ.

ಪರಾಮರ್ಶನ ಗ್ರಂಥಗಳು:

1. ಕರ್ನಾಟಕ ಬುಡಕಟ್ಟುಗಳು ಸಂಪುಟ-1, (ಸಂ.) ಡಾ. ಹೆಚ್.ಜಿ. ಲಕ್ಕಪ್ಪಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1998
2. ಚೋಮನ ದುಡಿ, ಡಾ. ಶಿವರಾಮ ಕಾರಂತ, ಹರ್ಷ ಪ್ರಕಟಣಾಲಯ, ದಕ್ಷಿಣ ಕನ್ನಡ, 1971.
3. ಪಾಣಾಜೆ ವೈದ್ಯ, ಪಣಾಜಿ, ಶಂ.ನಾ. ಭಟ್, ಪುತ್ತೂರ್, 1996.
4. ತುಳು ಕವಿತೆಗಳು, ಡಾ. ಬಿ.ಎ. ವಿವೇಕ ರೈ, ಮಂಗಳೂರು ವಿಶ್ವವಿದ್ಯಾಲಯ, 1997
5. ಮಲೆದೈವಗಳು, ಶ್ವೇತ ಎಂ.ಬಿ, ಗಾಯತ್ರಿ ಪ್ರಕಾಶನ, ಬಳ್ಳಾರಿ, 2014

4

ಕಾಡು ಮತ್ತು ಆದಿವಾಸಿಗಳ ಅಸ್ತಿತ್ವದ ಸವಾಲುಗಳು

ಡಾ. ಅನ್ನಪೂರ್ಣ ಗುಡುದೂರು
ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು, ಕಂಪ್ಲಿ
ಮೊಬೈಲ್ ನಂ : 90714 00659

ಕಾಡು ಮತ್ತು ಆದಿವಾಸಿಗಳಿಗೆ ಒಂದು ಅವಿನಾಭಾವ ಸಂಬಂಧವಿದೆ. ಹಾಗೆ ನೋಡಿದರೆ ಮನುಷ್ಯನ ಹುಟ್ಟಿನ ಸಂಸ್ಕೃತಿ ಆರಂಭವಾಗಿದ್ದೆ ಕಾಡಿನಿಂದ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ನೋಡಿದಾಗ ಆದಿವಾಸಿಗಳು ಭಾರತದ ಮೂಲ ನಿವಾಸಿಗಳು, ಆದಿವಾಸಿಗಳ ಸಂಸ್ಕೃತಿ ಭಾರತೀಯರ ಮೂಲ ಸಂಸ್ಕೃತಿ. ಆದಿವಾಸಿಗಳು ಸಮತಾವಾದದ ತಳಹದಿಯ ಮೇಲೆ ಅವರ ಜೀವನ ಕ್ರಮವನ್ನು ರೂಪಿಸಿಕೊಂಡವರು. ಆದಿವಾಸಿಗಳು ಸ್ವತಂತ್ರ ಪ್ರಿಯರು, ಬೇಡುವವರಲ್ಲ, ಸೋಮಾರಿಗಳಲ್ಲ, ಸ್ವಯಂ ಆಡಳಿತ ಪದ್ಧತಿಯನ್ನು ತಮ್ಮ ಹಾಡಿಗಳ ನಿರ್ವಹಣೆಗೆ ಬಳಸುತ್ತಿದ್ದರು. ಅರಣ್ಯದಲ್ಲಿ ಆಹಾರ ಸಂಗ್ರಹಣೆ ಗಿಡಮೂಲಿಕೆ ಸಂಗ್ರಹ, ಕಿರುಬೇಟೆ, ಅರಣ್ಯ ಕಿರು ಸಂಪನ್ಮೂಲ ಸಂಗ್ರಹಣೆ, ಜೇನು ಸಂಗ್ರಹ, ಇವರ ಆಹಾರ ಭದ್ರತೆಗೆ ಆಧಾರವಾಗಿತ್ತು. ಇವರು ತುಂಬಾ ಸ್ವಾಭಿಮಾನಿಗಳು ಯಾರನ್ನು ಅವಲಂಬಿಸಿದವರಲ್ಲ. ಮಕ್ಕಳನ್ನು ತುಂಬಾ ಪ್ರೀತಿಸುತ್ತಾರೆ. ಹಾಗೆಯೇ ಅವರನ್ನು ಸ್ವತಂತ್ರವಾಗಿ ಬೆಳೆಯಲು ಬಿಡುತ್ತಾರೆ. ಹೆಣ್ಣು ಮತ್ತು ಗಂಡಿನ ನಡುವೆ ಭೇದವಿಲ್ಲ. ಪ್ರಕೃತಿಯ ಆರಾಧನೆಯೇ ಇವರ ಮೂಲ ಧರ್ಮ.

ಭಾರತದಲ್ಲಿ ಸುಮಾರು 8 ಕೋಟಿಗೂ ಅಧಿಕ ಮೂಲ ಆದಿವಾಸಿಗಳಿದ್ದಾರೆ. ಇವರಲ್ಲಿ ಸುಮಾರು 600ಕ್ಕೂ ಹೆಚ್ಚು ಸಮುದಾಯಗಳು ಅರಣ್ಯ ವಾಸದ ಹಿನ್ನೆಲೆವುಳ್ಳ ಸಮುದಾಯಗಳಾಗಿವೆ. ರಾಷ್ಟ್ರೀಯ ಉದ್ಯಾನ ವನಗಳ ನಿರ್ಮಾಣ, ರಾಷ್ಟ್ರೀಯ ಹೆದ್ದಾರಿ ನಿರ್ಮಾಣ, ಬೃಹತ್ ಕಾರ್ಖಾನೆಗಳ ನಿರ್ಮಾಣ, ದೊಡ್ಡ ದೊಡ್ಡ ಆಣೆಕಟ್ಟುಗಳ ನಿರ್ಮಾಣ ಮತ್ತು ಕೈಗಾರಿಕೆಗಳಿಗೆ ಬೇಕಾದ ಖನಿಜ ಸಂಪತ್ತು

ಹೀಗೆ ಹತ್ತು ಹಲವು ಕಾರಣಗಳಿಂದಾಗಿ 1 ಕೋಟಿಗೂ ಹೆಚ್ಚು ಆದಿವಾಸಿಗಳನ್ನು ಕಾಡಿನಿಂದ ಹೊರಹಾಕಿ ನಿರ್ಗತಿಕರನ್ನಾಗಿ ಮಾಡಲಾಗಿದೆ. ಹಾಗಾಗಿ ಇವರು ಇಂದಿಗೂ ಕೂಡ ಕಡುಬಡತನದಲ್ಲಿ ಜೀವನ ನಡೆಸುತ್ತಿರುವ ಸ್ಥಿತಿ ಕಾಣುತ್ತೇವೆ. ಭಾರತ ದೇಶದ ಪರಿಸ್ಥಿತಿಯಲ್ಲಿ ಆದಿವಾಸಿಗಳ ಪರಿಸ್ಥಿತಿಯು ಹೀಗಾಗಿದ್ದರೆ, ಕರ್ನಾಟದಲ್ಲಿಯೂ ಆದಿವಾಸಿಗಳು ಇದರಿಂದೇನೂ ಹೊರತಾಗಿಲ್ಲ. ಕರ್ನಾಟಕದಲ್ಲಿ ಸುಮಾರು 50ಕ್ಕಿಂತ ಅಧಿಕ ಆದಿವಾಸಿಗಳಿದ್ದು, ವಿವಿಧ ಪ್ರದೇಶಗಳಲ್ಲಿ ತಮ್ಮದೇ ಆದ ವಿಶಿಷ್ಟ ಜೀವನ ನಡೆಸುತ್ತಾ ಬರುತ್ತಿವೆ. ಎಲ್ಲಾ ಆಧುನಿಕ ಪ್ರಭಾವಗಳ ನಡುವೆಯೂ ಆದಿವಾಸಿ ಸ್ವರೂಪದ ಸಾಂಸ್ಕೃತಿಕ ಸಂಗತಿಗಳನ್ನು ಉಳಿಸಿಕೊಂಡಿರುವುದು ವಿಶೇಷ.

ಕಾಡುವಾಸಿಗಳು ನಮ್ಮಂತೆ ಅಂದರೆ ನಾಡವಾಸಿಗಳಂತೆ ಯಾವುದೇ ಆಧುನಿಕ ಸೌಕರ್ಯಗಳನ್ನು ಹೊಂದದೆ ಅತಂತ್ರ ಬದುಕನ್ನು ಸಾಗಿಸುತ್ತಿರುವ ಅನಾಗರಿಕರು, ಅನಕ್ಷರಸ್ಥರು, ಇವರಿಗೆ ಸುಖ, ಶಾಂತಿ ಮತ್ತು ನೆಮ್ಮದಿಯೆಂಬುದೇ ಇಲ್ಲ ಎಂಬ ಈ ಮೇಲಿನ ಹೇಳಿಕೆಯು ನಾಡವಾಸಿಗಳ ಅನಿಸಿಕೆಯಂತೆ ಹೌದು ಎನಿಸಿದರೆ ಅದು ಅರ್ಧ ಸತ್ಯ ಮಾತ್ರ. ಏಕೆಂದರೆ ಕಾಡು, ಅದರೊಳಗಿನ ಸಸ್ಯಸಂಪತ್ತು ಅವರ ಬದುಕಿನ ಅಗತ್ಯವಾದ ಸಕಲವನ್ನು ಒದಗಿಸುವುದರಿಂದ ಯಾವುದೇ ಕೊರತೆಗಳಿಂದ ಕೊರಗದೆ ಪ್ರಕೃತಿಯ ಮಡಿಲಲ್ಲಿ ಸಹಜ, ಸರಳ, ಸುಂದರ ಮತ್ತು ನೆಮ್ಮದಿಯಿಂದ ನಾಡವಾಸಿಗಳಿಗಿಂತ ಉತ್ತಮವಾಗಿ ಜೀವನ ಸಾಗಿಸುವುದು ಸಾಧ್ಯ ಎಂಬುದನ್ನು ಆದಿವಾಸಿಗಳು ಸಾವಿರಾರು ವರುಷಗಳಿಂದ ಕಾಡಿನಲ್ಲಿ ಬದುಕುವ ಮೂಲಕ ಸಾಬೀತುಪಡಿಸಿದ್ದಾರೆ. ಆದರೆ ಕಾಡುವಾಸಿಗಳು ಬಯಸಿದಂತ ಪ್ರಕೃತಿ ಸಹಜ ಬದುಕನ್ನು ಕಾಡಿನ ಒಳಗಿದ್ದು ನಡೆಸುವಂತಿಲ್ಲ. ಏಕೆಂದರೆ, ಭಾರತವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡು ಸರ್ವಜನರ ಏಳಿಗೆಯನ್ನು ಬಯಸುತ್ತದೆ. ಆದ್ದರಿಂದ ಕಾಡುವಾಸಿಗಳು ಸಹ ನಾಡವಾಸಿಗಳಂತೆ ಬದುಕುವ ಹಕ್ಕಿದೆ. ಅದಕ್ಕಾಗಿ ಅವರು ಪ್ರಮುಖ ವಾಹಿನಿಗೆ ಬರುವುದು ಅನಿವಾರ್ಯ ಎಂಬುದು ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಅಧಿಕಾರಿ ಹಾಗೂ ರಾಜಕಾರಣಿಗಳ ಅಭಿಮತ. ಕಾಡುವಾಸಿಗಳ ಬಗೆಗೆ ಇಂತಹ ಉದಾತ್ತ ನಿಲುವುಗಳನ್ನು ಹೊಂದಿರುವ ಕಾನೂನು ವ್ಯವಸ್ಥೆಯಲ್ಲಿಯೇ ಅನೇಕ ಗೊಂದಲಗಳು ಇರುವುದರಿಂದ ಅವರೇ ಅಪೇಕ್ಷಿಸಿದ ಕಾಡುವಾಸಿಗಳ ಅಭಿವೃದ್ಧಿ ಸಾಧ್ಯವಾಗಿದೆಯೇ ಎಂಬುದಕ್ಕೆ ಈ ಕೆಳಗಿನ ಉದಾಹರಣೆಯನ್ನು ಗಮನಿಸಬಹುದು.

2006ಕ್ಕೆ ರಾಷ್ಟ್ರಪತಿ ಅವರ ಅಂಕಿತದೊಂದಿಗೆ 'ರಾಷ್ಟ್ರೀಯ ಬುಡಕಟ್ಟು ನೀತಿ'ಯು ಅಧಿಕೃತ ಮುದ್ರೆಯನ್ನು ಪಡೆಯಿತು. ಆದರೆ ವಾಸ್ತವವಾಗಿ ಇಂದಿಗೂ ಅನುಷ್ಠಾನಗೊಳ್ಳುವಲ್ಲಿ ಕುಂಟುತ್ತಾ ಸಾಗಿದೆ ಎಂದೇ ಹೇಳಬಹುದು. ಅರಣ್ಯ ಗ್ರಾಮಗಳು ಎಂಬ ಶೀರ್ಷಿಕೆ ಅಡಿಯಲ್ಲಿ ಅರಣ್ಯ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಿ ಸೂಕ್ತ ಸವಲತ್ತುಗಳನ್ನು ಒದಗಿಸುವುದು, ಕಂದಾಯ

ಗ್ರಾಮಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಅರಣ್ಯ ಗ್ರಾಮಗಳಿಗೂ ನೀಡುವುದು ಎಂದು ಪ್ರಸ್ತಾಪಿಸಿದ ಒಟ್ಟು ಎಂಟು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಮೂಲಭೂತ ಸೌಲಭ್ಯಗಳು ಸೇರಿದಂತೆ ಗಂಜಿ ಕೇಂದ್ರಗಳನ್ನು ತೆರೆಯುವುದು, ಹಳೆ ಕೃಷಿ ಪದ್ಧತಿ ಬದಲಿಗೆ ಆಧುನಿಕ ಕೃಷಿ ಮತ್ತು ಹೈನುಗಾರಿಕೆಗೆ ಉತ್ತೇಜನ ನೀಡುವ ಮೂಲಕ ಆರ್ಥಿಕ ಏಳಿಗೆಯನ್ನು ಹೊಂದುವಂತೆ ಮಾಡುವುದು. ರಕ್ಷಣೆಗೆ ಪೂರಕವಾದ ಹಕ್ಕುಗಳನ್ನು ನೀಡುವುದು ಮತ್ತು ಕಾಡಿನ ಅಭಿವೃದ್ಧಿ ಜೊತೆಗೆ ಬುಡಕಟ್ಟುಗಳಿಗೆ ಉದ್ಯೋಗದ ಅವಕಾಶವನ್ನು ಒದಗಿಸುವುದು. ಈಗಾಗಲೇ ಅನುಷ್ಠಾನಗೊಳಿಸಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆ ಮತ್ತು ಬೃಹತ್ ಪ್ರಾಮಾಣದ ವಿವಿದೋದ್ದೇಶ ಸಂಘಗಳ ಮೂಲಕ ಸೂಕ್ತ ಯೋಜನೆಗಳನ್ನು ರೂಪಿಸುವುದು ಆದಿವಾಸಿಗಳ ಸಮಗ್ರ ಅಭಿವೃದ್ಧಿಯನ್ನು ಸಾಧ್ಯವಾಗಿಸುವುದು ಒಪ್ಪಬಹುದಾದ ಅಂಶಗಳೇ ಆದರೂ ಸಾವಿರಾರು ವರ್ಷಗಳಿಂದ ಆದಿಮ ಸ್ಥಿತಿಯಲ್ಲಿದ್ದು ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿ ಸವಾಲಿನ ಬದುಕನ್ನು ಸಾಗಿಸುತ್ತಿರುವ ನೂರಾರು ಆದಿವಾಸಿ ಸಮುದಾಯಗಳ ಸಂಕಷ್ಟಗಳನ್ನು ಅಧಿಕಾರವರ್ಗ ಹಾಗೂ ಜನಪ್ರತಿನಿಧಿಗಳು ಒಂದೆಡೆ ಕುಳಿತು ಚರ್ಚಿಸಿ ರಾಷ್ಟ್ರೀಯ ಆದಿವಾಸಿ ನೀತಿಯೊಂದನ್ನು ರೂಪಿಸುವ ಮೂಲಕ ಪರಿಹಾರವನ್ನು ಒದಗಿಸುತ್ತೇವೆ ಎಂಬುದು ಕೇವಲ ಸಿದ್ಧಾಂತವಾಗಬಹುದೇ ಹೊರತು ಉದ್ದೇಶಿತ ಸಮುದಾಯಗಳಿಗೆ ಇದರಿಂದ ಅನುಕೂಲವಾಗುವ ಸಂಭವ ಕಡಿಮೆ. ಆದಿವಾಸಿಗಳನ್ನು ಕಾಡಿನಿಂದ ಒಕ್ಕಲೆಬ್ಬಿಸಬೇಕೆಂಬ ಸುಪ್ರೀಂಕೋರ್ಟ್ ಆದೇಶ ಕೂಡ ಆದಿವಾಸಿಗಳನ್ನು ಬೆಚ್ಚಿಬೀಳಿಸಿದೆ. ಹೀಗಾಗಿ ಆದಿವಾಸಿಗಳು ಹಲವಾರು ಸಮಸ್ಯೆಗಳನ್ನು ಇಂದು ಎದುರಿಸುತ್ತಿದ್ದಾರೆ. ಇಂತಹ ಆದಿವಾಸಿಗಳ ಸಮಸ್ಯೆಯನ್ನು ಗುರುತಿಸುವುದು ನನ್ನ ಪ್ರಬಂಧದ ಮೂಲ ಉದ್ದೇಶ. ಹಾಗಾಗಿ ನಾನು ನನ್ನ ವಿಚಾರ ಮಂಡನೆಯಲ್ಲಿ ಮುಖ್ಯವಾಗಿ ಮೂರು ಅಂಶಗಳನ್ನು ಕುರಿತು ವಿವರಿಸಲು ಪ್ರಯತ್ನಪಡುತ್ತೇನೆ.

1. ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಕಾಡು(ಅರಣ್ಯ) ಎಂದರೆ ಏನು?
2. ಕರ್ನಾಟವನ್ನು ಕೇಂದ್ರಿಕರಿಸಿಕೊಂಡು ಆದಿವಾಸಿಗಳು ಎಂದರೆ ಯಾರು?
3. ಕರ್ನಾಟಕದ ಆದಿವಾಸಿಗಳ ಅಸ್ತಿತ್ವದ ಸವಾಲುಗಳು ಯಾವವು?

ಎನ್ನುವ ಅಂಶಗಳನ್ನು ಸ್ಪಷ್ಟಪಡಿಸುವ ಉದ್ದೇಶವನ್ನು ಹೊಂದಿದ್ದೇನೆ.

5

ಆದಿವಾಸಿ ಸಮುದಾಯ ಎದುರಿಸುತ್ತಿರುವ ಸವಾಲುಗಳು

ಡಾ. ವನಜಾಕ್ಷಿ ಆರ್ ಹಳ್ಳಿಯವರ
ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ
ಸಹಪ್ರಾಧ್ಯಾಪಕರು,
ಸರ್ಕಾರಿ ಪ್ರಥಮದರ್ಜೆ ಕಾಲೇಜು,
ರಾಜಾಜಿನಗರ, ಬೆಂಗಳೂರು–10
drvanajakshi3@gmail.com

ಶತಮಾನಗಳಿಂದಲೂ ಬೆಟ್ಟ-ಗುಡ್ಡ ಪ್ರದೇಶಗಳಲ್ಲಿ, ದಟ್ಟವಾದ ಅರಣ್ಯ, ಹಿಮಪ್ರದೇಶ ದ್ವೀಪಗಳಲ್ಲಿ ನೆಲೆವೂರಿದ್ದು, ಯಾವುದೇ ನಗರ ಜೀವನದ ಆಧುನಿಕ ಬದುಕಿಗೆ ಒಗ್ಗಿಕೊಳ್ಳದ, ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವ ಒಂದು ಗುಂಪಿನ ಜನರನ್ನು ಸಾಮಾನ್ಯವಾಗಿ ಆದಿವಾಸಿಗಳು ಅಥವಾ ಬುಡಕಟ್ಟು ಜನಾಂಗ ಎಂದು ಗುರುತಿಸಲಾಗಿದೆ. ಇವರಲ್ಲಿ ರಕ್ತಸಂಬಂಧ ಬಹುಮುಖ್ಯವಾದದ್ದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಾಮಾಜಿಕ ವರ್ಗದ ಬಗ್ಗೆ ಅರಿತಿರುತ್ತಾರೆ. ಸಂಪ್ರದಾಯಬದ್ದ ಕಟ್ಟು-ಪಾಡುಗಳನ್ನು ಹೊಂದಿರುವ ಆದಿವಾಸಿಗಳು ನಾಗರಿಕ ಸಂಸ್ಕೃತಿಯಿಂದ ದೂರ ಉಳಿದಿದ್ದು, ತಮ್ಮದೇ ಆದ ಪ್ರತ್ಯೇಕ ಭಾಷೆ, ಆಚಾರ-ವಿಚಾರ, ವ್ಯವಹಾರ, ಉದ್ಯೋಗ...... ಒಟ್ಟಾರೆ ತಮ್ಮ ಗುಂಪಿಗೆ ಮಾತ್ರವೇ ಸೀಮಿತಗೊಂಡ ನಿಯಮಗಳಿಗೆ ಬದ್ದರಾಗಿ ಬದುಕುವ ಜನಾಂಗವನ್ನು ಆದಿವಾಸಿಗಳೆಂದು ಹೆಸರಿಸಲಾಗಿದೆ.

ಪ್ರಪಂಚದಾದ್ಯಂತ ಇಂತಹ ಅನೇಕ ಆದಿವಾಸಿ ಜನಾಂಗಗಳು ಇಂದಿಗೂ ಎಲೆಮರಿಕಾಯಂತೆ ತಮ್ಮದೇ ಆದ ಬದುಕು ಕಟ್ಟಿಕೊಂಡು ಬಾಳುತ್ತಿರುವುದು ಗಮನಾರ್ಹ ಸಂಗತಿ. ಆದರೆ ಜಾಗತೀಕರಣದ ಪ್ರಭಾವದಿಂದಾಗಿ ಇಂದು ಅದೆಷ್ಟೋ ಆದಿವಾಸಿ ಜನಾಂಗಗಳು ತಮ್ಮ ಸಂಪ್ರದಾಯಗಳನ್ನು ಉಳಿಸಿಕೊಳ್ಳದೇ ಅತಂತ್ರದಲ್ಲಿ ನಲುಗಿ ಹೋಗಿರುವ ಉದಾಹರಣೆಗಳೂ ಉಂಟು. ರಾಜ್ಯ ಮತ್ತು ಕೇಂದ್ರ ಸರ್ಕಾರ ಹಾಗೂ ವಿಶ್ವದಾದ್ಯಂತ ಅನೇಕ ಸಂಘ-ಸಂಸ್ಥೆಗಳು ಆದಿವಾಸಿ ಜನರ ಬದುಕಿಗೆ ಬೆಳಕಾಗಿ ಅನೇಕ ಕಾರ್ಯಕ್ರಮ, ಯೋಜನೆಗಳನ್ನು

ಹಾಕಿಕೊಳ್ಳುವುದರ ಮೂಲಕ ಅವರನ್ನು ಆಧುನಿಕ ಜಗತ್ತಿನ ಬದಲಾದ ಬದುಕಿಗೆ ತರಲು ಪ್ರಯತ್ನಿಸುತ್ತಿರುವುದು ಪ್ರಶಂಸಾರ್ಹ ವಿಷಯವಾದರೂ ಸಂಪೂರ್ಣವಾಗಿ ಆದಿವಾಸಿಗಳು ಇತ್ತ ನಗರೀಕರಣದ ಬದುಕನ್ನು ಒಪ್ಪದೇ, ಅತ್ತ ತಮ್ಮದೇ ಆದ ಸಂಪ್ರದಾಯಿಕ ವಿಧಿ-ವಿಧಾನಗಳ ಸಂಸ್ಕೃತಿಯನ್ನು ಉಳಿಸಿಕೊಳ್ಳದೇ ಬದುಕಿನ ನಿರ್ವಹಣೆಯಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಅವುಗಳಲ್ಲಿ ಕೆಲವು ಅಂಶಗಳನ್ನು ಮಾತ್ರ ಕೇಂದ್ರವಾಗಿರಿಸಿಕೊಂಡಂತೆ, ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

ನೈಸರ್ಗಿಕ ಸಂಪನ್ಮೂಲಗಳ ನಿಯಂತ್ರಣ

ನಿಸರ್ಗದ ಮಧ್ಯದಲ್ಲಿಯೇ ತಮ್ಮ ಜೀವನ ನಿರ್ವಹಿಸುತ್ತಿದ್ದ ಆದಿವಾಸಿಗಳಿಗೆ ಇಂದು ಕಾಡು-ಮೇಡುಗಳಲ್ಲಿ ಬದುಕುವುದು ದುಸ್ತರವಾಗಿದೆ. ಕೈಗಾರಿಕೀರಣದ ಆಗಮನ, ಖನಿಜ ಮತ್ತು ಇತರ ಸಂಪನ್ಮೂಲಗಳ ಆವಿಷ್ಕಾರದಿಂದಾಗಿ ಆದಿವಾಸಿಗಳು ವಾಸಿಸುವ ಪ್ರದೇಶಗಳು ಕಾಂಕ್ರೀಟ್‌ನಗರಗಳಾಗಿ ಬದಲಾಗುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ನೈಸರ್ಗಿಕ ಸಂಪತ್ತು ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರುವುದರಿಂದ ಅರಣ್ಯ ಸಂರಕ್ಷಣೆ ಮತ್ತು ರಾಷ್ಟ್ರೀಯ ಕಾಡುಗಳ ಪರಿಕಲ್ಪನೆಯು ಆದಿವಾಸಿಗಳ ಬದುಕಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಸ್ಥಳಾಂತರ ಮತ್ತು ಪುನರ್ವಸತಿ

ನೈಸರ್ಗಿಕ ಸಂಪನ್ಮೂಲಗಳ ಸಹಾಯದೊಂದಿಗೆ ತಮ್ಮ ಜೀವನ ನಿರ್ವಹಿಸುತ್ತಿದ್ದ ಆದಿವಾಸಿಗಳಿಗೆ ಅರಣ್ಯ ಸಂರಕ್ಷಣೆಯ ನೆಪವೊಡ್ಡಿ ಅವರನ್ನು ಸ್ಥಳಾಂತರಗೊಳಿಸುವ ಪ್ರಕ್ರಿಯೆ ನಡೆಯುತ್ತಿರುವುದು ಸರಿಯೆನಿಸಿದರೂ ಅದಕ್ಕೆ ಪೂರಕವಾಗಿ 'ಪುನರ್ವಸತಿ ಯೋಜನೆ'ಯನ್ನು ಸಮರ್ಪಕವಾಗಿ ನಿರ್ವಹಿಸದಿರುವುದು ಆದಿವಾಸಿಗಳ ದುರಂತ ಬದುಕಿಗೆ ಸಾಕ್ಷಿಯಾಗಿದೆ. ಸ್ವಾತಂತ್ರ್ಯಾನಂತರದ ಭಾರೀ ಕೈಗಾರಿಕೆಗಳು, ವಿದ್ಯುತ್ ಯೋಜನೆಗಳು, ಬೃಹತ್ ಅಣೆಕಟ್ಟುಗಳು, ಗಣಿಗಾರಿಕೆಯಂತಹ ಉದ್ದಿಮೆಗಳಿಂದಾಗಿ ಆದಿವಾಸಿಗಳು ನೆಲೆವೂರಿದ್ದ ಅರಣ್ಯ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡು ಭಾರೀ ಪ್ರಮಾಣದ ಕೈಗಾರಿಕೆಗಳಿಗೆ ಆಸ್ಪದಕೊಟ್ಟಿತು. ಇದರಿಂದಾಗಿ ಆದಿವಾಸಿಗಳ ಸ್ಥಳಾಂತರ ಅನಿವಾರ್ಯವಾಯಿತು. ಉದಾಹರಣೆಗೆ ಛೋಟಾನಾಗಪುರ, ಒರಿಸ್ಸಾ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ ಇವೇ ಮೊದಲಾದ ರಾಜ್ಯಗಳ ಅನೇಕ ಆದಿವಾಸಿಗಳು ವಲಸೆಹೋಗುವ ಪರಿಸ್ಥಿತಿ ಅಂದು ಅನಿವಾರ್ಯವಾಗಿದ್ದುದನ್ನು ಗಮನಿಸಬಹುದು. ಸರ್ಕಾರ ಅಂತಹ ಆದಿವಾಸಿ ಜನಾಂಗಗಳಿಗೆ ಪುನರ್ವಸತಿಗಾಗಿ ಸಾಕಷ್ಟು ಹಣ ಖರ್ಚುಮಾಡಿತಾದರೂ ಸ್ಥಾನಪಲ್ಲಟಗೊಂಡ ಆದಿವಾಸಿ ಜನರಿಗೆ ಯಾವುದೇ

ಪುನರ್ವಸತಿ ಒದಗಿಸುವಲ್ಲಿ ವಿಫಲವಾಗಿ ಅನೇಕ ಸಮಸ್ಯೆಗಳನ್ನು ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಿದ್ದನ್ನು ಮರೆಯುವಂತಿಲ್ಲ. ನಗರ ಜೀವನದ ಪರಿಕಲ್ಪನೆಯೇ ಇಲ್ಲದ ಆದಿವಾಸಿಗಳು ಅಲ್ಲಿನ ಬದುಕಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅಸಹಾಯಕರಾಗಿರುವುದು ವಿಷಾದನೀಯ.

ಸಾಂಸ್ಕೃತಿಕ ಸ್ಥಿತ್ಯಂತರ

ಆದಿವಾಸಿ ಸಂಸ್ಕೃತಿಯು ನಾಗರಿಕ ಜನರ ಜೀವನಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿರುವಂಥದ್ದು. ಆಧುನಿಕ ಜಗತ್ತಿನ ಜನರ ಆಚಾರ-ವಿಚಾರ, ನಂಬಿಕೆ-ವರ್ತನೆ, ಸಂಪೂರ್ಣ ಅವರ ಬದುಕಿನ ಎಲ್ಲ ಆಯಾಮಗಳನ್ನು ಆದಿವಾಸಿ ಜನರು ಅರ್ಥಮಾಡಿಕೊಂಡು ಬದುಕುವುದು ದುಸ್ತರವಾದುದೇ ಸರಿ! ಆದಿವಾಸಿಗಳ ಮೇಲೆ ಕೆಲವು ಸಂಘ-ಸಂಸ್ಥೆಗಳು ನಗರೀಕರಣದ ಸಂಸ್ಕೃತಿಯನ್ನು ಬಲವಂತವಾಗಿ ಹೇರುವ ಪ್ರಯತ್ನಗಳೂ ನಡೆದಿವೆ. ಬದಲಾದ ಸಾಂಸ್ಕೃತಿಕ ಬದುಕಿಗೆ ಆದಿವಾಸಿಗಳು ತಮ್ಮನ್ನು ಒಗ್ಗಿಸಿಕೊಳ್ಳುವುದು ಸವಾಲಾಗಿ ಪರಿಣಮಿಸಿದೆ. ಇತ್ತ ತಮ್ಮತನವನ್ನು ತಮ್ಮದೆಂದು ಒಪ್ಪಿಕೊಳ್ಳಲು ಸಾಧ್ಯವಾಗದೇ ತಲ್ಲಣಿಸುತ್ತಿರುವುದು ಮತ್ತೊಂದು ದುರಂತ!

ಸಾಮಾಜಿಕ ಪರಿಸರ

ಆದಿವಾಸಿಗಳ ಸಾಮಾಜಿಕ ಬದುಕಿನಲ್ಲಿ ಕಟ್ಟುಬದ್ಧ ಮೂಢನಂಬಿಕೆಗಳೇ ಹೆಚ್ಚು. ಬಾಲ್ಯವಿವಾಹ, ಶಿಶುಹತ್ಯೆ, ನರಹತ್ಯೆ, ಪ್ರಾಣಿಹತ್ಯೆ, ಪತ್ನಿಯರ ವಿನಿಮಯದಂತಹ ಆಚರಣೆಗಳು ಅವರಲ್ಲಿ ಹೆಚ್ಚಾಗಿ ಕಂಡುಬರುತ್ತಿವೆ. ಅವರು ಪ್ರೇತಾತ್ಮಗಳನ್ನು ನಂಬುವವರು. ಇಂತಹ ಸಾಮಾಜಿಕ ಪರಿಸರದ ಮಧ್ಯದಲ್ಲಿ ಬದುಕುತ್ತಿದ್ದ ಆದಿವಾಸಿಗಳ ಸಂಪ್ರದಾಯಗಳು ಆಧುನಿಕ ಪರಿಸರದಲ್ಲಿ ನಿಷೇಧಿಸಲ್ಪಟ್ಟವುಗಳು. ಸರಿ ತಪ್ಪುಗಳನ್ನು ಪರಾಮರ್ಶಿಸಲು ಅಸಮರ್ಥರಾದ ಆದಿವಾಸಿಗಳು ಪರಿಷ್ಕೃತಗೊಂಡ ನಗರದ ಬದುಕಿನ ನಿಯಮಗಳಿಗೆ ಬದ್ಧರಾಗಿ ಬದುಕು ನಿರ್ವಹಿಸುವುದು ಒಂದು ಸವಾಲಾಗಿರಬೇಕು!

ಆರ್ಥಿಕ ಸಮಸ್ಯೆ

ಅರಣ್ಯ ಪ್ರದೇಶಗಳಲ್ಲಿ ಜೇನು ಸಂಗ್ರಹಣೆ, ಪಶುಸಂಗೋಪನೆ, ಬೇಟೆಯಾಡುವುದು, ವ್ಯವಸಾಯ ಸಂಬಂಧಿ ಕಾರ್ಯಗಳನ್ನು ಹೊರತುಪಡಿಸಿದರೆ, ಕುಶಲ ಕಾರ್ಮಿಕ ಕಾರ್ಯಗಾರ ತರಬೇತಿ ಆದಿವಾಸಿಗಳಿಗೆ ಇಲ್ಲದಿರುವುದು ಅವರು ಆರ್ಥಿಕವಾಗಿ ಹಿಂದುಳಿಯುವಂತೆ ಮಾಡಿದೆ. ಜೊತೆಗೆ ಆಧುನಿಕರು ಆದಿವಾಸಿಗಳ ಮುಗ್ಧತೆ, ಅನಕ್ಷರತೆಯನ್ನು ದುರುಪಯೋಗಪಡಿಸಿಕೊಳ್ಳುವುದು ವಿಷಾದದ ಸಂಗತಿ. ಇದರಿಂದಾಗಿ ಆದಿವಾಸಿಗಳ ಆರ್ಥಿಕ ಪರಿಸ್ಥಿತಿ ಸಹಜವಾಗಿಯೇ ಕೆಳಸ್ತರಕ್ಕಿಳಿದಿದ್ದು

ಬಡವರನ್ನಾಗಿಸಿದೆ. ಇದರಿಂದ ಹೊರ ಜಗತ್ತಿನ ಆರ್ಥಿಕ ವಲಯಕ್ಕೆ ಒಗ್ಗಿಕೊಳ್ಳುವುದು ಅವರಿಗೆ ಬಹುದೊಡ್ಡ ಸವಾಲಾಗಿ ಪರಿಣಮಿಸಿರುವುದು.

ನಿರುದ್ಯೋಗ

ಬಹುತೇಕ ಆದಿವಾಸಿ ಯುವಕರು, ಮಹಿಳೆಯರು ನಿರುದ್ಯೋಗಿಗಳಾಗಿದ್ದಾರೆ. ವರ್ಷವಿಡೀ ಉದ್ಯೋಗದಲ್ಲಿ ತೊಡಗಿಕೊಳ್ಳುವಲ್ಲಿ ಅಸಮರ್ಥರಾದ ಆದಿವಾಸಿಗಳು ಕರಕುಶಲ ಕಾರ್ಯಗಳಲ್ಲಿ, ಕೈಗಾರಿಕೆಗಳಲ್ಲಿ ಉದ್ಯೋಗ ಮಾಡುವುದು ದುಸ್ತರವಾಗಿದೆ. ಅರಣ್ಯವಾಸಿಗಳಾದ ಇವರು ಸೀಮಿತ ಉದ್ಯೋಗಗಳನ್ನು ಹೊರತುಪಡಿಸಿದರೆ ತಂತ್ರಜ್ಞಾನದ ಯಾವ ಅನುಭವವೂ ಇಲ್ಲವಾಗಿರುವ ಕಾರಣ ನಗರೀಕರಣದ ಆಧುನಿಕ ಉದ್ಯೋಗಗಳನ್ನು ನಿರ್ವಹಿಸುವಲ್ಲಿ ಅಸಮರ್ಥರಾಗಿರುವುದರಿಂದ ತರಬೇತಿ ಪಡೆದು ಉದ್ಯೋಗದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು ಇಂದು ಅವರಿಗೆ ಸವಾಲಾಗಿ ಪರಿಣಮಿಸಿದೆ.

ಭೂಮಾಲಿಕತ್ವ

ಕಾಡಿನ ಸಂರಕ್ಷಣೆ, ಪ್ರಾಣಿಗಳ ರಕ್ಷಣೆ ಸಾಮಾಜಿಕ ಜವಬ್ದಾರಿಯೆಂದು ಇಂದು ಪರಿಗಣಿಸಿರುವುದರಿಂದ ಆದಿವಾಸಿಗಳು ಅರಣ್ಯವನ್ನು ಬಳಸುವುದು ಮತ್ತು ಪ್ರಾಣಿಗಳನ್ನು ಬೇಟೆಯಾಡುವುದು ಅಸಾಧ್ಯವಾಗಿದೆ. ಆದಿವಾಸಿಗಳಿಂದು ನಗರೀಕರಣದ ನಾಗರೀಕ ಪ್ರಪಂಚಕ್ಕೆ ತಮ್ಮನ್ನು ಒಗ್ಗಿಸಿಕೊಳ್ಳುವುದು ಅನಿವಾರ್ಯವಾಗಿದೆ. ಸರ್ಕಾರ ಭೂಮಿ ಮತ್ತು ಕಾಡುಗಳ ಸಂರಕ್ಷಣೆಗಾಗಿ ವಿಧಿಸಿದ ನಿರ್ಬಂಧಗಳು ಆದಿವಾಸಿಗಳಿಗೆ ಸವಾಲಾಗಿ ಪರಿಣಮಿಸಿವೆ.

ಶಿಕ್ಷಣ

ಆದಿವಾಸಿಗಳಲ್ಲಿ ಅನಕ್ಷರತೆ ಒಂದು ಪ್ರಮುಖ ಸಮಸ್ಯೆಯಾಗಿದೆ. ಶೇಕಡ ಎಂಬತ್ತಕ್ಕಿಂತ ಹೆಚ್ಚು ಜನರು ವಿದ್ಯೆಯಿಂದ ವಂಚಿತರಾಗಿದ್ದಾರೆ. ಔಪಚಾರಿಕ ಶಾಲಾ–ಕಾಲೇಜು, ವಿಶ್ವವಿದ್ಯಾಲಯಗಳ ಶಿಕ್ಷಣದ ಬಗೆಗೆ ಅರಿವಿಲ್ಲದ ಇವರು ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಹಿಂದುಳಿದಿರುವರು. ಇದರಿಂದ ಬದಲಾಗುತ್ತಿರುವ ಕಾಲಮಾನದ ಪರಿಜ್ಞಾನವಿಲ್ಲದೆ ಪರಿತಪಿಸುತ್ತಿದ್ದಾರೆ. ಮಕ್ಕಳಿಗೆ ಶಿಕ್ಷಣ ನೀಡುವುದು ತಮ್ಮ ಪ್ರಾಥಮಿಕ ಜವಬ್ದಾರಿ ಎಂದು ಪರಿಗಣಿಸದ ಆದಿವಾಸಿಗಳು ಶಿಕ್ಷಣದಿಂದ ವಂಚಿತರಾಗಿ ಅನಕ್ಷರಸ್ಥರಾಗಿಯೇ ಉಳಿದಿದ್ದಾರೆ. ಸರ್ಕಾರ ಅನೇಕ ಯೋಜನೆಗಳ ಮೂಲಕ ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಪ್ರಯತ್ನಿಸುತ್ತಿದೆಯಾದರೂ ಸರಿಯಾದ ಮಾರ್ಗದಲ್ಲಿ ಕ್ರಮಕೈಗೊಳ್ಳದಿರುವುದರಿಂದ ಆದಿವಾಸಿಗಳಲ್ಲಿ ಶಿಕ್ಷಣ ಪಡೆದ ಫಲಾನುಭವಿಗಳ ಸಂಖ್ಯೆ ಇಂದಿಗೂ ತೀರ ವಿರಳವೆಂದೇ ಅಂಕಿ–ಸಂಖ್ಯೆಗಳು ಸೂಚಿಸುತ್ತಿವೆ. ಹಾಗಾಗಿ ತಂತ್ರಜ್ಞಾನದ ಹೊಸ ಹೊಸ ಆವಿಷ್ಕಾರಗಳ

ಬಗೆಗೆ ಉತ್ತಮ ಶಿಕ್ಷಣ ಪಡೆಯಬೇಕಾಗಿರುವುದು ಆದಿವಾಸಿಗಳ ಪ್ರಮುಖ ಜವಬ್ದಾರಿಯಾಗಿದೆ.

ಆರೋಗ್ಯ ಮತ್ತು ಪೋಷಣೆ

ಆರ್ಥಿಕ ಮುಗ್ಗಟ್ಟು ಮತ್ತು ಅಸುರಕ್ಷಿತ ಜೀವನೋಪಾಯದ ಕಾರಣದಿಂದಾಗಿ ಆದಿವಾಸಿಗಳು ಮಲೇರಿಯಾ, ಕಾಲರಾ, ಕ್ಷಯ, ಕಾಮಲೆ, ರಕ್ತಹೀನತೆ, ಅಧಿಕ ಶಿಶುಮರಣ ಇವೇ ಮೊದಲಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪ್ರತಿಯೊಂದು ಕಾಯಿಲೆಗೂ ಮೂಢನಂಬಿಕೆಗಳಿಂದಲೇ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವುದು ಅವರ ಆರೋಗ್ಯ ಸಂರಕ್ಷಣೆಗೆ ಬಹುದೊಡ್ಡ ತೊಡಕಾಗಿ ಪರಿಣಮಿಸಿದೆ. ಜೊತೆಗೆ ಕಡುಬಡತನ, ಅಪೌಷ್ಠಿಕ ಆಹಾರ ಸೇವನೆ ಕೂಡ ಆದಿವಾಸಿಗಳ ಆರೋಗ್ಯದ ಮೇಲೆ ಪರಿಣಾಮವನ್ನುಂಟು ಮಾಡುತ್ತಿದೆ.

ಭಾಷಾಭಿವ್ಯಕ್ತಿ

ಶಿಕ್ಷಣದ ಮಾಧ್ಯಮವು ಆದಿವಾಸಿಗಳ ಶಿಕ್ಷಣದ ಉತ್ತೇಜನಕ್ಕೆ ಬಹುದೊಡ್ಡ ಅಡಚಣೆಯಾಗಿದೆ. ವಿಶ್ವದ ಬಹುತೇಕ ಆದಿವಾಸಿ ಭಾಷೆಗಳು ತಮ್ಮದೇ ಆದ ಸ್ವಂತ ಲಿಪಿಯನ್ನು ಹೊಂದಿರುವುದಿಲ್ಲ. ಆದ್ದರಿಂದ ಅವರ ಮಕ್ಕಳು ಪರಭಾಷೆಯಲ್ಲಿ ಶಿಕ್ಷಣವನ್ನು ಗ್ರಹಿಸುವುದು, ವಿಷಯಗಳ ಮನನ ಮಾಡಿಕೊಳ್ಳುವುದು ಸವಾಲಾಗಿದೆ. ಕಲಿಕೆಯ ಸಂವಹನಕ್ರಿಯೆ ಸಮಸ್ಯೆಯಾಗಿದ್ದು, ಗುಣಮಟ್ಟದ ಶಿಕ್ಷಣ ಪಡೆಯುವಲ್ಲಿ ಭಾಷಾಭಿವ್ಯಕ್ತಿ ಸವಾಲಾಗಿ ಪರಿಣಮಿಸಿದೆ.

ಲಾಭರಹಿತ ಕೃಷಿ

ಆದಿವಾಸಿಗಳ ಪ್ರಮುಖ ಉದ್ಯೋಗಗಳಲ್ಲಿ ಕೃಷಿಯು ಪ್ರಧಾನವಾದುದು. ಆದರೆ ಅದಕ್ಕೆ ಅಗತ್ಯವಾದ ಆಧುನಿಕ ವಿಧಾನಗಳ ಅಳವಡಿಕೆ ಇವರಿಗೆ ಸಾಧ್ಯವಾಗದ ಕಾರಣ ಉತ್ತಮ ಇಳುವರಿ ಪಡೆದು ಲಾಭ ಗಳಿಸುವಲ್ಲಿ ವಿಫಲರಾಗಿದ್ದಾರೆ. ಮೂಲ ಉದ್ಯೋಗದಲ್ಲಿಯ ಬದಲಾವಣೆಯ ಜ್ಞಾನ, ಆಧುನಿಕ ಯಂತ್ರೋಪಕರಣಗಳ ಬಳಕೆಯಿಂದ ಲಾಭಗಳಿಕೆ ಸಾಧ್ಯವೆಂಬ ಜಾಗೃತಿ ಆದಿವಾಸಿಗಳಿಗೆ ಇಲ್ಲವಾಗಿರುವುದೇ ಲಾಭರಹಿತವಾಗಿಯೇ ತಮ್ಮ ಕೃಷಿಕಾರ್ಯದಲ್ಲಿ ಮುಂದುವರೆದಿರುವುದು ಅವರ ಆರ್ಥಿಕ ಪರಿಸ್ಥಿತಿಯ ಮೇಲೂ ಗಾಢವಾದ ಪರಿಣಾಮವನ್ನುಂಟು ಮಾಡುತ್ತದೆ. ಅದಕ್ಕಾಗಿ ಆದಿವಾಸಿಗಳು ತಾವು ಅವಲಂಬಿಸಿದ ಕೃಷಿ ಕಾರ್ಯಗಳಿಗೆ ನವಯುಗದ ತಂತ್ರಜ್ಞಾನವನ್ನು ಬಳಸಿಕೊಳ್ಳುವುದಕ್ಕೆ ಬೇಕಾದ ತರಬೇತಿ ಪಡೆಯುವುದು ಅನಿವಾರ್ಯವಾಗಿದೆ.

ಆದಿವಾಸಿಗಳು ಆಧುನಿಕ ಜಗತ್ತಿನ ಜೀವನ ಕ್ರಮದಿಂದ ಅದೆಷ್ಟೋ ದೂರ

ಸರಿಯಲು ಪ್ರಯತ್ನಿಸಿದರೂ ಅದು ಸಾಧ್ಯವಾಗುತ್ತಿಲ್ಲ. ವಿಶ್ವದೆಲ್ಲೆಡೆ ಜಾಗತೀಕರಣದ ಪ್ರಾಭವದಿಂದಾಗಿ ಇತ್ತೀಚಿನ ದಿನಗಳಲ್ಲಿ ಆದಿವಾಸಿಗಳ ಬದುಕಿನ ಕ್ರಮದಲ್ಲೂ ಕ್ಷಿಪ್ರಗತಿಯಲ್ಲಿ ಬದಲಾವಣೆಗಳು ಕಂಡುಬರುತ್ತಿವೆ. ಭಾರತದಲ್ಲಿ ಕೈಗಾರಿಕಾ ಕ್ರಾಂತಿಯು ಆದಿವಾಸಿಗಳ ಬದುಕಿನಲ್ಲಿ ಮಹತ್ತರ ಬದಲಾವಣೆಗೆ ಸಾಕ್ಷಿಯಾಗಿದೆ. ಇಂದು ದಟ್ಟವಾದ ಅರಣ್ಯ ಪ್ರದೇಶ, ಬೆಟ್ಟ-ಗುಡ್ಡಗಳಿಗೂ ವೈಜ್ಞಾನಿಕತೆಯ ಸಂಪರ್ಕ ತಗುಲಿದ್ದು, ವ್ಯವಸಾಯದ ಭೂಮಿಗೆಂದು ಮೀಸಲಿರಿಸಿದ ಪ್ರದೇಶವು ಬೃಹತ್ ಕಾರ್ಖಾನೆಗಳಿಗೆ ಆಹಾರವಾಗಿರುವುದು ಕಂಡುಬರುತ್ತದೆ. ಇದರಿಂದ ಆದಿವಾಸಿಗಳ ಮೂಲ ಸಂಸ್ಕೃತಿಯಲ್ಲಿ ವ್ಯತ್ಯಾಸವಾಗಿದ್ದು, ಅವರು ಹೊಸ ಪುನರುಜ್ಜೀವನದ ನಾಗರೀಕ ಸಂಸ್ಕೃತಿಗೆ ತಮ್ಮನ್ನು ಒಗ್ಗಿಸಿಕೊಂಡು ಬದುಕುವುದು ಅನಿವಾರ್ಯವಾಗಿದೆ. ಆ ನಿಟ್ಟಿನಲ್ಲಿ ಎದುರಾಗುತ್ತಿರುವ ಎಲ್ಲಾ ಸವಾಲುಗಳನ್ನು ಸ್ವೀಕರಿಸಿ ಆದಿವಾಸಿಗಳು ಬದುಕು ಕಟ್ಟಿಕೊಳ್ಳುವುದು ಇಂದು ಅಗತ್ಯ ಮತ್ತು ಅನಿವಾರ್ಯವಾಗಿದೆ.

ಆಕರ ಗ್ರಂಥಗಳು

1. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು; ಎ.ಎಸ್. ಪ್ರಭಾಕರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000
2. ಗಿರಿಜನ ಸಂಸ್ಕೃತಿ; (ಸಂ) ಪ್ರೊ. ಕಾಳೇಗೌಡ ನಾಗವಾರ; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 2000
3. ಕರ್ನಾಟಕ ಬುಡಕಟ್ಟು ಭಾಷೆ; ಅಂಗಡಿ ಎಸ್.ಎಸ್., ಸೃಷ್ಠಿ ಪಬ್ಲಿಕೇಷನ್ಸ್, ಬೆಂಗಳೂರು, 2008
4. ಜನಪದ ಸಾಹಿತ್ಯ ಭಾಷೆ; ಅಂಗಡಿ ಎಸ್.ಎಸ್., ವಿಕಾಸ ಪ್ರಕಾಶನ, ಹೊಸಪೇಟೆ, 2008
5. ಕರ್ನಾಟಕ ಬುಡಕಟ್ಟು ಅಧ್ಯಯನ; ಎ.ಎಸ್. ಪ್ರಭಾಕರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000
6. ಅಂತರ್‌ಜಾಲತಾಣ ವಿಕಿಪೀಡಿಯ............

●

6

ಬುಡಕಟ್ಟು ಜನಾಂಗ ಮತ್ತು ಫಾಸ್ಟ್‌ಫುಡ್

ಡಾ. ಅಶ್ವತ್ತಮ್ಮ ಕೆ.
ಸಹಾಯಕ ಪ್ರಾಧ್ಯಾಪಕರು,
ಅಲ್-ಅಮೀನ್ ಕಾಲೇಜು,
ಬೆಂಗಳೂರು-560027.

- ಬುಡಕಟ್ಟು ಜನರು ತಮ್ಮ ಸಾಮಾಜಿಕ ಸಂಸ್ಕೃತಿಯ ಜೀವನದಲ್ಲಿ ಮಹತ್ತರವಾದ ಬದಲಾವಣೆಗಳಿಗೆ ಒಳಗಾದರು. ತಮ್ಮ ಸಾಮಾನ್ಯ ಜೀವನ ವಿಧಾನವನ್ನು ತೊರೆದು ಸಾಮಾಜಿಕವಾಗಿ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಹೀರಿಕೊಳ್ಳುತ್ತಾರೆ. (ಮಾರ್ಟಿನ್, 2011)
- ಮೀನು, ಹಕ್ಕಿಗಳು, ಬೇರುಗಳು, ಕಾಂಡಗಳು, ಗೆಡ್ಡೆಗಳು, ಕಾಡು ಹಣ್ಣುಗಳು ಮತ್ತು ತಿನ್ನಬಹುದಾದ ಕಳೆಗಳು, ಹೀಗಾಗಿ ಮನುಷ್ಯನು ತನ್ನ ಪೂರ್ವಜರು ತಿನ್ನುತ್ತಿದ್ದದ್ದನ್ನು ತಿನ್ನುತ್ತಾನೆ ಅಥವಾ ತನ್ನ ಪರಿಸರದಲ್ಲಿ ಏನು ಸಿಗುವುದೋ ಅದನ್ನು ತಿನ್ನುತ್ತಾನೆ. (ಹೂಫ್ 2010 Hoff).
- ಆಹಾರವು ಸಾಮಾಜಿಕತೆಯನ್ನು ಸೂಚಿಸುತ್ತದೆ ಮತ್ತು ಸಂಬಂಧಗಳನ್ನು ಬೆಳೆಸುತ್ತದೆ ಹಾಗೂ ಹೆಚ್ಚಿಸುತ್ತದೆ. ಇದು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನ ವಿಷಯಗಳನ್ನು ಸೂಚಿಸುತ್ತದೆ. (ಮಾರ್ವಿನ್ 2000).
- ಸಾವಯವದಿಂದ ಅಜೈವಿಕ ಆಹಾರ ಅಭ್ಯಾಸದ ಪರಿವರ್ತನೆ, ಕೃತಕ Confectionary ಮತ್ತು ಕೊಬ್ಬು ಮತ್ತು ಸಕ್ಕರೆ ಭರಿತ ಆಹಾರ (ಶರ್ಮಾ 2010).
- ಬದಲಾಗುತ್ತಿರುವ ಕಾಲದಲ್ಲಿ ಆಮದು ಮಾಡಲಾದ ಆಹಾರದ ಮೇಲೆ ಹೆಚ್ಚು ಅವಲಂಬಿತರಾಗಿ ಸಾಂಪ್ರದಾಯಿಕ ಆಹಾರದ ಅಭ್ಯಾಸ ಕಡಿಮೆಯಾಗುವುದು ಅಥವಾ ಸಿದ್ಧ ಆಹಾರ ತಿನ್ನುವ ಆಹಾರ (Mead 2010).

2015 ಪ್ರಸ್ತುತ ರಾಜ್ಯ ಸಂವಿಧಾನದ (ಪ.ಪಂ) ಆದೇಶ ತಿದ್ದುಪಡಿ ಕಾಯ್ದೆ, 2003ರ ಪ್ರಕಾರ ಕರ್ನಾಟಕದಲ್ಲಿ 50 ಪಂಗಡಗಳು ಅಸ್ತಿತ್ವದಲ್ಲಿವೆ. ಈ ಪಟ್ಟಿಯಲ್ಲಿನ 14 ಬುಡಕಟ್ಟು ಜನಾಂಗದವರು ಪ್ರತ್ಯೇಕವಾಗಿ ಕರ್ನಾಟಕದಲ್ಲಿ ಕಂಡುಬರುತ್ತಾರೆ. ಅಂದರೆ ರಾಜ್ಯದ ಪ್ರಮುಖ ನಿವಾಸಿಗಳಾಗಿದ್ದಾರೆ. ಆದಿಯನ್ (Adiyan) ಬುಡಕಟ್ಟು ಜನಾಂಗ ಕೃಷಿ ಕಾರ್ಮಿಕರಾಗಿದ್ದು, ಮೈಸೂರು ಮತ್ತು ಕೇರಳದ ಗಡಿ ಜಿಲ್ಲೆಗಳಲ್ಲಿ ವಾಸ. ಗುಜರಾತ್ ಮತ್ತು ಮಹಾರಾಷ್ಟ್ರ, ಬಾರ್ಡಾ (Barda) ದವರು ಕೃಷಿಕರಾಗಿದ್ದು, ಬವಿ ಮಾತ್ರ ಭಾಷೆಯನ್ನಾಡುತ್ತಾರೆ. ಬಿಲ್ಲರು ಭಾರತೀಯ ಮೂಲದ ಆದಿವಾಸಿಗಳು. ಬೆಂಗಳೂರು, ಗುಲ್ಬರ್ಗಾ, ಮೈಸೂರಿನಲ್ಲಿ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು ಹಲವಾರು ಪ್ರದೇಶಗಳಲ್ಲಿ ಕಂಡುಬರುತ್ತಾರೆ. ಚೆಂಚಿನ್/ಚೆಂಚರ್ ಮೂಲದ ಚೆಂಚಲ್ ಭಾಷೆಯನ್ನು ಮಾತನಾಡುತ್ತಾರೆ. ತೆಲುಗು ಭಾಷೆಯ ಶಾಖೆಯಾಗಿದ್ದು, ಹೆಚ್ಚಾಗಿ ಆಂಧ್ರದ ಕಾಡುಗಳಲ್ಲಿ ಕಂಡುಬರುತ್ತಾರೆ. ಅಲ್ಲದೆ ಯಾದಗಿರಿ, ಕೋಲಾರ, ಕರ್ನಾಟಕ ಗಡಿಭಾಗ. ಗೋಂಡ–ಮಧ್ಯಭಾರತದ ದ್ರಾವಿಡ ಜನರು. ಕರ್ನಾಟಕದ ಉತ್ತರ–ಪಶ್ಚಿಮ ಜಿಲ್ಲೆಗಳಲ್ಲಿ ಇವರು ರಾಜ್ಯದಲ್ಲಿ ಕಂಡುಬರುವ ದೊಡ್ಡ ಬುಡಕಟ್ಟು ಗೌಡಲು ಭಾಷೆ ಮಾತನಾಡುತ್ತಾರೆ. ಹಕ್ಕಿ–ಪಿಕ್ಕಿ ಕುಲದವರು ಅಲೆಮಾರಿಗಳಾಗಿದ್ದು, ಬಿಡದಿ ಬಳಿ ವಾಸಿಸುತ್ತಾರೆ. ಇರುಳರು ನೀಲಗಿರಿ ತಪ್ಪಲುಗಳಲ್ಲಿ ವಾಸವಾಗಿದ್ದು, ತಮಿಳು ಮತ್ತು ಕನ್ನಡದಲ್ಲಿ ಮಾತನಾಡುತ್ತಾರೆ. ಬೆಂಗಳೂರು ಗ್ರಾಮಾಂತರ, ರಾಮನಗರದಲ್ಲಿ ವಾಸವಾಗಿದ್ದು, ಕನ್ನಡ ಹಾಗೂ ಇನ್ನಿತರೆ ಭಾಷೆಗಳನ್ನು ಮಾತನಾಡುತ್ತಾರೆ. ಜೇನು ಕುರುಬರು (36,076) ಮೈಸೂರು, ಕೊಡಗು, ಚಾಮರಾಜನಗರದಲ್ಲಿ ವಾಸಿಸುತ್ತಾರೆ. ಅಲ್ಲದೆ ತಮಿಳುನಾಡು, ಆಂಧ್ರ ಗಡಿ ಭಾಗಗಳಲ್ಲಿ ಕಂಡುಬರುತ್ತಾರೆ. ಕಾಡು ಕುರುಬರು ನಾಗರಹೊಳೆ ಹಾಗೂ ಕಾಕನಕೋಟೆ, ಪಶ್ಚಿಮ ಘಟ್ಟಗಳಲ್ಲಿ, ಕಮ್ಮಾರ ಬುಡಕಟ್ಟು ಜನರು ದಕ್ಷಿಣ ಕನ್ನಡ, ಕನ್ನಿಯನ್ ಬುಡಕಟ್ಟಿನವರು ಕೊಳ್ಳೇಗಾಲ, ಕಥೋಡಿ ಬುಡಕಟ್ಟು ಕರ್ನಾಟಕ, ಗುಜರಾತ್‌ನ ಪ್ರಮುಖ ಬುಡಕಟ್ಟು ಎಂದು ಗುರುತಿಸಿಕೊಂಡಿವೆ. ಕಟ್ಟುನಾಯಕನ್ ತಮಿಳುನಾಡು, ಕೇರಳ, ಪಾಂಡಿಚೇರಿ, ಕರ್ನಾಟಕದ ಹಲವು ಭಾಗಗಳಲ್ಲಿ, ಕೋಲಿದಾರ್ (Kolidhar) ಬೀದರ್, ಯಾದಗಿರಿ, ಗುಲ್ಬರ್ಗಾ, ಬಿಜಾಪುರ, ಕೊಂಡಾಕಾಪ್ಪ, ಕರ್ನಾಟಕ–ಆಂಧ್ರ, ಕೊರಗ ಭಾರತ ಸರ್ಕಾರದಿಂದ ಹಿಂದುಳಿದ ಜನಾಂಗವೆಂದು ಕರೆಸಿಕೊಂಡಿವೆ. ಇವರು ಹೆಚ್ಚು ಮಧ್ಯಪಾನ ಪ್ರಿಯರು. ಕೋಯಾ (Koya) ಬುಡಕಟ್ಟು ಆಂಧ್ರ, ಕರ್ನಾಟಕ (ಬೀದರ್) ದಲ್ಲಿ ಹರಡಿಕೊಂಡಿದೆ..

ಕೋಟಾ ಸಣ್ಣ ಗುಂಪು, ನೀಲಗಿರಿ, ತಮಿಳುನಾಡು, ಕರ್ನಾಟಕ ಕುಡಿಯ – ಕರ್ನಾಟಕ, ಕೊಡಗು, ಕುರುಬ – ನೀಲಗಿರಿ ತಮಿಳುನಾಡು ಕಂಡುಬರುತ್ತಾರೆ. ಕುರುಮಾನ್ (Kuruman) ತಮಿಳುನಾಡು, ಕೇರಳ, ಕನ್ನಡ ಭಾಷೆ ಮಾತನಾಡುತ್ತಾರೆ.

Maha Malasar ಅಣ್ಣಾಮಲೈ ಬೆಟ್ಟ – Small ಗುಂಪು, ಮಲೆಕುಡಿ – ದಕ್ಷಿಣ ಕನ್ನಡ, ದ್ರವಿಡಿಯನ್ ಭಾಷೆ – ತುಳು ಮತ್ತು ಕನ್ನಡ. ಮಲಸಾರ್ – ತಮಿಳುನಾಡು, ಕೇರಳ, ಚಿಕ್ಕಮಗಳೂರು, Tamil-Konkani ಮಿಶ್ರ ಭಾಷೆಯಲ್ಲಿ, ಮಲೇರು – ಚಿಕ್ಕಮಗಳೂರು, ಕೊಪ್ಪಳ, ರಾಯಚೂರು, ಗುಲ್ಬರ್ಗಾ, ಮರಾಠ ಬುಡಕಟ್ಟು – ಮರಾಠಿ ಮಾತೃಭಾಷೆಯಾದರೂ ತುಳು, ಕನ್ನಡ ಬೇರೆಯವರ ಜೊತೆ ಮಾತನಾಡುತ್ತಾರೆ. ಮೇದಾ, ಪಾಳೇಗಾರ್, ಬೇಡ, ವಾಲ್ಮೀಕಿ, ರಾಮೋಸಿ ಪರವಾರ – ಪಶ್ಚಿಮ ಘಟ್ಟ, ತಮಿಳುನಾಡು, ಕೇರಳ, ಪರಿಧಿ (Paridhis) ವಲಸೆ ಬಂದವರು ಕೊಡಗು, ಮೈಸೂರು – ಬಿಲ್ ಭಾಷೆ ಮಾತನಾಡುತ್ತಾರೆ. ಪಟೇಲಿಯ (Patelia) ಬೀದರ್‌ನಲ್ಲಿ ರಾತ್‌ವಾಸ್ (derived from rathibistar) ಬೀದರ್, ಬೆಂಗಳೂರು, ಸೋಲಿಗ (ಬಿಳಿಗಿರಿ ರಂಗನ ಬೆಟ್ಟ), ತೋಡ – ಉಡುಪಿ, ತಮಿಳುನಾಡು, ಹರ್ಲಿಸ್ (Herlis) – ಕರ್ನಾಟಕ, ಮಧ್ಯಪ್ರದೇಶ, ಗುಜರಾತ್, Htolia – ಒಂದು ಸಣ್ಣ ಗುಂಪು ಕೊಪ್ಪಳ, ಬೆಂಗಳೂರು, ಬೆಳಗಾಂ, Gambit, Vitolia (Go Gujarat) ಯೆರವ/Ravara ಕೊಡಗು, ಕೇರಳ, ಕರ್ನಾಟಕದಲ್ಲಿ ಕಂಡುಬರುತ್ತಾರೆ. ಸಿದ್ಧಿಯರು – ಭಾರತದ ಎಲ್ಲಾ ಭಾಗಗಳಲ್ಲಿ, ಉತ್ತರ ಕರ್ನಾಟಕ ಭಾಗಗಳಲ್ಲಿ ಕಂಡುಬರುತ್ತಾರೆ. ಬುಡಕಟ್ಟು ಜನಾಂಗ ಕರ್ನಾಟಕದಿಂದ 42,48,978 (6.95) ಒಟ್ಟು ಜನಸಂಖ್ಯೆಯಲ್ಲಿ ದಿಂದು ಗುರುತಿನ 2001 (6.6%), ಬಳ್ಳಾರಿ ಅತಿ ಹೆಚ್ಚು (ಎಸ್.ಟಿ.) (10.6%), 2001ರ ಪ್ರಕಾರ 1000 ಪುರುಷರಿಗೆ 915 ರಇಂದ 960 ಮಹಿಳೆಯರಿರುವುದು ಕಂಡುಬಂದಿದೆ. ಸಾಕ್ಷರತೆ ಪ್ರಮಾಣ 41.72 (2001) – 2011ರಲ್ಲಿ 42.5.

ಬುಡಕಟ್ಟು ಪ್ರದೇಶಗಳಲ್ಲಿ ಸಂವಹನ ಹಾಗೂ ಸಂವಹನವಿಲ್ಲದ ಕಾಯಿಲೆಗಳ ವರದಿಗಳು ಇವೆ. ಆರೋಗ್ಯ ರಕ್ಷಣೆ, ಸೌಲಭ್ಯದ ಲಭ್ಯತೆ, ರಕ್ತಹೀನತೆ, ರಕ್ತದೊತ್ತಡ, ಪೌಷ್ಠಿಕಾಂಶದ ಕೊರತೆ, ಜೀವನ ಶೈಲಿಯ ಅಸ್ವಸ್ಥತೆ, ಮೌಖಿಕ ನೈರ್ಮಲ್ಯ – ಸಿದ್ಧಿಗಳ ಬಗ್ಗೆ ಜೆನೆಟಿಕ್ ಅಧ್ಯಯನಗಳು ಆಫ್ರಿಕನ್, ಭಾರತ, ಯೂರೂಪಿಯನ್ನರಲ್ಲೂ ನಡೆದಿದೆ.

ಅಪೌಷ್ಟಿಕತೆ ಹಕ್ಕಿ–ಪಿಕ್ಕಿಯವರಲ್ಲಿ ಹೆಚ್ಚಾಗಿದೆ. 5 ವರ್ಷದ ಮಕ್ಕಳಲ್ಲಿ 30% ಅಧಿಕವಾಗಿವೆ. ಜೇನುಕುರುಬ 1–5 ವರ್ಷದ 220 ಮಕ್ಕಳು, 14–49 ಉಡುಪಿಯ 55.9%, ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಜೇನು ಕುರುಬರು 77.1% ಮಕ್ಕಳಿಗೆ, ಅತಿ ಶೀಘ್ರವಾಗಿ ಇವೆರಡನ್ನು ಹೋಗಲಾಡಿಸುವ ಅವಶ್ಯಕತೆ ಇದೆ.

ವಾದಗಳು

2011ರಲ್ಲಿ ಕರ್ನಾಟಕ ಮೈಸೂರು ಜಿಲ್ಲೆಯ ಜೇನು ಕುರುಬ, ಯೆರವ ಬುಡಕಟ್ಟು ಆಹಾರದ ಸ್ಥಿತಿಯನ್ನು ನಿರ್ಣಯಿಸಲು ಅಧ್ಯಯನ ನಡೆಸಿದಾಗ

6–10 ವರ್ಷದ ಬುಡಕಟ್ಟು ಮಕ್ಕಳಲ್ಲಿ ಶಕ್ತಿ ಮತ್ತು ಪ್ರೋಟೀನ್ ಸೇವನೆ ಪ್ರಮಾಣದ ಕಡಿಮೆ ಅಥವಾ ಅದಕ್ಕಿಂತಲೂ ಕಡಿಮೆ ಎಂದು ತಿಳಿದುಬಂದಿತು. ಯೆರಾವ ಮಕ್ಕಳಲ್ಲಿ ಬೀಟಾ ಕ್ಯಾರೋಟಿನ್ ಸೇವನೆ ಹೆಚ್ಚು, ಕ್ಯಾಲ್ಸಿಯಮ್ ಜೇನುಕುರುಬರಲ್ಲಿ, 20–60 ವಯಸ್ಸಿನವರಲ್ಲಿ ಅಧಿಕ ರಕ್ತದೊತ್ತಡ ಪುರುಷರಲ್ಲಿ 28.2%, ಮಹಿಳೆಯರಲ್ಲಿ 16.5%. ಇದು ರಾಷ್ಟ್ರೀಯ ನ್ಯೂಟ್ರಿಷನ್ ಮಾನಿಟರಿಂಗ್ ಬ್ಯೂರೋ (NNMB) ಹೋಲಿಸಬಹುದಾಗಿದೆ. ಪಿತ್ತ ಜನಕಾಂಗದ ಹಾನಿ ಕೊರಗಾ ಬುಡಕಟ್ಟಿಗಿಂತ ಇರುಳಿಗರಲ್ಲಿ (ರಾಮನಗರ) ಕರುಳಿನ ಕಾಯಿಲೆ ಕಡಿಮೆ.

- ಸಾಂಪ್ರದಾಯಿಕ ಆಹಾರದಲ್ಲಿ ಪರಿವರ್ತನೆ, ಬಹುಶಃ ಉದ್ಯೋಗದಲ್ಲಾದ ಬದಲಾವಣೆಗೆ ಕಾರಣ. ಉದಾ: ಹವಾಮಾನ ಬದಲಾವಣೆಯಿಂದ ವಲಸೆ ಮತ್ತು ಬೇಟೆಯ ಆಸಕ್ತಿಯು ಕುಸಿದಿದೆ. ಅಲ್ಲದೆ, 50%ಕ್ಕಿಂತ ಹೆಚ್ಚು ಮಂದಿ ಮಾಂಸವನ್ನು ಕನಿಷ್ಠ ಎರಡು ಅಥವಾ 3 ಬಾರಿ ಸೇವಿಸುತ್ತಾರೆ. ಈ ಪ್ರವೃತ್ತಿಯ ಆಹಾರದ ಪರಿವರ್ತನೆಯಲ್ಲಾದ ಜಾಗತೀಕರಣದ ನೇರ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ.
- ಪಾನೀಯಗಳು ಮತ್ತು ತ್ವರಿತ ಆಹಾರವು ಸಾಂಪ್ರದಾಯಿಕ ಆಹಾರ ಕ್ರಮವನ್ನು ಬದಲಿಸಿ, ಜಾಗತಿಕ ಸಾಂಕ್ರಾಮಿಕ ರೋಗಕ್ಕೆ ಕೊಡುಗೆ ನೀಡಿತು. ಕೊಬ್ಬು ಮತ್ತು ಕ್ಯಾಲೋರಿ ಭರಿತ ಆಹಾರದ ಆಧಾರದ ಮೇಲೆ ಹೊಸ ಆಹಾರ ಪದ್ಧತಿಗಳನ್ನು ಅಭಿವೃದ್ಧಿಪಡಿಸಲಾಯಿತು.
- ಜನರ ಆಯ್ಕೆಗಳನ್ನು ಬದಲಿಸಲು ಜನರನ್ನು ಮನವೊಲಿಸುವ ಕ್ರಮದಲ್ಲಿ, ಸಾಂಪ್ರದಾಯಿಕ ಅಭ್ಯಾಸಗಳಿಗೆ ಬದಲಾಗಿ, ಜಾಹೀರಾತುದಾರರು ರಚಿಸಿದ ಮಾರ್ಕೆಟಿಂಗ್ ತಂತ್ರಗಳು, ಪೌಷ್ಠಿಕಾಂಶದ ಮೌಲ್ಯಗಳಿಗಿಂತ ಆಕರ್ಷಣೆ ಹೆಚ್ಚಾಯಿತು. ಈ ಬದಲಾದ ಆಹಾರ ಪ್ರವೃತ್ತಿಗಳು ಅನೇಕ ಆರೋಗ್ಯ ಸಮಸ್ಯೆಗಳು ಹಾಗೂ ರೋಗಗಳಿಗೆ ಕಾರಣವಾಯಿತು.
- ಸಂಸ್ಕರಿತ ಪದಾರ್ಥಗಳಲ್ಲಿ ಕೊಬ್ಬು ಮತ್ತು ಉಪ್ಪು ಹೆಚ್ಚಾಗಿದ್ದು ಆರೋಗ್ಯಕ್ಕೆ ಹಾನಿಕಾರಕವಾಯಿತು.
- ಜಾಗತೀಕರಣವು ಸಾಂಪ್ರದಾಯಿಕ ಆಹಾರವನ್ನು ಬದಲಾಯಿಸಿದ್ದಲ್ಲದೆ ಮನುಷ್ಯನ ವರ್ತನೆಯ ಮೇಲೂ ಪರಿಣಾಮ ಬೀರಿತು.
- ಸಂಸ್ಕರಿತ ಆಹಾರದಿಂದ ಬೊಜ್ಜು, ಹೃದಯ ಸಮಸ್ಯೆ, ಕ್ಯಾನ್ಸರ್ ಮುಂತಾದ ರೋಗಗಳು ಹೆಚ್ಚಾಗಲು ಕಾರಣವಾಗಿದೆ.
- ಸಾಮಾನ್ಯವಾಗಿ ಬುಡಕಟ್ಟು ಜನರು ಹೆಚ್ಚು ಧೂಮಪಾನ ಮಾಡುತ್ತಾರೆ ಮತ್ತು ಬಾರ್ಬೆಕ್ಯೂಡ್ ಮಾಂಸ ಹೆಚ್ಚು ತಿನ್ನುವುದರಿಂದ ಅನ್ನನಾಳದ ಕ್ಯಾನ್ಸರ್‌ಗೆ ಗುರಿಯಾಗುತ್ತಿದ್ದಾರೆ.

- ಆಹಾರ ತಜ್ಞರು ಹೇಳುವಂತೆ ಉಪ್ಪು ಮತ್ತು ಕೊಬ್ಬು ಆಧಾರಿತ ಆಹಾರವನ್ನು ಸೌದೆ ಅಥವಾ ಇದ್ದಲಿನ ಕೊಂಡದಲ್ಲಿ ಸುಟ್ಟು ತಿನ್ನುವುದರಿಂದ, ಇದರಲ್ಲಿ ಒಂದು ರೀತಿಯ ಟಾರ್ ಉಂಟಾಗಿ ಕ್ಯಾನ್ಸರ್‌ಗೆ ಕಾರಣವಾಗುತ್ತದೆ.
- ಈ ಪ್ರಕರಣಗಳು ಚೀನಾ, ಜಪಾನ್ ಹಾಗೂ ಇತರೆ ಈಶಾನ್ಯ ರಾಜ್ಯಗಳಲ್ಲೂ ಸಹ ಪ್ರಚಲಿತವಾಗಿವೆ. (Tar – ಪಾಲಿಸೈಕ್ಲಿಕ್ ಆರೊಮ್ಯಾಟಿಕ್ ಹೈಡ್ರೋಕಾರ್ಬನ್ಸ್ ಹೆಟೆರೋಸಿಕ್ಲಿಕ್ ಅಮ್ಯೂನ್ಸ್).
- ಅಕ್ಕಿ ಬಿಯರ್ ಸಾಂಸ್ಕೃತಿಕ ಆಹಾರ ಉತ್ತಮವಾದುದು.
- NG2COH ಹೆಚ್ಚುವರಿ ಸೇವನೆ ಆಪಾಯಕಾರಿ.

ಮುಕ್ತಾಯ

ಜಾಗತೀಕರಣದ ಆಹಾರದ ಪದ್ಧತಿ ಕಡಿಮೆ ಹಸಿವು, ಆಹಾರದ ಬಿಕ್ಕಟ್ಟು, ಪೌಷ್ಠಿಕತೆಯ ಕೊರತೆ, ಜೀವನವನ್ನೇ ಹೆಚ್ಚು ಆರಾಮದಾಯಕ ಮತ್ತು ಸುಲಭವಾಗಿಸಿವೆ. ಜಾಗತೀಕರಣದಲ್ಲಿ ಆಹಾರ ವ್ಯವಸ್ಥೆಯು ಕ್ರಮೇಣ ಸಾಂಪ್ರದಾಯಿಕ ವ್ಯವಸ್ಥೆಯನ್ನು ಬದಲಿಸುತ್ತಿದೆಯೆಂದರೆ ತಪ್ಪಾಗಲಾರದೇನೋ.

ಪರಾಮರ್ಶನ ಗ್ರಂಥಗಳು

- Margin DH – Now we get lots to eat and they are telling us not to eat it. Understanding changes to Southeast Labrador Inuit relationshipos to food. Circumpolar Health, 2011.
- Mead.E. Gittelsohn. J and Team Impact of the changing food environment on dictary practices of an in vit population 2010.
- Sharma S – Asserting diet and Lifestyle in the Canadian Arctic – 2010.
- Wolf A and Team – A shoirt history of beverages and how our body treats them – 2008.
- Subrama Roy and Team – Tribes in Karnataka, status of health research – ICMR Belgaum, May 2015). PP 673-687, IJMR 141.

7

ಅಲೆಮಾರಿ ರಾಜಗೊಂಡ ಬುಡಕಟ್ಟಿನ ಔಷದ್ಯೋಪಚಾರ

ವಿವೇಕ ವಿಶಾಲ
ಪಿಹೆಚ್.ಡಿ. ಸಂಶೋಧನಾರ್ಥಿ

ಪೀಠಿಕೆ

ಭಾರತದಲ್ಲಿ ಅನೇಕ ಅಲೆಮಾರಿ ಸಮುದಾಯಗಳಿವೆ ಅವುಗಳಲ್ಲಿ ಅಲೆಮಾರಿ ರಾಜಗೊಂಡರು ಒಬ್ಬರು. ದೇಶದ ಬೇರೆ ಬೇರೆ ಪ್ರದೇಶಗಳಲ್ಲಿ ಹಂಚಿಹೋಗಿರುವ ಈ ಬುಡಕಟ್ಟುಗಳು ಕರ್ನಾಟದಲ್ಲಿ ಮೂರು ಸ್ಥಳಗಳಲ್ಲಿ ನೆಲೆನಿಂತಿದ್ದಾರೆ, ಅದು ಬೀದರ, ಬೆಂಗಳೂರು ಹಾಗೂ ಹರಿಹರ ತಮ್ಮ ಉಪಜೀವನಕ್ಕಾಗಿ ಹಲವಾರು ಶತಮಾನಗಳಿಂದ ಅನುಸರಿಸಿಕೊಂಡು ಬಂದಿರುವ ನಾಟಿ ಔಷಧಿ ಪದ್ಧತಿಯನ್ನು ಈಗಲೂ ಮುಂದುವರೆಸಿಕೊಂಡು ಹೊಗುತ್ತಿದ್ದಾರೆ. ಅದೆ ಅವರ ಜೀವನದ ಬೆನ್ನೆಲುಬಾಗಿದೆ. ಆಯುರ್ವೇದದ ಅಪಾರ ಜ್ಞಾನವನ್ನು ಹೊಂದಿರುವ ರಾಜಗೊಂಡರು ತಮ್ಮ ವಿದ್ಯೆಯನ್ನು ಕಳೆದುಕೊಳ್ಳುವ ನಿಟ್ಟಿನಲ್ಲಿದ್ದಾರೆಂಬ ಭಯ ಅವರನ್ನು ಕಾಡುತ್ತಿದೆ. ಆಧುನಿಕ ಕಾಲದ ಚಿಕಿತ್ಸೆ ಹಲವಾರು ರೋಗಗಳಿಗೆ ಚಿಕಿತ್ಸೆ ಮಾಡದಂತಹ ಸಂದರ್ಭದಲ್ಲಿ ಇವರುಗಳು ಕೇವಲ ಮನೆಮದ್ದಿನಿಂದ ಅವುಗಳನ್ನು ವಾಸಿಮಾಡಬಲ್ಲರು. ನಾಟಿ ಔಷಧಿಯ ಜೊತೆಗೆ ಇನ್ನಿತರ ಬೇರೆ ಚಟುವಟಿಕೆ ಮಾಡುವರು ಆದರೆ, ಪಾರಂಪರಿಕವಾಗಿ ಬೆಳೆದು ಬಂದಿರುವ ಈ ಕಾಯಕವನ್ನು ಜೀವಂತವಾಗಿರಿಸಿಕೊಂಡಿದ್ದಾರೆ.

ಮುಖ್ಯಾಂಶಗಳು

1. ಗೊಂಡ ಪದದ ನಿಷ್ಪತ್ತಿ
2. ಮೂಲ ಮತ್ತು ಪ್ರಸಾರ
3. ಆಯುರ್ವೇದದ ಉಗಮ ಹಾಗು ಪ್ರಕಾರಗಳು
4. ರಾಜಗೊಂಡರಿಗಿರುವ ಔಷಧಿಯ ಜ್ಞಾನ ಹಾಗು ಅದರ ಹಿನ್ನಲೆ

5. ರಾಜಗೊಂಡರ ಕುಲ-ಗೋತ್ರಗಳಲ್ಲಿ ಔಷಧಿ ಸಸ್ಯಗಳ ಪಾತ್ರ
6. ಆಧುನಿಕ ಕಾಲದಲ್ಲಿ ಆಯುರ್ವೇದ ಔಷಧಿಯ ಮಹತ್ವ

ಗೊಂಡ ಪದದ ನಿಷ್ಪತ್ತಿ

ಗೊಂಡ ಪದದ ನಿಷ್ಪತ್ತಿಯ ಬಗ್ಗೆ ಅನೇಕ ವಿದ್ವಾಂಸರಲ್ಲಿ ದ್ವಂದ್ವಗಳಿವೆ ಗೊಂಡ ಎಂಬ ಪದವು ತೆಲಗು ಭಾಷೆಯ 'ಕೊಂಡ' ಎಂಬ ಶಬ್ದದಿಂದ ಆಗಿರಬಹುದು ಎಂದು ಭಾಷಾಶಾಸ್ತ್ರಜ್ಞರ ಅಭಿಪ್ರಾಯ 'ಕೊಂಡ' ಅಂದರೆ ತೆಲಗು ಭಾಷೆಯಲ್ಲಿ ಬೆಟ್ಟ ಎಂದಾಗುತ್ತದೆ ಕಾಲಕ್ರಮೇಣ ಮುಂದೆ 'ಕ' ಕಾರವು 'ಗ' ಕಾರವಾಗಿ ಪ್ರತಿಧ್ವನಿಸಿತ್ತು ಎಂಬುದು ಹಿಸ್ಲೊಪರ್ ವಾದವಾಗಿದೆ(ಕಸಲ್ ಆರ್ ವಿ 1975: 43)

ಜನರಲ್ ಕನ್ನಿಂಗ ಹ್ಯಾಮರು 'ಗೊಂಡ' ಎಂಬ ಪದವು ಗೌಡ ಎಂಬ ಶಬ್ದದಿಂದ ಉತ್ಪನ್ನವಾಗಿದ್ದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಕ್ರಿ.ಶ 905ರಲ್ಲಿ ಹರ್ಷವರ್ಧನನ ಅಣ್ಣನಾದ ಕನೌಜದ ದೊರೆ ಮಾಳ್ವ ದೇಶದ ಮೇಲೆ ಆಕ್ರಮಣ ಮಾಡಿದಾಗ ಅವನಿಗೆ ಸಹಾಯ ಮಾಡಿದ ಗೌಡ ದೇಶದ ರಾಜ ರಾಜಗೊಂಡನೆಂದು ಆತನ ಅಭಿಪ್ರಾಯ. (ಡಾ ಕೆ ಎಂ ಮೇತ್ರಿ ಮತ್ತು ಸುದರ್ಶನ ಸೆಡ್ಮಾಕೆ ಅಲೆಮಾರಿ ರಾಜಗೊಂಡ) ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

ಮೂಲ ಮತ್ತು ಪ್ರಸಾರ

ಇವರ ಮೂಲ ಮತ್ತು ಪ್ರಸಾರ ಬಹಳ ಪ್ರಾಚೀನವಾಗಿದೆ. ವಿಶ್ವದಲ್ಲಿ ಏಳು ಖಂಡಗಳಿವೆ ಆ ಏಳು ಖಂಡಗಳಿಗೆ ಗೊಂಡವಾನಾ ಭೂ ಪ್ರದೇಶ ಎಂದು ಕರೆಯುತ್ತಿದ್ದರು, ಗೊಂಡವಾನಾ ಅಂತಕ್ಕಂತಹ ಜಿಲ್ಲೆಯು ಕಚ್ಛಾರಗಡ ಸಮೀಪದಲ್ಲಿದೆ. ಇದು ಮಹಾರಾಷ್ಟ್ರ ಹಾಗೂ ಮಧ್ಯ ಪ್ರದೇಶದ ಗಡಿಭಾಗದಲ್ಲಿದೆ ಆ ಪ್ರದೇಶದ ಮಣ್ಣಿನ ಗುಣ-ರೂಪ ಏಳು ಖಂಡಗಳಿಗೆ ಸಮವಿದೆ ಇದು ವೈಜ್ಞಾನಿಕವಾಗಿ ಸಾಬೀತಾಗಿದೆ. ಗೊಂಡರು ಮೊದಲು ವಿಂಧ್ಯಾಚಲ ಮತ್ತು ನರ್ಮದೆಯಿಂದ ಬಂದವರು. ಅದಕ್ಕಿಂತ ಹಿಂದೆ ಅವರು ಮೆಹಂಜೊದಾರೊವಿನಿಂದ ಬಂದವರು. ಯಾವಾಗ ಹರಪ್ಪ ಮೆಹಂಜೊದಾರೊವಿನ ಮೇಲೆ ಆರ್ಯಯರ ಆಕ್ರಮಣವಾಯಿತು ಆಗ ಅವರು ದಕ್ಷಿಣದತ್ತ ಬಂದರು. ಇವರ ಮೂಲ ಕಸುಬು ಆಯುರ್ವೇದದ ಔಷಧಿಯನ್ನು ಮಾರಾಟಮಾಡುವುದಾಗಿದೆ. ಜೊತೆಗೆ ಮಸಾಲೆ ಪದಾರ್ಥಗಳನ್ನು ಮಾರುವುದಾಗಲಿ, ಮೋಟರ ವಾಹನಗಳ ಅಲಂಕಾರಿಕ ವಸ್ತುಗಳನ್ನು ಮಾರುವುದಾಗಿದೆ. ಇತ್ತೀಚೆಗೆ ಸಣ್ಣ ಪುಟ್ಟ ಕೆಲಸಗಳಲ್ಲಿ ನಿರತರಾಗಿದ್ದಾರೆ. ರಾಜ ಮಾಹರಾಜರುಗಳ ಕಾಲದಲ್ಲಿ ತಮ್ಮ ವೈದ್ಯಕೀಯ ಸೇವೆಯನ್ನು

ನೀಡುತ್ತಿದ್ದ ರಾಜಗೊಂಡರು ಕಾಲಕ್ರಮೇಣ ಮುಸ್ಲಿಂರ ಆಕ್ರಮಣಕ್ಕೆ ಒಳಗಾಗಿ ತಮ್ಮ ಆಯುರ್ವೇದದ ಸೇವೆಯನ್ನು ಸಾಮಾನ್ಯ ಜನರಿಗೆ ನೀಡುವುದನ್ನು ಪ್ರಾರಂಭಿಸಿದರು. ರಾಜಗೊಂಡರು ಇಡೀ ಭಾರತದಲ್ಲಿ 55ಕ್ಕೂ ಹೆಚ್ಚಿನ ಪ್ರದೇಶಗಳಲ್ಲಿ ಹರಡಿಹಂಚಿ ಹೋಗಿದ್ದಾರೆ. ಕರ್ನಾಟಕದಲ್ಲಿ ಮೂರು ಸ್ಥಳಗಳಲ್ಲಿ ನೆಲೆನಿಂತಿದ್ದಾರೆ. ಬೀದರಿನ ಹಳ್ಳದಕೇರಿ ಗ್ರಾಮದ ರಾಜಗೊಂಡ ಕಾಲೋನಿಯಲ್ಲಿ 120 ಕುಟುಂಬಗಳಿದ್ದು. ಹರಿಹರದ ಬೇಳ್ಳುಡಿ ಗ್ರಾಮದಲ್ಲಿ 112 ಕುಟುಂಬಗಳು ಹಾಗು 70ಕ್ಕೂ ಹೆಚ್ಚು ಬೆಂಗಳೂರಿನ ಮಾರುತಿ ಸೇವಾನಗರ, ಜಾನಕಿರಾಮ ಲೇಔಟಿನಲ್ಲಿ ನೆಲೆ ನಿಂತಿದ್ದಾರೆ. ಇವರ ಮುಖ್ಯ ಕಸುಬು ಗಿಡಮೂಲಿಕೆಗಳನ್ನು ಮಾರುವುದಾಗಿದೆ. ಹಿಂದಿನ ಕಾಲದಲ್ಲಿ ಇವರು ಅರಣ್ಯದಿಂದಾಗಲಿ, ನದಿ ಪ್ರದೇಶಗಳಿಂದಾಗಲಿ, ಬೆಟ್ಟಗುಡ್ಡಗಳಿಂದಾಗಲಿ ಆಯುರ್ವೇದದ ಔಷಧಿಯನ್ನು ಸಂಗ್ರಹಿಸುತ್ತಿದ್ದರು. ಆದರೆ ಅರಣ್ಯ ಹಕ್ಕು ಕಾಯ್ದೆ (1927) ಜಾರಿಗೆ ಬಂದಿರುವುದರಿಂದ ಇವರಿಗೆ ಅರಣ್ಯಕ್ಕೆ ಪ್ರವೇಶ ಇಲ್ಲದಿರುವ ಕಾರಣ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಸಮಯ ಸಂದರ್ಭಾನುಸಾರ ಹತ್ತಿರದ ಆಯುರ್ವೇದದ ಅಂಗಡಿಗಳಿಂದ ಮದ್ದನು ಖರೀದಿಸಿಕೊಳ್ಳುತ್ತಾರೆ.

ಅಲೆಮಾರಿ ರಾಜಗೊಂಡರಿಗಿರುವ ವೈದ್ಯಕೀಯ ಜ್ಞಾನ

ಸಾಮಾನ್ಯ ರೋಗಗಳು, ದೀರ್ಘಕಾಲಿಕ ರೋಗಗಳು, ಮಕ್ಕಳ ರೋಗಗಳು, ಸ್ತ್ರೀ ರೋಗಗಳು, ಗುಪ್ತ ರೋಗಗಳು, ಗಿಡ ಮೂಲಿಕೆಗಳ ಪರಿಚಯ, ಗಿಡಮೂಲಿಕೆಗಳ ವರ್ಗೀಕರಣ, ಆಯುರ್ವೇದ ಆಹಾರ ಪದ್ಧತಿ, ಋತುಗಳನುಸಾರ ರೋಗಗಳು, ಮಾಟ ಮಂತ್ರ, ಭಸ್ಮ ಚಿಕಿತ್ಸೆ, ಎಣ್ಣೆ ತೆಗೆಯುವ ವಿಧಾನ, ಪಶು ಪ್ರಾಣಿಗಳ ಚಿಕಿತ್ಸೆ, ಪಂಚಧಾತುಗಳಿಂದ ಚಿಕಿತ್ಸೆ, ಪಂಚ ಮಹಾಭೂತಗಳಿಂದ ಚಿಕಿತ್ಸೆ, ದಿವ್ಯ ಔಷಧಿ, ನಾಡಿ ಪರೀಕ್ಷೆ, ರಾಸಾಯನಿಕ ಔಷಧಿಗಳು, ಶಾರ ವಿಧಾನ, ಮಾಲಿಶ ಇನ್ನು ಹಲವಾರು ಬಗೆಯ ಔಷಧಿ ಜ್ಞಾನವನ್ನು ಬಲ್ಲವರಾಗಿದ್ದಾರೆ. ಹೆಚ್ಚು ಪ್ರತಿಶತ ಔಷಧಿಯ ಗಿಡಮೂಲಿಕಗಳ ಮೇಲೆ ಅವಲಂಭಿತರಾಗಿರುವ ಈ ಜನರು ತಮ್ಮ ಹೊಟ್ಟೆ ಪಾಡಿಗಾಗಿ ದೇಶದ ಬೇರೆ ಬೇರೆ ಪ್ರದೇಶಗಳಲ್ಲಿ ಔಷಧಿಯ ಮಾರಾಟಕ್ಕೆ ಹೋಗುವವರಾಗಿದ್ದಾರೆ. ಮಹಿಳೆಯರು ಮತ್ತು ಮುದುಕರು ಮನೆಯಲ್ಲಿಯೆ ಔಷಧಿಯನ್ನು ತಯಾರಿಸಿ ರಸ್ತೆಯ ಬದಿಗಳಲ್ಲಿ ಮಾರುತ್ತಾರೆ. ಯೌವನಸ್ಥರು, ಪುರುಷರು ದೊಡ್ಡ ದೊಡ್ಡ ನಗರಗಳ ಕಛೇರಿ (ಆಫೀಸ್)ಗಳಲ್ಲಿ ತಮ್ಮ ಔಷಧಿಯನ್ನು ಮಾರುವವರಾಗಿದ್ದಾರೆ. ಇವರಲ್ಲಿಯೇ ಹಲವರಿಗೆ ಆಯುರ್ವೇದ ಔಷಧಿಯ ಅಪಾರ ಜ್ಞಾನವಿದೆ. ಇವರು ಕ್ಯಾನ್ಸರ್, ಸಕ್ಕರೆ ಕಾಯಿಲೆ, ಟಿ.ಬಿ., ಏಡ್ಸ್, ಇನ್ನಿತರ ಹಲವಾರು ಅಸಾಧ್ಯ ರೋಗಗಳಿಗೆ ಉಪಚಾರ ಮಾಡಬಲ್ಲರು. ರಾಜಗೊಂಡ ಕಾಲೋನಿಯ ವೈದ್ಯರಾಗಿರತಕ್ಕಂತಹ ಶ್ರೀ ಅಶೋಕದಾಸ ಉಯ್ಕೆ, ಇವರನ್ನು ಕರ್ನಾಟಕ ಸರ್ಕಾರವು ವೈದ್ಯಕೀಯ ಸೇವೆಗಾಗಿ ದಿನಾಂಕ;

27-11-1998ರಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಪ್ರಶಸ್ತಿ ನೀಡಿತ್ತು, ಮತ್ತೋರ್ವ ವೈದ್ಯರಾಗಿರತಕ್ಕಂತಹ ಶ್ರೀ ವಿಶಾಲ ಬನ್ನು ರಾಯಶೀಳಂ ಅವರಿಗೆ 4-11-2005ರಲ್ಲಿ ದೇಶಪಾಂಡೆ ಫೌಂಡೇಷನ 'ಆಯುರ್ವೇದ ರತ್ನ' ಪ್ರಶಸ್ತಿ ನೀಡಿ ಗೌರವಿಸಿತ್ತು. ರತನ ಕಾಬೂಲ ಉಯ್ಕೆ ಅವರು ಜೈ ಸೇವಾ ಆಯುರ್ವೇದಿಕ ಆಶ್ರಮ(ರಿ)ದ ಮೂಲಕ ಹಲವಾರು ರೋಗಗಳಿಗೆ ಚಿಕಿತ್ಸೆಯನ್ನು ಮಾಡುತ್ತಿದ್ದಾರೆ. ಹರಿಹರದ ಫೈನಿಲಾಲ ಸಿಂಗ ಜಾಮಕರ ಅವರಿಗೆ ಅವರ ವೈದ್ಯಕೀಯ ಜೀವಮಾನ ಸಾಧನೆಗಾಗಿ ರಾಜ್ಯ ಸರ್ಕಾರವು 2017ರಲ್ಲಿ ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಬೀದರಿನ ನಾಟಿವೈದ್ಯೆ ರಜನಿ ಬಾಯಿ ಸಡ್ಮಾಕೆ, ಬಂದಿ ಬಾಯಿ ಉಯ್ಕೆ, ಕಿಶೋರಿ ಬಾಯಿ ಉಯ್ಕೆ. ಬೆಂಗಳೂರಿನ ಹಸ್ಸೊ ಬಾಯಿ ಇನ್ನು ಹಲವರು ನಾಟಿ ವೈದ್ಯಕ್ಕೆ ಹೆಸರು ವಾಸಿಯಾಗಿದ್ದಾರೆ.

ಅಲೆಮಾರಿ ರಾಜಗೊಂಡರ ಚಿಕಿತ್ಸೆಯ ಹಿನ್ನಲೆ ಹಾಗು ಅವರ ಕುಲ-ಗೋತ್ರಗಳಲ್ಲಿ ಔಷಧಿ ಸಸ್ಯಗಳ ಪಾತ್ರ

ಗೊಂಡಿ ಧರ್ಮ ಪ್ರಚಾರಕ ಅಥವಾ ಗೊಂಡರ ಮೊದಲನೇಯ ಗುರು ಕುಪಾರಲಿಂಗೊ ಸಂಪೂರ್ಣ ಕೊಯವಂಶಿಯರನ್ನು ತನ್ನ ಸಾಧನೆ ಶಕ್ತಿಯನುಸಾರ ಅವರನ್ನು ಗುಣ ಸಂಸ್ಕಾರಗಳ ಆಧಾರದ ಮೇಲೆ ಒಟ್ಟು 750 ಗೋತ್ರಗಳಲ್ಲಿ ವಿಭಜಿಸಿ ಭೂಮಿಯ ಮೇಲೆ ಸಿಗುವಂತಹ ಪ್ರಾಣಿ ಪಕ್ಷಿ ಹಾಗು ವನಸ್ಪತಿಗಳ ಸೂಚಿಯನ್ನು ತಯಾರಿಸಿ ಕುಲ-ಗೋತ್ರಗಳ ಕುಲ ಚಿನ್ಹೆಗಳನ್ನು ಗೊಂಡರನ್ನು ಹಂಚಿದರು. ಹೀಗೆ ಕೊಯವಂಶಿಯ ಗೊಂಡ ಸಮುದಾಯದವರಿಗೆ 2240 ಜೀವರಾಶಿಗಳ ಸೇವನೆಯ ಜೊತೆಗೆ, ಸಂರಕ್ಷಣೆಯ ಉಪದೇಶವನ್ನು ನೀಡಿದರು.

ರಾಜಗೊಂಡರಲ್ಲಿಯೇ ಅನೇಕ ಪಂಗಡ ಮತ್ತು ಉಪ ಪಂಗಡಗಳಿವೆ. ಇವುಗಳನ್ನವರು 'ಜಾತ್' 'ಖೊಮ್' ಅಥವಾ 'ಪೇನ್' ಎಂದು ಕರೆಯುತ್ತಾರೆ. ಖೊಮ ಎಂದರೆ ಮೂಲ ವಂಶ ಎಂದರ್ಥ. ಇದರಿಂದಲೇ ಅವರು ತಮ್ಮ ಜಾತಿ ಸಮೂಹ ಮತ್ತು ಕುಲಗಳನ್ನು ಗುರ್ತಿಸುತ್ತಾರೆ. ಇವರಲ್ಲಿ ನಾಲುಂಗಪೇನ (ನಾಲ್ಕು ದೇವರು) ಸಯುಂಗಪೇನ ಐದು ದೇವರುಗಳು ಸಾರುಂಗಪೇನ (ಆರುದೇವರು) ಇದರಿಂದಲೇ ತಮ್ಮ ತಮ್ಮ ಮೂಲವಂಶವನ್ನು ಗುರ್ತಿಸುತ್ತಾರೆ. ಪ್ರಕೃತಿಯ ಪಶು, ಪಕ್ಷಿ ಪ್ರಾಣಿಗಳನ್ನೆ ಅವರು ತಮ್ಮ ದೇವರುಗಳಾಗಿ ಮತ್ತು ಕುಲಚಿನ್ಹೆಗಳಾಗಿ ಬಳಸುವರು.

ಬೇರೆ-ಬೇರೆ ಪಂಗಡಗಳಿಗೆ ಅವರದೆ ಆದ ಕುಲಚಿನ್ಹೆಗಳಿವೆ. ಉದಾ: ಸಡ್ಮಾಕಿ ಬೆಡಗಿನವರು ಆಮೆ, ಮೊಸಳೆ, ಕರಿ ಗುಬ್ಬಿ, ಆದರವೆಲಿ (ಮರದ ಮೇಲೆ ಹೊತ್ತುವ ಒಂದು ಜಾತಿಯ ಬೇಲಿ) ಉಡು. ಇವರು ಇವುಗಳನ್ನು ಆರಾಧನೆ ಮಾಡುವ ಜೊತೆಗೆ ರಕ್ಷಣೆಯ ಹೊಣೆ ಹೊತ್ತಿದ್ದಾರೆ ಹಾಗು ಅವುಗಳನ್ನು ಯಾವುದೇ

ಕಾರಣಕ್ಕೂ ಭಕ್ಷಿಸುವಂತಿಲ್ಲ. ಹೀಗೆ ಒಂದೊಂದು ಪರಿವಾರಕ್ಕೆ ಒಂದೊಂದು ಪ್ರಾಣಿ, ಪಕ್ಷಿ ಹಾಗು ವನಸ್ಪತಿಯನ್ನು ಹಂಚಿ ಕೊಂಡಿರುವರು, ಒಂದು ಪಂಗಡದವರು ಮತ್ತೊಂದು ಪಂಗಡದ ಪ್ರಾಣಿಪಕ್ಷಿಗಳನ್ನು ಭಕ್ಷಿಸಬಹುದು. ಆದರೆ ಯಾವುದೇ ಕಾರಣಕ್ಕೆ ಸಡ್ಮಾಕೆ ಪಂಗಡದವರು ಇವುಗಳನ್ನು ಕೇವಲ ರಕ್ಷಣೆ ಮಾಡಬೇಕು. ಹೀಗೆ 750 ಕುಲ-ಗೋತ್ರಗಳ ಜನರು ಪರಸ್ಪರ ಅವಲಂಬಿತರಾಗಿದ್ದಾರೆ. ಪ್ರಕೃತಿಯ ಸಮತೋಲನವನ್ನು ಕಾಪಾಡುವುದಕ್ಕಾಗಿ ಕೂಪಾರ ಲಿಂಗೊ ಈ ಸೂತ್ರವನ್ನು ಉಪದೇಶ ಮಾಡಿದರು.

ಶಿತಲಾ ಮಾತ್ರ (ದೇವಿಯ) ಆರಾಧನೆ

ಶಿತಲಾದೇವಿಯನ್ನು ಗೊಂಡರು ಚೈತ್ರ ಮಾಸದ ಪೂರ್ಣಿಮೆಯ ಪಂಚಮಿಯಂದು ಆರಾಧನೆ ಮಾಡುವರು. ಮಾತ್ರ ಅಥವಾ ದಾತಿ ಅಂದರೆ ರೋಗಮುಕ್ತ ಮಾಡುವವಳು ಎಂದರ್ಥ. ಶಿತಲಾದೇವಿಯ ಮಂದಿರ/ದೇವಾಲಯ ಊರಿನ ಹೋರಗೆ ಕಹಿ ಬೇವಿನ ಗಿಡದ ಕೆಳಗೆ ಪೂರ್ವದಿಕ್ಕಿಗಿರುವುದು. ಅವಳು ಭಿಮಾಲಪೇನಿನ ಸಣ್ಣ ತಂಗಿಯಾಗಿರುತ್ತಾಳೆ. ಅವಳು ಆಯುರ್ವೇದ ಔಷಧಿಯಲ್ಲಿ ಪರಿಣಿತಳಾಗಿದ್ದು, ಪ್ರತಿಯೊಂದು ಹಳ್ಳಿಗೆ ಹೋಗಿ ರೋಗಿಗಳ ಸೇವೆಯನ್ನು ಮಾಡುತ್ತ ಅವರಿಗೆ ಔಷಧಿಯ ಜ್ಞಾನವನ್ನು ನೀಡುತ್ತಿದ್ದಳು. ಪಂಚಮಿಯ ದಿನದಂದು ಎಲ್ಲ ಗ್ರಾಮಸ್ಥರು ಸಾಮೂಹಿಕ ಘಟ ಸ್ಥಾಪನೆಯನ್ನು ಮಾಡಿ ದಿನವಿಡಿಯೆಲ್ಲ ಅದನ್ನು ಉರಿಸುತ್ತ, ಸಾಯಂಕಾಲ ವಿಸರ್ಜನೆ ಮಾಡುವರು. ಹೀಗೆ ಗ್ರಾಮಸ್ಥರು ರೋಗ ನಿರ್ಮೂಲನೆಗಾಗಿ ಶಿತಲಾದೇವಿಯ ಆರಾಧನೆ ಮಾಡುವರು.

ಅಲೆಮಾರಿ ರಾಜಗೊಂಡರ ಚಿಕಿತ್ಸೆಯ ಪದ್ಧತಿ

ವಿಶ್ವದಲ್ಲಿ ಅನೇಕ ಚಿಕಿತ್ಸೆ ಪದ್ಧತಿಗಳಿವೆ ಅಲೋಪಥಿ, ಹೋಮಿಯೋಪಥಿ. ಆದರೆ, ಬುಡಕಟ್ಟುಗಳ ಚಿಕಿತ್ಸೆಯ ಪದ್ಧತಿಯು ತನ್ನದೆ ಆದ ವಿಶೇಷತೆಯನ್ನು ಹೊಂದಿದೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೊಗುವ ಜನರ ಬಳಿ ಯಾವುದೇ ಸೂಕ್ತ ಪರಿಕರಗಳು, ಚಿಕಿತ್ಸೆಯ ಸೌಲಭ್ಯಗಳು ಇರಲಿಲ್ಲ. ಆದರು ಪ್ರತಿಯೊಂದು ರೋಗಕ್ಕು ಅದರದೆ ಕ್ರಮಕ್ಕನುಸಾರ ಅದರ ನಿದಾನವನ್ನು ಮಾಡುತ್ತಿದ್ದರು. ಪಾರಂಪರಿಕವಾಗಿ ಬೆಳೆದು ಬಂದಿರುವ ಪದ್ಧತಿಗಳ ಮೂಲಕ ಈಗಲೂ ಅನೇಕ ರೋಗಗಳನ್ನು ಮನೆಗಳಲ್ಲಿಯೆ ಚಿಕಿತ್ಸೆ ಮಾಡುವರು. ಅದರ ಕೆಲವೊಂದು ಉದಾಹರಣೆಗಳು ಈ ರೀತಿಯಾಗಿವೆ.

ಮಕ್ಕಳ ದೃಷ್ಟಿದೊಷವನ್ನು ತೆಗೆಯುವುದು.

1. ಹತ್ತಿಬಟ್ಟೆ 1 ಮಿಟರ್
2. ಬಾರೆ ಗಿಡದ ಕೊಲು

3. ಒಂದು ತಟ್ಟೆಯಲ್ಲಿ ನೀರು

4. ಎಣ್ಣೆ

ಯಾವುದೇ ಮಗುವಿನ ದೃಷ್ಟಿ ದೋಷವನ್ನು ತೆಗೆಯುವ ಮುಂಚೆ ಪ್ರಶಾಂತವಾದ ಸ್ಥಳವನ್ನು ಆಯ್ಕೆ ಮಾಡಬೇಕು ಅಥವಾ ಓಣಿಯ ಜನರು ಮಲಗುವ ಪ್ರತೀಕ್ಷೆಯನ್ನ ಮಾಡಬೇಕು. ಈ ಕಾರ್ಯವು ರಾತ್ರಿವೇಳೆ ಮಾಡುವಂತಹದ್ದು. ದೃಷ್ಟಿ ತೆಗೆಯುವ ಮಗುವಿನ ತಲೆಯನ್ನು ಪೂರ್ವದ ಕಡೆಗಿರುವಂತೆ ತಾಯಿಯನ್ನು ಸೂಚಿಸಬೇಕು ಮೊದಲು ಬಟ್ಟೆಯನ್ನು ಎಣ್ಣೆಯಿಂದ ನೆನೆಸಬೇಕು. ನೆನೆದಿರುವ ಬಟ್ಟೆಯನ್ನು ಬಾರೆ ಗಿಡದ ಕೊಲಿನಿಂದ ಸುತ್ತಬೇಕು. ಸುತ್ತಿರುವ ಬಟ್ಟೆಯ ಕೊಲು ಮಗುವಿನ ತೆಲೆಯಿಂದ ಹಿಡಿದು ಕಾಲುಗಳ ವರೆಗೆ 7ಸಲ ಇಳಿಸಬೇಕು ಅನುಮಾನವಿರುವ ವ್ಯಕ್ತಿಗಳ ಹೆಸರನ್ನು ಮನಸ್ಸಿನಲ್ಲಿ ಉಚ್ಚಾರಣೆ ಮಾಡುತ್ತ ಇಳಿಸಬೇಕು, ಇಳಿಸಿದ ಬಟ್ಟೆಯನ್ನು ಬೆಂಕಿಹಚ್ಚಿ ತಟ್ಟೆಯಲ್ಲಿರುವ ನೀರಿನ ಮೇಲೆ ಹಿಡಿಯಬೇಕು. ಹಿಡಿದ ಬಟ್ಟೆಯಿಂದ ಬೀಳುವ ಬೆಂಕಿಯ ಹನಿಗಳು ನೀರಿನ ಮೇಲೆ ಬಿದ್ದು ನೀರು ಕೆಂಪಾದರೆ ಮಗುವಿಗೆ ದೃಷ್ಟಿದೋಷವಿದೆ ಎಂದು ಅರ್ಥ, ನೀರು ಕೆಂಪಾಗಿ ಪರಿವರ್ತನೆ ಆಗದೆ ಇದ್ದ ಪಕ್ಷದಲ್ಲಿ ಮಗುವಿಗೆ ದೃಷಿದೋಷ ಇಲ್ಲವೆಂದು ಸೂಚಿಸುತ್ತದೆ.

ಆಯುರ್ವೇದದ ಉಗಮ

ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಚಿಕಿತ್ಸಾ ಪದ್ಧತಿಯ ಇತಿಹಾಸವನ್ನು ಅರಿಯುವುದು ಸುಲಭದ ಕೆಲಸವಲ್ಲ ಎಲ್ಲ ಚಿಕಿತ್ಸೆಗಳಿಗಿಂತಲೂ ಪುರಾತನವಾದ ಆಯುರ್ವೇದವು ಹೇಗೆ ಅನೇಕ ಋಷಿ ಮುನಿಗಳ ಜೊತೆಗೆ ಬೆಳೆದು ಬಂದಿದೆ ಎಂಬುದರ ಸಂಕ್ಷಿಪ್ತವಾದ ಮಾಹಿತಿ ಇದರಲ್ಲಿದೆ. ಬ್ರಹ್ಮ ದೇವನು ವೇದಗಳನ್ನು ಪರಿಶೀಲಿಸಿ ಆಯುರ್ವೇದವನ್ನು ರಚನೆ ಮಾಡಿದನೆಂದು ಸುಶೃತ ಸಂಹಿತೆಯಲ್ಲಿದೆ.

ಬ್ರಹ್ಮದೇವನು ಸೃಷ್ಟಿಯನ್ನು ರಚನೆ ಮಾಡುವುದಕ್ಕಿಂತ ಮುಂಚೆ ಅಥರ್ವಣವೇದದ ಅಂಗಭೂತವಾದ ಆಯುರ್ವೇದವನ್ನು ಒಂದು ಲಕ್ಷ ಶ್ಲೋಕಗಳಿಂದ ಒಂದು ಸಾವಿರ ಅಧ್ಯಾಯಗಳಿಂದ ಕೂಡಿರುವ ವೇದವನ್ನು 'ಬ್ರಹ್ಮ ಸಂಹಿತೆ' ಎಂಬ ಹೆಸರಿನಲ್ಲಿ ರಚಿಸಿದನು. ಅನಂತರದ ಕಾಲಕ್ರಮದಿಂದ ಮನುಷ್ಯರು ಅಲ್ಪ ಆಯುಃಷಿಗಳು, ಅಲ್ಪ ಮೇಧಾವಿಗಳು ಎಂದು ದಿವ್ಯ ದೃಷ್ಟಿಯಿಂದ ಅರಿತು ಆಯುರ್ವೇದವನ್ನೆ ಎಂಟು ಭಾಗಗಳಲ್ಲಿ ವಿಭಾಗಿಸಿದನು. ಅನಂತರ ಬ್ರಹ್ಮನು ದಕ್ಷಪ್ರಜಾಪತಿಗೆ ಉಪದೇಶ ಮಾಡಿದನು, ದಕ್ಷ ಪ್ರಜಾಪತಿಯು ಅಶ್ವಿನಿ ದೇವತೆಗಳಿಗೆ, ಅಶ್ವಿನಿ ದೇವತೆಗಳು ಇಂದ್ರ ದೇವನಿಗೆ ಉಪದೇಶ ಮಾಡಿದರು. ತ್ರೇತಾಯುಗದಲ್ಲಿ ದೇಹಾಲಸ್ಯದಿಂದ ಉಂಟಾಗುವ ಕೆಲವು ರೋಗಗಳ

ನಿವಾರಣೆಗಾಗಿ ಆಗ ಅಂಗಿರಸ, ಜಮದಗ್ನಿ, ಕಶ್ಯಪ, ಭರದ್ವಾಜ, ಮೊದಲಾದ ಮುನಿಗಳು ಹಿಮಾಲಯದ ಸಮೀಪ ಸಭೆಯನ್ನು ಸೇರಿದರು. ಸಭೆಯಿಂದ ಯಾವುದೇ ಪರಿಹಾರ ಸಿಗದೆ ಇದರ ಪರಿಹಾರವು ದೇವೇಂದ್ರನಿಂದಲೇ ಸಾಧ್ಯ ಎಂದು ಅರಿತು. ಸರ್ವಾನುಮತದಿಂದ ಮುನಿ ಭರದ್ವಾಜ ಅವರನ್ನು ಆತನ ಬಳಿಗೆ ಕಳುಹಿಸಿ. ಇಂದ್ರನಿಂದ ಆಯುರ್ವೇದದ ಜ್ಞಾನವನ್ನು ಪಡೆದ ನಂತರ ಉಳಿದ ಎಲ್ಲ ಮುನಿಗಳನ್ನು ಅದರ ಉಪದೇಶವನ್ನು ಮಾಡುವನು, ಈ ಎಲ್ಲ ಋಷಿ ಸಮೂಹದಲ್ಲಿ ಒಬ್ಬನಾದ ಪುನರ್ವಸು ಭರದ್ವಾಜ ಆಯುರ್ವೇದದ ಜ್ಞಾನವನ್ನು ಅಗ್ನಿವೇಶ, ಭೇಲ, ಜತೂಕರ್ಣ, ಪರಾಶರ್, ಹಾರಿತ, ಕ್ಷಾರಪಾಣಿಗಳೆಂಬ ಆರು ಜನ ಶಿಷ್ಯರನ್ನು ಉಪದೇಶ ಮಾಡಿದನು. ಮುಂದೆ ಇವರು ತಮ್ಮ-ತಮ್ಮ ಹೆಸರಿನಿಂದಲೇ ಒಂದೊಂದು ತಂತ್ರವನ್ನು ರಚಿಸಿ ಜಗದ್ವಿಖ್ಯಾತರಾದರು.-ಸೂಶ್ರುತ ಸಂಹಿತೆ ಸೂತ್ರ ಸ್ಥಾನ ಅಧ್ಯಾಯ 1.

ಆಯುರ್ವೇದ ಔಷಧಿಯ ಪ್ರಕಾರಗಳು

ಆಡು ಮುಟ್ಟದ ಮರವಿಲ್ಲ ಸರ್ವಜ್ಞ ಹೇಳದಿರುವ ವಚನವಿಲ್ಲ. ಹಾಗೆಯೇ ವೈದ್ಯನು ಮುಟ್ಟಿದ ಮರವೆಲ್ಲ ಔಷಧಿಯೇ. ಸೃಷ್ಟಿಕರ್ತನು ಸೃಷ್ಟಿಯ ರಚನೆಯ ಮುಂಚೆ ಪ್ರಕೃತಿಯ ಮಡಿಲನ್ನು ಔಷಧಿಯ ಸಸ್ಯಗಳಿಂದ ತುಂಬಿದನು. ಮನುಷ್ಯನು ಪ್ರಕೃತಿಯಲ್ಲಿ ದೊರೆಯುವಂತಹ ಅನೇಕ ಗಿಡಮರ ಬಳ್ಳಿಗಳನ್ನು ತನ್ನ ಚಿಕಿತ್ಸೆಗಾಗಿ ಉಪಯೋಗಿಸಬಹುದು. ಆದರೆ, ಅದರ ಪರಿಪಕ್ವ ಜ್ಞಾನವನ್ನು ಹಾಗೂ ಔಷಧಿಯ ಆಯ್ಕೆ ಸೂಕ್ತವಾಗಿರಬೇಕು. ಆಯುರ್ವೇದದಲ್ಲಿ ಉಲ್ಲೇಖಿತ ಔಷಧಿಯ ಸಸ್ಯಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳು ಈ ಕೆಳಕಂಡಂತಿವೆ.

1. ಹೂವುಗಳಿಲ್ಲದೆ ಫಲಗಳನ್ನು ಕೊಡುವ ಸಸ್ಯಗಳನ್ನು ವನಸ್ಪತಿಗಳು. ಉದಾ: ಅತ್ತಿ, ಹಲಸು
2. ಹೂವುಗಳನ್ನು ಬಿಟ್ಟು ಫಲಗಳನ್ನು ಕೊಡುವವು ವೃಕ್ಷಗಳು. ಉದಾ: ಮಾವು ನೇರಲೆ ಇತ್ಯಾದಿ
3. ಉದ್ದನೆಯ ಬಳ್ಳಿಗಳಿಂದ ಕೂಡಿರುವ ಬಳ್ಳಿಗಳನ್ನು ವಿರೋಧ ಬಳ್ಳಿಗಳು, ಉದಾ: ಅಮೃತಬಳ್ಳಿ
4. ಋತುಮಾನಕ್ಕನುಸಾರವಾಗಿ ಫಲಗಳನ್ನು ಬಿಟ್ಟು ಮತ್ತೆ ನಾಶಹೊಂದುವವು ವನ್ಸಪತಿಗಳು. ಉದಾ: ಗೋಧಿ, ರಾಗಿ

ಆಧುನಿಕ ಜಗತ್ತಿನಲ್ಲಿ ಆಯುರ್ವೇದದ ಮಹತ್ವ

ಪ್ರತಿಯೊಂದು ಚಿಕಿತ್ಸೆಗೆ ತನ್ನದೆ ಆದ ಮಹತ್ವವಿದೆ. ಹೊಮಿಯೋಪಥಿ, ಎಲೋಪೆಥಿ, ಯುನಾನಿ ಹಲವು ರೀತಿಯ ಚಿಕಿತ್ಸೆಗಳು ಜಗತ್ತಿನಲ್ಲಿ ಪ್ರಚಲಿತದಲ್ಲಿವೆ

ಸುಮಾರು ಐದು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವ ಈ ಪದ್ಧತಿಯು ತನ್ನ ಅಸ್ತಿತ್ವವವನ್ನು ಕಳೆದುಕೊಳ್ಳದೆ ತನ್ನದೇ ಆದ ಪ್ರಭಾವವನ್ನು ಬಿರುತ್ತಿದೆ. ಆಯುರ್ವೇದದ ಮಹತ್ವವನ್ನು ಕೆಲವು ವ್ಯಾಖ್ಯೆಗಳ ಮೂಲಕ ತಿಳಿದುಕೊಳ್ಳುವ ಅಮೇರಿಕೆಯ ಮೆಡಿಸಿನ್ ಬೋರ್ಡಿನ ಪ್ರೆಸಿಡೆಂಟ್ ಜಿ ಇ ಕ್ಲಾರ್ಕ್ ಎಂಬುವವರು

"ಈಗಿನ ಕಾಲದ ಚಿಕಿತ್ಸಕರು ಈಗ ರೂಢಿಯಲ್ಲಿರುವ ರಸಾಯನ ಮತ್ತು ಇತರೆ ಔಷಧಗಳನ್ನೆಲ್ಲ ಸಂಪೂರ್ಣವಾಗಿ ಬಿಟ್ಟು ರೋಗಿಗಳ ಚಿಕಿತ್ಸೆಯನ್ನು ಚರಕ ಸಂಹಿತೆಯ ರೀತಿಯಂತೆ ಮಾಡುವುದಾರೆ, ಇಡೀ ಜಗತ್ತಿನಲ್ಲಿ ಶವವಾಹಕರ (ಹೆಣವನ್ನು ಹೂಣುವವರು) ಕೆಲಸವೇ ಬಹುಮಟ್ಟಿಗೆ ಕಡಿಮೆಯಾಗಿ ಹೋಗುತ್ತದೆ ಮತ್ತು ಕ್ಷೀಣತೆಯನ್ನು ಹೊಂದಿ ನಿರ್ಬಲವಾಗಿರುವ ರೋಗಿಗಳ ಸಂಖ್ಯೆಯು ಕಡಿಮೆಯಾಗುತ್ತದೆ."

ಡಾ. ವಾಯಿಜ್ "ಪ್ರಂಪಚದ ಸಕಲ ಚಿಕಿತ್ಸಾ ಶಾಸ್ತ್ರಗಳನ್ನು ಅಧ್ಯಯನ ಮಾಡಿ ತಮ್ಮ 'ಹಿಸ್ಟ್ರಿ ಆಫ್ ಮೆಡಿಸನ್' ಎಂಬ ಪುಸ್ತಕದಲ್ಲಿ ಇತರ ದೇಶಗಳ ಚಿಕಿತ್ಸೆಗಳು ಹುಟ್ಟುವುದಕ್ಕಿಂತ ಅನೇಕ ಶತಮಾನಗಳ ಪೂರ್ವದಲ್ಲಿಯೇ ಭಾರತದಲ್ಲಿ ಚಿಕಿತ್ಸಾ ಶಾಸ್ತ್ರವು ಯಥೇಚ್ಛವಾದ ಉನ್ನತಿಗಳನ್ನು ಹೊಂದಿತ್ತು ಮತ್ತು ಭಾರತದಿಂದ ಮಿತ್ರ ದೇಶವಾಸಿಗಳು ಮಿತ್ರದೇಶದಿಂದ ಗ್ರೀಸ್, ಮತ್ತು ರೋಮ್ ದೇಶದವರು ಚಿಕಿತ್ಸಾ ಶಾಸ್ತ್ರಗಳನ್ನು ಕಲಿತರು. ಇದಾದ ನಂತರ ಇನ್ನುಳಿದ ದೇಶಗಳಲ್ಲಿ ಚಿಕಿತ್ಸಾ ಶಾಸ್ತ್ರವು ಹಬ್ಬಿತ್ತು."

ನಿಯಾರ್ಕಸಾ ಎಂಬುವವರ ಪ್ರಕಾರ "ಸುಮಾರು 2300 ವರ್ಷಗಳ ಪೂರ್ವದಲ್ಲಿ ಸಿಕಂದರನು ಭಾರತಕ್ಕೆ ಬಂದಾಗ ತನ್ನ ಸೈನಿಕರ ಚಿಕಿತ್ಸೆಗಾಗಿ ಹಿಂದೂಗಳಾದ ವೈದ್ಯ ಪಂಡಿತರನ್ನು ಇಟ್ಟುಕೊಂಡಿದ್ದನು, ಆ ವೈದ್ಯರಿಂದ ವಿಷ ಚಿಕಿತ್ಸೆಯನ್ನು ಮತ್ತಿತರ ಭಯಂಕರ ರೋಗಗಳ ಚಿಕಿತ್ಸೆಯನ್ನು ಮಾಡಿಸುತ್ತಿದ್ದನು. ಪುನಃ ತನ್ನ ದೇಶಕ್ಕೆ ಹೋಗುವಾಗ ಕೆಲವು ವೈದ್ಯರನ್ನು ಸನ್ಮಾನಪೂರ್ವಕವಾಗಿ ತನ್ನೊಡನೆ ಕರೆದುಕೊಂಡು ಹೋದನು" ಎಂದು ಹೇಳಿರುವನು. ಹೀಗೆ ಆಯುರ್ವೇದವು ಪ್ರಸ್ತುತ ಹಾಗು ಇತಿಹಾಸದಲ್ಲು ಎಷ್ಟು ಮಹತ್ವವನ್ನು ಪಡೆದಿರುತ್ತದೆ ಎಂಬುದು ತಿಳಿದುಕೊಳ್ಳಲಾಯಿತು. ಆದರೆ, ಆಯುರ್ವೇದದ ಮೂಲವನ್ನು ಸ್ವತಃ ಚರಕನೆ ಒಪ್ಪಿಕೊಂಡಿದ್ದಾನೆ. ಆತನು ತನ್ನ ಚರಕ ಸಂಹಿತೆಯಲ್ಲಿ ಬರೆದಿರುವಂತೆ ಆಯುರ್ವೇದದ ಮೂಲ ನಾಟಿ ಔಷಧಿಯಾಗಿದೆ. ನಾಟಿ ವೈದ್ಯವು ಶಾಸ್ತ್ರ ಮರೆಯಾದೆಯನ್ನು ಪಡೆದು ಮುಂದೆ ಆಯುರ್ವೇದ ಶಾಸ್ತ್ರವೆಂದು ಮಾನ್ಯತೆ ಪಡೆದಿದೆ ಅಷ್ಟೆ. ಆದರೆ ನಿಜವಾದ ನಾಟಿವೈದ್ಯದ ಜ್ಞಾನವನ್ನು ಹೊಂದಿರುವ ಈ ಜನರು ಈಗ ಬೀದಿ ಪಾಲಾಗುತ್ತಿರುವುದು ವಿಷಾದಕರವಾಗಿದೆ ಎಂದು ಹೇಳಲು ಬಯಸುತ್ತೇನೆ.

1. ಮನುಷ್ಯನ ದಿನಚರ್ಯದ ಪ್ರಾರಂಭದಿಂದ ರಾತ್ರಿ ಮಲಗುವವರೆಗೆ ಆಯುರ್ವೇದದ ನಿಯಮಗಳನ್ನು ಪಾಲಿಸುತ್ತಾನೆ.
2. ಮಾನವ ದೇಹದ ಮೂಲ ದೋಷಗಳ (ವಾತ್, ಪಿತ್ತ್, ಕಫ್) ಆಧರದ ಮೇಲೆ ತನ್ನ ಚಿಕಿತ್ಸೆ ಪ್ರಾರಂಭ ಮಾಡುತ್ತದೆ.
3. ಕಾಯಿಲೆಯ ಮೂಲವನ್ನು ಕಂಡುಹಿಡಿಯುತ್ತದೆ.
4. ಯಾವುದೇ ಹಾನಿಕಾರಕ ಸೈಡೆಫೆಕ್ಟ್ಸ್ ಇಲ್ಲ.
5. ಕಾಯಿಲೆಯ ಮೂಲ ದೋಷವನ್ನು ಕಂಡುಹಿಡಿದು ಅದರ ಚಿಕಿತ್ಸೆ ಮಾಡುವುದು.
6. ಪ್ರಸ್ತುತ ಜಗತ್ತಿಗೆ ಪರಿಚಿತವಿರುವ ಸುಮಾರು ರೋಗಗಳ ಚಿಕಿತ್ಸೆಯು ಆಯುರ್ವೇದವು ಸಾವಿರಾರು ವರ್ಷಗಳಿಂದ ಮಾಡುತ್ತ ಬಂದಿದೆ ಉದಾ: ಟಿಬಿ ಕ್ಯಾನ್ಸರ್, ಏಡ್ಸ್.
7. ಒಂದು ಸಮೀಕ್ಷೆಯ ಪ್ರಕಾರ ಸುಮಾರು 70-80 ಪ್ರತಿಶತ ಭಾರತೀಯರು ಒಂದಲ್ಲ ಒಂದು ರೀತಿಯಿಂದ ತಮ್ಮ ದಿನಬಳಕೆಯ ಜೀವನದಲ್ಲಿ ಆಯುರ್ವೇದವನ್ನು ಉಪಯೋಗಿಸುತ್ತಾರೆ.
8. ಬಾಬಾ ರಾಮದೇವರವರ ಒಂದು ವರ್ಷದ ಆದಾಯ ಸುಮಾರು ಐದು ಸಾವಿರ ಕೊಟಿಯಾಗಿದೆ.
9. ಆಯುರ್ವೇದವು ಕಾಯಿಲೆಯ ಮೂಲವನ್ನು ಕಂಡುಹಿಡಿಯುವುದು.
10. ಆಯುರ್ವೇದವು ಚಿಕಿತ್ಸೆಗಾಗಿ ಪ್ರಕೃತಿದತ್ತವಾದ ಸೊಪ್ಪು, ಹಣ್ಣುಹಂಪಲು, ಬೇರುಗಳು, ಪ್ರಾಣಿಜನ್ಯ ವಸ್ತುಗಳ ಬಳಕೆಯನ್ನು ಮಾಡುತ್ತದೆ.
11. ಆಯುರ್ವೇದವು ಶರೀರದ ಕ್ರಿಯಾ ವಿಧಿಗಳನ್ನು ಅರಿಯಬಲ್ಲದು.
12. ವಿಶ್ವ ಆರೋಗ್ಯ ಸಂಘಟನೆಯ 56ನೇ ಸಮ್ಮೇಳನ 31 ಮಾರ್ಚ್ 2003 ಮಾಹಿತಿ ಪ್ರಕಾರ.
13. ಚೀನಾ 40%, ಚಿಲಿ 71%, ಕೊಲಂಬಿಯಾ 40%, ಭಾರತದಲ್ಲಿ 65% ಪಾರಂಪರಿಕ ಆಯುರ್ವೇದವನ್ನು ಉಪಯೋಗಿಸುತ್ತಾರೆ.
14. ನೈಜೀರಿಯಾ, ಘಾನ್, ಮಾಲಿ, ಜಾಂಬಿಯಾ, ದೇಶದಲ್ಲಿ ಆಯುರ್ವೇದವನ್ನು ಪ್ರಥಮ ಆದ್ಯತೆಯನ್ನು ನೀಡಲಾಗುತ್ತದೆ.
15. ಆಫ್ರಿಕಾ, ಉತ್ತರ ಅಮೇರಿಕಾ, 75% ಎಚ್‌ಐವಿಯಿಂದ ಬಳಲುತ್ತಿರುವ ಜನರು ಪಾರಂಪರಿಕ ನಾಟಿ ವೈದ್ಯ ಪದ್ಧತಿಯನ್ನು ಅನುಸರಿಸುತ್ತಾರೆ.
16. 2004ರ ನ್ಯಾಷನಲ್ ಸೆಂಟರ್ ಫಾರ್ ಹೆಲ್ತ್ ಸ್ಟ್ಯಾಟಿಕ್ಸ್ ಸರ್ವೆ ಪ್ರಕಾರ ಅಮೇರಿಕಾ 751,000 ಬೇರೆ-ಬೇರೆ ಕಾಯಿಲೆಗಳಿಗೆ ಆಯುರ್ವೇದದ ಚಿಕಿತ್ಸೆಯನ್ನು ಪಡೆದರು.

ಕೆಲವು ಆರೋಗ್ಯಕರ ಸಲಹೆಗಳು

1. ಮುಂಜಾನೆಯ ಸಮಯ ಒಂದು ಗ್ಲಾಸ್ ನೀರನ್ನು ಕುಡಿದು ವಾಯುವಿಹಾರ ಮಾಡಿದರೆ ಮಲ ಮೂತ್ರ ವಿಸರ್ಜನೆಗೆ ತೊಂದರೆ ಆಗುವುದಿಲ್ಲ.
2. ಬೇವಿನ ನಾಲ್ಕು ಎಲೆಗಳನ್ನು ಪ್ರತಿನಿತ್ಯ ಸೇವಿಸಿದರೆ ರೋಗನಿರೋಧಕ ಶಕ್ತಿಯು ಹೇಚ್ಚುತ್ತದೆ.
3. ತುಳಸಿಯ ಎಲೆಗಳನ್ನು ಪ್ರತಿನಿತ್ಯ ಸೇವಿಸಿದರೆ ಕುಡಿಯುವ ನೀರಿನ ದೋಷಗಳು ನಷ್ಟವಾಗುತ್ತವೆ.
4. ಕಿಡ್ನಿಯಲ್ಲಿ ಕಲ್ಲುಗಳ ದೋಷವಿರುವವರು ತೆಂಗಿನ ನೀರನ್ನು ಕುಡಿಯಬೇಕು.
5. ಶುಗರ ಕಾಯಿಲೆ ಇರುವವರು ದಿನಾಲು ಒಂದು ಕಪ್ ಲೊಳೆರಸವನ್ನು (ಎಲೊವೆರಾ) ಸೇವಿಸಬೇಕು.

ಆಕರ ಗ್ರಂಥಗಳು

1. ತಿರುಕ 'ಸ್ವಯಂ ವೈದ್ಯ' ಅನಾಥಸೇವಾಶ್ರಮ ವಿಶ್ವಸ್ಥ ಸಮಿತಿ ಮಲಾಡಿಹಳ್ಳಿ–577531. 9ನೇ ಮುದ್ರಣ: 2016
2. ಸ್ವಾಮಿ ಶಿವಕುಮಾರ 'ಆರೋಗ್ಯ ದರ್ಪಣ' ವಿನಯ ಪ್ರಕಾಶನ ಬೆಂಗಳೂರು–560050. ಮೂರನೇ ಮುದ್ರಣ: 2016
3. ಮೇತ್ರಿ ಕೆ ಎಂ ಸೆಡ್ಮಾಕೆ ಸುದರ್ಶನ 'ರಾಜಗೊಂಡ' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ಮೊದಲ ಮುದ್ರಣ: 2008
4. ಕಂಗಾಲಿ ಮೊತಿರಾವಣ 'ಪಾರಿ ಕುಪಾರ ಲಿಂಗೊ ಗೊಂಡಿ ಪುನೇಮ ದರ್ಶನ್' ಎಸ್ ಬಿ ಕಂಪ್ಯೂಟರ್ಸ್ 186 ಜಯತವಾಡ್ ರೋಡ್ ನಾಗಪೂರ–440022, ಐದನೇ ಮುದ್ರಣ:2018

8

ಸಾಹಿತ್ಯ ಮತ್ತು ಪುರಾಣಗಳಲ್ಲಿ ವಾಲ್ಮೀಕಿ ಸಮುದಾಯದ ಚಿತ್ರಣ

ಡಾ. ಕಾವ್ಯಶ್ರೀ. ಜಿ.
ಸಹಾಯಕ ಪ್ರಾಧ್ಯಾಪಕರು,
ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು,
ದಾವಣಗೆರೆ – 577004
drkaavyashreenagabhushan@gmail.com

ಮನುಷ್ಯ ಮತ್ತು ಪ್ರಾಣಿ ಇವೆರಡು ಸಮಾಜಗಳ ನಡುವೆ ಕೆಲವು ಸಾಮಾನ್ಯ ಅಂಶಗಳು ಇವೆಯಾದರೂ ಸಂಸ್ಕೃತಿ, ಸಂಸ್ಕಾರ ವಿಷಯಕ್ಕೆ ಬಂದಾಗ ಎರಡೂ ಪ್ರತ್ಯೇಕವಾಗಿ ನಿಲ್ಲುತ್ತವೆ. ಸಂಸ್ಕೃತಿ ಮನುಷ್ಯ ಸಮಾಜದ ಅವಿಭಾಜ್ಯ ಅಂಗ. ಇದು ಪ್ರಾಣಿ ಸಮಾಜಕ್ಕೆ ಅನ್ವಯಿಸದು, ಮನುಷ್ಯನ ಪರಿಸರ ಆತನ ಹಿಂದಿನ ಪೀಳಿಗೆಯಿಂದ ಪೂರ್ವಜರಿಂದ ಸಾಕಷ್ಟು ವಿಷಯಗಳನ್ನು ಪಡೆದುಕೊಂಡಿರುತ್ತದೆ. ಅದನ್ನು ಜೀವನದಲ್ಲಿ ಅನುಸರಿಸುತ್ತ ತನ್ನ ಮುಂದಿನ ಪೀಳಿಗೆಗೆ ರವಾನಿಸುತ್ತಾನೆ. ಸಮಾಜದೊಳಗಿರುವ ಮೃಗೀಯ ಸ್ಥಿತಿಯನ್ನು ಮೀರುವಂತ ಸೂಕ್ಷ್ಮ ಸಂವೇದನೆಗಳು ಸೇರಿ ಮನುಷ್ಯನನ್ನು ರೂಪಿಸುತ್ತವೆ. ಮನುಷ್ಯನಲ್ಲಿಯ ಮೃಗಸ್ಥಿತಿಯನ್ನು ಹೋಗಲಾಡಿಸಿ, ಇಲ್ಲವಾಗಿಸಿ ಮಾನವೀಯ ನೆಲೆಯಲ್ಲಿ ಬದುಕಬೇಕೆಂಬ ಹಂಬಲವನ್ನು ಸಂಸ್ಕೃತಿ ಕಟ್ಟಿಕೊಡುವಂಥದ್ದು. ಸಂಸ್ಕೃತಿ ಮತ್ತು ಸಮಾಜಕ್ಕೂ ನಿಕಟವಾದ ಸಂಬಂಧವಿದೆ. ಸಂಸ್ಕೃತಿ ವ್ಯಕ್ತಿಗಿಂತ ಸಮಾಜದ ಭಾಗವಾಗಿದೆ. ವ್ಯಕ್ತಿ ಈ ಸಮಾಜದ ಒಂದು ಘಟಕವಾಗಿ, ಒಡನಾಟ, ಹೋರಾಟ, ಸಂಘರ್ಷಗಳಲ್ಲಿ ತೊಡಗುತ್ತಾನೆ. ಇಲ್ಲಿ ಪ್ರಾಣಿ ಸಮಾಜಕ್ಕಿಂತ ಮನುಷ್ಯ ಸಮಾಜ ವಿಭಿನ್ನವಾಗಿರುವುದು. ಮನುಷ್ಯ ಸಮಾಜಕ್ಕೂ ಸಂಸ್ಕೃತಿಗೂ ಒಂದು ಅವಿನಾಭಾವವಾದ ಸಂಬಂಧ ಬೆಸೆಯುವುದು. ಈ ನಿಟ್ಟಿನಲ್ಲಿ ಮನುಷ್ಯ, ಸಮಾಜ ಮತ್ತು ಸಂಸ್ಕೃತಿಗಳು ಸಾವಯವವಾದ ಸಂಬಂಧವನ್ನು ಹೊಂದಿವೆ. ಇವು ಒಂದರೊಳಗೊಂದು ಹೊಕ್ಕಿ ಬೆಳೆಯುತ್ತ ಬೆಳಕಿನ ಕಿರಣಗಳನ್ನು ಬಿತ್ತುತ್ತ, ಒಂದು ಅಪರೂಪವಾದ ವ್ಯಕ್ತಿತ್ವವನ್ನು ನೀಡುತ್ತವೆ. ವ್ಯಕ್ತಿ ತನ್ನ ಬದುಕನ್ನು

ರೂಪಿಸಿಕೊಳ್ಳಲು ಸಂಸ್ಕೃತಿಯು ಆತನಿಗೆ ಮೂಲವಾದ ವಸ್ತುಗಳನ್ನು ಒದಗಿಸಿಕೊಡುತ್ತದೆ. ವ್ಯಕ್ತಿಯ ಸ್ವಭಾವ, ಅವನ ಆಚರಣೆ, ವರ್ತನೆ, ಒಳಸುಳಿಗಳೆಲ್ಲ ಒಂದು ನಿರ್ದಿಷ್ಟ ಕಾರಣಗಳಿಗೆ ಒಳಗಾಗಿರುತ್ತವೆ. ಅವು ಇದ್ದಕ್ಕಿದ್ದಂತೆ ಆಕಸ್ಮಿಕವಾಗಿ ಪ್ರಕಟಗೊಳ್ಳುವುದಿಲ್ಲ. ಅವುಗಳ ಹಿಂದೆ ಒಂದು ಒತ್ತಡ, ಒಂದು ಚರಿತ್ರೆ ಇದ್ದೆ ಇರುತ್ತದೆ. ವ್ಯಕ್ತಿಯ ವಿನ್ಯಾಸ ಕೇವಲ ಅವನಿಂದಲೇ ಮಾತ್ರ ರಚಿತವಾಗಿರದೇ, ಅವನು ಬದುಕುತ್ತಿರುವ ಸಮಾಜ ಮತ್ತು ಸಂಸ್ಕೃತಿಯಿಂದ ಪ್ರಭಾವಯುತವಾಗಿರುವುದು. ಮನುಜನ ಶ್ರಮ ಎಷ್ಟೆಷ್ಟು ಬಳಕೆಯಾಗುತ್ತದೆಯೋ ಅಷ್ಟಷ್ಟೂ ಸಂಸ್ಕೃತಿ ವಿಕಾಸಗೊಳ್ಳುತ್ತದೆ. ಮನುಷ್ಯನ ಶ್ರಮ ಕ್ರಿಯೆಗಳೇ ಸಂಸ್ಕೃತಿಯನ್ನು ವಿಕಾಸದೆಡೆಗೆ ಕೊಂಡೊಯ್ಯುತ್ತವೆ. ಹೀಗೆ ಸಂಸ್ಕೃತಿ ವಿಶ್ವವ್ಯಾಪಿ. ಇಲ್ಲಿ ಮನುಷ್ಯನೊಬ್ಬ ಬಡವನೊ, ಬಲ್ಲಿದನೊ, ಮೇಲುವರ್ಗ, ಕೆಳವರ್ಗ, ಮೇಲುಜಾತಿ, ಕೆಳಜಾತಿ ಹೀಗೆ ಯಾವುದೂ ಪ್ರಮುಖವಲ್ಲ. ಮನುಷ್ಯನಿದ್ದ ಕಡೆ ಸಂಸ್ಕೃತಿ. ಅಲ್ಲಿ ಮೇಲು-ಕೀಳು ಎಂಬ ತಾರತಮ್ಯವಿರದು. ಜನಜೀವನ ವಿಧಾನವೇ ಸಂಸ್ಕೃತಿ. ಇದು ಜನರಿದ್ದ ಕಡೆ ಇದ್ದೇ ಇರುತ್ತದೆ. ಹೀಗಿರುವ ಸಂಸ್ಕೃತಿ ಎಲ್ಲ ಕಡೆ ಒಂದೆಯಾಗಿರದೇ, ವಿಭಿನ್ನವಾಗಿರುತ್ತದೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ಜನಾಂಗ, ಸಮುದಾಯಕ್ಕೆ ಒಂದೊಂದು ರೀತಿಯ ಸಂಸ್ಕೃತಿ ಇರುತ್ತದೆ. ಮನುಷ್ಯ ಸಂಸ್ಕೃತಿಯಲ್ಲಿ ಇನ್ನೊಂದು ಸಂಸ್ಕೃತಿ ಜೀವಿಸಿರುತ್ತದೆ. ಅಲ್ಲಿ ಸಾಮ್ಯ, ವೈಷಮ್ಯ ಇವೆರಡೂ ಒಪ್ಪಿತವಾಗಿರುತ್ತವೆ.

ನಮ್ಮ ಜೀವನವನ್ನು ಸಾಧುವನ್ನಾಗಿ ಮಾಡಿಕೊಳ್ಳುವ ವಿಧಾನವೇ ಸಂಸ್ಕೃತಿ. ಲೋಕದೊಡನೆ ನಮಗಾಗುವ ನಾನಾ ಸಂಪರ್ಕಗಳಲ್ಲಿ ನಾವು ಸಂಪಾದಿಸುವ ಔಚಿತ್ಯವೇ ಸಂಸ್ಕೃತಿ. ಜಗತ್ತಿನ ಪ್ರತಿಯೊಂದು ಜನಸಮುದಾಯ ತನ್ನ ಜ್ಞಾನ ಅರಿವಿನ ಪ್ರಭಾವದಿಂದ ತನ್ನ ಪ್ರಾಚೀನತೆಯನ್ನು ಗುರುತಿಸಿಕೊಳ್ಳುತ್ತದೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಜೀವಿಸುತ್ತಿರುವ ಕೆಲ ಸಮುದಾಯಗಳು ತಮ್ಮ ಅಸ್ತಿತ್ವಕ್ಕಾಗಿ, ತಮ್ಮ ಅಸ್ಮಿತೆಗಾಗಿ ಸದಾ ಚಡಪಡಿಸುತ್ತಿದ್ದವು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಛಿದ್ರಗೊಂಡ ಕೆಲ ಸಮುದಾಯಗಳು, ತಮ್ಮ ಐಕ್ಯತೆ, ರಾಷ್ಟ್ರೀಯತೆ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮೊದಲಾದ ಸಂಗತಿಗಳಿಗೆ ಹೋರಾಡಲು ಸಂಘರ್ಷದಿಂದ ಒಂದು ವೇದಿಕೆಯನ್ನು ಕಟ್ಟಿಕೊಂಡಿದ್ದದ್ದು ಇದೆ. ಇಲ್ಲಿ ಬುಡಕಟ್ಟು ಜನರ ಹೋರಾಟ, ಕೆಳಸ್ಥರದವರ ಹೋರಾಟ ಮುಖ್ಯವಾಗುತ್ತದೆ. ಅಂಥವುಗಳಲ್ಲಿ ಹಲಗಲಿ ಬೇಡರು, ಸಂತಾಲರ ದಂಗೆ, ಮುಂಡರ ದಂಗೆಗಳನ್ನು ಸ್ಮರಿಸಿಕೊಳ್ಳಬಹುದು. ದಂಗೆಗಳ ವೀರಗಾಥೆ ಒಂದು ಜಾನಪದ ಸಾಹಿತ್ಯವಾಗಿ ಅಂದಿನ ಕಾಲದ ಹಿರಿಯರ ಛಲ, ಸಾಹಸ, ಶೌರ್ಯಗಳನ್ನು ಸೆರೆಹಿಡಿದಿವೆ. "ಸಿದ್ದು ನೀನೇಕೆ ರಕ್ತದಲ್ಲಿ ಮಿಂದಿರುವೆ, ಕನ್ನು ನೀನೇಕೆ ಹೊಲ್ ಹೊಲ್ ಎಂದು ಕೂಗುತ್ತಿರುವೇ?"[1] ಎಂದು ಪ್ರಶ್ನೆಯೆತ್ತುವ, "ನಮ್ಮ ಜನಕ್ಕಾಗಿ ನಾವು ರಕ್ತದಲ್ಲಿ ಮಿಂದಿದ್ದೇವೆ, ವ್ಯಾಪಾರಿ ಕಳ್ಳರು ನಮ್ಮ ನಾಡನ್ನು ನಮ್ಮಿಂದ ಕದ್ದುದ್ದಕ್ಕಾಗಿ

ರಕ್ತದಲ್ಲಿ ಮಿಂದಿದ್ದೇವೆ" ಎನ್ನುವ ಉತ್ತರ ಜನಪದ ಗೀತೆಯ ಮುಖೇನವಾಗಿದೆ. ಇಂಥವರಲ್ಲಿ ಬೇಡ, ವಾಲ್ಮೀಕಿ, ನಾಯಕ ಸಮುದಾಯವನ್ನು ಸ್ಮರಿಸಿಕೊಳ್ಳಬಹುದು.

ರಾಷ್ಟ್ರೀಯತೆ, ಸ್ವಾತಂತ್ರ್ಯ, ಸಹೋದರತೆ, ಸಮಾನತೆ, ಸಾಹಿತ್ಯ ಸಂಸ್ಕೃತಿಯನ್ನು ಹುಟ್ಟು ಹಾಕಿದ, ಕಟ್ಟಿಕೊಟ್ಟ ಹಾದಿಯಲ್ಲಿ ತಳವರ್ಗದವರನ್ನು ಬೆಳಕಿಗೆ ತರುವ ಪ್ರಯತ್ನ ಅವಶ್ಯವಿದೆ. ಇಂಥ ಸಮುದಾಯದ ಕಾರ್ಯವನ್ನು ಗುರುತಿಸುವ ಶ್ಲಾಘಿಸುವ, ವಿಶ್ಲೇಷಿಸುವ ಕ್ರಮಗಳು ನಡೆಯಬೇಕು. ವಾಲ್ಮೀಕಿ ಸಮುದಾಯ ಬುಡಕಟ್ಟು ಎನಿಸಿಕೊಂಡರೂ ತನ್ನ ಲಕ್ಷಣ, ಚರಿತ್ರೆ ಮತ್ತು ಸಂಸ್ಕೃತಿಯನ್ನು ಅಷ್ಟೊಂದಾಗಿ ಎಲ್ಲೂ ಅನಾವರಣಗೊಳಿಸಿಕೊಂಡಿಲ್ಲದಿರುವುದು ಖೇದಕರ ಸಂಗತಿ.

ಈ ಹಿನ್ನೆಲೆಯಲ್ಲಿ ವಾಲ್ಮೀಕಿ ಸಮುದಾಯದ ಸಾಂಸ್ಕೃತಿಕ, ಆಚಾರ ವಿಚಾರ ಮತ್ತು ವೈವಿಧ್ಯಮಯ ಪರಂಪರೆಯನ್ನು ಕಂಡುಕೊಳ್ಳುವುದು ಅತ್ಯವಶ್ಯಕ. ಮೂಲತಃ ದ್ರಾವಿಡ ಜನಾಂಗಕ್ಕೆ ಸೇರಿದ ವಾಲ್ಮೀಕಿ ಸಮುದಾಯದವರು ವೇದಾಗಮಗಳ ಕಾಲದಲ್ಲಿ ಅನೇಕ ವಿವಿಧ ವೃತ್ತಿಗಳಿಗೆ ಅಂಟಿಕೊಂಡು ನೆಲೆಸತೊಡಗಿದರು. ನಾಡಿನ ಶ್ರೇಣಿಕೃತ ವ್ಯವಸ್ಥೆಯ ಭಾಗವಾದ ಈ ಸಮುದಾಯದ ಕಾರ್ಯಚಟುವಟಿಕೆ ಸಾಧನೆಗಳು ನಮ್ಮ ಪುರಾಣಗಳ ಪುಟಗಳಲ್ಲಿ ಕಿರಾತ, ನಿಷಾದ, ವ್ಯಾಧ, ಶಬರ, ಪುಳಿಂದ ಮೊದಲಾದ ಹೆಸರುಗಳನ್ನು ಪಡೆದುಕೊಂಡದ್ದುಂಟು. ಅವುಗಳಿಂದ ಪ್ರೇರಣಾತ್ಮಕವಾದ ಕುಮಾರನಾಯಕ, ಮದಕರಿನಾಯಕರೆಲ್ಲರೂ ಸಂಕೇತಗಳಾದರು. ಪ್ರಾಚೀನ ಭಾರತದ ಇತಿಹಾಸದಲ್ಲಿ ಶಬರ ಎಂಬ ನಾಡು, ನಿಷಾದ ಎಂಬ ರಾಜ್ಯಗಳಿದ್ದದ್ದನ್ನು ಸ್ಮರಿಸಿಕೊಳ್ಳಬಹುದು. ಸಾಹಿತ್ಯ ಚರಿತ್ರೆಯಲ್ಲಿ ಬರುವ ನಳದಮಯಂತಿ ಕಥೆಯ ನಾಯಕ ನಳಮಹಾರಾಜನು ನಿಷಾದ ರಾಜ್ಯದ ದೊರೆಯಾಗಿದ್ದನೆಂದು ಇತಿಹಾಸ ಹೇಳುತ್ತದೆ.

ಜಾತಿ ಮತ ಧರ್ಮ ಇವುಗಳ ಹಿನ್ನೆಲೆಯ ಬೆಂಬಲವಿಲ್ಲದೆ, ಆರ್ಥಿಕ ಸಾಮಾಜಿಕ ಚಾರಿತ್ರಿಕ ಮತ್ತು ವೈಯಕ್ತಿಕ ಶ್ರಮ ಸಾಹಸ ಸಾಧನೆಗಳಿಂದ ಮಾದರಿಯಾದವರಲ್ಲಿ ಮಹಾಕಾವ್ಯವಾದ ರಾಮಾಯಣದ ಕರ್ತೃ ವಾಲ್ಮೀಕಿ, ಶಬರಿ, ಗುಹಾ, ಧರ್ಮವ್ಯಾಧ, ಬೇಡರಕಣ್ಣಪ್ಪ, ಏಕಲವ್ಯ ಮದಕರಿನಾಯಕ, ಕುಮಾರನಾಯಕ ಮೊದಲಾದವರು. ಇವರು ತಮ್ಮ ಪೂರ್ವಸ್ಥಿತಿಗಳನ್ನು ಮೀರಿ ಅಗಾಧ ಸಾಹಸ ಸಾಧನೆ ತೋರಿ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಇತಿಹಾಸ, ಪುರಾಣಗಳಲ್ಲಿ ದಾಖಲೆಯಾದವರು. ಸೂರ್ಯ ಚಂದ್ರರಿರುವವರೆಗೆ ಇವರ ಹೆಸರು ಅಜರಾಮರ. 'ಕಾಡಿನಲ್ಲಿ ಸಂಸ್ಕೃತಿ, ನಾಗರಿಕತೆ ಎಂದರೇನು? ಎಂಬುದನ್ನು ಅರಿಯದಂಥ ಪೀಳಿಗೆಯಾಗಿ ಬೆಳೆದುಕೊಂಡು ಬಂದು ಈ ಮಧ್ಯಕಾಲಾವಧಿಯಲ್ಲಿ ನಾಗರಿಕರ ಜೊತೆ ಸೇರಿಕೊಂಡರೂ ಕ್ಷತ್ರಾಂಶ ಸಂಭೂತರಾದಂಥ ಇವರು ಯಾವ ಉದ್ಯೋಗಕ್ಕೂ ತೊಡಗದೇ ಶೇಕಡಾ ತೊಂಭತ್ತರಷ್ಟು ಜನ ರಕ್ಷಣಾ ಕಾರ್ಯದಲ್ಲೇ ತೊಡಗಿಸಿ ಯೋಧರಾಗಿ ನಿಂತರು.'

ಭಾರತೀಯ ಸಾಹಿತ್ಯದಲ್ಲಿ ಬಹುಪಾಲು ಕಥಾಸಂಗತಿಗಳು ಸೃಷ್ಟಿಯಾಗಿರುವುದು ಮಾತ್ರ ದಟ್ಟವಾದ ಘೋರವಾದ ಅರಣ್ಯದಲ್ಲೇ ಮಹಾಕಾವ್ಯಗಳಲ್ಲಿ ನಾಯಕರ ಪ್ರವೇಶ ಸ್ವಲ್ಪ ತಡವಾಗಿ ಮಧ್ಯದಲ್ಲುಂಟಾದರೆ, ಜನಪದ ಕಥೆಗಳಲ್ಲಿ ನಾಯಕರು ಕಥೆಯ ಆರಂಭಕ್ಕೆ ಪ್ರವೇಶಿಸುತ್ತಾರೆ. ಇಲ್ಲಿಯ ನಾಯಕರು ತಮಗಾದ ಅನ್ಯಾಯ, ಮೋಸ, ಅವಮಾನ ಮತ್ತು ತಮ್ಮ ಸವಾಲನ್ನು, ಅದರ ಉದ್ದೇಶವನ್ನು ನೆರವೇರಿಸಲು ಸಾಧಿಸಲು ಉನ್ನತ ಸಂಸ್ಕೃತಿಯ ಆವಾಸ ಸ್ಥಾನವಾದ ಅರಣ್ಯಕ್ಕೆ ಬರುವರು. ಇಂಥ ಸನ್ನಿವೇಶಗಳಲ್ಲಿ ಅದೂ ಕಾಡಿನಲ್ಲಿ ಉನ್ನತ ಸಂಸ್ಕೃತಿಯ ವಕ್ತಾರರೆನಿಸಿಕೊಂಡವರು ಋಷಿಗಳೇ, ಅಲ್ಲದೇ ಪ್ರಾಣಿಗಳು. ಕೆಳವರ್ಗದ ಸಂಸ್ಕೃತಿಯವರೆನಿಸಿಕೊಂಡ ವಾಲ್ಮೀಕಿ, ಬೇಡರು, ಸಹ ನಾಯಕ ಪುರುಷರಿಗೆ ತಮ್ಮ ಜೀವನವನ್ನು ಪಣಕ್ಕಿಟ್ಟು ಸಹಾಯ ಮಾಡಿದ್ದು ಬಹುಮಟ್ಟಿಗೆ ಎಲ್ಲ ಕಥೆಗಳಲ್ಲಿ ವ್ಯಕ್ತವಾಗುತ್ತದೆ. ಅರಣ್ಯವಾಸಿ ವಾಲ್ಮೀಕಿ, ಬೇಡರಾದರೂ ಮತ್ತು ಕೆಳವರ್ಗದವರಾದರೂ ಒಂದು ಉನ್ನತ ಸಂಸ್ಕೃತಿಯನ್ನು ತೋರಿಸಿಕೊಟ್ಟವರಲ್ಲಿ ಗುಹ, ಶಬರಿ, ಏಕಲವ್ಯ, ಕಣ್ಣಪ್ಪ ಮೊದಲಾದವರು. ಆರ್. ರಾಜಣ್ಣ ಚಳ್ಳಕೆರೆ ಇವರು "ನಾಯಕ ಜನಾಂಗದ ಇತಿಹಾಸ" ಎಂಬ ನೂರು ಪುಟಗಳ ಪುಸ್ತಕವನ್ನು ಬರೆದಿದ್ದಾರೆ. ಇದರಲ್ಲಿ 'ಬೇಡರನ್ನು ಗುರ್ತಿಸುವುದು' ಎಂಬ ಅಧ್ಯಾಯದಲ್ಲಿ ಲೇಖಕರು ತಮ್ಮ ಅನುಭವಯುಕ್ತ ನುಡಿಗಳಿಂದಲೇ ಪ್ರಾರಂಭಿಸಿ ಬೇಡರ ಪರಿಚಯ ಮಾಡಿಕೊಡುತ್ತಾರೆ.2 ವಾಲ್ಮೀಕಿ ಜನಾಂಗದವರು ದೀರ್ಘ ದೇಹಿಗಳು, ದೃಢಕಾಯಕರಾಗಿಯೂ ಕೃಷ್ಣವರ್ಣವನ್ನು ಹೊಂದಿರುತ್ತಾರೆ. ಇವರು ಹೆಚ್ಚಾಗಿ ಬರಿಗಾಲಲ್ಲೇ ನಡೆದಾಡುವರು. ಮೈತುಂಬಾ ಹೊದೆಯುವುದು ನಿಷಿದ್ಧವೆಂದು ಪರಿಗಣಿಸಿ ಗಂಡಸರು ಸೊಂಟದಿಂದ ಕೆಳಗೆ ಚಡ್ಡಿ ಮತ್ತು ತಲೆಗೆ ಒಂದು ಶಲ್ಯವನ್ನು ತೊಟ್ಟರೆ, ಹೆಂಗಸರು ಸೀರೆ ಮಾತ್ರ ತೊಟ್ಟು ಕುಪ್ಪಸವನ್ನು ಹಾಕದೇ ಸೀರೆಯ ಸೆರಗಿನಿಂದಲೇ ಎದೆಯನ್ನು ಮುಚ್ಚಿಕೊಳ್ಳುತ್ತಿದ್ದರು. ಸ್ತ್ರೀಯರು ಬೇಟೆ, ಬೇಸಾಯ ಮತ್ತು ಪಶುಪಾಲನೆಯನ್ನೇ ಜೀವನೋಪಾಯವಾಗಿ ಮಾಡಿಕೊಂಡಿರುತ್ತಿದ್ದರು. ಈ ಜನಾಂಗ ಬುಟ್ಟಿದೇವರುಗಳನ್ನು ಮಾತ್ರ ದೇವರೆಂದು ಸ್ವೀಕರಿಸಿ ಅವುಗಳಿಗೆ ನಡೆದುಕೊಳ್ಳುವರು. ಬಿದಿರಿನ ಬುಟ್ಟಿಗಳಲ್ಲಿ ಸಾಲಿಗ್ರಾಮ ಮತ್ತು ಲಿಂಗಗಳನ್ನಿಟ್ಟುಕೊಂಡು ಆ ಬುಟ್ಟಿಗಳನ್ನು ಯಾವಾಗಲೂ ಮುಚ್ಚಿಡುವರು. ಗುಗ್ಗರಿಹಬ್ಬ ಮತ್ತು ಎತ್ತಿನ ಹಬ್ಬದ ದಿನಗಳಲ್ಲಿ ಬುಟ್ಟಿ ದೇವರುಗಳಿಗೆ ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ. ಈ ಹಬ್ಬಗಳನ್ನು ಉದಿಪದಿಗಳ ದಿನವೆಂದು ಕರೆಯುತ್ತಾರೆ. ಇಂಥ ಆಚಾರವಿಚಾರಗಳ, ಸ್ವಭಾವಗಳನ್ನುಳ್ಳ ಜನರನ್ನು ಕುರಿತು ತಮ್ಮ ಜಾತಿ ಜನಾಂಗಗಳ ಕುರಿತು ಕೇಳಿದಾಗ ಅವರಿಂದ ಬರುವ ಉತ್ತರವೆಂದರೆ, 'ನಾಯಕರು ನಾಯಕರ ಮಕ್ಕಳೆಂದೂ. ಬೇಡರೆಂದೂ ಇನ್ನೂ ಕೆಲವರೂ ವಾಲ್ಮೀಕಿ, ಕಿರಾತರೆಂದೂ, ಪರಿವಾರದವರೆಂದು, ತಳವಾರರೆಂದೂ, ಪಾಳೇಗಾರರೆಂದೂ, ಬಿಲ್ಲರೆಂದೂ ಹೇಳಿಕೊಳ್ಳುತ್ತಾರೆ.'[3] ಹೀಗೆ ಇವರ ಹೆಸರುಗಳು ಇವರ

ವೃತ್ತಿಗಾಧಾರವಾಗಿಯೇ ಬಂದಿವೆ. ಇವರಿಗೆ ಬೇಡನಾಯಕರೆಂದು ಹೇಳುತ್ತಾರೆ. ಜನಪದರಲ್ಲಿ ಇವರು ವೀರನಾಯಕರು ವೀರಪರಾಕ್ರಮಿಗಳಾಗಿ ನಿಂತಿದ್ದಾರೆ. ಇವರ ಶೌರ್ಯಸಾಹಸಕ್ಕೆ ಜನಪದರ ಹಾಡು ಕಥೆಗಳು ಕನ್ನಡಿ ಹಿಡಿದಿವೆ. ಗಾದರಿಪಾಲನಾಯಕ. ಜಗಳೂರು ಪಾಪನಾಯಕ, ಕೊಡಗಲು ಬೊಮ್ಮಯ್ಯ, ಯರಗಟನಾಯಕ, ಗಜನಾಯಕ, ದಡ್ಡಿಪೂರನಾಯಕ, ಪೆದ್ದಯ್ಯ ಹೀಗೆ ಅನೇಕರ ಚರಿತ್ರೆಗಳು ಜನಪದ ಗೀತೆ ಕಥನಗಳಾಗಿ ಮೈತಾಳಿವೆ.

ವಾಲ್ಮೀಕಿ ಮಹರ್ಷಿ ಈ ವಂಶದ ಮೂಲ ಪುರುಷ ಎಂಬ ನಂಬಿಕೆಯಿಂದ ಇವರು ತಮ್ಮನ್ನು ತಾವು ವಾಲ್ಮೀಕಿ ಕ್ಷತ್ರಿಯರೆಂದು ಕರೆದುಕೊಳ್ಳುತ್ತಾರೆ. ಅಲ್ಲದೇ ಕಣ್ವಮಹರ್ಷಿಯ ವಂಶಜರೆಂದು ತಾವು ಕಾಣ್ಯಮ್ ಕುಲದವರೆಂದು ಹೇಳುತ್ತಾರೆ.4 ತಮಿಳುನಾಡಿನಲ್ಲಿದ್ದ ಅರವತ್ಮೂರು ಪುರಾತನ ಶಿವಶರಣರಲ್ಲಿ ಒಬ್ಬರಾದ ಕಣ್ಣಯ್ಯ ಈ ಸಮುದಾಯದ ಆದರಣೀಯ ಆದಿಮೂಲನಾದ ಭಗವಂತನು ಬೇಡರ ವಂಶವನ್ನು ಬೆಳೆಸಿದನೆಂಬ ಪ್ರತೀತಿ ಜನಮನದಲ್ಲಿ ಪ್ರಚಲಿತದಲ್ಲಿದೆ. ಮನುವಿನ ಏಳನೇ ಪೀಳಿಗೆಯವನಾಗಿ ಚಂದ್ರವಂಶದಲ್ಲಿ ಕಾರ್ತ್ಯಾವಿರ್‍ಯಾರ್ಜುನ ಜನಿಸಿದನಂತೆ ಈತ ಹೇಹಯ ರಾಜ್ಯವನ್ನು ಆಳುತ್ತಿದ್ದಾಗ ವೈಷ್ಣವ ಯಜ್ಞಯಾಗಾದಿಗಳನ್ನು ಮಾಡುತ್ತಿದ್ದ, ಇದೇ ಸಮಯದಲ್ಲಿ ಜಮದಗ್ನಿ ಈ ರಾಜನಿಂದ ಹತನಾದ ಇದರಿಂದ ಕೋಪಗೊಂಡ ಪರಶುರಾಮ ಕಾರ್ತ್ಯವೀರ್‍ಯಾರ್ಜುನ ಮತ್ತವನ ಮಕ್ಕಳನ್ನು ಕೊಂದು ಕ್ಷತ್ರಿಯರನ್ನು ನಾಶಮಾಡಲು ಇಪ್ಪತ್ತೊಂದು ಸಲ ಭೂಮಿ ಮೇಲೆ ದಂಡಯಾತ್ರೆ ಕೈಗೊಂಡನಂತೆ. ಆಗ ಇವನಿಗೆ ಹೆದರಿದ ಕ್ಷತ್ರಿಯರೆಲ್ಲರೂ ಕಾಡಿಗೆ ಹೋಗಿ ಕಾಡುವಾಸಿಗಳಾದರು. ನಂತರದಲ್ಲಿ ಇವರೆ 'ಬೇಡ'ರೆಂದು ಹೇಳುತ್ತ, ಕ್ಷತ್ರಿಯರಿಗೂ ಬೇಡರಿಗೂ ಭಿನ್ನತೆಯಿಲ್ಲ ಎಂಬ ಮಾತನ್ನು ಸಂಶೋಧಕರು ಪ್ರತಿವಾದಿಸಿದ್ದಾರೆ.

ಬೇಡರ ಮೂಲ ವಾಲ್ಮೀಕಿ. ಕಿರಾತರರ ಯಜಮಾನನಾದ ಈತ ಕಾಮಕೇತು, ಲಕ್ಷ್ಯ, ಮೀನ, ಮಲ್ಲ ಮೊದಲಾದ ಏಳು ಜನ ಮಕ್ಕಳ ಮುಖಂಡತ್ವದಲ್ಲಿ ಏಳು ಪಡೆಗಳನ್ನು ರಚಿಸಿ ದರೋಡೆ ನಡೆಸುತ್ತಿದ್ದನೆಂದು, ಕಾಲಾಂತರದಲ್ಲಿ ಚದುರಿಹೋದ ಈ ಪಡೆಗಳೇ ಬೇಡರ ಜನಾಂಗದ ವಂಶವಿಕಾಸಕ್ಕೆ ನಾಂದಿಯಾಯಿತು ಎಂಬ ಐತಿಹ್ಯವಿದೆ. ಈ ಜನಾಂಗಕ್ಕೆ ತಮ್ಮದೇ ಆದ ಸಂಸ್ಕೃತಿ, ಇತಿಹಾಸವಿದೆ. ಅನೇಕರು ಪಾಳೇಗಾರರಾಗಿ, ಅಧಿಕಾರದಲ್ಲಿ ಮೆರೆದು ಧೀಮಂತರೆನಿಸಿಕೊಂಡು ನಾಡಿನ ಉದ್ದಗಲಕ್ಕೂ ತಮ್ಮ ಪ್ರಭುತ್ವವನ್ನು ಸ್ಥಾಪಿಸಿ ರಾಷ್ಟ್ರಭಕ್ತಿ, ಧೈರ್ಯಸಾಹಸ, ಶೌರ್ಯ, ಪರಾಕ್ರಮಗಳಿಗೆ ಪ್ರಸಿದ್ಧರಾಗಿ ಸಾಹಿತ್ಯ-ಸಂಸ್ಕೃತಿ ಕಲಾಪೋಷಕರಾಗಿ ಇತಿಹಾಸದ ಪುಟಗಳಲ್ಲಿ ದಾಖಲೆಯಾಗಿದ್ದಾರೆ. ಗಂಡುಗಲಿಕುಮಾರರಾಮ, ಎಚ್ಚಮನಾಯಕ, ಕಂಪಿಲರಾಯ, ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕರಾದ ಹಕ್ಕ-ಬುಕ್ಕರು. ಮದಕರಿನಾಯಕ, ಸುರಪುರದ ರಾಜಾಚಿಕ್ಕವೆಂಕಟನಾಯಕ, ಟಿಪ್ಪುನಾಯಕ, ವೀರಸಿಂಧೂರ ಲಕ್ಷ್ಮಣ ಹೀಗೆ ಅನೇಕ ಕಲಿಗಳು ಈ ಜನಾಂಗದವರೇ

ಆಗಿರುವರು. ತ್ರೇತಾಯುಗದ ಮೂಲ ಸಂವೇದನೆಯನ್ನು ಮತ್ತು ಅಂದಿನ ಕಾಲದ ಇತಿಮಿತಿಗಳನ್ನು ಸಂಸ್ಕೃತಿ ಆಚಾರ ವಿಚಾರಗಳನ್ನು ಹಾಗು ಬದುಕಿನ ಮೌಲ್ಯಗಳನ್ನು ಸೋಲು ಗೆಲುವುಗಳನ್ನು ಹೀಗೆ ಬದುಕಿನ ಎಲ್ಲ ಅವಸ್ಥೆಯ ಸಮಸ್ಯೆ ಸವಾಲುಗಳನ್ನು ಒಟ್ಟಾಗಿ ಹಿಡಿದಿಟ್ಟ ದಾರ್ಶನಿಕ ದೈತ್ಯಶಕ್ತಿ ವಾಲ್ಮೀಕಿಗೆ ದಕ್ಕಿದರ ಪರಿಣಾಮವಾಗಿ ರಾಮಾಯಣ ಮಹಾಕಾವ್ಯದ ಹುಟ್ಟಾಯಿತು, ಈ ಹುಟ್ಟು ಪುನರ್ ಶೋಧಿಸುವಿಕೆಗೆ ಈಡಾಗಿ, ಹೊಸ ರೂಪಗಳನ್ನು ತಾಳಿ ಜಗತ್ತಿನಲ್ಲಿ ಅನಾವರಣಗೊಳ್ಳುತ್ತಿವೆ. ವಾಲ್ಮೀಕಿಯ ವಂಶಸ್ಥರ ಕುರುಹು ರಾಮಾಯಣವಾದರೆ, ವ್ಯಾಸನ ವಂಶದ ಚರಿತೆ ಮಹಾಭಾರತವಾಗಬಹುದು ಎಂಬ ಊಹೆಯೂ ನಮ್ಮ ಸಾಹಿತ್ಯಾಸಕ್ತರಿಗೂ ಮತ್ತು ಇತಿಹಾಸಕಾರರಿಗೂ ಇದೆ.

ವಾಲ್ಮೀಕಿ ಸಮುದಾಯದ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಸ್ಥಾನಮಾನ

ಪುರಾತನ ಕಾಲದಲ್ಲಿ ಕಾಡು ಉನ್ನತ ಮತ್ತು ಕೆಳವರ್ಗದ ಬದುಕಿನ ಅವಾಸಸ್ಥಾನವಾಗಿತ್ತು. ಅರಣ್ಯದ ಒಂದು ಮೂಲೆಯಲ್ಲಿ ಹೋಮ ಹವನ ಯಜ್ಞಯಾಗಾದಿಗಳನ್ನು ವೈಭವದಿಂದ ನೆರವೇರಿಸುವ ಋಷಿವೃಂದ ಸಾಹಿತ್ಯ ಕಾವ್ಯ ಸಂಸ್ಕೃತಿಗಳ ವಕ್ತಾರರಾಗಿದ್ದರು. ಅದೇ ಕಾಡಿನ ಇನ್ನೊಂದು ಮೂಲೆಯಲ್ಲಿ ಬೇಟೆಯಾಡಿಕೊಂಡು ಅದನ್ನೇ ತಮ್ಮ ಹೊಟ್ಟೆ ಪಾಡಾಗಿಸಿಕೊಂಡು, ನಯ ನಾಜೂಕಿಲ್ಲದ, ಸಾಹಿತ್ಯಕಲೆಯ ಗಂಧಗಾಳಿ ಸೋಂಕಿರದೇ ಬೇಡ ಜನಾಂಗವೂ ಬದುಕುತ್ತಿತ್ತು. ನಮ್ಮ ಭಾರತೀಯ ಸಾಹಿತ್ಯದ ಬಹುಪಾಲು ಘಟನೆಗಳೆಲ್ಲ ಘಟಿಸುತ್ತಿದ್ದದ್ದು ಅರಣ್ಯದಲ್ಲೇ, ಕಾಡಿನಲ್ಲಿ ತಪಸ್ಸನ್ನು ಮಾಡುವ ಭಕ್ತರನ್ನು ಪರೀಕ್ಷಿಸಲು ಸಾಕ್ಷಾತ್ ಶಿವನೇ ಬೇಡನ ವೇಷವನ್ನು ಧರಿಸಿ ಬರುವಂಥ ಪ್ರಸಂಗಗಳು ಸಾಕಷ್ಟು ಇವೆ. ಮಹಾಭಾರತದಲ್ಲಿ ಅರ್ಜುನ ಇಂದ್ರಕೀಲದಲ್ಲಿ ತಪಸ್ಸಿನಲ್ಲಿದ್ದಾಗ ಶಿವ ಕಿರಾತ ವೇಷ ಧರಿಸಿ, ಪಾರ್ವತಿಗೆ ಪುಳಿಂದಿ ವೇಷ ತೊಡಿಸಿ ತಪಸ್ಸಿನಲ್ಲಿದ್ದವನ ಪರಾಕ್ರಮವನ್ನು ಒರೆಗೆ ಹಚ್ಚಲು ಬರುವನು. ಇಂಥ ಪ್ರಸಂಗಗಳನ್ನು ನಮ್ಮ ಸಾಹಿತ್ಯ, ಕಾವ್ಯಗಳಲ್ಲಿ ಅನೇಕ ಕವಿಗಳು ವಾಲ್ಮೀಕಿ, ಬೇಡರ ಪಾತ್ರಗಳನ್ನು ಬಹಳ ವಿಶಿಷ್ಟವಾಗಿ ಕಟ್ಟುತ್ತಿದ್ದರು. ಕಾಡಿನಲ್ಲಿ ಬದುಕುವ ಈ ಎರಡು ಸಮುದಾಯ ಒಂದಕ್ಕೊಂದು ವಿರುದ್ಧವಾದರೂ ಎಲ್ಲೋ ಒಂದು ಕಡೆ ಪೂರಕವಾಗುತ್ತಿದ್ದವು. ಶೂರರ ಸಾಹಸ ಚಾತುರ್ಯ, ಕೆಚ್ಚೆದೆ, ಮುಗ್ಧತೆ, ಅಜ್ಞಾನ, ಕವಿಋಷಿಗಳನ್ನು ಆಕರ್ಷಿಸಿದ್ದವು. ಅಂತೆಯೇ ಅವರ ಕಾವ್ಯಗಳಲ್ಲಿ ಆಯಧಗಳಂತೆ ಮಿಂಚಿ ಹೊಳೆದು ಮಾಯವಾಗುವ ಈ ಪಾತ್ರಗಳು ಹುಟ್ಟಿಕೊಂಡಿವೆ. ಶಿವನ ಕೈಯಲಗು ಹೊಳೆಯುವಂತೆ, ಕವಿಗಳ ಕಾವ್ಯಪುರಾಣಗಳಲ್ಲೆಲ್ಲಾ ಈ ಶೂರ ಸಾಹಸಿಗರ ಕಥಾಪ್ರಸಂಗಗಳು ಬರುತ್ತವೆ. ಇವರ ಶೌರ್ಯ ಸಾಹಸ ದಿಟ್ಟ ಹೆಜ್ಜೆ ಮತ್ತು ತ್ಯಾಗ, ಬಲಿದಾನ ಮತ್ತು ಮುಗ್ಧತೆಗೆ ಇವರೆ ಸಾಟಿಯಾಗುತ್ತಾರೆ. ನಾಯಕನ

ಗುಣಾತ್ಮಕತೆ, ಖಳನಾಯಕನ ಮೊಂಡುತನ, ಹಟಮಾರಿ ಗುಣಗಳು ಇವರಲ್ಲಿ ಮನೆ ಮಾಡಿವೆ. ಅಂತೆಯೇ ಆದಿಕವಿ ಪಂಪ ತನ್ನ 'ವಿಕ್ರಮಾರ್ಜುನವಿಜಯ' ಕಾವ್ಯದಲ್ಲಿ ಕಿರಾತಾರ್ಜುನೀಯ ಭಾಗದ ವಿವರದ ಬಗ್ಗೆ ವರ್ಣಿಸಿರುವನು. ಕುಮಾರವ್ಯಾಸನಲ್ಲಿಯೂ ಅಷ್ಟೇ ವಿಸ್ತಾರವಾಗಿ ಮೂಡಿಬರುತ್ತದೆ. ಶಿವನು ಶಬರನ ವೇಷತೊಟ್ಟ ವರ್ಣನೆ ಅದ್ಭುತ. ಕುಮಾರವ್ಯಾಸನ ಪದ್ಯದ ಸಾಲಿನಲ್ಲಿ 'ಚಲ್ಲಣ' ಎಂಬ ಪದವೂ ಬೇಡ ನಾಯಕರು ಇಂದಿಗೂ ಧರಿಸುವ ಸೊಂಟದ ಕೆಳ ಉಡುಗೆಗೆ ಹೇಳುವಂಥಾದ್ದು. ಅಲ್ಲದೇ ಪ್ರಾಣಿ ಬೇಟೆಯ ವಿವಿಧ ಸಲಕರಣೆ, ಆಯುಧಗಳಾದ ಬಲೆ, ಭರ್ಜಿ, ಬಿಲ್ಲು ಕೋಲು, ಬಲೆಯ ಬಗೆಗಳು, ಬಡಿಗೋಲು ಇತ್ಯಾದಿಗಳೆಲ್ಲ ಬೇಡನಾಯಕನೊಬ್ಬನ ಆಕರ್ಷಣೆಯ, ಶೂರತ್ವದ ಪರಿಕರಗಳಾಗಿವೆ. ಇನ್ನು ನಾಗವರ್ಮನ 'ಕರ್ನಾಟಕ ಕಾದಂಬರಿ'ಯಲ್ಲಿ ಬೇಡನ ಚತುರತೆ, ಅವನ ಆವೇಶ, ನಿಷ್ಕರುಣೆ, ಕೋಲಾಹಲದ ಚಿತ್ರಣವನ್ನು ಕಟ್ಟಿಕೊಡಲಾಗಿದೆ. ಮುದಿ ಬೇಡನೊಬ್ಬನ ದೀರ್ಘಬಾಹುಗಳು ಕರಿನಾಗರನಂತೆ ಇದ್ದು ರಕ್ತವನ್ನಂಟಿಕೊಂಡ ಅವನ ಕೈಗಳು ಗೂಡಿನಲ್ಲಿದ್ದ ವೈಶಂಪಾಯನ ಗಿಳಿಮರಿಯ ತಂದೆಯನ್ನು ಹಿಡಿದು ಗೋಣು ಮುರಿದು ಕೆಳಕ್ಕೆ ಬಿಸಾಡಿದ ಪರಿಯನ್ನು ಹೇಳಿದೆ. ಇಂಥ ನಿರ್ದಯಿ ಕಾಡುವಾಸಿಗಳಲ್ಲಿ ಹುದುಗಿದ್ದ ಮಾನವ ಸಂಬಂಧಗಳ ನೆಲೆಯನ್ನು ಸಹ ಕಾವ್ಯಗಳು ಕಟ್ಟಿಕೊಟ್ಟಿವೆ. ಅವಿವಾಹಿತ ಬೇಡ ಏರುಜವ್ವನದ ಬೇಡತಿಯನ್ನು ಕಂಡಾಗ ದುರ್ಬಲನಾಗುತ್ತಾನೆ. ಅವಳ ಚೆಲುವಿಕೆಗೆ ಇವನ ಪರಾಕ್ರಮ ಸೋಲೊಪ್ಪುತ್ತದೆ. ತಾನು ಬಯಸಿದ ಚೆಲುವೆ ದಕ್ಕುವವರೆಗೆ ತನ್ನ ಇತರ ಚಟುವಟಿಕೆಗಳಲ್ಲಿ ನಿರಾಸಕ್ತನಾಗುತ್ತಾನೆ. ಬೇಡತಿ ತನ್ನ ಪಕ್ಕಕ್ಕೆ ಬಂದಾಗ ಬೇಡನು ಹುಲಿಯ ಕಡೆ ನೋಡುವುದೇ ಇಲ್ಲ, ಮತ್ತದಕ್ಕೆ ಹೆದರುವುದು ಇಲ್ಲ. ಹೀಗೆ ಬೇಡನ ಮನದಲ್ಲಿದ್ದ ಕಾಮ, ಪ್ರೇಮ, ಪ್ರಣಯದಂಥ ಸಂಚಾರಿ ಭಾವಗಳನ್ನು ಪ್ರದರ್ಶಿಸುವ ಪದ್ಯಗಳನ್ನು ಸಾಹಿತ್ಯದಲ್ಲಿ ಕಾಣಬಹುದು.

ಅಡವಿಯ ಬೇಡನೊಬ್ಬನ ಸಂಸ್ಕೃತಿಯನ್ನು 'ಪಂಚತಂತ್ರ'ದ ಕಥೆಯೊಂದರ ಮೂಲಕ ದುರ್ಗಸಿಂಹ ವಿವರಿಸುತ್ತಾನೆ. ಕಾಡುಬೇಡರು ದಾರಿಹೋಕರನ್ನು ಬಡಿದು ದೋಚಿದರೂ ಅವರು ಮೂಲತಃ ಮುಗ್ಧ ಪ್ರಾಮಾಣಿಕರು ಎಂಬುದನ್ನು ದುರ್ಗಸಿಂಹ ತನ್ನ ಕಥೆಯ ಮೂಲಕ ತೋರಿಸಿದ್ದಾನೆ.

ಇತಿಹಾಸ-ಚರಿತ್ರೆಗೆ ಬಂದಾಗ ಕುಮಾರರಾಮ ಮತ್ತು ಆತನ ತಂದೆ ಕಂಪಿಲರಾಯ ವಿಜಯನಗರಕ್ಕೂ ಮೊದಲು ಪಾಳೆಯಗಾರರಾಗಿ ಮುಸ್ಲಿಂ ದಾಳಿಯನ್ನು ತಡೆಯಲು ಯತ್ನಿಸಿದ ಧೈರ್ಯ ಸಾಹಸಗಳನ್ನು ಕುರಿತ ಹಾಡುಗಳಿಂದಾಗಿ ಇತಿಹಾಸ ಪುರುಷರಾಗಿದ್ದಾರೆ. (ದಕ್ಷಿಣ ಭಾರತದ ಮೇಲಾಗುವಲ್ಲಿ) ಕಂಪಿಲರಾಯ ಎಂಬ ಹೆಸರಿನಲ್ಲಿ ಬೇಡರು ತಮ್ಮ ಯಾವುದೇ ಒಂದು ಗುಂಪಿಗೆ ಕರೆದುಕೊಳ್ಳುವ ಕಂಪಣ, ಕಂಪಳ ಹೆಸರು ಮುಂದೆ ಕಂಪಿಲರಾಯನಾಗಿರಬಹುದು. ಕರ್ನಾಟಕಕ್ಕೆ ಇಂಥದೊಂದು ಬೇಡರ ಗುಂಪು

ಬಂದು ನೆಲೆಸಿರಬೇಕು. ಅದಕ್ಕೆ ಕಂಪಳದುರ್ಗ ಎಂಬ ಹೆಸರು ಬಂದಿರಬಹುದು. ಕಂಪಳರಾಯನ ಪುತ್ರ ಕುಮಾರರಾಮನ ವ್ಯಕ್ತಿತ್ವ, ಅವನ ಶೌರ್ಯಸಾಹಸದ ಗಾಥೆಗಳನ್ನು ನಮ್ಮ ಜನಪದ ಗೀತೆ ಕಥನಗಳು ನಿರೂಪಿಸಿವೆ. ಕುಮಾರರಾಮನ ಸಾಂಗತ್ಯದಲ್ಲಿ ಈ ಜನಾಂಗದ ವೈಶಿಷ್ಟ್ಯಗಳು, ವೃತ್ತಾಂತಗಳು ಚಿತ್ರಿತಗೊಂಡಿವೆ. ಹುಟ್ಟುಕಲಿಗಳಾದ ಬೇಡನಾಯಕರಿಗೆ ಯುದ್ಧವೆಂದರೆ ಸಂತಸ. ಈ ಮಾತು ನಂಜುಂಡಕವಿಯ ಕಾವ್ಯದಲ್ಲಿ ಪ್ರಾಸಂಗಿಕವಾಗಿ ಮೂಡಿ ಬಂದು ಸಾಬೀತುಪಡಿಸಿದೆ. ಶಾಸನಗಳಲ್ಲಿ ಕೂಡಾ ಬೇಡ, ವಾಲ್ಮೀಕಿ ನಾಯಕರ ಪ್ರಸ್ತಾಪವಿದೆ. ಕೈಫಿಯತ್ತು, ಬಖೈರು, ಶಾಸನಗಳು ಬೇಡನಾಯಕರ ಬಗ್ಗೆ ಕೆಲ ಮಾಹಿತಿಯನ್ನು ನೀಡುತ್ತವೆ. ಬೇಡನೊಬ್ಬನ ವೀರಗಲ್ಲು, ಬೇಡತಿಯೊಬ್ಬಳ ಮಹಾಸತಿಯ ದಾಖಲೆಗಳಿವೆ. ಬೇಡನಾಯಕರು, ಕಾಡುಗೊಲ್ಲರು ತಾವು ತುರುಮಂದೆಯನ್ನು ಕಾಯುವಾಗ ಎರಗಿ ಬಂದ ಕ್ರೂರಮೃಗಗಳೊಂದಿಗೆ ಹೋರಾಡಿ ಪ್ರಾಣ ಕಳೆದುಕೊಂಡ ವಿವರಗಳನ್ನು ಜನಪದ ಕಥನಗೀತೆಗಳು ಸಾರುತ್ತವೆ. ದೇವತಾಸ್ವರೂಪಿಯಾದ ಗಾದ್ರಿಪಾಲಕನಾಯಕನಿಗೆ ಶರಣಸಂತತಿಯೆಂದು ಕರೆಯುತ್ತಾರೆ. ಈತ ಹುಲಿಯ ಕೈಗೆ ಸಿಕ್ಕು ಹೋರಾಡಿ ಮರಣಿಸಿದ. ಈತನಿಗೆ ಗುಡಿಯೊಂದನ್ನು ಕಟ್ಟಿ ಆರಾಧಿಸಲಾಗುತ್ತದೆ. ವಾಲ್ಮೀಕಿ ನಾಯಕರಲ್ಲಿ ವಿಶಿಷ್ಟಗುಣವೆಂದರೆ ಬೇಟೆ, ಹೋರಾಟ, ಆಹಾರಪ್ರಿಯತೆ. ಈ ಮೂರು ಗುಣಗಳು ಅವನಲ್ಲಿ ಸ್ತ್ರೀಬಯಕೆಯನ್ನು ಪ್ರಚೋದಿಸುತ್ತವೆ. ಒಟ್ಟಾರೆ ಶೌರ್ಯಸಾಹಸ, ತ್ಯಾಗಕ್ಕೆ ಹೆಸರಾದ ವಾಲ್ಮೀಕಿ ಸಮುದಾಯದ ಬಲಗಳೊಂದಿಗೆ ದೌರ್ಬಲ್ಯಗಳು ಕೂಡ ಇವೆ. ಅವರ ಧೈರ್ಯ, ನಿರ್ಭಿಢೆ ಸ್ವಭಾವ, ಆಕರ್ಷಕ ರೂಪು ದೃಢಕಾಯಗಳೊಂದಿಗೆ, ಅಜ್ಞಾನ, ಮೌಢ್ಯತೆ, ಮುಗ್ಧತೆ, ಆವೇಶಗಳು ಕಾಣಸಿಗುತ್ತವೆ.

ಕೊನೆ ಟಿಪ್ಪಣಿಗಳು

1. ಶಂಕರ ನಾರಾಯಣರಾವ್., ಸ್ವಾತಂತ್ರ್ಯಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2014, ಪು. 262
2. ರಾಜಣ್ಣ ಆರ್., ನಾಯಕ ಜನಾಂಗದ ಇತಿಹಾಸ, ಚಳ್ಳಕೆರೆ, 1982, ಪು. 5
3. ಹನೂರು ಕೃಷ್ಣಮೂರ್ತಿ., ಮ್ಯಾಸಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993, ಪು. 54
4. ಅದೇ

ಗ್ರಂಥಋಣ

1. ಬೆಳ್ಳಾವೆ ವೆಂಕಟನಾರಣಪ್ಪ., (ಸಂ) ವಿಕ್ರಮಾರ್ಜುನ ವಿಜಯ, ಕನ್ನಡ ಸಾಹಿತ್ಯ ಪರಿಷತ್ತು, 1969
2. ಮೀರಾಸಾಬಿಹಳ್ಳಿ ಶಿವಣ್ಣ, ನಾಯಕ ಜನಾಂಗ: ಒಂದುನೋಟ, ಕರ್ನಾಟಕ

ಜಾನಪದ ಅಕಾಡೆಮಿ, ಬೆಂಗಳೂರು, 1988

3. ವೆಂಕಣ್ಣಯ್ಯ ಟಿ.ಎಸ್., (ಸಂ) ನಾಗವರ್ಮನ ಕರ್ನಾಟಕ ಕಾದಂಬರಿ ಸಂಗ್ರಹ, ಮೈಸೂರು ವಿಶ್ವವಿದ್ಯಾಲಯ, 1975
4. ಹಾವನೂರು ಎಲ್.ಜಿ., ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ವರದಿ, ಬೆಂಗಳೂರು ಸರ್ಕಾರಿ ಮುದ್ರಣಾಲಯ, 1975
5. ಅಯ್ಯರ್ ಅನಂತಕೃಷ್ಣ., ದಿ ಮೈಸೂರು ಟ್ರೈಬ್ಸ್ ಆಂಡ್ ಕ್ಯಾಸ್ಟ್ಸ್, ಮೈಸೂರು ವಿಶ್ವವಿದ್ಯಾಲಯ, 1936

9

ಹಗಲುವೇಷಗಾರ ಪರಂಪರೆ ಮತ್ತು ಸಾಂಸ್ಕೃತಿಕ ಪಲ್ಲಟಗಳು

ಡಾ. ಮುಮ್ತಾಜ್ ಬೇಗಂ
ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ವಿಭಾಗ,
ಎಸ್.ಕೆ.ಎನ್.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಗಂಗಾವತಿ, ಜಿ: ಕೊಪ್ಪಳ. ಮೊಬೈಲ್: 9986666075

ಜನಪದದ ಅನುಭವದ ಅಗಾಧತೆಯ ಹಿನ್ನಲೆಯಲ್ಲಿ ರೂಪ ಪಡೆಯುವ ಜ್ಞಾನದ ತವನಿಧಿಯಲ್ಲಿ ಆ ನಾಡಿನ ಮೌಲ್ಯ, ನೀತಿ, ಧ್ಯೇಯ, ಆದರ್ಶಗಳು ಅಡಕವಾಗಿರುತ್ತವೆ. ಆಧುನಿಕತೆಯ ನಾಗಲೋಟದಲ್ಲಿರುವ ವೇಗದ ಯುಗದಲ್ಲಿ ನಮ್ಮಿಂದ ಪಂಚಭೂತಗಳನ್ನೊಳಗೊಂಡ ತಾಯ್ತನವನ್ನು ಹೊಂದಿರುವ ಜನಪದ ಸಂಸ್ಕೃತಿ ಇಂದು ಅಳಿವಿನ ಅಂಚಿನಲ್ಲಿದೆ. ವಿಸ್ಮೃತಿಗೆ ಒಳಗಾಗುತ್ತಿರುವ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಅರಿಯಬೇಕಾದ ಅವಶ್ಯಕತೆ ಹಿಂದಿಗಿಂತಲೂ ಇಂದು ಹೆಚ್ಚಿನ ಅವಶ್ಯಕತೆ ಇದೆ.

ಜಾನಪದ ಪ್ರಜ್ಞೆ ಬೆಳೆದಂತೆ ಜನಾಂಗಿಕ ಅಧ್ಯಯನಗಳಿಗೆ ಹೊಸ ಆಯಾಮ ದೊರೆತಂತಾಗಿದೆ. ನಮ್ಮ ದೇಶದಲ್ಲಿ ವಿಶಿಷ್ಟ್ಯ ಪೂರ್ಣ ಆಚರಣೆಗಳಿವೆ. ವೈವಿಧ್ಯಮಯ ಜಾನಪದ ಕಲೆಗಳನ್ನು ಮೈಗೂಡಿಸಿಕೊಂಡಿದೆ. ಸಂಸ್ಕೃತಿಯ ಉಳಿವು ಪರಂಪರಾಗತವಾದ ಸಾಂಸ್ಕೃತಿಕ ಸಂಪತ್ತಿನ ತಿಳುವು ಇಂದು ಅಗತ್ಯವಿದೆ.

ಜನಪದದ ಬದುಕಿಗೆ ಅನಂತ ಮುಖಗಳಿವೆ. ವೃತ್ತಿ, ನಂಬಿಕೆ, ಪರಂಪರೆ, ಆಚಾರ-ವಿಚಾರ, ಉಡುಗೆ-ತೊಡುಗೆ, ಊಟ-ವಸತಿ, ಸಂಪ್ರದಾಯ, ಭಾಷೆ, ಸಾಹಿತ್ಯ ಎಲ್ಲವನ್ನು ಒಳಗೊಂಡ ಸಂಗಮವೇ ಜನಪದರ ಬದುಕು. ಕರ್ನಾಟಕದಲ್ಲಿ ಅಲೆಮಾರಿ, ಅರೆ ಅಲೆಮಾರಿ, ಬುಡಕಟ್ಟು, ಆದಿವಾಸಿಗಳು ಹೀಗೆ ವೈಶಿಷ್ಟ್ಯತೆಯಿಂದ ಕೂಡಿದ ಉಪಸಂಸ್ಕೃತಿಗಳ ಆಗರವೇ ಇದೆ.

ಕರ್ನಾಟಕದಲ್ಲಿ ಹಲವಾರು ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳು

ಕಂಡು ಬರುತ್ತವೆ. ಅವುಗಳಲ್ಲಿ ಒಂದಾದ ಹಗಲುವೇಷಗಾರರ ಅಲೆಮಾರಿ ಸಮುದಾಯವು ಒಂದು. ಇವರನ್ನು ಬುಡ್ಗ ಜಂಗಮರೂ ಎಂದೂ ಕರೆಯಲಾಗುತ್ತದೆ. ಜನಪದರ ಕಲೆಗಳನ್ನೇ ವೃತ್ತಿಯನ್ನಾಗಿ ಅವಲಂಬಿಸಿ ಬದುಕುವ ಸಮುದಾಯಗಳಲ್ಲಿ ಹಗಲುವೇಷಗಾರರು ಸಮುದಾಯ ಒಂದು. ಲೌಕಿಕ ಮತ್ತು ಅಲೌಕಿಕ ಜನಪದ ಕಲೆಗಳನ್ನ ಮೈಗೂಡಿಸಿಕೊಂಡ ಅನೇಕ ಸಮುದಾಯಗಳ ಪೈಕಿ ಹಗಲುವೇಷಗಾರರು ಬದುಕಿನ ನಿರ್ವಹಣೆಗೆ ಪರಂಪರಾನುಗತವಾಗಿ ವೇಷ ಹಾಕುವುದನ್ನೇ ಮೂಲ ವೃತ್ತಿಯನ್ನಾಗಿ ಅನುಸರಿಸಿಕೊಂಡು ಬಂದಿದ್ದಾರೆ.

ಬಹು ಪ್ರಾಚೀನ ಹಾಗೂ ವೈವಿಧ್ಯಮಯ ಧಾರ್ಮಿಕ ಕಥೆಗಳ ಆಧಾರಿತ ಹಗಲುವೇಷ ಒಂದು ಕಾಲದಲ್ಲಿ ರಾಜವೈಭವ ಹಾಗೂ ಕಲಾವಿದರಿಗೆ ಆರ್ಥಿಕ ಸಂಪಾದನೆಯೂ ಇತ್ತು. ಹಗಲುವೇಷ ಒಂದು ಪಾರಂಪರಿಕ ಮನರಂಜನೆಯಾಗಿತ್ತು. ಜನರನ್ನು ರಂಜಿಸಲು ಮತ್ತು ಸಾಂಸ್ಕೃತಿಕ ಪರಂಪರೆಯ ಕುರುಹುಗಳನ್ನು ಕಾಪಾಡುವುದರ ಮೂಲಕ ತಮ್ಮ ಹೊಟ್ಟೆಪಾಡಿಗಾಗಿ ಆಡುವ ನಾಟಕ. ನಾಟಕ ಕಲೆಯನ್ನು ಮನೆ ಮುಂದೆ ಕೊಂಡೊಯ್ದಿರುವುದು ಅಲೆಮಾರಿ ಸಮುದಾಯದ ವಿಶೇಷ. ಈ ಸಮುದಾಯ ಕಲಬುರ್ಗಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹೀಗೆ ಕರ್ನಾಟಕದ ಹಲವು ಪ್ರಾಂತಗಳಲ್ಲಿ ಪ್ರಮುಖವಾಗಿ ಕಾಣುತ್ತೇವೆ.

ಹಗಲುವೇಷ ಹೊರನೋಟಕ್ಕೆ ಸಂಸ್ಕೃತಿಯ ಸಂಚಾರಿ ರೂಪವಾಗಿ ಕಂಡು ಬರುತ್ತದೆ. ಅಂದರೆ ಮನುಷ್ಯ ಒಂದೆಡೆಗೆ ನೆಲೆಯೂರಿ ಬದುಕು ಕಟ್ಟಿಕೊಂಡಿರದೇ ಅಲೆಮಾರಿಯಾಗಿ ಊರಿಂದ ಊರಿಗೆ ತಿರುಗುವ ಬದುಕಾಗಿರುತ್ತದೆ. ಅಲೆಮಾರಿ ಮನುಷ್ಯನ ಬದುಕಿನೊಂದಿಗೆ ಸಂಸ್ಕೃತಿಯು ಅಲೆಯುತ್ತದೆ. ಅಲೆಮಾರಿ ಸಮುದಾಯಗಳ ಸಂಸ್ಕೃತಿಯನ್ನು ಒಳಹೊಕ್ಕು ನೋಡಿದಾಗ ಸಂಸ್ಕೃತಿಯ ಸ್ಥಾಯಿರೂಪ ಪ್ರಮುಖವಾಗಿ ಕಾಣಿಸುತ್ತದೆ. ಈ ಸಂಸ್ಕೃತಿಯ ಪರಂಪರೆಯಲ್ಲಿ ಬದುಕುತ್ತಿರುವ ಜನರು ಬದಲಾವಣೆಗೆ ಒಗ್ಗಿಕೊಳ್ಳಲು ಅಸಾಧ್ಯವಾದ ಸ್ಥಿತಿಯಲ್ಲೇ ಇದ್ದು ಹಿಂದಿನ ಆಚಾರ-ವಿಚಾರದಲ್ಲೇ ಕಾಲ ತಳ್ಳುತ್ತಿರುವ ಸಮುದಾಯ ನಮ್ಮ ಮಧ್ಯೆ ಇದೆ.

ಜಗತ್ತಿನ ಯಾವ ಸಂಸ್ಕೃತಿಗಳು ಪ್ರಧಾನ ಸಂಸ್ಕೃತಿಯಾಗಿರದೇ ಬಹು ಸಂಸ್ಕೃತಿಯನ್ನು ಹೊಂದಿರುವದರಿಂದ ಎಲ್ಲ ಸಂಸ್ಕೃತಿಗಳು ಸಮಾನವೇ ಆದ್ದರಿಂದ ಹಗಲುವೇಷದ 'ಅಲೆಮಾರಿ ಸಂಸ್ಕೃತಿ' ಅನಾಗರಿಕವೆಂದು ಹೇಳುವುದಲ್ಲಿ ಅರ್ಥವಿಲ್ಲ. ಅವರು ಒಂದು ವಿಶಿಷ್ಟ ಸಂಸ್ಕೃತಿಯ ವಾರಸುದಾರರಾಗಿದ್ದಾರೆ.

ಈ ಅಲೆಮಾರಿ ಸಮುದಾಯದವರು ಊರಿಂದ ಊರಿಗೆ ಹೋಗಲು ಕುದುರೆ, ಕತ್ತೆಗಳ ಮೇಲೆ ಸಾಮಾನು ಸರಂಜಾಮುಗಳನ್ನು ಸಾಗಿಸಲು ಬಳಸುತ್ತಾರೆ. ಕೆಲವು ಸಂದರ್ಭಗಳಲ್ಲಿ ತಾವೇ ಹೊತ್ತುಕೊಂಡು ಹೋಗುತ್ತಾರೆ. ಹೀಗೆ ಒಂದೊಂದು ತಂಡದಲ್ಲಿ ನಾಲ್ಕು ಐದು ಕುಟುಂಬಗಳಿರುತ್ತವೆ. ವೃತ್ತಿ

ಬದುಕಿನಲ್ಲಿ ಎಲ್ಲರೂ ಒಟ್ಟಾಗಿ ವೇಷವನ್ನು ಹಾಕುತ್ತಾರೆ. ವಸತಿ ವ್ಯವಸ್ಥೆಯಲ್ಲಿ ಮಾತ್ರ ಪ್ರತ್ಯೇಕವಾಗಿ ಬಿಡಾರಗಳನ್ನು ಹಾಕಿಕೊಳ್ಳುತ್ತಾರೆ.

ಊರಿಂದ ಊರಿಗೆ ಅಲೆಯುತ್ತ ವೇಷವನ್ನು ಹಾಕಿ ಕಲೆಯನ್ನು ಪ್ರದರ್ಶಿಸಿ ಅದಕ್ಕೆ ಬದಲು ಕೊಟ್ಟಷ್ಟು ಭಿಕ್ಷೆಯನ್ನು ಪಡೆದು ಅದರಿಂದಲೇ ಜೀವನ ಸಾಗಿಸುವ ಸಮುದಾಯವದು. ಆ ಭಿಕ್ಷೆಯನ್ನು 'ಧರ್ಮ ಬಿಕ್ಷೆ' ಎಂದು ಕರೆಯುತ್ತಾರೆ. ಪ್ರತಿಯೊಂದು ಊರಿನಲ್ಲಿ ಹತ್ತರಿಂದ ಹದಿನೈದು ದಿನಗಳವರೆಗೆ ಊರ ಹೊರಗೆ ಗುಡಾರ ಹಾಕಿಕೊಂಡು ತಾತ್ಕಾಲಿಕ ವಸತಿ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ನಿತ್ಯವು ಒಂದೊಂದು ವೇಷ, ರೂಪ ಹಾಕಿ, ಓಣಿ-ಓಣಿ, ಮನೆಯಿಂದ ಮನೆಗೆ ತಿರುಗಾಡಿ ಸಂಭಾಷಣೆ ಹಾಗೂ ಹಾಡುಗಾರಿಕೆಯ ಮೂಲಕ ಜನರನ್ನು ರಂಜಿಸುತ್ತಾರೆ.

ವಿಧ ವಿಧದ ಸಣ್ಣಕತೆ ರಾಮಾಯಣ, ಮಹಾಭಾರತ ಅಲ್ಲದೇ ಸಾಮಾಜಿಕ ನೀತಿ ಕತೆಗಳ ಕಥಾಭಾಗಗಳನ್ನು ಆಯ್ದುಕೊಂಡು ದಿನಕ್ಕೊಂದರಂತೆ ಪ್ರಸಂಗದ ವೇಷಧರಿಸಿ ಪ್ರದರ್ಶನ ನೀಡುತ್ತಾರೆ. ಜನ ಸಾಮಾನ್ಯರಲ್ಲಿ ಸಾಂಸ್ಕೃತಿಕ, ಧಾರ್ಮಿಕ, ಪೌರಾಣಿಕ ಅರಿವನ್ನುಂಟು ಮಾಡುವ ವಾರಸುದಾರರಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೆಣ್ಣು ಮಕ್ಕಳು ಸಮೀಪದ ಊರುಗಳಿಗೆ ತೆರಳಿ ಗಂಗೆ ಗೌರಿ ಕಥೆಯನ್ನು ಹಾಡುವುದರ ಮೂಲಕ ಭಿಕ್ಷೆಯನ್ನು ಬೇಡುತ್ತಾರೆ. ಒಟ್ಟಾರೆ ಕುಟುಂಬದವರೆಲ್ಲ ಇಂಥ ಕಲೆಯನ್ನು ಕರಗತ ಮಾಡಿಕೊಂಡ ಸಮುದಾಯ ಇದಾಗಿದೆ. ಇದು ಅಲೆಮಾರಿ ಸಮುದಾಯಗಳ ವೈಶಿಷ್ಟ್ಯವು ಹೌದು.

ಮೂಲ

ಜನಪದ ರಂಗಭೂಮಿಗೆ ಪ್ರೇರಕವಾಗಿರುವ ಇನ್ನೊಂದು ಕಲೆ ಹಗಲುವೇಷ. ಬುಡಕಟ್ಟು ಸಮುದಾಯಕ್ಕೆ ಸೇರಿದ ಇವರು ಆಂಧ್ರ ಮತ್ತು ಕರ್ನಾಟಕದ ಗಡಿಭಾಗಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಆಂಧ್ರದಲ್ಲಿ ಇವರನ್ನು "ಜಂಗಾಲೇರು" ಎಂದು ಕರೆಯುತ್ತಾರೆ.

'ಜಂಗಾಲೇರು' ಎನ್ನುವ ಶಬ್ದದ ಅರ್ಥ ಸದಾ ಸುತ್ತುತ್ತಿರುವವರು ಎಂದು ಬುಡಕಟ್ಟು ಸಮುದಾಯದವರು ಸದಾ ಕಾಡುಮೇಡು ಅಲೆಯುತ್ತಿದ್ದುದರಿಂದಲೋ ಏನೋ ಈ ಹೆಸರು ಬಂದಿರುವ ಸಾಧ್ಯತೆಗಳಿವೆ. ಹೈದ್ರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟ ಪ್ರದೇಶದಲ್ಲಿ ಈ ಸಮುದಾಯದವರು ಹೆಚ್ಚಾಗಿ ಇದ್ದಾರೆ. ನಿಜಾಮನ ಆಳ್ವಿಕೆಯಲ್ಲಿ ಉರ್ದುಭಾಷೆಯ ಪ್ರಭಾವ ಹೆಚ್ಚಾಗಿ ಇತ್ತು ಆದ್ದರಿಂದ ಕಾಡುಮೇಡನ್ನು, ಅಲೆಯುವವರನ್ನು ಜಂಗಿ, ಜಂಗಾಲು ಎಂದು ಕರೆಯುವುದು ರೂಢಿ. ಆದ್ದರಿಂದ ಜಂಗಲ್ ಎನ್ನುವ ಪದ ತೆಲುಗು ಭಾಷಿಕರ ರೂಪಿಯಲ್ಲಿ 'ಜಂಗಾಲು' ಎನ್ನುವ ಅರ್ಥವನ್ನು ಪಡೆದುಕೊಂಡಿರುವ ಸಾಧ್ಯತೆಗಳಿವೆ.

ಹಗಲುವೇಷ ಹಾಕುವವರನ್ನು 'ಬುಡ್ಗ ಜಂಗಾಲು' ಎಂದು ಕರೆಯಲಾಗುತ್ತದೆ.

ಈ ಹೆಸರಿನ ನಿಷ್ಪತ್ತಿಯ ಬಗೆಗೆ ಅನೇಕ ವಿದ್ವಾಂಸರು ತಮ್ಮದೇ ಆದ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ತೆಲುಗು ಸಾಹಿತ್ಯದಲ್ಲಿ 'ಬುಡ್ಗ ಜಂಗಾಲು' ಹೆಸರಿನ ಬಗೆಗೆ ಸಿಕ್ಕ ಉಲ್ಲೇಖಗಳು ಪ್ರೊ. ಭೀಮರಾಜು ಅವರು ತಮ್ಮ 'ತೆಲುಗು ಜನಪದ ಗೇಯ ಸಾಹಿತ್ಯಂ' ಎನ್ನುವ ಕೃತಿಯಲ್ಲಿ ವಾದ್ಯವನ್ನು ನುಡಿಸುತ್ತಾ ಕಥೆ ಹೇಳುವ ಜನರನ್ನು 'ಬುಡ್ಗ ಜಂಗಾಲು' ಎಂದು ಕರೆದಿದ್ದಾರೆ.

ಮರುಮಾರು ಕೋದಂಡ ರಾಮರೆಡ್ಡಿ ಅವರು ಬರೆದಿರುವ 'ಮೊಂಡಲಿಕ ಪದಕೋಶ' ಎನ್ನುವ ಗ್ರಂಥದಲ್ಲಿ ವಿವರಿಸುತ್ತಾ 'ತಂದಾನಾ' ಕಥೆಗಳನ್ನು ಹೇಳಿ ಜೀವಿಸುವ ಬುರ್ರ ಕಥೆಯುವರು "ಬುಡಗೇಲು" ವಾದ್ಯವನ್ನು ನುಡಿಸುತ್ತಾ ಭಿಕ್ಷೆ ಎತ್ತುವವರು 'ಬುಡ್ಗ ಜಂಗಾಲು' ಎಂದು ತಿಳಿಸಿದ್ದಾರೆ.

ಮಿಕ್ಕಿಲಿಸೇನಿ ರಾಧಾಕೃಷ್ಣಮೂರ್ತಿ ಅವರು ತಾವು ರಚಿಸರುವ 'ಆಂದ್ರ ನಾಟಕರಂಗ ಚರಿತ್ರಾ (ಪುಟ-205) ಎನ್ನುವ ಗ್ರಂಥದಲ್ಲಿ ಈ ಸಮುದಾಯದವರು ಪ್ರಾಚೀನ ಕಾಲದಲ್ಲಿ ಕಥೆಗಳನ್ನು ಹೇಳುವುದರ ಮೂಲಕ ಉದರ ಪೋಷಣೆ ಮಾಡಿಕೊಳ್ಳುತ್ತಿದ್ದರು. ಕಥೆ, ಗೀತೆಗಳನ್ನು ಹೇಳುವಾಗ 'ಬುಡಿಗೆ' ಎನ್ನುವ ವಾದ್ಯವನ್ನು ವಿಶೇಷವಾಗಿ ಬಳಸುತ್ತಾರೆ. ಹೀಗಾಗಿ 'ಬುಡ್ಗ ಜಂಗಾಲು' ಹೆಸರು ಬಂದಿದೆ.

Caste and Tribes of Southern Indiaದ ಪ್ರಥಮ ಸಂಪುಟದಲ್ಲಿ ಬೇಡರನ್ನು 'ಬೇಡ ಜಂಗಾಲು' ಎಂದು ಕರೆಯಲಾಗಿದೆ. ತೆಲುಗಿನಲ್ಲಿ ಇವರನ್ನು 'ಬಿಂಗೊಳ್ಳು' ಎಂದು ಕರೆಯುತ್ತಾರೆ. ವೇಷವನ್ನು ಹಾಕುವವರು ಒನಪು, ವಯ್ಯಾರ, ಬಿಂಕ, ಬಿನ್ನಾಣಗಳನ್ನು ತೋರಿಸುವದು 'ಬಿಂಗೊಳ್ಳು' ಎಂದು ಹೆಸರು ಪಡೆದರು (ಕರ್ನಾಟಕ ಬುಡಕಟ್ಟು ಪುಟ-627)

ಎಲ್.ಜಿ. ಹಾವನೂರು ಮುಖಂಡತ್ವದ 1975ರ ವರದಿಯ 4ನೇ ಭಾಗದಲ್ಲಿ ಹಗಲುವೇಷದವರನ್ನು 'ಬೇಡ ಜಂಗಂ' ಎಂದು ಗುರುತಿಸಲಾಗಿದೆ. ಈ ವರದಿಯ ಅನ್ವಯ ಈ ಸಮುದಾಯ ಹಿಂದುಳಿದ ಜಾತಿಗೆ ಸೇರಿದ್ದು, ಆರ್ಥಿಕ ಸುಧಾರಣೆ ಮತ್ತು ಮೀಸಲಾತಿಯ ಅವಶ್ಯಕತೆಗಳ ಬಗೆಗೂ ಹೇಳಲಾಗಿದೆ. ಆದರೆ ಇವರು ಅಲೆಮಾರಿಗಳಾಗಿದ್ದರಿಂದ ಇವರನ್ನು ಅಲೆಮಾರಿ ಬುಡಕಟ್ಟು ಎಂದು ಗುರುತಿಸುವುದು ಯೋಗ್ಯ(ಕರ್ನಾಟಕ ಬುಡಕಟ್ಟು ಸಂಪುಟ-628)

ಕನ್ನಡ ಸಾಹಿತ್ಯದಲ್ಲಿ ಬುಡ್ಗ ಜಂಗಾಲು ಕುರಿತು ಸರಿಯಾದ ಉಲ್ಲೇಖಗಳು ದೊರೆತಿಲ್ಲ. ಆದರೆ ಈ ಸಮುದಾಯದವರು ಹಲವಾರು ವೇಷಗಳನ್ನು ಹಾಕುವದರಿಂದ ಇವರನ್ನು 'ಬಹುರೂಪಿ'ಗಳೆಂದು ಉಲ್ಲೇಖಗಳು ಕಾಣಸಿಗುತ್ತವೆ.

ವಚನ ಸಾಹಿತ್ಯದಲ್ಲಿ "ಬುಡ್ಗ ಜಂಗಮ" ಸಮುದಾಯದ ಬಗೆಗೆ ಸಿಗುವ ಉಲ್ಲೇಖಗಳೆಂದರೆ

ವಚನಕಾರ ಚೆನ್ನಬಸವಣ್ಣ ತಮ್ಮ ವಚನದಲ್ಲಿ 'ನಟವರರು' ನಟನೆಯನ್ನು ಮುಖ್ಯವಾಗಿಸಿಕೊಂಡು ಸಾಹಿತ್ಯ ಸಂಗೀತದೊಂದಿಗೆ ಮೇಳೈಸಿಕೊಂಡಿರುವ ಈ ಸಮುದಾಯದವರನ್ನು ನಟವರರು ಎಂದು ಕರೆದಿದ್ದಾರೆ.

"ಉಟ್ಟರೆ ತೊಟ್ಟರೇನಯ್ಯ ನಟುವರಂತೆ
ಕೊಟ್ಟರೆ ಕೊಂಡರೇನಯ್ಯ ವೇಶಿಯರಂತೆ"

– ಎಂದು ನಟುವವರು ವೇಷವನ್ನು ಹಾಕುತ್ತಿದ್ದುದರ ಬಗೆಗೆ ಹೇಳಿದ್ದಾರೆ.

ಬಿಬ್ಬಿ ಬಾಡಯ್ಯನ ವಚನದಲ್ಲೂ ಈ ಸಮುದಾಯದವರ ಬಗೆಗೆ ಉಲ್ಲೇಖಗಳನ್ನು ಕಾಣುತ್ತೇವೆ.

"ನಾನಾ ವೇಷದ ತೊಟ್ಟು ಆಡುವವನಂತೆ
ಬಹುರೂಪ ಬೇರಲ್ಲದೆ; ಆಡುವ ನಾನೊಬ್ಬನೆ
ಎಲ್ಲಿ ಅರ್ಪಿತ ಮುಖ ಅಲ್ಲಿಯೂ ನೀನೆ–(ಏಕಾಂಥರ ಸೋಮೇಶ್ವರ ಲಿಂಗವೆ ಬೆಂಗಳೂರು ವಿಶ್ವವಿದ್ಯಾಲಯ ವಚನ ಕಮ್ಮಟ ಪುಟ–110) ವಿವಿಧ ವೇಷಗಳನ್ನು ತೊಟ್ಟು ನಟನೆಯನ್ನು ಹಾಡುವುದರ ಮೂಲಕ ಮಾಡುವವನನ್ನು ಬಹುರೂಪಿ ಎಂದು ಸ್ಪಷ್ಟವಾಗಿ ತಿಳಿಸುತ್ತಾನೆ. ಶರಣ ಅಂಬಿಗರ ಚೌಡಯ್ಯ ಬಹುರೂಪಿ ಸಮುದಾಯಕ್ಕೆ ಸೇರಿದವನೆಂದು ಕಂಡು ಬರುತ್ತದೆ. ಹೀಗಾಗಿ ಬುಡ್ಗ ಜಂಗಮ ಸಮುದಾಯ 12ನೇ ಶತಮಾನದ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದಿರಬಹುದೆಂದು ಹೇಳಲಾಗುತ್ತದೆ.

ಬುಡ್ಗ ಜಂಗಮ ಸಮುದಾಯದ ವಿವಿಧ ಹೆಸರುಗಳು

ಬುಡ್ಗ ಜಂಗಮರನ್ನು ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ. ಅವುಗಳೆಂದರೆ ವೇಷಗಾರರು, ಬಹುರೂಪಿ, ವೇಷಧಾರಿ, ಯಾಸಗಾರ, ಸನ್ಯಾಸಿ, ಯಾಸಗೇರ, ಬೈರೂಪಗಾರ, ಜಾತಿಗಾರ, ಹಗಲುವೇಷಗಾರರು, ಬಿಂಗಿ, ಭಾಗವತ, ಬಂಗೇರ, ಹರಿದಾಸರು, ಭಟ್ಟರಾಜರು, ರೂವಾರಿ, ರಾಮಲೀಲಾ, ನಾಟಕದವರು, ಬುರ್ರಾ ಕಥೆ ಹೇಳುವವರು ಎಂದೆಲ್ಲಾ ಕರೆಯಲಾಗುತ್ತದೆ. ಹೀಗೆ ಪ್ರದೇಶದಿಂದ ಪ್ರದೇಶದಲ್ಲಿ ಬೇರೆ ಬೇರೆ ಹೆಸರುಗಳಿಂದ ಬುಡ್ಗ ಜಂಗಮ ಸಮದಾಯದವರನ್ನು ಗುರುತಿಸುತ್ತಾರೆ.

ನೆಲೆ ನಿಂತಿರುವ ಪ್ರದೇಶಗಳು

ಹಗಲು ವೇಷಗಾರರು ಅಲೆಮಾರಿ ಸಮುದಾಯದವರಾಗಿರುವುದರಿಂದ ಒಂದೆಡೆ ನೆಲೆ ನಿಲ್ಲುವುದು ಅಪರೂಪ. ಆದರೆ ಆಧುನಿಕತೆ ಬೆಳೆದಂತೆಲ್ಲ ಇವರು ಒಂದೆಡೆ ನೆಲೆಯನ್ನು ಕಂಡುಕೊಂಡರು. ಯಾವುದೇ ಹಳ್ಳಿಗೆ ಹೋದರು ಮತ್ತೆ ಕೆಲ ದಿನಗಳ ನಂತರ ಊರಿಗೆ ಮರಳಿ ಬರುತ್ತಾರೆ. ಕಲಾ ಪ್ರದರ್ಶನ ಮತ್ತು ಭೀಕ್ಷಾಟನೆಗಾಗಿ ಕೆಲವೊಂದು ಹಳ್ಳಿಗಳನ್ನು ಇವರ ತಂಡಗಳು ಆಯ್ಕೆ ಮಾಡಿಕೊಂಡಿರುತ್ತಾರೆ.

ಬುಡ್ಗ ಜಂಗಮರು ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ನೆಲನಿಂತುಕೊಂಡಿರುವುದು ಗಮನಿಸಬಹುದು. ಅಲ್ಲದೇ ಹೈದ್ರಾಬಾದ ಕರ್ನಾಟಕದ ಭಾಗಗಳಾದ ಕಲಬುರ್ಗಿ, ಸುರಪುರ, ಮಾರೂರು, ಚಿಂತರೆ, ಚಿಟಗುಪ್ಪ, ಯಮ್ಮಿಗನೂರು, ಯಡ್ರಾಮಿ, ಲಿಯಾಪುರ, ಬೋರಾಳ, ಶಹಪೂರ, ಶಾರದಹಳ್ಳಿ, ಚಿಂಚೊಳ್ಳಿ, ಮಾಲಾಪುರ, ರಾಮಾಪುರ, ಕಂಪಳದೇವರ ಹಟ್ಟಿ, ರಾಯಚೂರು, ಮಾನ್ವಿ, ಸಿರವಾರ, ಕವಿತಾಳ, ಯಾಪಲಪರ್ವಿ, ಮಾರಾಟಂ, ಸದಲಗುಟ್ಟು, ಹಾಕುಲಕುಂಪಿ, ಭಾವಣಿ, ಬಯ್ಯಾಪುರ, ಕಿನ್ನಾಳ, ಹನುಮಸಾಗರ, ಸಿದ್ದಾಪುರ, ಬಳ್ಳಾರಿ, ಹೊಸಪೇಟೆ, ಸಿರಗುಪ್ಪ, ಬಲಕುಂದಿ, ಮಲ್ಯಾಪುರ, ಹಳೆದರೋಜಿ, ನಾಣ್ಯಪುರ ಹಗರಿಬೊಮ್ಮನಹಳ್ಳಿ, ಹಂಪಾಪಟ್ಟಣ ಹೀಗೆ ಅನೇಕ ಕಡೆಗಳಲ್ಲಿ ತಾತ್ಕಾಲಿಕವಾಗಿ ನೆಲೆ ನಿಂತಿದ್ದಾರೆ.

ಜನಸಂಖ್ಯೆ : ಈ ಸಮುದಾಯದವರು ವರ್ಷಪೂರ್ತಿ ಅಲೆಮಾರಿಗಳಾಗಿ ಸಂಚರಿಸುವುದರಿಂದ ಜನಸಂಖ್ಯೆ ಎಷ್ಟಿದೆ ಎಂಬುದನ್ನು ನಿಖರವಾಗಿ ಹೇಳಲು ಬರುವುದಿಲ್ಲ. ಆದರೆ ಹಾವನೂರು ವರದಿಯಲ್ಲಿ ಇವರುಗಳ ಜಾತಿಯನ್ನು ಉಲ್ಲೇಖಿಸಲಾಗಿದೆ. 1991ರ ಜನಗಣತಿ ಜಿಲ್ಲಾವಾರು ಅಂಕಿ–ಅಂಶಗಳ ಪ್ರಕಾರ ಪುರುಷರು 62461, ಮಹಿಳೆಯರು–58595 ಒಟ್ಟು 1,21,05ರ ಜನಸಂಖ್ಯೆ ಕರ್ನಾಟಕದಲ್ಲಿದೆ ಎಂದು ವರದಿ ಮಾಡಲಾಗಿತ್ತು. ಆದರೆ ಅದು 2019ರ ಅವಧಿಗೆ ಐದು ಪಟ್ಟು ಹೆಚ್ಚಾಗಿರುವ ಸಾಧ್ಯತೆಗಳಿವೆ.

ಭಾಷೆ

ಭಾಷೆ ವ್ಯಕ್ತಿ ವ್ಯಕ್ತಿಗಳಲ್ಲಿ ಸಂವಹನವನ್ನು, ಸಂಪರ್ಕವನ್ನು ಸಾಧ್ಯಮಾಡಿಕೊಡುವ ಪ್ರಮುಖ ಮಾಧ್ಯಮಗಳಲ್ಲಿ ಒಂದಾಗಿದೆ. ಜ್ಞಾನದ ಸಂವಹನ ಭಾಷೆಯ ಮೂಲಕವೇ ಆಗುವುದು. ಭಾಷೆಯೆಂಬುದು ನಿಂತ ನೀರಲ್ಲ ಸದಾ ಹರಿಯುವ ನದಿಯಂತೆ ಕಾಲಕಾಲಕ್ಕೆ ನದಿಯು ತನ್ನ ಪ್ರವಾಹವನ್ನು ಬದಲಿಕೊಂಡು ಹರಿಯುವಂತೆ ಭಾಷೆಯೂ ಕಾಲಕಾಲಕ್ಕೆ ಅನೇಕ ಬದಲಾವಣೆಯನ್ನು ಹೊಂದಿ ಜನರ ಮಧ್ಯ ಜೀವಂತಿಕೆಯನ್ನು ಉಳಿಸಿಕೊಳ್ಳುವ

ಗುಣ ಹೊಂದಿದೆ.

ಬುಡ್ಗ ಜಂಗಮರು ಊರೂರು ಪ್ರದೇಶದಿಂದ ಪ್ರದೇಶಕ್ಕೆ ಅಲೆಯುವಾಗ ಅಲ್ಲಿಯ ಸ್ಥಳೀಯ ಜನರೊಂದಿಗೆ ವ್ಯವಹರಿಸ ಬೇಕಾಗುತ್ತದೆ. ಅವರು ಕನಿಷ್ಟ ಎರಡು ಮೂರು ಭಾಷೆಗಳನ್ನಾದರೂ ಕಲಿತಿರುತ್ತಾರೆ. ಭಾಷೆ ಸಂಸ್ಕೃತಿಯ ವಾಹಕವಾಗಿರುವುದರಿಂದ ಒಂದು ಸಮುದಾಯದ ಸಾಂಸ್ಕೃತಿಕ ಬದುಕನ್ನು ಭಾಷೆ ಕಟ್ಟಿಕೊಡುತ್ತದೆ. ಈ ಸಮುದಾಯದವರ ಮನೆಯ ಭಾಷೆ ತೆಲುಗು ಮಿಶ್ರಿತ ಬುಡ್ಗ ಉಪಭಾಷೆಯಾಗಿದೆ. ಅದನ್ನು 'ಬುಡ್ಗ' ಮರುಗ ಭಾಷೆ ಎಂದು ಕರೆಯಲಾಗುತ್ತದೆ. ದೈನಂದಿದ ವ್ಯವಹಾರಕ್ಕೆ ಕನ್ನಡ ಭಾಷೆಯನ್ನು ಸಾಮಾನ್ಯವಾಗಿ ಬಳಸುತ್ತಾರೆ. ಇವರುಗಳಿಗೆ ತೆಲುಗು, ಮರಾಠಿ, ಗುಜರಾತಿ, ತಮಿಳು, ಮಳಯಾಳಂ ಹೀಗೆ ಹಲವು ಭಾಷೆಗಳನ್ನು ಪ್ರದರ್ಶನದ ಕಲೆಗೆ ಬಳಸಿಕೊಳ್ಳುತ್ತಾರೆ. ಇತ್ತೀಚೆಗೆ ಇಂಗ್ಲೀಷ ಭಾಷೆಯ ಪದ ಪ್ರಯೋಗಗಳನ್ನು ಕಾಣುತ್ತೇವೆ. ಶಾಲಾ ಕಾಲೇಜುಗಳ ಮೆಟ್ಟಿಲನ್ನು ತುಳಿಯದಿದ್ದರು ಕಲಾಪ್ರದರ್ಶನಕ್ಕೆ ಅಗತ್ಯವಿರುವ ಜ್ಞಾನವನ್ನು ಕಲೆತುಕೊಂಡಿರುತ್ತಾರೆ.

ಹಾಕುವ ವೇಷಗಳು

ಅನೇಕ ಬಗೆಯ ವೇಷಗಳನ್ನು, ರೂಪಗಳನ್ನು ಹಾಕುತ್ತಿದ್ದದರಿಂದ ಇವರನ್ನು ಬಹುರೂಪಿಗಳೆಂದು ಕರೆಯಲಾಗುತ್ತದೆ. ಈ ಸಮುದಾಯದವರು ಸಾಮಾನ್ಯವಾಗಿ ಕಲಾ ಪ್ರದರ್ಶನಕ್ಕಾಗಿ ಹಾಕುವ ವೇಷಗಳೆಂದರೆ, ಭಸ್ಮಾಸುರ, ಮೋಹಿನಿ, ಲವಕುಶ, ವಾಲಿ, ಸುಗ್ರೀವ, ಆಂಜನೇಯ, ಸುಂದ, ಉಪಸುಂದ, ರಾಮ, ಲಕ್ಷ್ಮಣ, ಸೀತೆ, ಭೀಮ, ವಾಲಿ, ಅರ್ಧನಾರೀಶ್ವರ, ಬೈರಾಗಿ, ಜಂಗಮ, ಅಗಸ, ಸಿದ್ದರು, ದಾಸರು, ಲಂಬಾಣಿ, ಐನೋರು, ಪಾಳೇಗಾರರು, ಪೋಲಿಸು, ಬ್ಯಾಡರು ಹೀಗೆ ಮೂವತ್ಮೂರು ವೇಷವನ್ನು ಹಾಕುತ್ತಾರೆ.

ಇವರುಗಳ ಕಲಾ ಪ್ರದರ್ಶನದಲ್ಲಿ ಸಂಗೀತ, ಸಂಭಾಷಣೆ, ಅಭಿನಯ ಮುಖ್ಯವಾಗಿರುತ್ತವೆ. ಈ ಸಮುದಾಯದಲ್ಲಿ ಚಿಕ್ಕ ಮಕ್ಕಳಿಂದ ಮುದುಕರವರೆಗೆ ಹಾಡುಗಳನ್ನು ಹಾಡಲು ಕಲಿತಿರುತ್ತಾರೆ. ಇವರ ಹಾಡುಗಾರಿಕೆಯಲ್ಲಿ ವೀಣೆಯಾಕಾರದ ತಂಬೂರಿ, ಬುಡ್ಗ, ಗಗ್ಗರ, ಹಾರ್ಮೋನಿಯಂ, ತಬಲ, ಖಡ್ಗ ಮುಂತಾದ ಉಪಕರಣಗಳನ್ನು ಉಪಯೋಗಿಸುತ್ತಾರೆ.

ಸಾಂಸ್ಕೃತಿಕ ಬದುಕು

ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ಹಗಲು ವೇಷದ ವೃತ್ತಿ ಬದುಕಿನೊಂದಿಗೆ ಕಾಲ ಕಳೆಯುವ ಶ್ರಮಜೀವಿ. ಅಲೆಮಾರಿಗಳ ಬದುಕು ತುಂಬಾ ಕಷ್ಟಕರವಾದುದು. ಆಧುನಿಕತೆಯ ಭರಾಟೆ, ಜಾಗತೀಕರಣ, ಔದ್ಯೋಗಿಕರಣ,

ಕೈಗಾರೀಕರಣದಂತ ಜಗತ್ತಿನಲ್ಲಿ ಬದಲಾವಣೆಯ ಗಾಳಿ ಬೀಸುತ್ತಿರುವ ಸಂದರ್ಭದಲ್ಲಿ ಕಲೆ ಸಾಹಿತ್ಯಕ್ಕಾಗಿ ತಮ್ಮ ಜೀವನವನ್ನು ಸಾಗಿಸುತ್ತಿರುವ ಹಗಲುವೇಷಗಾರರು ನಿಜವಾದ ಕಲಾ ಆರಾಧಕರಾಗಿದ್ದಾರೆ.

ಊರಲ್ಲಿ ಯಾವುದಾದರೂ ಗುಡಿಯಲ್ಲಿ ಅನ್ನ ಪ್ರಸ್ತಾ ದಾಸೋಹ ಇದ್ದಲ್ಲಿಗೆ ಹಸಿದ ಹೊಟ್ಟೆಯಿಂದ ಊಟ ಮಾಡಲಿಕ್ಕೆ ಹೋದರೇ ಪ್ರಾಣಿಗಳನ್ನು ಅಟ್ಟುವ ಹಾಗೆ ನಮ್ಮನ್ನು ಓಡಿಸುತ್ತಿದ್ದರು. ಊರಿನ ಎಲ್ಲಾ ಜನರು ಊಟವಾದ ನಂತರವೇ ನಮಗೆ ತಿನ್ನಲು ಉಳಿದಿದ್ದನ್ನು ಮೇಲಿಂದ ಎತ್ತಿ ಹಾಕುತ್ತಿದ್ದರು. ಹಾಕುವಾಗ ನಮ್ಮನ್ನು ಮುಟ್ಟಿದರೆ ಮೈಲಾಗಿಯಾಗುತ್ತದೆಂದು ಉಳಿದ ಆಹಾರವನ್ನು ತಿಂದು ಹಸಿವನ್ನು ನೀಗಿಸಿಕೊಳ್ಳುತ್ತಿದ್ದೇವು. ಹಸಿವಿಗಾಗಿ ಅನಿಸಕೊಂಡ ಬೈಗಳು, ಅವಮಾನಗಳನ್ನು ನೆನದು ಮನುಷ್ಯ ಬದುಕಿನ ಬಗೆಗೆ ತಣ್ಣನೆಯ ಆಕ್ರೋಶವನ್ನು ಹಗಲುವೇಷಗಾರ ವಿಭೂತಿ ಗುಂಡಪ್ಪ ವ್ಯಕ್ತಪಡಿಸುತ್ತಾರೆ.

ಒಟ್ಟಿನಲ್ಲಿ ಸ್ವಾರಸ್ಯಕರವಾದ ಹಾಗೂ ನೀತಿ ಪಾಠಗಳನ್ನೊಳಗೊಂಡ ಹಗಲುವೇಷದಂತಹ ಪಾರಂಪರಿಕ ಕಲೆಗಳು ನಶಿಸಿ ಹೋಗುತ್ತಿವೆ. ಜೊತೆಗೆ ಹಗಲುವೇಷದಾರಿಗಳ ಬದುಕು ಬಸವಳಿದಿದೆ. ಆರ್ಥಿಕ ಸ್ಥಿತಿಯಲ್ಲಿ ಬಡವರಾದರೂ ವೇಷಧಾರಿಗಳು ಜನರನ್ನು ಮನರಂಜಿಸುವುದಕ್ಕಾಗಿ ಕಥಾ ಪಾತ್ರಗಳಲ್ಲಿ ಸಿರಿವಂತಿಕೆ ಪ್ರದರ್ಶಿಸುವ ಇವರ ಬದುಕು ಕಷ್ಟ ಕೊಟಲೆಯಲ್ಲಿ ಸಿಲುಕಿದೆ. ವೇಷ ಹಾಕುವುದು ಮೋಸಗೊಳಿಸಲಿಕ್ಕಲ್ಲ. ಬದಲಾಗಿ ಜನರನ್ನು ರಂಜಿಸಲು ಮತ್ತು ಸಾಂಸ್ಕೃತಿಕ ಪರಂಪರೆಯ ಕುರುಹುಗಳನ್ನು ಕಾಪಾಡುವುದರ ಮೂಲಕ ತಮ್ಮ ಹೊಟ್ಟೆ ಪಾಡನ್ನು ನೋಡಿಕೊಳ್ಳುತ್ತಿದ್ದಾರೆ. ಹಗಲುವೇಷಗಾರರ ಕುಟುಂಬ ಆರ್ಥಿಕ ಮುಗ್ಗಟ್ಟನ್ನು ಅನುಭವಿಸುತ್ತಿರುವುದು ವಾಸ್ತವಿಕ ಸತ್ಯ ಸರ್ಕಾರದ ನೆರವಿಲ್ಲ, ಸರ್ಕಾರಗಳು ಇಂಥ ಪುರಾತನ ಕಲೆಗಳನ್ನು ಉಳಿಸಿ ಬೆಳೆಸುತ್ತಿರುವ ಸಮುದಾಯದೆಡೆ ಗಮನಹರಿಸಬೇಕಾಗಿದೆ. ಸಾಂಸ್ಕೃತಿಕ ಲೋಕದ ಸಿರಿವಂತರು ಸಾಮಾಜಿಕ, ಆರ್ಥಿಕ ಅಭದ್ರತೆಯನ್ನು ಅನುಭವಿಸುತ್ತಿದ್ದಾರೆ. ಇದು ಹಗಲುವೇಷಗಾರರ ಸಮಸ್ಯೆಯು ಹೌದು ಮತ್ತು ಬಹುಪಾಲು ಅಲೆಮಾರಿ ಸಮುದಾಯದ ಸಮಸ್ಯೆಯು ಹೌದು.

ವಾಸ್ತವವಾಗಿ ಅಲೆಮಾರಿ ಸಮುದಾಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕನ್ನು ಪರಿಶೀಲಿಸುವ ಪ್ರಯತ್ನ ಮಾಡಬೇಕಾಗಿದೆ. ರಾಜ್ಯದಲ್ಲಿ ಶೇ. 90 ರಷ್ಟು ಜನ ಅಲೆಮಾರಿಗಳು ನಿರಕ್ಷರಿಗಳಿದ್ದಾರೆ. ಆ ಸಮುದಾಯಗಳಲ್ಲೇ ಅವರದೇ ನೆಲೆಯಲ್ಲಿ ಜಾಗೃತಗೊಳಿಸುವ ಅಗತ್ಯವಿದೆ. ಅವರ ಮಕ್ಕಳಾದರೂ ಅಕ್ಷರ ಸಂಸ್ಕೃತಿಗೆ ತೆರೆದುಕೊಳ್ಳುವಂತಹ ವಾತಾವರಣವನ್ನು ಸೃಷ್ಟಿಸಬೇಕಿದೆ. ಅಲೆಮಾರಿ ಸಮುದಾಯಗಳ ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರದ ಹಣ ಪೋಲಾಗದಂತೆ ನಿಜವಾಗಿಯೂ ಯೋಜನೆಗಳ ಲಾಭ ಯಾರಿಗೆ ತಲುಪಬೇಕು ಆ ಸಮುದಾಯಗಳಿಗೆ ತಲುಪಿಸುವ ಜವಾಬ್ದಾರಿಯನ್ನು ಜಾನಪದ ವಿದ್ವಾಂಸರು ಪ್ರಯತ್ನಿಸಬೇಕಾಗಿದೆ.

ಸರ್ಕಾರದ ಯೋಜನೆಗಳು ಊರಿನಿಂದ ಕೇರಿಯವರೆಗೂ ಹೋಗಬೇಕಾಗಿದೆ. ಎಷ್ಟೋ ಯೋಜನೆಗಳು ಇವೆ ಎಂಬುದು ಬಹುತೇಕ ಅಲೆಮಾರಿ ಸಮುದಾಯಗಳಿಗೆ ತಿಳಿದಿಲ್ಲ. ಮೊದಲು ಅವರ ನೆಲೆಯಲ್ಲೆ ಜಾಗೃತಗೊಳಿಸು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಗತ್ಯವಿದೆ.

ಸರ್ಕಾರ, ಸಂಘ-ಸಂಸ್ಥೆಗಳು ಹಗಲುವೇಷ ಕಲಾವಿದರನ್ನು ಬಳಸಿಕೊಂಡು ಜಾಗೃತಿ ಮೂಡಿಸುವ ಅನೇಕ ಪ್ರಾಯೋಜಕತ್ವದ ಯೋಜನೆಗಳಲ್ಲಿ ಭಾಗಿಯಾಗಿಸಿಕೊಳ್ಳುವುದರ ಮೂಲಕ ಕಲಾವಿದರಿಗೆ ಅವಕಾಶಗಳನ್ನು ಒದಗಿಸಿಕೊಡಬೇಕಾಗಿದೆ.

ಅಲೆಮಾರಿ ಸಮುದಾಯಗಳು ಅಸಂಘಟಿತ ವಲಯದೊಳಗಿರುವುದರಿಂದಲೂ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಳ್ಳಲು ಆಗುತ್ತಿಲ್ಲ. ಆದ್ದರಿಂದ ಅಲೆಮಾರಿ ಸಮುದಾಯಗಳಲ್ಲಿ ಅರಿವು ಮೂಡಿಸುವ ಅಗತ್ಯವಿದೆ. ಸಾಮಾಜಿಕ ನ್ಯಾಯ ದೊರಕಿಸಬೇಕಿದೆ. ಸಮಾಜದ ಎಲ್ಲಾ ಮನುಷ್ಯರಂತೆ ಅಲೆಮಾರಿ ಸಮುದಾಯದವರು ಮನನುಷ್ಯರೇ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನಗಳಾಗಬೇಕಾಗಿದೆ. ಅಲೆಮಾರಿ ಸಮುದಾಯಗಳು ಎಲ್ಲಿಯವರೆಗೆ ಶಿಕ್ಷಣಕ್ಕೆ ತಮ್ಮನ್ನು ತಾವು ತೆರೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ತೊಂದರೆಯನ್ನು ಅನುಭವಿಸುತ್ತಲೇ ಇರಬೇಕಾಗುತ್ತದೆ.

ಅಲ್ಲದೇ ಹಗಲುವೇಷಗಾರರ ಬದುಕನ್ನು ಕೇವಲ ಕಲೆಯ ಹಿನ್ನಲೆಯ ಚೌಕಟ್ಟಿನಲ್ಲಿ ಅಧ್ಯಾಯನ ಮಾಡಬೇಕಾಗಿಲ್ಲ. ಬದಲಿಗೆ ಜನಪದ ಕಲಾವಿದರ ಬದುಕಿನ ನೆಲೆಯಲ್ಲಿ ಕಂಡುಕೊಳ್ಳಬೇಕಾದ ಅಗತ್ಯವಿದೆ. ಈ ಬಗೆಯ ಸಮುದಾಯಗಳ ಸ್ವಪ್ರಜ್ಞೆಯ ನೆಲೆಯಲ್ಲಿ ಶಿಕ್ಷಣದೆಡೆಗೆ ಮುಖಮಾಡಿ ಬದಲಾಗಬೇಕಾದ ಆಶಯಗಳ ನೆಲೆಯಲ್ಲಿ ನಮ್ಮ ಅದ್ಯಾಯನಗಳ ತಾತ್ವಿಕತೆಯನ್ನು ಬದಲಾಯಿಸಿಕೊಳ್ಳಬೇಕಾಗಿದೆ ಅಂದಾಗ ಮಾತ್ರ ಊರೊಳಗಿನ ಮತ್ತು ಊರಾಚೆಯ ಅಂಚಿನ ಜನರಿಗೆ ಅಲ್ಪಸ್ವಲ್ಪ ಪರಿವರ್ತನೆಯ ಸ್ಪರ್ಶ ಸಾಧ್ಯವಾಗುತ್ತದೆ.

ಆಕರ ಗ್ರಂಥಗಳು

1) ಸಂಸ್ಕೃತಿ ಮಹಿಳಾಮಾಲಿಕೆ-6.ಲೇ. ಅರ್ಜುನ ಗೊಳಸಂಗಿ, ಪ್ರಕಾಶಕರು ಕನ್ನಡ ಸಾಹಿತ್ಯ ಅಕಾಡೆಮಿ
2) ಕರ್ನಾಟಕ ಬುಡಕಟ್ಟುಗಳು ಸಂ-2, ಸಂ - ಡಾ. ಎನ್. ಆರ್. ನಾಯಕ್
3) ಕರ್ನಾಟಕ ಜನಪದ ಕಲೆಗಳ ಕೋಶ ಸಂ-ಹಿ. ಚಿ. ಬೋರಲಿಂಗಯ್ಯ ಪ್ರಸಾರಂಗ. ಕನ್ನಡ ವಿಶ್ವವಿದ್ಯಾಲಯ ಹಂಪಿ(ಪು. ಸಂ. 253)
4) ಅಂತರಜಾಲ ಮಾಹಿತಿ
5) ದಿನಪತ್ರಿಕೆಗಳು ಪ್ರಜಾವಾಣಿ, ಕನ್ನಡಪ್ರಭ

10

ಶ್ರಮಸಂಸ್ಕೃತಿಯ ಕಥನ : ಗೋರ್‌ಮಾಟಿ

ಡಾ. ಮಲ್ಲಯ್ಯ ಸಂಡೂರು
ಅಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಸ್ನಾತಕೋತ್ತರ ಕೇಂದ್ರ, ಜ್ಞಾನ ಸರೋವರ, ನಂದಿಹಳ್ಳಿ– 583 119
ಮೊ. 94810 46934

ಕನ್ನಡ ಸಾರಸ್ವತ ಲೋಕದಲ್ಲಿ ಕತೆಗಾರ, ಕವಿ, ನಾಟಕಕಾರ ಮತ್ತು ಕಾದಂಬರಿಕಾರರಾದ ಡಾ.ಶಾಂತನಾಯ್ಕ ಅವರು ತಳಸಮುದಾಯದಿಂದ ಹೊರಹೊಮ್ಮಿದ ಬಹುಮುಖಿ ಪ್ರತಿಭೆ. ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರಾದ ಅವರು, ಕನ್ನಡಕ್ಕೆ 'ಗೋರ್‌ಮಾಟಿ' ಕಾದಂಬರಿಯನ್ನು ಕಾಣ್ಕೆಯಾಗಿ ನೀಡಿದ್ದಾರೆ. ಈ ಕಾದಂಬರಿ ಲಂಬಾಣಿ ಸಮುದಾಯದ ಶ್ರಮಸಂಸ್ಕೃತಿಯ ಕಥನವಾಗಿದೆ. ಕಾದಂಬರಿಕಾರರು 'ಗೋರ್‌ಮಾಟಿ' ಪದವನ್ನು 'ನನ್ನ ಜನರು' ಎನ್ನುವ ಅರ್ಥದಲ್ಲಿ ಬಳಸಿದ್ದಾರೆ. ಈ ಪದವನ್ನು ಕೇಳಿದಾಗ ದಲಿತ ಕವಿ ಸಿದ್ಧಲಿಂಗಯ್ಯ ಅವರ 'ನನ್ನ ಜನಗಳು' ಕವಿತೆಯು ನೆನಪಿಗೆ ಬರುತ್ತದೆ. ಸಿದ್ಧಲಿಂಗಯ್ಯ ಅವರು ಒಟ್ಟೂ ದಲಿತ ಸಮುದಾಯವನ್ನು ಪ್ರತಿನಿಧಿಕರಣವನ್ನಾಗಿ ಮಾಡಿ 'ನನ್ನ ಜನಗಳು' ಎಂಬ ಕಾವ್ಯವನ್ನು ಬರೆದರು. ಇಲ್ಲಿ ಶಾಂತನಾಯ್ಕ ಅವರು 'ನನ್ನ ಜನರು' ಎನ್ನುವ ತಲೆಬರೆಹವನ್ನು ಇಟ್ಟುಕೊಂಡು ಲಂಬಾಣಿ ಸಮುದಾಯವನ್ನು ಕೇಂದ್ರೀಕರಿಸಿ 'ಗೋರ್‌ಮಾಟಿ' ಕಾದಂಬರಿಯನ್ನು ಕಟ್ಟಿಕೊಟ್ಟಿದ್ದಾರೆ.

ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರದ ಸಂದರ್ಭದಲ್ಲಿ ಜೀವಿಸುತ್ತಿದ್ದ ಕಾಕಾಪುರದ ಒಂದು ತಳಸಮುದಾಯದ ಕುಟುಂಬವನ್ನು ಕೇಂದ್ರೀಕರಿಸಿಕೊಂಡು ಬರೆದ ಕಾಲ್ಪನಿಕ ಕಾದಂಬರಿಯಾಗಿದೆ. ಆ ತಳಸಮುದಾಯದವೇ ಲಂಬಾಣಿ ಸಮುದಾಯ. ಊರೂರು ಅಲೆಯುತ್ತ ಅರೆಅಲೆಮಾರಿಗಳಂತೆ ಬದುಕುತ್ತಿದ್ದ ಲಂಬಾಣಿ ಕುಟುಂಬದ ನೆಪದಲ್ಲಿ ಲಂಬಾಣಿ ಸಮುದಾಯವನ್ನು ಸಶಕ್ತವಾಗಿ

ಕಾದಂಬರಿಯಾಗಿ ಕಾದಂಬರಿಕಾರರು ಅನಾವರಣಗೊಳಿಸಿದ್ದಾರೆ. ಈ ಕಥನವು ಆರಂಭ, ಮದುವೆ ಎಂಬ ತಿಂಗಳ ಸಡಗರ, ಪೊಲೀಸರು ತಾಂಡಕ್ಕೆ ಬಂದದ್ದು, ದೀಪಾವಳಿಯ ದಿನದಂದು, ಗುದ್ದಮನ ಕಟ್ಟಿ ಪಂಚಾಯತಿ, ಹೊಲ ಖರೀದಿಗೆ ಅಡ್ಡಗಾಲು ಹಾಕಿದವರು, ಎಲೆಕ್ಷನ್ ಸುಳಿಯಲ್ಲಿ, ಗೊತ್ತನಾಯ್ಕನ ಮನೆ ಗೋಡೆ ಬಿರುಕು, ವಿರೋಧದ ಅಲೆ ಎಬ್ಬಿಸಿದವರು ಮತ್ತು ಸಾವಿನಲ್ಲೂ ಸೆರೆ ಕುಡಿಯುವವರು ಎಂಬ ಹತ್ತು ಪ್ರಕರಣಗಳಲ್ಲಿ ಒಳಗೊಂಡಿದೆ.

ಅಖಂಡ ಬಳ್ಳಾರಿ ಜಿಲ್ಲೆಯನ್ನು ಒಳಗೊಂಡ ಹರಪನಹಳ್ಳಿ ಬಳ್ಳಾರಿ ಜಿಲ್ಲೆಗೆ ಸೇರಿದ ತಾಲ್ಲೂಕು. ಈ ಸೀಮೆಯ ಪ್ರಾದೇಶಿಕ ಭಾಷೆಯೇ ಈ ಕಾದಂಬರಿಯ ಹೂರಣ. ಪ್ರಾದೇಶಿಕತೆಯನ್ನು ನಿರ್ಧರಿಸಲು ಮುಖ್ಯವಾಗಿ ಸಾಹಿತ್ಯ ರಚನೆಗೊಂಡ ಲೇಖಕನ ಭೌಗೋಳಿಕತೆ, ಭಾಷಿಕತೆ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸಬೇಕು. ಕನ್ನಡದ ಕಥನ ಕಲೆಯು ಆರಂಭಗೊಂಡುದೇ ಇಂತಹದೊಂದು ವಿಶಿಷ್ಟವಾದ ಅಂಶದಿಂದಲೇ. ಕನ್ನಡದ ಪ್ರಥಮ ಕಾದಂಬರಿ 'ಇಂದಿರಾಬಾಯಿ' ಸೃಷ್ಟಿಗೊಂಡ ಕ್ರಮ ಕೂಡ ಪ್ರಾದೇಶಿಕತೆಯ ನೆಲೆಯಲ್ಲಿಯೇ ಆಗಿರುವುದೊಂದು ವಿಶೇಷ. ಕನ್ನಡದಲ್ಲಿ ರೂಪು ತಳೆದ ಕಾದಂಬರಿ ಪ್ರಕಾರಕ್ಕಾಗಲಿ, ಸಣ್ಣಕಥೆಯ ಪ್ರಕಾರಕ್ಕಾಗಲಿ ಪಾಶ್ಚಾತ್ಯ ಸಾಹಿತ್ಯಿಕ ರೂಪಗಳೇ ಕಾರಣವಾದರೂ ಕಾಲ ಮತ್ತು ಸಾಮಾಜಿಕ ಸಂದರ್ಭದ ದೃಷ್ಟಿಯಿಂದ ಇವು ಸ್ವಲ್ಪವಾದರೂ ಆ ಪ್ರಕಾರಗಳಿಗೆ ಭಿನ್ನವಾಗಿವೆ. ಏಕೆಂದರೆ ವಸಾಹತು ಸಂದರ್ಭದಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ವಿರೋಧಿಸುವ ಮತ್ತು ದೇಶೀ ನೆಲೆಗಳಿಗಾಗಿ ಹುಡುಕಾಟ ನಡೆಸುವ ಜರೂರತ್ತು ಬಹುತೇಕ ಎಲ್ಲಾ ದೇಶೀಯ ಲೇಖಕರಿಗಿತ್ತು. ಸಾಂಸ್ಕೃತಿಕ ರೂಪಗಳ ಬೇರು ತಳೆಯುವಿಕೆ ಮತ್ತು ಎರಡು ಭಾಷೆಗಳ ನಡುವಣ ಸಾಂಸ್ಕೃತಿಕ ಅವಸ್ಥಾಂತರಗಳ ಚಾರಿತ್ರಿಕ ಸಂದರ್ಭದ ಒಡಲಿನಿಂದ ತಲೆಯೆತ್ತಿದ ಕಾದಂಬರಿ, ಆಯಾ ಪ್ರದೇಶದ ಕಟ್ಟಲು ಒದಗುವ ಭಾಷೆ, ಉಪಮೆ, ರೂಪಕ, ಶೈಲಿ, ಜೀವನಕತೆಯೂ ಈ ಸಂಸ್ಕೃತಿಯದು. ಇನ್ನೂ ಖಚಿತವಾಗಿ ಹೇಳಬೇಕಾದರೆ ಕಾದಂಬರಿ ಬರವಣಿಗೆಯ ಮೂಲಕ ಆಧುನಿಕ ಸಂಸ್ಕೃತಿಯ ನಿರೂಪಣೆ ನಡೆಯಿತು. ಈ ವ್ಯತ್ಯಾಸದ ತಿಳಿವು ಇಲ್ಲಿ ಮುಖ್ಯವಾದುದು.

ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿಯೆಂಬ ಹಿರಿಮೆಗೆ ಪಾತ್ರವಾದ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' (1899) ಕೃತಿಯೂ ದೇಸೀ ನೆಲೆಯ ಜೀವನವಿಧಾನವನ್ನು ತನ್ನ ಕಥಾ ಸಂವಿಧಾನದಲ್ಲಿ ಹಾಸುಹೊಕ್ಕಾಗಿದೆ. ಇಲ್ಲಿ ವಿಡಂಬನೆಯೂ ಇದೆ.ಪ್ರಾದೇಶಿಕ ವಿವರಗಳೊಂದಿಗೆ ಸಮಕಾಲೀನ ಸಾಮಾಜಿಕ ಸಂದರ್ಭಗಳ ಚಿತ್ರಣವಿದೆ. ತಾವು ನಂಬಿಕೊಂಡಿರುವ ಮತ್ತು ಭಾವಿಸುತ್ತಿರುವ ಭಾರತೀಯ ಮೌಲ್ಯಗಳ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ನಡುವಿನ ಸೂಕ್ಷ್ಮ ತಿಕ್ಕಾಟವೂ ಇಲ್ಲಿದೆ.ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕಾದಂಬರಿಯು ಮಲೆನಾಡಿನ ಜೀವನ ಚಿತ್ರಣವನ್ನು ಆ ನೆಲದ ಪ್ರಾದೇಶಿಕ

ವಿವರಗಳೊಂದಿಗೆ ನೀಡುವ ಅದ್ಭುತ ಕಲಾಕೃತಿಯಾಗಿದೆ.ಏಕಕಾಲಕ್ಕೆ ಈ ಕೃತಿಯು ಕನ್ನಡ ಗದ್ಯಕ್ಕಿರುವ ಅಭಿವ್ಯಕ್ತಿ ಸಾಮರ್ಥ್ಯವನ್ನು ಮತ್ತು ದೇಶೀಯ ಸೊಗಡನ್ನು ನಿರೂಪಿಸಬಹುದಾದ ಸಾಧ್ಯತೆಗಳನ್ನು ತೋರಿಸಿಕೊಟ್ಟ ಕೃತಿಯಾಗಿದೆ.ಹೀಗೆ ಪ್ರಾದೇಶಿಕತೆಯೆನ್ನುವುದು ಒಂದು ಪ್ರದೇಶದ ಭೌಗೋಳಿಕ ಹಿನ್ನೆಲೆ, ಭಾಷಿಕತೆ, ಸಮಾಜದ ಆಚರಣೆಗಳು, ಸಾಂಸ್ಕೃತಿಕ ಅಂಶಗಳು ಮುಖ್ಯವಾಗಿ ಕಂಡುಬರುತ್ತವೆ. ಈ ಪ್ರಾದೇಶಿಕ ಅಂಶಗಳು ತನ್ನ ಪರಿಸರ ಪ್ರಪಂಚವನ್ನು ಮತ್ತೊಂದು ಪರಿಸರ ಪ್ರಪಂಚದಿಂದ ಪ್ರತ್ಯೇಕಗೊಳಿಸುತ್ತದೆ.ಆದರೆ ಮಾನವೀಯ ಮೌಲ್ಯಗಳು ಎಲ್ಲೆಡೆ ಕೆಲಸ ಮಾಡುತ್ತಿರುತ್ತವೆ.

ಓ.ಎಲ್. ನಾಗಭೂಷಣ ಸ್ವಾಮಿಯವರು ಕಾದಂಬರಿಯ ಕಥನವು "ಸಂವಿಧಾನದ ಯಾವುದೇ ವಿವರಣೆ ಪಾತ್ರ ಮತ್ತು ಕ್ರಿಯೆಯ ಪರಿಕಲ್ಪನೆಯೊಂದಿಗೆ ಬೆರೆತುಕೊಂಡೇ ಇರುವುದು ಅನಿವಾರ್ಯ. ಹಾಗಾಗಿ ಸಂವಿಧಾನವನ್ನು ತೀರ ಅಮೂರ್ತವಾಗಿಯೋ ಅಥವಾ ಕೃತಿಯ ಸಾರಾಂಶ ಎಂದೋ ವಿವರಿಸಲು ಸಾಧ್ಯ. ತೀರ ಸರಳವಾಗಿ ಹೇಳುವುದಾದರೆ, ನಿರ್ದಿಷ್ಟ ಭಾವನಾತ್ಮಕ ಕಲಾತ್ಮಕ ಪರಿಣಾಮಗಳನ್ನು ಸಾಧಿಸಲು ಕ್ರಿಯೆಗಳನ್ನು ಒಂದು ನಿರ್ದಿಷ್ಟ ವ್ಯವಸ್ಥೆಗೆ ಸಕಾರಣವಾಗಿ ಒಳಪಡಿಸಿ ರಚಿಸಿಕೊಂಡಿರುವ ಅಭಿವ್ಯಕ್ತಿ ವಿನ್ಯಾಸ ಕಥಾ ಸಂವಿಧಾನವಾಗಿದೆ." (ಓ.ಎಲ್. ನಾಗಭೂಷಣಸ್ವಾಮಿ, ವಿಮರ್ಶೆಯ ಪರಿಭಾಷೆ, ಪುಟ.243)

ಕಾದಂಬರಿ ಒಂದು ಸಂಕೀರ್ಣವಾದ ಕಥಾಸಂವಿಧಾನವನ್ನೂ ವಾಸ್ತವಿಕ ಜೀವನವನ್ನೂ ಪ್ರತಿನಿಧಿಸುವ ಪಾತ್ರ ಮತ್ತು ಘಟನೆಗಳನ್ನು ಅದು ಹೊಂದಿರಬೇಕು. ಆದುದರಿಂದ ತನ್ನ ಲಕ್ಷಣದಲ್ಲಿ ನಾವೆಲ್ ಪಾತ್ರ ಚಿತ್ರಣ, ಕಥಾ ಸಂವಿಧಾನಗಳನ್ನು ಹೊಂದಿದ, ವಾಸ್ತವಿಕ ನಿರೂಪಣೆಯುಳ್ಳ ಕಾಲ್ಪನಿಕ ರಚನೆ. ಭೂತ ಆಯಾ ವರ್ತಮಾನ ಕಾಲದ ಚಿತ್ರಣವಿರುವ ಸುದೀರ್ಘ ಕಥನವೆಂದೂ ಹೇಳಬಹುದು.ಈ ನೆಲೆಯಲ್ಲಿ 'ಗೋರ್‌ಮಾಟಿ' ಕಾದಂಬರಿ ರೂಪುಗೊಂಡಿದೆ.

ಕನ್ನಡದಲ್ಲಿ ಕತೆ, ಕಾವ್ಯ, ಪುರಾಣ, ಮಹಾಕಾವ್ಯ, ಮಹಾಪುರಾಣಗಳೆಂದು ವೈಭವೀಕರಿಸಿ ಬರೆದಿರುವ ನಿದರ್ಶನಗಳಿವೆ. ಆದಾಗ್ಯೂ ಅದರ ವ್ಯತಿರಿಕ್ತವಾಗಿ ಕನ್ನಡದ ದೇಸಿ ಮೂಲದಲ್ಲಿ ಸಾಂಸ್ಕೃತಿಕ ಪರಂಪರೆಯ ವಿವೇಕದ ಅಂತಃಸತ್ವ ಜೀವಂತವಾಗಿರುವಂತೆ ಕಟ್ಟುವ ಪ್ರತಿಭೆಗಳು ಕನ್ನಡದಲ್ಲಿದ್ದಾರೆ.ಒಂದು ಸಮುದಾಯವು ತನ್ನ ಶ್ರಮ ಮತ್ತು ಬದುಕಿನ ಕೌಶಲವನ್ನು ಸಿದ್ಧಿಸಿಕೊಂಡು ಜೀವನ ಮಾಡಿದ ನೆಲಮೂಲ ಸಂಸ್ಕೃತಿಯನ್ನು ಹೀಗೂ ನಿರೂಪಿಸಬಹುದು ಎನ್ನುವ ವಿಚಾರಧಾರೆಯನ್ನು ಕಾದಂಬರಿಕಾರರು ಗೋರ್‌ಮಾಟಿಯಲ್ಲಿ ಕಟ್ಟಿಕೊಟ್ಟಿರುವುದು ಈ ಕಾಲದ ಮಹತ್ವದ ವಿಚಾರವಾಗಿದೆ.

ಕಾಕಾಪುರವೆಂಬ ಊರು. ಆ ಊರಿನಲ್ಲಿ ಒಂದು ಲಂಬಾಣಿ ಕುಟುಂಬ.

ಈ ಕುಟುಂಬದ ಮೂರು ತಲೆಮಾರುಗಳು ಕಂಡ ಬದುಕಿನ ತಲ್ಲಣಗಳನ್ನು, ನೋವಿನ ಸ್ಥಿತ್ಯಂತರಗಳನ್ನು ಕೇಂದ್ರೀಕರಿಸಿದೆ ಈ ಕಾದಂಬರಿ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರದ ಸಂದರ್ಭದಲ್ಲಿ ತಳಸಮುದಾಯಗಳ ಸಂಸ್ಕೃತಿಯು ರೂಪಾಂತರ ಪಡೆದು ಜಾಗತೀಕರಣದ ತೆಕ್ಕೆಗೆ ಸಿಲುಕಿ ಕರಗಿಹೋಗುವ ವಾಸ್ತವವಾದಿ ನೆಲೆಯಲ್ಲಿ ಕಾದಂಬರಿ ಚಿತ್ರಿತವಾಗಿದೆ. ಲಂಬಾಣಿಗಳೊಳಗಿನ ಜೀವಂತಿಕೆ, ಚೈತನ್ಯ, ಕನಸು, ಹಸಿವು, ಬಡತನ, ಅಪಮಾನ, ಛಲ, ದುಡಿಯಬೇಕೆಂಬ ಆಸಕ್ತಿ, ಒಳಸಂಚು, ಈರ್ಷೆ, ದ್ವೇಷ ಅಸೂಯೆ, ಸಣ್ಣತನಗಳು, ಅಸಹಾಯಕತೆ ಮುಂತಾದವು ಆ ಸಮುದಾಯದ ಬದುಕಿನ ಕ್ರಮಗಳಲ್ಲಿ ಹುದುಗಿವೆ. ಇವು ಈ ನೆಲದ ಸಾರ್ವತ್ರಿಕ ಗುಣಗಳಾಗಿ ಅನಾವರಣಗೊಂಡು ಕಾದಂಬರಿಗೆ ಹೊಸ ಆಯಾಮವನ್ನು ನೀಡಿವೆ. ಈ ನೆಲದ ಗೊತ್ತನಾಯ್ಕ ಭೂತ, ವರ್ತಮಾನ ಮತ್ತು ಭವಿಷತ್ ಕಾಲದಲ್ಲಿ ಗೊತ್ತುಮಾಡಿದ ಪ್ರತೀಕವಾಗಿ ಕಾದಂಬರಿಯಲ್ಲಿ ಚಿತ್ರಿತಗೊಂಡಿದ್ದಾನೆ. ಹಾಗೆಯೇ ಕೊನೆಗೊಂಡ ವರ್ತಮಾನದ ವಾಸ್ತವತೆಗೆ ಹತ್ತಿರವಾಗಿದ್ದಾನೆ.

ಈ ಕಾದಂಬರಿಯಲ್ಲಿ ಯಾವುದೇ ಸನ್ನಿವೇಶ, ಸಂದರ್ಭವನ್ನು ಗ್ರಹಿಸುವ ಮತ್ತು ಅಭಿವ್ಯಕ್ತಿಸುವ ನಿರಂತರ ಪ್ರತಿಕ್ರಿಯಾ ವ್ಯಾಪಾರದ ನೆಲೆಗಳು, ಇಷ್ಟು ಮಾತ್ರವಲ್ಲ; ಪ್ರಕ್ರಿಯಾತ್ಮಕ ಸ್ವರೂಪದ ಸಂಕೇತ ಮತ್ತು ಪ್ರತಿಮೆಗಳನ್ನು ಸೃಜಿಸುವ ಉತ್ತಮ ಮಾದರಿಗಳೂ ಇಲ್ಲಿವೆ. ಈ ಕಾದಂಬರಿ ವಸ್ತುವಿನ್ಯಾಸ, ಶಿಲ್ಪ, ರೂಪಕ, ನೀತಿಪ್ರಜ್ಞೆ, ಪಾತ್ರ, ಶೈಲಿ–ಹೀಗೆ ಹಲವು ಮುಖಗಳಲ್ಲಿ ಹರಡಿದೆ.ಸಾಂಸ್ಕೃತಿಕ ಸಂದರ್ಭಗಳ ನೆಲೆಗಳನ್ನು ಶೋಧಿಸುವುದಕ್ಕೆ ಅಧ್ಯಯನ ಯೋಗ್ಯವಾದ ಕಾದಂಬರಿಯಾಗಿದೆ.

ಗೊತ್ತನಾಯ್ಕ ಮತ್ತು ಅವನ ತಮ್ಮ ಕಟುವಾ ದುಡಿಮೆಗೆ ಮಾದರಿಯ ಸಹೋದರರಾಗಿ ಕಂಡುಬರುತ್ತಾರೆ."ಗೊತ್ತನಾಯ್ಕ ಮತ್ತು ಅವನ ತಮ್ಮ ಕಟುವಾ ಸೇರಿ ಊರನಮಂದಿ ತಲಿಕೆಡಸಿದ್ರು. ಯಾರಮನಿಗೆ ಹ್ವಾದ್ರು ಒಂದೇ ಮಾತು: "ಲೇ ಬೆಪ್ಪ ಸೂಳಿಮಕ್ಕಳ್ರಾ, ಹೋಗ್ರಲೇ ನೋಡ್ರಿ ಬುದ್ದನಾಯ್ಕನ ಮಕ್ಕಳನ್ನ ಹ್ಯಾಂಗ ದುಡಿತಾರಂತ". ಗೊತ್ತನಾಯ್ಕನ ಓರಿಗೆ ಹುಡುಗರಿಗೆ ಒಂದು ತಲಿನೋವಾಗಿತ್ತು" (ಪುಟ. 17). ಮುಂದುವರಿದು... "ಬುದ್ದನಾಯ್ಕನ ಮಗ ಮದ್ವಿಯಾಗಿ ಹೊಸದೊಂದು ಬದುಕನ್ನ ಕಟ್ಕೊಳ್ಳಾಕ ಹೊಂಟ್ಯಾನ, ಅವನ ಮಾವನ ಮನಿಕಡಿಯೋರು ಕಷ್ಟಮಾಡೊ ಜನ, ದುಡದು ಉಣ್ಣತಾರ ಪರವಾ ಇಲ್ಲ ಅಂತ ಯೋಚನೆ ಮಾಡತೊಡಗಿದ" (ಪುಟ. 23). ಈ ಸಮುದಾಯದ ಬದುಕೇ ದುಡಿತನವಾಗಿದೆ. ಹಾಗಾಗಿ ಶ್ರಮಸಂಸ್ಕೃತಿಯ ಕಥನವೂ ಇಲ್ಲಿದೆ. ಈ ಕಾದಂಬರಿ ಆಹಾರ ಸಂಸ್ಕೃತಿಯ ಸಂಭ್ರಮದ ಭಾಗವಾಗಿಯೂ ಇದೆ. "ಅಪ್ಪ ಇವತ್ತು ಸೇಲೂರ ಹಳ್ಳದಾಗ ಎಂತೆಂಥ ಏಡಿಗಳು ಸಿಕ್ಕವಾಂತಿ" ಖುಷಿಯಿಂದ ಜೋರ ಬಾಯಿಮಾಡಿ ಹೇಳಾಕು, ಅವಳತ್ತಿ ಜಿಂಗವ್ವ ಓಡಿಬರೊದಕ್ಕೂ ಸರಿಹೋತು (ಪುಟ. 22).

ಮದುವೆ ಎಂಬ ತಿಂಗಳ ಸಡಗರ ಭಾಗದಲ್ಲಿ ಲಂಬಾಣಿ ಸಮುದಾಯದ ವಿವಾಹದ ಸಂಪ್ರದಾಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ ಕಾದಂಬರಿಕಾರರು. ಇದಕ್ಕೆ ಸಾಕ್ಷಿಯೆಂಬಂತೆ ಗೊತ್ತನಾಯ್ಕ ಮತ್ತು ಬಾಣವ್ವ ವಿವಾಹದ ಸಂಭ್ರಮವೇ ಆಗಿದೆ. ಹೆಂಡತಿ ಬಾಣವ್ವ ತಾಡಪುರದ ಎಲ್ಲಾ ಸಂಬಂಧಗಳನ್ನು ಕಳಕೊಂಡು ಕಾಕಾಪುರ ಸೇರಿದಳು. ಅಂದರೆ ಸ್ತ್ರೀಯಾದವಳು ಮತ್ತೊಂದು ಮನೆಯ ನಂದಾದೀಪವನ್ನು ಬೆಳಗುವುದಕ್ಕೆ ಬರುವ ಹೆಣ್ಣುಮಕ್ಕಳ ವಾಸ್ತವತೆಯನ್ನು ಇಲ್ಲಿ ಗಮನಿಸಬಹುದು. 'ಮಕ್ಕಳಿರಲವ್ವ ಮನೆತುಂಬ' ಎನ್ನುವ ಜನಪದ ಆಶಯದಂತೆ ಈ ಕಾದಂಬರಿಯಲ್ಲಿ ಕೂಡ ಬಿಂಬಿತವಾಗಿದೆ. ಶಿಕ್ಷಣದ ಬಗೆಗೆ ಜಾಗೃತಿಯನ್ನು ಮೂಡಿಸುತ್ತದೆ. ಮಕ್ಕಳನ್ನು ಓದಿಸುವ ತಂದೆಯ ಕೊರಗು ಇದೆ. ಗೊತ್ತನಾಯ್ಕನ ಮೊದಲನೇ ಮಗ ನುಗ್ಲನನ್ನು ಶಾಲೆಗೆ ಕಳುಹಿಸಬೇಕೆಂಬ ಆಸೆ ಇತ್ತು. ಆದರೆ ಅವನು ಓದಲಿಲ್ಲ. ಅವನಿಗೆ ವಿದ್ಯೆ ಹತ್ತಲಿಲ್ಲವೆಂಬ ಕೊರಗೂ ಇದೆ. ಅದಕ್ಕಾಗಿ ಮಾಟಣಗೇರಿ ಅಂದಾನಪ್ಪ ಮಾಸ್ತರು, ಕರದು ಹೇಳಿದರೂ ನುಗ್ಲಗ ಓದಲಿಲ್ಲ. ಗೊತ್ತನಾಯ್ಕನ ಎರಡನೇ ಮಗ ಗೊಂದಾನಾಯ್ಕನನ್ನು ಶಾಲೆಗೆ ಸೇರಿಸಿದನು.

ಕಾಕಾಪುರದಲ್ಲಿ ದುಡಿದು ಉಣ್ಣುವ ಜನರು ಬಹಳಷ್ಟಿದ್ದರು. ಅದರಲ್ಲಿ ಕಳ್ಳತನ ಮಾಡುವ ಒಂದು ಸಮುದಾಯವೂ ಇತ್ತು. ಕಾಣು, ಲಂಗೂರ, ಚಕ್ರನಾಯ್ಕ, ಜೀನೂಬನನ್ನು ಬ್ರಿಟೀಷ್ ಸರ್ಕಾರದ ಪೊಲೀಸರು ಕಾಕಾಪುರಕ್ಕೆ ಬಂದು ಹುಡುಕಾಟ ನಡೆಸಿದ್ದರು. ಕಳ್ಳಭಟ್ಟಿ ಸಾರಾಯಿ ಮಾಡುತ್ತಿದ್ದ ಚೊಕ್ಲ, ಸುಗಣಾ, ಚೆನ್ನೀರಿ, ಚಾಮವ್ವ ಮೊದಲಾದರು ಕಾಕಾಪುರದಲ್ಲಿದ್ದರು. ಹೀಗೆ ಸಿಕ್ಕಸಿಕ್ಕವರನ್ನು ಎಳೆದುಕೊಂಡು ಹೋಗಿ ಜನರನ್ನು ಬಾಯಿ ಬಿಡುಸುತ್ತಿದ್ದರು.

ಕಟ್ಟಿಗೆ ಮಾರಿ ಜೀವನ ಮಾಡುವ ಈ ತಾಂಡಾದ ಜನರು ಶ್ರಮಸಂಸ್ಕೃತಿಯ ಭಾಗವಾಗಿದ್ದವರು. ಗೊತ್ತನಾಯ್ಕನ ಮಕ್ಕಳು ಹಂಪಾಪುರ ಪಟ್ಟಣಕ್ಕೆ ಹೊತ್ತುಕೊಂಡು ಮಾರಿ ಬರುವ ಸಂಗತಿಯನ್ನು ಇಲ್ಲಿ ಗಮನಿಸಬೇಕು. ಹಾಗೆಯೇ ಮೀನು ಹಿಡಿದು ತಿನ್ನುವ ಆಹಾರ ಸಂಸ್ಕೃತಿಯನ್ನು ಸಹ ನೋಡಬಹುದು.

ಕಾಕಾಪುರದಲ್ಲಿ ದೀಪಾವಳಿಯ ಹಬ್ಬದ ಸಡಗರವಂತು ಸೊಗಸಾಗಿದೆ; ವಿಚಿತ್ರ ಮೆರಗಿನಿಂದ ಕೂಡಿದೆ. ಹದಿಹರೆಯದ ಹುಡುಗ ಹುಡುಗಿಯರು ಜನಪದ ಆಟಗಳನ್ನು ಆಡುವುದನ್ನು ಕಾಣಬಹುದು. ಮುಖ್ಯವಾಗಿ ಗಂಡು ಹೆಣ್ಣುಮಕ್ಕಳು ಜೊತೆಗೂಡಿ ಕಬಡ್ಡಿ ಆಡುವುದನ್ನು ಕಂಡು ಊರಿನ ಜನರು ಆಡಿಕೊಳ್ಳುತ್ತಿದ್ದರು. ಈ ಆಟವು ಇಲ್ಲಿ ಯಾವ ಭೇದವಿಲ್ಲದೆ ಐಕ್ಯವಾಗಿ ಆಡುವ ಪ್ರಸಂಗವಿಲ್ಲಿದೆ. ದೀಪಾವಳಿಯ ಅಮಾವಾಸ್ಯೆದಿನ ಟಗರನ್ನು ಬಲಿಕೊಡುವ ಸಂಪ್ರದಾಯವೂ ಇಲ್ಲಿದೆ. ವಿಶೇಷವೆಂದರೆ, ಟಗರನ್ನು ಬಲಿಕೊಟ್ಟು ಪ್ರತಿಯೊಬ್ಬರು ರಕ್ತದ ಮುಖನೋಡಿ ತಮ್ಮ ಎಡಗೈಕಿರು ಬೆರಳನ್ನು ರಕ್ತದಲ್ಲಿ ಅದ್ದಿ ಬಲಿಪೂಜೆ ಮಾಡಿಕೊಳ್ಳುವ ವಿಚಿತ್ರವಿದೆ. ಬಲಿಕೊಟ್ಟ ಮಾಂಸವನ್ನು ಪಾಲುಮಾಡಿಕೊಂಡು

ಹಂಚಿ ತಿನ್ನುವ ಆಹಾರ ಸಂಸ್ಕೃತಿಯನ್ನು ಸಹ ಕಾಣಬಹುದು. ಈ ಹಬ್ಬದಲ್ಲಿ ಇಡೀ ರಾತ್ರಿ ಹಾಡುಗಾರಿಕೆಯನ್ನು ಹಾಡುವ ಇನ್ನೊಂದು ಸಂಪ್ರದಾಯ ಇಲ್ಲಿದೆ. ಹಾಡಿಗೆ ತಾಳ ಹಾಕಿಕೊಂಡು ನಿದ್ದೆ ಮಾಡದೇ ನಗಾರಿಯನ್ನು ಬಾರಿಸಿ ಬಾರಿಸಿ ದಣಿಯುತ್ತಿದ್ದರು. ಹಾಡಿನ ಮೂಲಕ ಕಥನ ಕಟ್ಟುವ ಗೋವಿಂದನಾಯ್ಕ ವಿಶೇಷವಾಗಿ ಕಾಣುತ್ತಾನೆ. ಹಾಗೆಯೇ ತಾಂಡಾದಲ್ಲಿ ಅಕ್ರಮ ಸಂಬಂಧವಿರುತ್ತವೇ ಎನ್ನುವ ಪ್ರಸಂಗವನ್ನು ಗೊತ್ತನಾಯ್ಕ ಮತ್ತು ಚಂಪಿಯ ಮೂಲಕ ಕಟ್ಟಿದ್ದಾರೆ. ಇಂತಹ ಅಕ್ರಮ ಸಂಬಂಧವನ್ನು ಖಂಡಿಸುವುದ್ಕಕ ಪಂಚಾಯಿತಿಯೂ ನಡೆಯುತ್ತದೆ. ಆದರೂ ಪಂಚಾಯಿತಿಯಲ್ಲಿ ವಾದವಿವಾದಗಳು ನಡೆಯುತ್ತವೆ. ತಾಂಡಾಗಳಲ್ಲಿ ಸಂಬಂಧಗಳ ಗಟ್ಟಿತನದ ಬಗೆಗೆ ಕಾದಂಬರಿಯನ್ನು ಲೇಖಕರು ಕಟ್ಟಿಕೊಟ್ಟಿದ್ದಾರೆ.

ಹೊಲ ಖರೀದಿಗೆ ಅಡ್ಡಗಾಲು ಹಾಕಿದವರು ಕಾಕಾಪುರದಲ್ಲಿದ್ದರು. ಗೊತ್ತನಾಯ್ಕನು ಜಮೀನು ಖರೀದಿಸಬೇಕಂತಲೇ ಛಲ ಭರಿತನಾಗಿದ್ದನು. ಅದಕ್ಕೆಲ್ಲ ಪಿತೂರಿ ಮಾಡುವ ಇನ್ನೊಂದು ವರ್ಗವೂ ಇತ್ತು. ಎಲೆಕ್ಷನ್ ಸುಳಿಯಲ್ಲಿ ಸಿಕ್ಕ ಗೊತ್ತನಾಯ್ಕ ಬಾಯಿಮುಚ್ಚಿಕೊಂಡಿದ್ದ. ಅವನ ಶತ್ರುಗಳ ಗುಂಪು ಸಹ ಇತ್ತು. ಸ್ವಾತಂತ್ರ್ಯ ಭಾರತದ ಆರಂಭದ ಘಟನೆಯನ್ನು; ಬ್ರಿಟಿಷ್ ಮಂದಿ ಹೋಗಿ ಪ್ರಜಾವ್ಯವಸ್ಥೆ ಬಂದಿರುವುದು ನೆನಪಿಸುತ್ತದೆ. ಕಾಕಾಪುರದ ಜನರಿಗೆ ಈ ಸ್ವಾತಂತ್ರ್ಯದ ಬಗೆಗೆ ತಿಳಿದಿರಲಿಲ್ಲ. ಸ್ವಾತಂತ್ರ್ಯ ಸಿಕ್ಕ ಕೆಲ ಘಟನೆಗಳು ಸಹ ಹಾದುಹೋಗುತ್ತವೆ. ಗಾಂಧಿಯನ್ನು ಕೊಂದ ನಾಥೂರಾಮ್ ಗೋಡ್ಸೆಯ ವಿಷಯ ರೇಡಿಯೋದೊಳಗೆ ಬುದ್ಧಿಜೀವಿಗಳು ಕೇಳಿಸಿಕೊಂಡಿರುವ ವಿವರಗಳು ಕಾಣಸಿಗುತ್ತವೆ. ಕೇಂಚೀರಯ್ಯ ಗಾಂಧಿಯ ಮೇಲೆ ಒಂದು ಹಾಡುಕಟ್ಟಿ ಜುಂಜಪ್ಪನ ಜಾತ್ರಿಯೊಳಗೆ ಭಜನೆ ಮಾಡಿದ ವಿಷಯವೂ ಇದೆ. ಇಲ್ಲಿ ಗಾಂಧೀಜಿಯ ಪ್ರಭಾವ ಜನರ ಮೇಲಿದೆ. ಈ ಘಟನೆ ಎಚ್. ನಾಗವೇಣಿ ಅವರ 'ಗಾಂಧಿಬಂದ' ಕಾದಂಬರಿಯ ಕೆಲವು ಘಟನೆಗಳನ್ನು ನೆನೆಪಿಸುತ್ತದೆ. ನಂತರ ಪಂಚಾಯಿತಿಯ ಎಲೆಕ್ಷನ್ ಆರಂಭವಾಗಿರುವ ಇತಿಹಾಸ ಇಲ್ಲಿ ಬಿಂಬಿತವಾಗಿದೆ.

1973ರ ಕರಾಳ ದಿನಗಳು ಈ ಕಾದಂಬರಿಯಲ್ಲಿ ಗೊತ್ತಾನಾಯ್ಕನ ಕುಟುಂಬದ ಮೇಲೆ ಪರಿಣಾಮ ಬೀರಿದೆ.ಬರಗಾಲ, ಬದುಕಿನ ದುಸ್ತರ ಹಾದುಹೋಗಿದೆ. ಬದಲಾದ ಸಂದರ್ಭದಲ್ಲಿ ಲಂಬಾಣಿಗಳ ವೇಷಭೂಷಣದ ಮೇಲೆ ಪ್ರಭಾವ ಬೀರಿತು. ಕಾರಣ ಬ್ರಿಟೀಷರ ಶಿಕ್ಷಣದಿಂದಾಗಿ ಸಂಸ್ಕೃತಿಯನ್ನು ಕೊಂದುಹಾಕಿರುವ ಘಟನೆಗಳು ಇಲ್ಲಿ ಬಂದಿವೆ.

ಗೊತ್ತಾನಾಯ್ಕನ ಮಕ್ಕಳು ದೊಡ್ಡವರಾದರು. ಯಜಮಾನಿಕೆಯನ್ನು ಆತನ ಮಕ್ಕಳು ನಡೆಸುತ್ತಿದ್ದರು. ಗೊತ್ತಾನಾಯ್ಕನ ಮೊಮ್ಮಕ್ಕಳು ದೊಡ್ಡವರಾಗಿದ್ದರಿಂದ ಹೀಗೆ ವಂಶಾವಳಿ ಕೂಡ ಬೆಳೆಯಿತು. ಸಂಬಂಧಗಳಲ್ಲಿ ಉಂಟಾದ ಅನ್ಯಾಯದ

ಘಟನೆಗಳು ಇಲ್ಲಿ ಬಂದಿವೆ. ಜೊತೆಗೆ ಧಾರ್ಮಿಕತೆಯ ಅಸ್ತಿತ್ವವೂ ಇದೆ. ಮನುಷ್ಯ ಮನುಷ್ಯತ್ವದ ಅಸ್ತಿತ್ವವೂ, ವಾಸ್ತವತೆಯೂ ಎದ್ದುಕಾಣುತ್ತದೆ.

ಗ್ರಹಿಕೆ ಮತ್ತು ಅಭಿವ್ಯಕ್ತಿಗಳ ವಿಸ್ತರಿತ ನೆಲೆಗಳ ಆಯಾಮವು ತನ್ನ ಪಾಡಿಗೆ ತಾನು ಇದ್ದು ಬಿಡುತ್ತದೆ. ಹೀಗಾಗಿ, ಚಾರಿತ್ರಿಕ ಧ್ವನಿ ಮತ್ತು ಭಾಷಿಕರೂಪಿಕೆಗಳನ್ನು ಗುರುತಿಸಲು ಒಟ್ಟು ಆ ಶತಮಾನಗಳ ಒಟ್ಟು ನೆಲೆಯನ್ನು ತಾತ್ವಿಕವಾಗಿ ಮುಷ್ಟಿಯಲ್ಲಿ ಹಿಡಿದು ನೋಡಲು ಸಾಧ್ಯವಾಗುತ್ತದೆ. ಹೀಗೆ ಸಾಧ್ಯವಾಗುವುದೇ ಉದ್ದೇಶಿತ ಅರ್ಥದ ನೆಲೆಗಳನ್ನು ಅದರ ಸ್ವರೂಪವನ್ನು ಚಿಂತಿಸುವುದಕ್ಕೆ ಬೇಕಾದ 'ಚಾರಿತ್ರಿಕರೂಪಿಕೆ' ಮತ್ತು 'ಧ್ವನಿರೂಪಿಕೆ'ಯಲ್ಲಿ ಶೋಧಿಸಲು ಸಾಧ್ಯವಾಗುತ್ತದೆ. ಇದು ಒಂದು ರೀತಿಯಲ್ಲಿ ಸಂಸ್ಕೃತಿಯ ಜೀವಂತ ನೆಲೆಗಳ ಹುಡುಕಾಟಕ್ಕೆ ಪ್ರತಿಕ್ರಿಯಿಸುವ ಕ್ರಮವೂ ಹೌದು. ಹಾಗಾಗಿ ಈ ಕಾದಂಬರಿಯಲ್ಲಿ ಈ ಒಳನೋಟಗಳನ್ನು ಗ್ರಹಿಸಬಹುದು.

ಹೀಗೆ ಲಂಬಾಣಿ ಸಮುದಾಯವು ಅನುಭವಿಸಿದ ಏಳುಬೀಳುಗಳು ಒಂದು ಕುಟುಂಬದ ಸುತ್ತ ಹಬ್ಬಿರುವುದನ್ನು ಕಾಣಬಹುದು. ಕಲಿಯುವಿಕೆ, ಕೆಲಸದ ಹುಡುಕಾಟ, ಹಳ್ಳಿಗಾಡಿನ ಜೀವನದ ಕತೆ, ಸಮುದಾಯದೊಳಗೆ ಇರುವ ಬಿರುಕುಗಳು, ಅಡ್ಡಪ್ರವೃತ್ತಿಗಳು, ಈ ಸಮುದಾಯದ ಸ್ಥಿರತೆ ಮತ್ತು ಅಸ್ಥಿರತೆಯ ದಾಖಲೆಯೂ ಇದೆ. ಲಂಬಾಣಿ ಸಮುದಾಯದ ಸಾಂಸ್ಕೃತಿಕ ಬದುಕನ್ನು ತಾತ್ವೀಕರಿಸಿ ಮೂಲಕೇಂದ್ರಿತವನ್ನಾಗಿಸಿಕೊಂಡು ಚಿತ್ರಿತವಾಗಿರುವ ಈ ಕಾದಂಬರಿ ಕನ್ನಡ ಸಾಹಿತ್ಯದ ಹೊಸಲೋಕವನ್ನು ತೆರೆದಿಡುತ್ತದೆ.

ಮೂಲ ಕೃತಿ

1. ಶಾಂತನಾಯ್ಕ ಶಿರಗಾನಹಳ್ಳಿ, ಗೋರ್‌ಮಾಟಿ (ಕಾದಂಬರಿ), ಜ್ಯೋತಿ ಪ್ರಕಾಶನ, ಮೈಸೂರು, 2007.

ಪರಾಮರ್ಶನ ಗ್ರಂಥಗಳು

1. ಗಿರಡ್ಡಿ ಗೋವಿಂದರಾಜು, ಕಾದಂಬರಿ ವಸ್ತು ಮತ್ತು ತಂತ್ರ, ಬಾಪ್ಕೋ ಪ್ರಕಾಶನ, ಬೆಂಗಳೂರು, 1976
2. ನಾಗರಾಜ ಡಿ.ಆರ್., ಶಕ್ತಿ ಶಾರದೇಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು, 2002
3. ನಾಯಕ್ ಜಿ.ಎಚ್., ಶತಮಾನದ ಕನ್ನಡ ಸಾಹಿತ್ಯ, ರಾಘವೇಂದ್ರ ಪ್ರಕಾಶನ, ಅಂಕೋಲ, ಉತ್ತರ ಕನ್ನಡ, 2000
4. ನಾಗಭೂಷಣಸ್ವಾಮಿ ಓ.ಎಲ್., ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2003

5. ಓ.ಎಲ್. ನಾಗಭೂಷಣಸ್ವಾಮಿ, ವಿಮರ್ಶೆಯ ಪರಿಭಾಷೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2012
6. ಶಿವರಾಮ ಪಡಿಕ್ಕಲ್, ನಾಡು-ನುಡಿಯ ರೂಪಕ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, 2001
7. ಶಿವರಾಮ ಕಾಡನಕುಪ್ಪೆ, ಸಾಮಾಜಿಕ ನೆಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2003
8. ಶೇಷಗಿರಿರಾವ್ ಎಲ್.ಎಸ್., ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ ಬೆಂಗಳೂರು, 2002
9. ಸಿದ್ಧಣ್ಣ ಬಿ. ಉತ್ನಾಳ್, ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ, ಅನುಪಮ ಪ್ರಕಾಶನ, ಅಥಣಿ, 1997

●

11

ಮೀನು ಮತ್ತು ಹುಡುಗಿ–ಒಂದು ನೋಟ

ಡಾ. ನಾಯಕರ ಹುಲುಗಪ್ಪ
ಕನ್ನಡ ಅತಿಥಿ ಉಪನ್ಯಾಸಕರು,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಅನೇಕ ದಲಿತ ಲೇಖಕರಲ್ಲಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಇಂಗ್ಲೀಷ್ ಅಧ್ಯಯನ ವಿಭಾಗದ ಪ್ರೊ. ಶಾಂತನಾಯ್ಕ ಹೆಸರು ಒಂದು. ಇಂಗ್ಲೀಷ್ ಸಾಹಿತ್ಯದಲ್ಲಿ ಎಂ.ಎ., ಪಿಎಚ್.ಡಿ. ಪದವಿ ಪಡೆದರೂ ಇವರಿಗೆ ಕನ್ನಡ ಭಾಷೆ, ವ್ಯಾಕರಣ ಮತ್ತು ಕನ್ನಡ ಸಾಹಿತ್ಯದ ಮೇಲೆ ಅಪಾರವಾದ ಪ್ರೀತಿ. ಅದರಲ್ಲಿ ದಲಿತರನ್ನು ಕುರಿತು ಇವರು ಬರೆದಿರುವ ಸಾಹಿತ್ಯ ತುಂಬ ಮೌಲ್ಯಯುತವಾದದು. ದಲಿತ ಚಿಂತನೆಗಳಿಂದ, ಬಂಡಾಯದ ಧ್ವನಿಯಿಂದ, ವಿಮರ್ಶೆಗಳಿಂದ, ತಾಂಡದ ಜನರ ಬದುಕು ನಡೆ–ನುಡಿ, ಸಂಸ್ಕೃತಿಯನ್ನು ಬೆಳಕಿಗೆ ತರುವಲ್ಲಿ ಇವರು ಯಶಸ್ವಿಯಾಗಿದ್ದಾರೆ. ಇವರ ಮೀನು ಮತ್ತು ಹುಡುಗಿ ಎನ್ನುವ ಕವನ ಸಂಕಲನ ಸಮಾಜ ಕೇಂದ್ರಿತ ಮಹತ್ವದ ಕೃತಿ, ವೈಚಾರಿಕ ಆಕೃತಿ ಮೂಡಿಸಿದ ಕೃತಿ. ಈ ಕವನ ಸಂಕಲನದಲ್ಲಿ ಸುಮಾರು 62 ಕವನಗಳಿವೆ. ಈ ಎಲ್ಲಾ ಕವಿತೆಗಳಲ್ಲಿ ಲೇಖಕರೆ ಹೇಳುವ ರೀತಿಯಲ್ಲಿ ಇಲ್ಲಿಯಾವ ವ್ಯಕ್ತಿ, ಧರ್ಮ, ಜಾತಿಗೆ ನಿಂದಿಸಿಲ್ಲಾ, ಬದಲಾಗಿ ಆ ವ್ಯವಸ್ಥೆಯೊಳಗಿನ ದೋಷವನ್ನು ಹೊರಹಾಕಿರುವೆ. ಶತಮಾನಗಳಿಂದ ಜಾತಿ ಎಂಬ ಸಂಕೀರ್ಣ ಪದರದೊಳಗೆ ಸಿಕ್ಕು ನಲಗಿರುವ ನನ್ನ ಜನರು ಅನುಭವಿಸಿರುವ ಅವಮಾನ ಎಂಥಹುದೆಂಬುದು ಜಗತ್ತಿಗೆ ತಿಳಿದಿದೆ, ಆ ನೋವು ಒಂದುಕ್ಷಣ ನನ್ನೊಳಗೆ ಇಳಿದು ಈ ಕವನಗಳನ್ನು ಬರೆಯುವಂತೆ ಮಾಡಿದೆ. ಇಲ್ಲಿ ಲೇಖಕರ ನೋವು, ದಲಿತರ ಪರ ಒಲವು ಇದೆ. ಹಲವಾರು ಕಷ್ಟಗಳಿಂದ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವ ಲೇಖಕರು ತಮ್ಮ ಧ್ವನಿಯನ್ನು

ಬಡವರ ಪರವಾಗಿ ಕವಿತೆಗಳ ಮೂಲಕ ಕಟ್ಟಿಕೊಟ್ಟಿರುವುದನ್ನು ನಾವು ಕಾಣುತ್ತವೆ. ಇಲ್ಲಿ ಲೇಖಕರ ಸಂವೇಧನೆಯು ಹಲವಾರು ಕವನಗಳ ಮೂಲಕ ಹೊರಬಂದಿದೆ. ತಮಗೆ ಯಾವುದೆ ಕವಿಯ ಪ್ರೋತ್ಸಾಹ ಇಲ್ಲದಿದ್ದರು ತಮ್ಮ ಸುತ್ತ-ಮುತ್ತ ಇರುವ ಜನಗಳಿಂದ ಆದ ಅವಮಾನ, ಅಪಮಾನ, ಮಾನಸಿಕ ಹಿಂಸೆ, ಶೋಷಣೆಗಳಿಂದ ನನ್ನಲ್ಲಿ ಕವಿತೆ ಬರೆಯುವ ಕಿಚ್ಚು ಉಂಟಾಯಿತು ಎನ್ನುತ್ತಾರೆ ಲೇಖಕರು. ತಮ್ಮ ಹರೆಯದ ಆರಂಭದಲ್ಲಿ ರಚನೆಗೊಂಡ ಈ ಕವಿತೆಗಳು ತಾವು ಅನುಭವಿಸಿದಂತಹ ಹಲವಾರು ಕಷ್ಟ-ಕರ್ಪಣಗಳನ್ನು ಪದಗಳ ಮೂಲಕ ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾರೆ.

ಕನ್ನಡಕಾವ್ಯ ಪರಂಪರೆ, ಸಂಸ್ಕೃತಿ ಸಂದರ್ಭ ಮತ-ಧರ್ಮ ಪ್ಯೂಡಲ್ ಆಧ್ಯಾತ್ಮದ ಒಳಹು ತಾವು ಕಾಣಬಹುದಾದ ಸಂಗತಿ, ಬಂಡಾಯದ ಮನೋಭಾವ ಕಸಿಮಾಡುವ, ತನ್ನ ಕಾಲದ ಸವಾಲು ಸಮಾನತೆಯ ಸಮಾಜ, ಕಠೋರ ಸತ್ಯವನ್ನು ನಿರೂಪಿಸಿದ್ದಾರೆ. ಹೀಗೆ ಪ್ರತಿಮೆಗಳು ಇಡೀ ಕವನ ಸಂಕಲನವನ್ನು ಒಂದು ಸಾವಯವ ಜೀವಂತ ಸೃಷ್ಟಿಯನ್ನಾಗಿ ಮಾಡುತ್ತವೆ. ಯಾವುದರೊಳಗೋ ಮುಳುಗಿ, ಮುಳುಗಿದ್ದರೂ ತನ್ನ ಇರವನ್ನು ನೆನಪು ಮಾಡಿಕೊಡುತ್ತಲೇ ಇರುವ ಪ್ರಕ್ರಿಯೆ ಇಡೀ ಕವನವನ್ನು ಆವರಿಸುತ್ತದೆ. ಗಹನವಾದ ಚಿಂತನೆಯನ್ನು ಸರಳವಾದ ಭಾಷೆಯಲ್ಲಿ ನಿರೂಪಿಸಿದ್ದಾರೆ.

ಈ ಕವನ ಸಂಕಲನದ ಮೊದಲ ಕವನ ಹೆಜ್ಜೆಗಳು ಎನ್ನುವ ಕವನದಲ್ಲಿ

ಅಜ್ಜನ ನೆತ್ತಿಯ ಮೇಲೆ ರಾಜನೊತಿದ್ದ
ಗುಲಾಮಿ ಹೆಜ್ಜೆಗಳ
ನೂಪೂರಗಳಾಗಿದ್ದ ಅಜ್ಜ
ಮಹಾರಾಣಿಯ ಮೃದುಪಾದಗಳಿಗೆ
ರಾಜನ ಸಿಂಹಾಸನದಡಿಯಲ್ಲಿ
ಅಜ್ಜನ ಕನಸುಗಳು ಹೂತು ಹೋಗಿದ್ದವು

ಎನ್ನುವಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಚಾಪು ಮೂಡಿದೆ. ಬಡವರ ಕನಸುಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಬಡವರ ಎಷ್ಟೊ ಆಸೆಗಳು ಆಕಾಂಕ್ಷೆಗಳು ಆಳುವವರ ಕೈಯಲ್ಲಿ ಅವರೆಲ್ಲ ಕನಸುಗಳು ನಶಿಸಿಹೋಗಿರುವುದನ್ನು ತುಂಬಾ ಮಾರ್ಮಿಕವಾಗಿ ಅವರ ಪಾದದಡಿಯಲ್ಲಿ ಹೂತು ಹೋಗಿದ್ದಾವೆ ಎನ್ನುತ್ತಾರೆ.

ನಮ್ಮ ಸರಕಾರಿ ವ್ಯವಸ್ಥೆಯನ್ನು ತುಂಬಾ ವ್ಯಂಗವಾಗಿ ವಿವರಿಸಿದ ಬಗೆಯನ್ನು ನಾವು ಅವರ ರಾಡಿನೀರು ಮತ್ತು ಕಾಗೆ ಎನ್ನುವ ಕವನದಲ್ಲಿ ನೋಡಬಹುದು. ತಮ್ಮ ಮುಂದೆಯೆ ವ್ಯವಸ್ಥೆಯು ಹದಗಟ್ಟಿ ಹೋಗಿದ್ದರು ಇಲಾಖೆಯವರು ಸುಮ್ಮನೆ ಕೂತಿರುವುದನ್ನು ನಾವು ಕಾಣುತ್ತೆವೆ. ಇಂತಹ ಇಲಾಖೆಯನ್ನು ಕಾಗೆಗೆ

ಹೋಲಿಸಿರುವುದನ್ನು ಗಮನಿಸಬಹುದು.

ಹುಬ್ಬಿ-ಧಾರವಾಡ ಮಾ ನಗರ ಪಾಲಿಕೆ
ನೀರು ಸರಬರಾಜು ಇಲಾಖೆ ಮುಂದೆ
ಸಣ್ಣದೊಂದುಗುಂಡಿ, ಗುಂಡಿತುಂಬಾ ನೀರು
ರಾಡಿ ನೀರೊಳಗೆ ಕತ್ತು ಬಳಕಿಸಿ ನಡೆಸಿತ್ತು ಕಸರತ್ತು
ಒಪತಪಾದಿಗಳ ಗೈಯುವ ಜನಕ್ಕೂ
ಕಾಕಮಜ್ಜನಕ್ಕೂ ತಾಳೆ ಹಾಕಿದ್ದೆ
ಆತ್ಮಶುದ್ದಿಯೋ, ಪಾಪ ಹಾರಿಯೋ
ಛೇ.....ಛೇ.....ಹಾಗೇನೂ ಇಲ್ಲಾ ಬಿಡಿ

ಇವರ ಆತ್ಮಗಳು ಎನ್ನುವ ಕವಿತೆಯಲ್ಲಿ ತನ್ನ ಬದುಕಿನ ಕನಸನ್ನು ನೆರವೇರಿಸಿಕೊಳ್ಳಲಾರದ ಅಜ್ಜನ ಸ್ಥಿತಿಯನ್ನು ತುಂಬ ವ್ಯಂಗವಾಗಿ ಚಿತ್ರಿಸಿದ್ದಾರೆ.ಇಡೀ ಜೀವಮಾನ ದುಡಿದರು ತನ್ನ ಸಣ್ಣ ಸಣ್ಣ ಆಸೆಗಳನ್ನು ಈಡೇರಿಸಿಕೊಳ್ಳಲಾಗದ ಜೀವ ಕಳೆದುಕೊಳ್ಳುವ ಮುದುಕ ಸ್ಥಿತಿಯನ್ನು ಹೀಗೆ ಬಣ್ಣಿಸಿದ್ದಾರೆ.

ಬಿಸಿಲು ಗುದುರೆ ಬೆನ್ನೇರಿ
ಬದುಕನ್ನು ಹಿಡಿಯಲು ಹಠತೊಟ್ಟು
ಹಸಿದು ಸ್ಮಶಾನ ಸೇರಿದಅಜ್ಜ

ನೆತ್ತಿಉರಿಯುವಂತೆ ಹೊರೆಹೊತ್ತು
ಕನಸು ಕಾಣುವಾಗೆಲ್ಲಾ
ಉರಿವ ನೆತ್ತಿಯೋಕುತ್ತಾದಂತಾಗಿ ಬಿಕ್ಕಳಿಸಿದ ಅಜ್ಜ

ತೆರೆದ ಮೈಯಿಂದ ಸೂರ್ಯನ ಕೆಂಗಿರಣಗಳಿಗೆ ಬಲಿಯಾದ
ಅಪ್ಪಕರುಕಲಾದಕರಿಮೈ
ಅಂಗಿಕಾಣದೇ ಹೆಣವಾದಅತೃಪ್ತ ಆತ್ಮಗಳು

ಈ ಮಹಾನಗರದ ಮೂಲೆಯಲ್ಲಿ ಎನ್ನುವ ಕವಿತೆಯಲ್ಲಿ ನಗರ ಬದುಕಿನ ಜೀವನವನ್ನು ಕುರಿತು ತುಂಬ ವ್ಯಂಗ್ಯತ್ಮಾಕವಾಗಿ ಚಿತ್ರಿಸಿರುವುದನ್ನು ಕಾಣುತ್ತೆವೆ. ನಗರ ದಿನನಿತ್ಯದ ಬದುಕನ್ನು ವಿಶ್ಲೇಷಿಸುತ್ತಾ

ಹಸಿವಿಗಾಗಿ ಹಾದರದ ಹಾದಿ ಹಿಡಿದವಳು
ಏಡ್ಸ್ ಹರಡುವ ತಾಣವಾಗಿದ್ದಾಳೆ

ಒಂದುಕಾಲದ ಹಳ್ಳಿ ಹಳ್ಳಿಗಳೆಲ್ಲಾ
ಕಳೆದು ಹೋದಂತೆ
ಕುಳಿತಿದ್ದಾರೆಲ್ಲಿ ಕೊಳಚೆ ಜೀವಿಗಳು

ಈ ವ್ಯವಸ್ಥೆಯಲ್ಲಿ ಸರಕಾರದ ಪಾಲುದಾರರಾದ ನೌಕರರು ಯಾವ ರೀತಿ ಭ್ರಷ್ಟಚಾರದಲ್ಲಿ ತೊಡಗಿದ್ದಾರೆ ಎಂಬುದನ್ನು ಕೋಟು ಬೂಟಿನ ಮಂದಿ ಯಾವುದೇ ನಾಚಿಕೆ ಮಾನ ಮಾರ್ಯದೆ ಇಲ್ಲದೆ ಜನರಲ್ಲಿ ಬೇಡುವ ಅವರ ಜೀವವನ್ನು ಹಿಂಡುವ ಬಗೆಯನ್ನು ಈ ರೀತಿಯಲ್ಲಿ ಹೇಳಿದ್ದಾರೆ.

ಕೋಟು ಬೂಟಿನಕಚೇರಿ ಮಂದಿ
ಕಿಸೆ ತುಂಬಿಕೊಳ್ಳುತ್ತಾರೆ
ಬಡವರ ಉಸಿರನ್ನ
ಬಾಚಿಕೊಳ್ಳುತ್ತಾರೆ ಬೆವರ ಪಾಲನ್ನ
ಕೆಲವರಿಗೆ ಮೋಜಾದರೆ ಕೆಲವರಿಗೆ ನರಕ

ಇಂಥ ಮಹಾನಗರದಲ್ಲಿ ಹುಚ್ಚನ ಮದುವೆಯಲಿ ಉಂಡವನೆ ಜಾಣ ಎನ್ನುವಂತೆ ಸಿಕ್ಕವನಿಗೆ ಮೃಷ್ಟಾನ್ನ ಸಿಗದವನಿಗೆ ಮಣ್ಣೆಗತಿಯೆಂಬುದನ್ನು

ಮಹಾನಗರದ ಮೂಲೆಯಲ್ಲಿ
ತಣ್ಣಗೆಎಲ್ಲವು ನಡೆಯುತ್ತವೆ
ಹಗಲು-ರಾತ್ರಿ
ದಿಕ್ಕು ದೆಸೆಗಳಿಲ್ಲದೆ
ದಕ್ಕಿದವನದೆದೊಡ್ಡ ಪಾಲು
ದಕ್ಕದವನು ಮುಕ್ಕುತ್ತಾನೆ ಮಣ್ಣು ಎನ್ನುತ್ತಾರೆ.

ತನ್ನ ಸುತ್ತಮುತ್ತ ನಡೆಯುವ ಘಟನೆಗಳಲ್ಲಿ ನನೊಬ್ಬನೆ ನನ್ನ ಬಿಟ್ಟು ಬೇರೆಯಾರು ಇಲ್ಲ, ನಾ ಹುಟ್ಟಿದಾಗ ಒಬ್ಬನೆ ಮತ್ತು ಸತ್ತಾಗ ನಾ ಒಬ್ಬನೆ ಎನ್ನುವ ಮಾರ್ಮಿಕ ಸತ್ಯವನ್ನು ನಾನೊಬ್ಬನೆ ಎನ್ನುವ ಕವನದಲ್ಲಿ ಈ ರೀತಿ ಹೇಳುತ್ತಾರೆ

ನಾನೊಬ್ಬನೆ ನನ್ನ ಸುತ್ತ ಸುಳ್ಳು
ನಗುವಿನ ನಾಟಕ ಅಳುವಿನ ಮೋಜುಗೋಜು
ಬುಟಾಟಿಕೆ ಬಲೆಗಳು
ನಾ ಅತ್ತಾಗ ನನಂತರಂಗ
ನಾ ನಕ್ಕಾಗ ಹೃದಯದ ಕಂಪನ
ಇವೆರೆಡು ಬಿಟ್ಟು

ನಾ ನಿಜವಾಗಿಯೂ ಒಬ್ಬನೇ
ಹೊರೆ ಹೊತ್ತಾಗ ಬರಿಕನಸು
ಇಳುಹಿದಾಗ ಬರಿಮನಸು
ಜೀವದ ಜಂಜಡ ತೊರೆದಾಗ
ಮಣ್ಣಿನಲಿ.....ನಾ ಒಬ್ಬನೆ

ಮಾನವರಿಲ್ಲದ ನಾಡಿನಲ್ಲಿ ಎನ್ನುವ ಕವನದಲ್ಲಿ
ಮಾನವರಿಲ್ಲದ ನಾಡಿನಲ್ಲಿ
ಮನಸುಗಳಿಗೆ ಅರ್ಥವೇ ಇಲ್ಲ
ರಕ್ತಜೀಜಾಸುರನ ಸಂತಾನದಲ್ಲಿ
ಸಮಾನತೆ ಹುಡುಕ ಹೊರಟರಲ್ಲಾ

ಕಂಬಾಲಪಲ್ಲಿಯಲಿ
ನಂಜುಕಾರುವ ಹಗಲು, ನರಕವಾಯ್ತು ಇರಳು
ಸಾವು ನೆತ್ತಿಯ ಮೇಲೆ ತೂಗುಕತ್ತಿ
ಕೊನೆಗೂ ಜೀವಿಗಳು ಜೀವಂತವಾಗಿಯೇ ಬೆಂದು ಹೋದವೇ..?

ಹೊಣೆಯಾರದು ಅದಕೆ
ಒದೆಯುವವರ ಕಾಲ್ಚೆಂಡಾದ ನಾವೋ
ಬರಿ ಒದೆಯುತ್ತಲೇ ಬಂದ ನೀವು
ಕಾಲನೊಬ್ಬನಿಗೆ ಗೊತ್ತು ಕಾಕತಾಳಿಯುತ್ತರೆ.

ಬಾಬಾ ಸಾಹೇಬ್ ಮತ್ತು ನಾವುಎನ್ನುವಕವನದಲ್ಲಿಅಂಬೇಡ್ಕರ್‌ಅವರಜೀವನ ಶೈಲಿಯನ್ನುತಮ್ಮದೇ ನೆಲೆಗಟ್ಟಿನಲ್ಲಿ ವಿವರಿಸಿದ್ದಾರೆ.ಬಾಬಾ ಸಾಹೇಬ್ ಮತ್ತು ನಾವು ಎನ್ನುವ ಕವನ ಭಾರತದಕೋಟ್ಯಂತರಜನರತಂದೆಎಂದು ಗುರುತಿಸಿಕೊಂಡಿರುವ ಅಂಬೇಡ್ಕರ್‌ಅವರಚಿಂತನೆಯನ್ನುತುಂಬಾಮಾರ್ಮಿಕವಾಗಿವಿಮರ್ಶಿಸಿದ್ದಾರೆ.ಭಾರತದದಲಿತರನ್ನು ಮನುಷ್ಯರೇಎಂದು ಪರಿಗಣಿಸದ ಈ ಸಮಾಜವನ್ನುತಿದ್ದುವ ಕೆಲಸವನ್ನು ಮಾಡಿದಾತ

ಮನುಜರಿಲ್ಲದ ನಾಡಿನಲಿ
ಮನಸುಗಳ ಸೃಷ್ಟಿಸಿದನಾತ
ಧರ್ಮದ ತಿರಳ ತಿಳಿಹೇಳಿದ ಪರಾಕ್ರಮಿ

ಹಂದಿ ನಾಯಿಗಳಂತೆ ಇಲ್ಲಿನ ದಲಿತರನ್ನು ಕಾಣುತ್ತಿದ್ದ ಜನರಿಗೆ ಸಮಾನತೆಯ ಪಾಠಮಾಡಿದಾತ ಭಾತರದಲ್ಲಿ ಅಂಬೇಡ್ಕರ್ ಅಂತಹ ಮಹಾನುಭಾವ ಹುಟ್ಟದಿದ್ದರೆ ಇಲ್ಲಿನ ಜನ ಇನ್ನೂ ಎಷ್ಟು ವರ್ಷಗಳು ದಾಸರಾಗಿ ಶೋಷಣೆಗೆ ಒಳಗಾಗುತ್ತಿದ್ದರು. ಪ್ರಜಾಪ್ರಭುತ್ವದ ಎದ್ದುಕಾಣುವ ಸ್ಥೂಲ ಸಂರಚನೆಯ ಮುಖ್ಯ ಶಿಲ್ಪಿ ಎಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ಪರಿಗಣಿಸಲ್ಪಟ್ಟಿದ್ದರು. ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ಕಲ್ಪನೆತೀರ ವಿಭಿನ್ನ ಸಮಾಜವನ್ನು ಆದರ್ಶ ಸಮಾಜವನ್ನಾಗಿ ತಮ್ಮ ಕಲ್ಪನೆಯ ಸುಖಿರಾಜ್ಯವನ್ನಾಗಿ ಬದಲಾಯಿಸಿ ಸ್ವಾತಂತ್ರ್ಯ, ಸಮಾನತೆ ಮತ್ತು ಬ್ರಾತೃತ್ವಗಳನ್ನು ಒಟ್ಟಿಗೆ ಸಾಧಿಸಿಬಲ್ಲದೆಬಂತೆ ಪ್ರಜಾಪ್ರಭುತ್ವವನ್ನು ಅವರು ಕಲ್ಪಿಸಿಕೊಂಡಿದ್ದರು.

Fashion

ಪ್ಯಾಶನ್ ಎನ್ನುವ ಕವನದಲ್ಲಿ ಇಂದಿನ ಸಮಾಜದಲ್ಲಿ ಆಗುವ ಬದಲಾವಣೆಯನ್ನು ಕಂಡು ಮುದುಕಿ ಮೂರ್ಛೆ ಹೋದ ಬಗೆಯನ್ನು ಈ ರೀತಿಯಾಗಿ ವರ್ಣಿಸಿದ್ದಾರೆ.

ಐ ನನ ಶಿವನ
ಯಾ ಕಾಲ ಬಂತ ನಮ್ಮವ

ಎನ್ನುವುದನ್ನುತುಂಬಾ ವ್ಯಂಗ್ಯಭರಿತಧ್ವನಿಯಲ್ಲಿ ಹಳ್ಳಿ ಭಾಷೆಯ ಸೊಗಡಿನಲ್ಲಿ ವಿವರಿಸಿದ್ದಾರೆ.

Beauti Parlour

ಹಾಗೆಯೇ ಬ್ಯೂಟಿ ಪಾರ್ಲರ್ ಎನ್ನುವ ಕವಿತೆಯಲ್ಲಿ ಇಂದಿನ ಪ್ಯಾಶನ್ ಯುಗದಲ್ಲಿ ಹುಡುಗಿಯರು ಹುಡುಗರ ವೇಷ ಧರಿಸಿ ಹುಡುಗರಿಗೂ ಹುಡುಗಿಯರಿಗೂ ವ್ಯತ್ಯಾಸವೇ ಇರದ ಪ್ರಮೇಯವನ್ನು ಒಬ್ಬ ಹುಡುಗ ಕಕ್ಕಬಿಕ್ಕಿಯಾದ ಬಗೆಯನ್ನು ಅಶ್ಚರ್ಯಭರಿತ ಧ್ವನಿಯಲ್ಲಿ ಹೇಳಿದ್ದಾರೆ. ದುಡ್ಡಿದ್ದರೆ ಗಂಡು ಹೆಣ್ಣಾಗುವ, ಹೆಣ್ಣು ಗಂಡಾಗುವ ಪರಿಯನ್ನು ವ್ಯಂಗ್ಯದ ಧ್ವನಿಯಲ್ಲಿ ವಿವಿರಿಸಿದ್ದಾರೆ. ಹಾಗೆಯೇ Lipsticನ್ನು ರಕ್ತ ಎಂದು ಭಾವಿಸಿ ಹೆಂಗಸೊಬ್ಬಳಿಗೆ ಹೇಳಿ ಅದರಿಂದ ಪೇಚಾಗಿ ತಲೆ ಮೇಲೆ ಕೈಹೊತ್ತುಕೊಂಡ ಕುಂತವನ್ನು ಕುರಿತು ವಿಮರ್ಶಿಸಿದ್ದಾರೆ.

ದೇವರು

ದೇವರು ಎನ್ನುವ ಕವನದಲ್ಲಿ ಯಾರಿಗೂ ಅರ್ಥವಾಗದ ಜಗತ್ತನ್ನು ಕುರಿತು ವಿವರಿಸಲು ಪ್ರಯತ್ನಿಸಿದ್ದರೆ. ಯಾರಿಗೂ ಅರ್ಥವಾಗದ ಕೇವಲ ವಿವಾದಗಳಿಗೆ

ಹುಟ್ಟಿಕೊಂಡಿರುವ ದೇವಸ್ಥಾನಗಳು ಎಂದು ಹೇಳುತ್ತಾರೆ. ಭಕ್ತಿ ಎನ್ನುವುದು ಭಯ ಮತ್ತು ಪ್ರೀತಿಯಿಂದ ಉಂಟಾದ ಒಂದು ಭಾವ. ಸಾಮಾನ್ಯವಾಗಿ ಜನಪದರೇ ಹೇಳುವಂತೆ "ಸಂಕಟ ಬಂದಾಗ ವೆಂಕಟರಮಣ" ಎನ್ನುವ ಮಾತು ಸತ್ಯ. ವಾಸ್ತವವಾದಿ ಚಿಂತಕ ಕಾರ್ಲಮಾರ್ಕ್ಸ ಧರ್ಮವನ್ನು ಹೃದಯ ಹೀನ ವಿಶ್ವದ ಹೃದಯ, ಅದೊಂದು ಅಫೀಮು ಎಂದು ಹೇಳಿದ. ಮನುಷ್ಯ ತನ್ನ ಸಂಕಟಗಳಿಗೆ ಎಲ್ಲಿಯೂ ಪರಿಹಾರ ದೊರೆಯದೇ ಇದ್ದಾಗ ದೇವರು ಧರ್ಮದ ಮೊರೆ ಹೋಗುತ್ತಾನೆ. ಅದಕ್ಕೆ ಬುದ್ಧ ದೇವರಿಲ್ಲದ ಧರ್ಮವನ್ನು ಕಟ್ಟಿದ. ಬಸವ ದೇಗುಲವಿಲ್ಲದ ಧರ್ಮವನ್ನು ರೂಪಿಸಿದ. ಸೂಫಿ ಸಂತ ಕಬೀರ ದೇವರನ್ನು ಗುಡಿ ಮಸೀದಿಯಲ್ಲಿ ಗುರುತಿಸಿದೆ ಭಕ್ತರ ಮನದಲ್ಲಿ ಗುರುತಿಸಿದ. ಕುವೆಂಪು ಗುಡಿ, ಚರ್ಚ್ ಮಸೀದಿಗಳಿಂದ ಹೊರಬಂದು ವಿಶ್ವಮಾನವ ಧರ್ಮವನ್ನು ಕಟ್ಟಲು ಕರೆಕೊಟ್ಟರು. ಹೀಗೆ ದೇವರು ಧರ್ಮದ ಪರಿಕಲ್ಪನೆಯನ್ನು ವಿವರಿಸಿದ್ದಾರೆ.

ಮಾನವ ಜನಾಂಗ ಇತಿಹಾಸದಲ್ಲೇ ಹೆಚ್ಚು ಶೋಷಣೆಗೆ ಒಳಾಗದವರಲ್ಲಿ ದಲಿತರು ಪ್ರಮುಖರು. ಕನ್ನಡ ನಾಡಿನ ಚರಿತ್ರೆಯಲ್ಲಿ ರಾಜಕೀಯ ಮತ್ತು ಮತೀಯ ಶಕ್ತಿಗಳು ಸಮಾಜವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿದ್ದವು. ಈ ತರಹದ ಶಕ್ತಿ ಕೇಂದ್ರಗಳು ದಲಿತರನ್ನು ದಲಿತ ಮಹಿಳೆಯರನ್ನು ಅವರ ಜೀವನದ ಜೊತೆ ಚೆಲ್ಲಾಟವಾಡಿದ ಸಂಗತಿಗಳನ್ನು ಈ ಕವನ ಸಂಕಲನದ ಎಷ್ಟೋ ಕವಿತೆಗಳಲ್ಲಿ ಪ್ರೊ. ಶಾಂತನಾಯ್ಕ ಸರ್ ಅವರು ಕಟ್ಟಿಕೊಟ್ಟಿದ್ದಾರೆ.ಹಾಗೆಯೇ ಇಂದಿನ ಸಮಾಜದಲ್ಲಿ ನಡೆಯುವ ಘಟನೆಗಳು, ಜನರ ಬದುಕುಗಳು, ಅವರ ಆಚರಣೆಗಳು, ಅವರ ಭಾಷೆ ಕುರಿತು ತುಂಬಾ ವಿಮರ್ಶಾತ್ಮಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಕೆಲವೊಮ್ಮೆ ವ್ಯಂಗ್ಯಭರಿತವಾಗಿ ಕೆಲವೊಮ್ಮೆ ಹಾಸ್ಯಭರಿತವಾಗಿ, ಕೆಲವೊಮ್ಮೆ ಜಗತ್ತೆ ಹೀಗೆ ಎನ್ನುವ ನೆಲೆಯಲ್ಲಿ ತಮ್ಮ ದಲಿತ ನೋವನ್ನು ತೊಡಿಕೊಂಡಿದ್ದಾರೆ.

●

12

ಬಂಜಾರ ಸಾಹಿತ್ಯದ ಒಳಸುಳಿಗಳು

ಪ್ರೊ. ಶಿರಗಾನಹಳ್ಳಿ ಶಾಂತನಾಯ್ಕ

ಲಂಬಾಣಿ, ಬಂಜಾರ, ಸುಗಾಲಿ, ಸುಕಾಲಿ, ಸಿಂಗಡಿ ಬಂಜಾರ, ಬಾಜಿಗರ್ ಬಂಜಾರ ಲೋಹಾರ್ ಬಂಜಾರ, ಸೋನಾರ್ ಬಂಜಾರ, ಡಾಡಿ ಬಂಜಾರ, ಡಾಲಿಯಾ ಬಂಜಾರ, ಮುಸ್ಲಿಂ ಬಂಜಾರ ಇತ್ಯಾದಿ ನಾಮವಿಶೇಷಗಳಿಂದ ಗುರುತಿಸಲ್ಪಡುವ ಕಡುಬಡತನದಲ್ಲಿ ಬದುಕಿರುವ ಜನ ಸಮುದಾಯ ಈ ಲಂಬಾಣಿಗರದ್ದು. ಕಬ್ಬಿನಗದ್ದೆಯಲ್ಲಿ ಮೈಚರ್ಮ ಕೊರೆಯುವ ಕಬ್ಬಿನ ರೌದಿಯನ್ನು ಲೆಕ್ಕಿಸದೆ ಕಬ್ಬುಕಡಿಯುವ, ಬೀಳುವ ಹೆದರಿಕೆಯೂ ಇಲ್ಲಿದೆ. ಮನೆ ಕಟ್ಟುವ ಮಡಿಲಗಿ ಗೋಣಿ ಚೀಲ ಕಟ್ಟಿಕೊಂಡು ಕಾಫಿ ಗಿಡಗಳಿರುವ ಮೊನಚಾದ ಸಣ್ಣಗುಡ್ಡಗಳನ್ನು ಏರುವ ಬಂಜಾರ ಮಹಿಳೆಯರು, ರಸ್ತೆ ಕೆಲಸ ಯಾವ ಕೆಲಸಕ್ಕಾದರೂ ತಯಾರಾಗಿ ಬಿಡುವ ಈ ಜನಸಮುದಾಯ, ಕೊನೆಗೆ ಹೆಣ್ಣುಮಕ್ಕಳನ್ನು ಮಾರುವ ಕನಿಷ್ಠ ಕೆಲಸಕ್ಕಿಳಿದಿರುವ ಅಸಹನೀಯವಾದ ಕೃತ್ಯವೇ ಸರಿ. ಭಾರತದ ಪಶ್ಚಿಮೊತ್ತರ ಭಾರತವನ್ನು ಬಿಟ್ಟರೆ ದೇಶದ ಎಲ್ಲಾ ಭಾಗಗಳಲ್ಲಿ ಕಂಡುಬರುವ ಬಂಜಾರರು ಅಲೆಮಾರಿ ಬುಡಕಟ್ಟು ಸಮುದಾಯಕ್ಕೆ ಸೇರಿತ್ತು ಸ್ವಾತಂತ್ರ್ಯ ಪೂರ್ವದಲ್ಲಿ. ವಸಾಹತುಶಾಹಿ ಭಾರತದ ಸಂದರ್ಭದಲ್ಲಿ ಇಡೀ ಭಾರತದ ಕಾಲುದಾರಿಯ ಪರಿಚಯವಿರುವ ಬಂಜಾರರನ್ನ ದಾರಿ ತೋರಿಸುವ ಸಲುವಾಗಿ ಬಳಸಿಕೊಂಡ ಬ್ರಿಟೀಷರು ಅವರ ವ್ಯಾಪಾರ ಬುದ್ಧಿಯನ್ನು ತಮ್ಮ ಸಾಮ್ರಾಜ್ಯವನ್ನು ಭಾರತದಲ್ಲಿ ಸ್ಥಾಪಿಸಿದ ನಂತರ ತೋರಿಸಿಬಿಟ್ಟರು. ಅವರ ಗುರುವಿಗೆ ತಿರುಮಂತ್ರ ಹಾಕಿ Notified Tribe 'ದರೋಡೆಕೋರ ಆದಿವಾಸಿಗಳು' ಎಂದು ಹಣೆಪಟ್ಟಿಯನ್ನು ಹಚ್ಚಿ ಅನೇಕ ಕಾಡನ್ನ ಆಶ್ರಯಿಸಿದ ಬಡುಕಟ್ಟುಗಳನ್ನು ಒತ್ತಾಯಪೂರ್ವಕವಾಗಿ ಕಾಡಿಂದ ಆಚೆ ಹಾಕಿದ್ದಲ್ಲದೆ, ಕಾಡಿನೊಳಗೆ ಪ್ರವೇಶವನ್ನು ನಿಷೇಧಿಸಲಾಯಿತು. ನಂತರದಲ್ಲಿ, ಅನಿವಾರ್ಯವಾಗಿ ತಾಂಡಗಳನ್ನ ಗುಡ್ಡಗಾಡು ಪ್ರದೇಶಗಳಲ್ಲಿ, ಕಾಡಿರುವ ಜಾಗಗಳಲ್ಲಿ ಕಟ್ಟಿಕೊಂಡು – ಕಾಡಿನಿಂದ ಕಳ್ಳತನದಿಂದ

ಹಣ್ಣುಗಳನ್ನು, ಕಟ್ಟಿಗೆಯನ್ನು ಮಾರುತ್ತ ಹೊಸ ಬದುಕಿಗೆ ಹೊಂದಿಕೊಳ್ಳಲು ಹೆಣಗಾಡಿದ್ದರು. ಈ ದೇಶದ ದೊಡ್ಡದುರಂತವೆಂದರೆ ಸ್ವಾತಂತ್ರ್ಯ ಸಿಕ್ಕರೂ, 1950ರವರೆಗೆ ಬಹುತೇಕ ಐದು ವರ್ಷ ಹನ್ನೊಂದು ದಿನಗಳವರೆಗೆ ಜೈಲಿನಲ್ಲಿದ್ದ ಆದಿವಾಸಿಗಳಿಗೆ ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ಅಷ್ಟೇ ಅಲ್ಲಾ, Notifiedನಿಂದ – De-Notified ಆಗುವುದಕ್ಕೆ ಇನ್ನಷ್ಟು ಸಮಯ ಬೇಕಾಯಿತ್ತು. ಸರಾಯಿ ತಯಾರು ಮಾಡುವುದು, ಒಣಕಟ್ಟಿಗೆಯ ಹೊರೆಗಳನ್ನು ಹೊತ್ತು ಮಾರುವುದರಲ್ಲೆ ಕಾಲ ಕಳೆಯುತ್ತಿದ್ದರು.

ಅಕ್ಷರಜ್ಞಾನದ ಅರಿವೆ ಇಲ್ಲದ ಲಮಾಣಿಗರು ಅಕ್ಷರದ ಬೆರಗನ್ನು ಅರಿತದ್ದು ಸ್ವಾತಂತ್ರ್ಯದ ಎಷ್ಟೋ ವರ್ಷಗಳ ನಂತರ. 1924ನೇ ಬೆಳಗಾವಿ ಕಾಂಗ್ರೆಸ್ ಸಮ್ಮೇಳನಕ್ಕೆ ಬಂದ ಡಾ. ಬಿ.ಆರ್. ಅಂಬೇಡ್ಕರ್ ಅವರಲ್ಲಿಗೆ ಹೋಗಿ ಬಂಜಾರ ಸಮುದಾಯದ ಎಲ್.ಆರ್. ನಾಯ್ಕ ಸ್ವಯಂ ಪರಿಚಯ ಮಾಡಿಕೊಂಡು ಆದಿವಾಸ ಬಂಜಾರ ಸಮುದಾಯದ ಮೊದಲ ಪದವೀಧರ ಎಂದಾಗ ಅಂಬೇಡ್ಕರ್ ಅವರು ಬೇರಗಾಗಿದ್ದರು. ಆದರೆ ಅವರ ಬಗ್ಗೆ ತಿಳಿಯಲು ಯಾವ ಪುಸ್ತಕಗಳು ದೊರೆಯುವುದಿಲ್ಲ.

ಭಾರತದ ಇತಿಹಾಸ ಪಂಡಿತರ ಸುಳ್ಳಿನ ಕಂತೆಯಾಗಿದೆ ವಿನಃ ಸತ್ಯವಾದುದಲ್ಲ. ಆದಿಲ್ ಷಾಹಿಯ ಕಾಲದಲ್ಲಿ ಉಪ್ಪಿನ ವ್ಯಾಪಾರಿಯಾಗಿದ್ದ ಹೇಮು ಮುಂದೆ ತನ್ನ ಚಾಣಾಕ್ಷತನದಿಂದಾಗಿ ಒಂದೊಂದೆ ಮೆಟ್ಟಿಲುಗಳನ್ನು ಏರುತ್ತಾ ಮಂತ್ರಿಪದವಿಯನ್ನ ಪಡೆದು 22 ಯುದ್ಧಗಳಲ್ಲಿ ಜಯಗಳಿಸುತ್ತಾನೆ. ಅವನು ಬಂಗಾಳದ ಮೇಲೆ ವಿಜಯ ಸಾಧಿಸಲು ಹೋದಾಗ ಆದಿಲ್ ಷಾ– ಯುದ್ಧದಲ್ಲಿ ಕೊಲೆಯಾಗುತ್ತಾನೆ. ದೆಹಲಿಗೆ ವಾಪಾಸಾದ ಹೇಮು ತಾನೆ ರಾಜನೆಂದು ಘೋಷಿಸಿಕೊಳ್ಳುತ್ತಾನೆ. ನಂತರ ನಡೆದ ಅಕ್ಬರ್ ಮತ್ತು ಹೇಮುನ ನಡುವಿನ ಎರಡನೇಯ ಪಾಣಿಪತ್ ಯುದ್ಧದಲ್ಲಿ ಬೈರಾಂ ಖಾನ್ ಮತ್ತು ಅಕ್ಬರ್ ಹೇಮುಗೆ ಹೆದರಿ ದೂರ ಉಳಿಯುತ್ತಾರೆ. ಆಕಸ್ಮಿಕ ಕುಕ್ಷಿಗೆ ಬಿದ್ದ ಬಾಣದ ನೋವಿನಿಂದ ನೆಲಕ್ಕುರುಳಿದ ವೀರ ಹೇಮುನನ್ನು ಅಕ್ಬರ್‌ನ ಸೈನಿಕರು ಸೆರೆ ಹಿಡಿದು ಅತ್ಯಂತ ಬಲಶಾಲಿ ಹೇಮು ಬದುಕಿದರೆ ಮೊಘಲ ಸಾಮ್ರಾಜ್ಯ ಉಳಿಯುವುದು ಕಷ್ಟ ಎಂದು ಅರಿತ ಬೈರಂಖಾನ್ ಹೇಮುನ ಕತ್ತು ಕಡಿಯಲು ಅಕ್ಬರ್‌ನಿಗೆ ಹೇಳುತ್ತಾನೆ. 14 ವರ್ಷದ ಬಾಲಕ ಅಕ್ಬರ್ ನಿರಾಕರಿಸಿದಾಗ ಬೈರಂಖಾನ್ ತಾನೆ ಹೇಮುನ ಕೊಲೆಮಾಡುತ್ತಾನೆ. ಇಂತಹ ಯೋಧ ಬಂಜಾರನಾಗಿದ್ದ ಎಂಬುದಕ್ಕೆ ಸಾಕಷ್ಟು ಪುರಾವೆಗಳಿದ್ದರೂ ಇತಿಹಾಸಕಾರರು ದಾಖಲಿಸಿರುವುದಕ್ಕೆ ಕಾರಣ ಏನು? ಹೇಮು ಬಂಜಾರ ಎನ್ನುವುದಕ್ಕೆ ಬಹುಮುಖ್ಯ ದಾಖಲೆ ಅವನು ಉಪ್ಪಿನ ವ್ಯಾಪಾರಿಯಾಗಿದ್ದ ಎಂಬುದು. ಎರಡನೇಯದು ಅವನ ಸೋದರಳಿಯ ರಾಮಯ್ಯ ಮುಂದೆ ರಾಜಸ್ಥಾನದ ಯಾವುದೋ ಒಂದು ಪ್ರಾಂತ್ಯದ ರಾಜನಾಗಿ – ಬಂಜಾರ ಸಂಸ್ಕೃತಿಗೆ ಹೆಚ್ಚಿನ ಆದ್ಯತೆ ನೀಡಿರುವುದು. ಇನ್ನು ಮೂರನೆ ಬಲವಾದ ಕಾರಣ, ಹೇಮುವಿನ ನಂತರ ಬಂಜಾರರಲ್ಲಿ

ಹೇಮ, ಹೇಮು, ಹೇಮುನಾಯ್ಕ ಮುಂತಾದ ಸರ್ವನಾಮಗಳು ಪ್ರತಿಯೊಂದು ತಾಂಡಗಳಲ್ಲಿ ಸರ್ವೇಸಾಮಾನ್ಯವಾಗಿ ಕಾಣಬಹುದು. ಆದರೆ ದೃರದೃಷ್ಟ ಎಂದರೆ, ಕೆಲವರು ಆತನನ್ನು ಸಾರಾಸಗಟಾಗಿ ಹಿಂದೂ ರಾಜನೆಂದು ಘೋಷಿಸುವುದು ಮತ್ತು ವೈಶ್ಯರು ಹೇಮು, ಹೇಮ ನಾಯ್ಕ ಹೇಮ್ಲ ಬುಕ್ಕನಾಗಿರಬಹುದಾದವನು ಇತಿಹಾಸ ಮರೆತ ವೈಶ್ಯರ ರಾಜನೆಂದು ಸುಳ್ಳು ಹೇಳುತ್ತಿರುವುದು ಎಷ್ಟು ಸರಿ? ಇಂತಹ ಇತಿಹಾಸಕ್ಕೆ ಸವಾಲು ಮಾಡಬೇಕಾಗಿದೆ. ಆದರೆ ಹೇಮು, ಹೇಮು ಭುಕ್ಕ ವಿಕ್ರಮಾದಿತ್ಯನೆಂದು ನಾಮಕರಣ ಮಾಡಿಕೊಂಡರು ಅವನು ಬಂಜಾರ ದೊರೆಯೇ ಎಂಬುದು ಮಾತ್ರ ಸತ್ಯ.

ಹೇಮುನ ನಂತರ ಬಂದ ಲಕ್ಕಿಷ ಬಂಜಾರ ಮೊಗಲರಿಗೆ ಅತ್ಯಂತ ಹತ್ತಿರವಾಗಿದ್ದ ಮತ್ತು ದೆಹಲಿಯಲ್ಲಿಯೇ ಪ್ರಬಲನಾದ ವ್ಯಾಪಾರಿಯಾಗಿದ್ದ. ದೆಹಲಿಯ ಬಂಜಾರಬಾವಡಿ ಸಾಗರ್‌ನಲ್ಲಿರುವ ದೊಡ್ಡ ಲೋಕೋಪಯೋಗಿ ಕೆರೆಯನ್ನು ಈತನೆ ಕಟ್ಟಿಸಿದ್ದು. ಇಂತಹ ಲಕಿಷ ಬಂಜಾರ ಔರಂಗಜೇಬ್ ಸಿಕ್ಕರ 10ನೇ ಗುರುಗೋವಿಂದ ಸಿಂಗ್‌ರನ್ನು ದೆಹಲಿಯ ಚಾಂದನಿಚೌಕ್ ಭಾಗದಲ್ಲಿ ಜರುಗಿದ ಯುದ್ಧದಲ್ಲಿ ಚೆಂಡನ್ನು ಕತ್ತರಿಸಿ ಗುರುಗೋವಿಂದ್ ಸಿಂಗ್‌ನ ಶವಸಂಸ್ಕಾರ ಮಾಡಬಾರದು ಎಂದು ಶಿರ– ಮತ್ತೆ ದೇಹವನ್ನು ದೂರ ಬಿಸಾಕಿ ಕಾವಲಿಟ್ಟಿರುತ್ತಾನೆ. ಸೈನ್ಯದ ಕಾಲಿಂದ ಎದ್ದ ಧೂಳಿನಲ್ಲಿ ಲಕ್ಕಿಷ, ಹತ್ತಿ ತುಂಬಿದ ಚಕ್ಕಡಿಯಲ್ಲಿ ಗೋವಿಂದ್ ಸಿಂಗ್‌ರ ದೇಹವನ್ನು ತಂದು ಅಂತ್ಯಸಂಸ್ಕಾರ ಮಾಡುತ್ತಾನೆ ಆದರೆ ಈತನನ್ನು ಸಿಖ್ಖರು ನೆನಪಿಸುವುದಿಲ್ಲ– ಬಂಜಾರರಿಗೆ ಇದು ಮೊದಲೆ ತಿಳಿದಿಲ್ಲ.

ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕಿಂತ ಪೂರ್ವದಲ್ಲೆ ಆದಿವಾಸಿ – ಬುಡಕಟ್ಟುಗಳ ಸೈನ್ಯವನ್ನು ಕಟ್ಟಿಕೊಂಡು ರಾಜಸ್ಥಾನ ಮತ್ತು ಗುಜರಾತ್‌ನ ಸರಹದ್ದಿನೊಳಗೆ ಬ್ರಿಟೀಷ್‌ರನ್ನು ಓಡಿಸಲು ಯುದ್ಧ ಮಾಡಿದ ಗುರುಗೋವಿಂದ್ ಸಿಂಗ್ ಬಂಜಾರ ಹೋರಾಟವನ್ನು ಮಾಡಿ ಬ್ರಿಟೀಷರ ಎದುರಿಗೆ ನಿಲ್ಲಲಾಗದೆ ಮಡಿದ, ಆದರೆ ಆತ ಬ್ರಿಟೀಷರನ್ನು ನಡುಗಿಸಿದ್ದು, ಇಂತಹ ಬಂಜಾರ ನಾಯಕ ಇತಿಹಾಸದ ಯಾವುದೇ ಪುಸ್ತಕದಲ್ಲಿ ದಾಖಲಾಗದೆ ಇರುವುದು ಈ ದೇಶದ ದೊಡ್ಡ ಸಂಗತಿಗಳಲ್ಲಿ ಒಂದು ಎಂದರೆ ತಪ್ಪಾಗಲಾರದು. ಮೌಖಿಕ ಪರಂಪರೆಯಲ್ಲಿ ಇವತ್ತಿಗೂ ಜೀವಂತವಾಗಿರುವ ಈ ಮಹನೀಯರು ಜನರ ಬಾಯಿಯಲ್ಲಿ ಜೀವಂತವಾಗಿದ್ದಾರೆ. ಬಂಜಾರ ಹಾಡುಗಳಲ್ಲಿ ಬಂಜಾರ ಕತೆಗಳಲ್ಲಿ ಅಳಿಸದೆ ಇರುವ ಇತಿಹಾಸದ ಮರುಸೃಷ್ಟಿಯ ಅವಶ್ಯಕತೆ ಇದೆ.

1861ರ ಆಸುಪಾಸಿನಲ್ಲಿ ಬ್ರಿಟೀಷರು ಅರಣ್ಯ ಕಾಯ್ದೆಯನ್ನು ಮಾಡಿ ಬ್ರಿಟೀಷರು ಮಾತ್ರ ದೊಡ್ಡದೊಡ್ಡ ಮರದ ದಿಮ್ಮಿಗಳನ್ನು ಕಡಿದು ಸಾಗಿಸಬಹುದು. ಬೇರೆ ಯಾರು ಅದನ್ನು ಪ್ರವೇಶಿಸಬಾರದೆಂದು ಪಾಬಂದಿ ಹೇರಿದಾಗ ಅರಣ್ಯರಕ್ಷಕರಾಗಿದ್ದ ಮೂಲನಿವಾಸಿಗಳ ಸ್ಥಿತಿ ಅಧೋಗತಿಯಾಗಿತ್ತು. ಉತ್ತರದಿಂದ ಕೊಪ್ಪಳದ

ಮೂಲಕವೇ ದಾರಿಮಾಡಿಕೊಂಡಿದ್ದ ಬಂಜಾರು ಬಹದ್ದೂರ್ ಬಂಡಾದಲ್ಲಿ ಹೋಳಿಹಬ್ಬದ ನೆಪದಲ್ಲಿ ಬ್ರಿಟೀಷರ ವಿರುದ್ಧ ಸಭೆ ಸೇರಿ 22 ತಾಂಡಗಳ ನಾಯಕರು ಒಂದಾಗಿದ್ದ ಐತಿಹಾಸಿಕ ದಾಖಲೆಯೇ ಇದೆ. ಆದರೂ ಇದು ಎಲ್ಲಿಯೂ ಉಲ್ಲೇಖವಾಗಿಲ್ಲ. ಟಿಪ್ಪು ಸುಲ್ತಾನ್ 1798–99ರಲ್ಲಿ ಬ್ರಿಟೀಷರೊಂದಿಗೆ ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧ ಮಾಡುವ ಸಂದರ್ಭದಲ್ಲಿ ಅವನ ಮಂತ್ರಿಗಳಾದ ದಿವಾನ್ ಪೂರ್ಣಯ್ಯ ಹಾಗೂ ಮೀರ್ಜಾಪರ್ ಒಂದಾಗಿ ಬ್ರಿಟೀಷರ ಪರವಹಿಸಿದಾಗ, ಅನಾಯಾಸವಾಗಿ ಟಪ್ಪು ಅವನಿಗೆ ದವಸಧಾನ್ಯ ಒದಗಿಸುತ್ತಿದ್ದ ಭೀಮಾನಾಯ್ಕನನ್ನ ನಂಬಲೇಬೇಕಾಯಿತು ಹಾಗೂ ನೆಪೋಲಿಯನ್ ಕಳುಹಿಸಿದ್ದ ಶಸ್ತ್ರಗಳನ್ನು ಅಡಗಿಸಿದ್ದ ಬಾಬಾ ಬುಡನ್‌ಗಿರಿ ಬೆಟ್ಟಕ್ಕೆ ಭೀಮನಾಯ್ಕನನ್ನ ಕಳುಹಿಸಿದಾಗ ಒಳಪಿತೂರಿಯಿಂದ ಭೀಮನಾಯಕ್ ಬ್ರಿಟೀಷ್‌ರಿಗೆ ಸೆರೆಸಿಕ್ಕಿ ಕೊಲ್ಲಲ್ಪಡುತ್ತಾನೆ. ಆದರೆ ಕರ್ನಾಟಕದ ಇತಿಹಾಸದಲ್ಲಿ ಈತ ದಾಖಲೆಯಾಗುವುದೇ ಇಲ್ಲ.

ಹೈದ್ರಾಬಾದ್ ನಿಜಾಮರ ಕಾಲದಲ್ಲಿ ಹೈದ್ರಾಬಾದ್ ಸುತ್ತಲು ಬಂಜಾರರು ವಾಸವಾಗಿದ್ದರು. ಚಿಕ್ಕಪುಟ್ಟ ವ್ಯಾಪಾರ, ..., ಹಸು, ಎತ್ತುಗಳನ್ನು ಸಾಕಿಕೊಂಡಿದ್ದ ಕಾಲ. ಬಂಜಾರ ಹಿಲ್ಸ್ ಎಂದೇ ಖ್ಯಾತವಾಗಿರುವ ಬಂಜಾರರ ಜಾಗದಲ್ಲಿ ಜಗನುನಾಯ್ಕ ತಾಂಡದ ನಾಯಕನಾಗಿದ್ದ. ಅವನ ಅಕಾಲಿಕ ನಿಧನದಿಂದಾಗಿ ಅವನ ಹೆಂಡತಿ ತುಂಬುಯೌವನದ ಯುವತಿ ಜಮಣಿನಾಯ್ಕಣ್ ಎಂದೇ ಹೆಸರುವಾಸಿಯಾಗಿದ್ದಳು. ಗಂಡನ ಅಕಾಲಿಕ ನಿಧನದ ನಂತರ ಮಕ್ಕಳೊಂದಿಗೆ ತಾಂಡದ ನಾಯಕ ಪಟ್ಟವನ್ನು ಇಟ್ಟುಕೊಂಡಿದ್ದ ವೀರವನಿತೆ.

ಹೈದ್ರಾಬಾದ್ ನಿಜಾಮನ ಸೇನಾಧಿಕಾರಿಯ ಕಣ್ಣು, ತಾಂಡದ ಮೇಲೆ ಬಿತ್ತು. ಕಣ್ಣುಕುಕ್ಕುವ ಅವಳ ಸೌಂದರ್ಯಕ್ಕೆ ಮಾರುಹೋದ ಮುಸ್ಲಿಂ ಸೇನಾನಾಯಕ ಲೈಂಗಿಕ ಕಿರುಕುಳಕ್ಕೆ ತಕ್ಕ ಉತ್ತರಕೊಟ್ಟು ನವಾಬನ ವಿರೋಧ ಕಟ್ಟಿಕೊಂಡು ಹೋರಾಡಿದ ಜಮಣಿನಾಯ್ಕಣ್‌ಳ ನೆನಪುಗಳು ಬಂಜಾರ ಸಮುದಾಯ ಮತ್ತು ಆಂಧ್ರದ ಇತಿಹಾಸದಿಂದ ಮರೆಯಾಗುವ ಮುನ್ನಾ ದಾಖಲೆಯಾಗ ಬೇಕಾಗಿದೆ. ಹಾಗೇನೆ, ಮೈಸೂರಿನ ಜನಾನುರಾಗಿ ರಾಜರಾಗಿದ್ದ ನಾಲ್ವಡಿಕೃಷ್ಣರಾಜ ಒಡೆಯರ್ ಕರ್ನಾಟಕದಲ್ಲಿ ಜನಪರ ಹೋರಾಟ ಆರಂಭಿಸಿ, ಜಾತಿ ವ್ಯವಸ್ಥೆ ಕಹಿ ಅನುಭವವನ್ನು ಅನುಭವಿಸಿದ ನಂತರ ಮೀಸಲಾತಿಯನ್ನು ಆರಂಭಿಸಿದರು. 'ಕಾರ್ಯನಿಮಿತ್ತ ಚಿತ್ರದುರ್ಗದ ಕಡೆಗೆ ಬಂದಿದ್ದ ಮಹಾರಾಜರು ಬಬ್ಬೂರ್ ಫಾರಂ ತಾಂಡದಲ್ಲಿ ವಿಶ್ರಾಂತಿ ತೆಗೆದುಕೊಳ್ಳುವ ಸಂದರ್ಭ ಬಂದಾಗ ಅನುಕೂಲಸ್ಥನಾಗಿದ್ದ ದಿ. ಜಾತ್ರ್ಯಾನಾಯ್ಕ ಅವರ ಸೈನಿಕರಿಗೆ ಹಾಗೂ ಮಹಾರಾಜರಿಗೆ ಔತಣವನ್ನು ನೀಡುತ್ತಾರೆ. ಪ್ರಸನ್ನರಾದ ಮಹಾರಾಜರು ಜಾತ್ರ್ಯಾನಾಯ್ಕರಿಗೆ ಉಡುಗೊರೆ ಕೊಡಲು ಮುಂದಾದಾಗ ನಿಸ್ವಾರ್ಥಿ ಜಾತ್ರ್ಯಾನಾಯ್ಕ, ಬ್ರಿಟೀಷ್‌ರಿಂದ ಶೋಷಣೆಗೊಳಗಾದ ಸಮುದಾಯ ಕಷ್ಟದಲ್ಲಿರುವುದರಿಂದ ಮೀಸಲಾತಿಯಲ್ಲಿ

ಬಂಜಾರ ಸಮುದಾಯವನ್ನು ಸೇರಿಸಲು ಮನವಿ ಮಾಡಿಕೊಂಡರು. ಮಹಾರಾಜರು ಅವರ ಇಚ್ಛೆಯನುಸಾರ ಲಂಬಾಣಿ ಸಮುದಾಯವನ್ನು ಮೀಸಲಾತಿಯೊಳಗೆ ಸೇರಿಸಿದರು.

ಇಂತಹ ದಾಖಲಾಗದಿರುವ ಇತಿಹಾಸವನ್ನು ಹೊಂದಿರುವ ಲಂಬಾಣಿ ಸಮುದಾಯ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತ ನಾಗರಿಕ ಪ್ರಪಂಚದಿಂದ ದೂರವೇ ಉಳಿದಿವೆ. ಕಂದಾಯ ಗ್ರಾಮದ ಸ್ಥಾನಮಾನಗಳನ್ನು ಸ್ವಾತಂತ್ರ್ಯ ಸಿಕ್ಕ 70 ವರ್ಷಗಳಾದರೂ ಪಡೆಯದ ತಾಂಡಗಳು ಇತ್ತೀಚೆಗೆ ಸೇರ್ಪಡೆಯಾಗಿರುವುದು, ಒಂದಿಷ್ಟು ಸುಧಾರಣೆಗೆ ಒಪ್ಪಿಕೊಳ್ಳುತ್ತಿರುವುದು. ಒಂದು ಕಡೆಯಾದರೆ ಮತ್ತೊಂದು ಕಡೆಗೆ ಸರ್ಕಾರದಿಂದ ಸರ್ಕಾರಿ ಜಮೀನಿನಿಂದ ಒಕ್ಕಲೆಬಿಸುವ ಕಾರ್ಯದಲ್ಲಿ ಎಲ್ಲವನ್ನು ಕಳೆದುಕೊಳ್ಳುವ ಆತಂಕ. ಬಡತನ. ಒಂದೇ ಅವರ ಪಾಲಿಗೆ, ಆ ಬಡತನ ಎಷ್ಟು ತೀವ್ರವಾಗಿದೆ ಎಂದರೆ ಮಕ್ಕಳನ್ನು ಮಾರುವ ಹೇಯಕಾರ್ಯಕ್ಕೆ ಇಳಿದಿರುವುದು ಇವರ ಸಂಕಷ್ಟಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಮೌಖಿಕ ಪರಂಪರೆಯನ್ನು ಹೊಂದಿರುವ ಲಂಬಾಣಿ ಸಾಹಿತ್ಯ ಬಹಳ ಸಮೃದ್ಧವಾಗಿದೆ. ಬಂಜಾರ ಸಂಸ್ಕೃತಿಯ ಸಂಕಥನಗಳನ್ನು ಹಾಡಿನ ರೂಪದಲ್ಲಿ ಹೇಳುವ ಅನೇಕ ಬಾವಗಳಿದ್ದರು, ಈಗ ಅವರ ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದಾರೆ. ಹಾಗಾಗಿ ದಾಖಲೆಗೆ ಇರುವ ಅನೇಕ ಮೌಖಿಕ ಮಹಾಕಾವ್ಯ, ಬಂಜಾರರ ಮಹಿಳೆಯರು ಹಾಡುವ ಹಾಡುಗಳೂ, ನೃತ್ಯ ಲೆಂಗಿ, ಒಳಂಗ್ ಕನ್ನಡದಲ್ಲಿ ದಾಖಲಾದರೆ ಒಂದು ದೊಡ್ಡ ಕೊಡುಗೆಯಾಗುವುದರಲ್ಲಿ ಸಂಶಯವೇ ಇಲ್ಲ.

ಇವರು ಕಾಫಿ ತೋಟದಲ್ಲಿ ದುಡಿದು, ದುಡಿದು ಸಾಕಾದರೂ ತೀರದ ಸಾಲ ಹೇಗಿತ್ತು ಹಾಗೆ ಯಥಾಸ್ಥಿತಿಯಲ್ಲಿರುತ್ತಿತ್ತು. ವಾರದ ಕೊನೆಗೆ ಭೂತಾಯಿ ಮೀನು ಮತ್ತು ಹೆಂಡಕ್ಕೆ ಕೈಕಾಸು ಮಾಡುವ ಪ್ರಸಂಗ ಬರುತ್ತಿತ್ತು. ಹೀಗೆ ಅದೇ ಸಾಲ ಮುಂದಿನ ವರ್ಷಕ್ಕೆ Carry Over ಆಗುವುದಲ್ಲದೆ ತಾಂಡಗಳ ಮುಂದಿರಬಹುದಾದ ದೇವಿಗೆ ಕುರಿ ಕಡಿಯದಿದ್ದರೆ ದುಂಧಾಮ್ ಹಬ್ಬ ಮಾಡದಿದ್ದರೆ ಸರಿಕರ ನಡುವೆ ಬದುಕುವುದಾದರೂ ಹೇಗೆ? ಪಕ್ಕದವನು ಒಂದೇ ಕುರಿ ಕಡಿದರೆ ಪ್ರತಿಷ್ಠೆಗೆ ಎರಡನ್ನಾದರೂ ಕಡಿಯುವ ಬಡ ಲಮಾಣಿಗರು ಇಡೀ ಜೀವನವನ್ನು ಕಂಡ–ತುಂಡು–ಸರಾಯಿ ಸುತ್ತವೆ ಬದುಕಿ ಸರ್ವನಾಶ ಆಗಿಹೋದರು.

ತಾಂಡಗಳಿಗೆ ಶಾಲೆ ಬಂದ ಮೇಲೆ ಒಂದಿಷ್ಟು ಜನ ಸಮಾಜಚಿಂತಕ ಮಾಸ್ತರ್‌ಗಳೆ ಇಲ್ಲಾ ಈ ಹುಡುಗರು ಕಠಿಣ ಪರಿಶ್ರಮ ಮಾಡುತ್ತಾರೆ ಎಂದುಕೊಂಡು ಹೊಡೆದು–ಬಡೆದು ತಿದ್ದಿತೀಡಿ ನಾಕು ಅಕ್ಷರಗಳನ್ನು ಧಾರೆ ಎರೆದ ಆಧಾರದ ಮೇಲೆ ಕನ್ನಡ ಭಾಷೆಯನ್ನು ಶುದ್ಧವಾಗಿ ಉಚ್ಚರಿಸಲಾಗದೆ ಅನೇಕರು

ಶಾಲೆ ಬಿಟ್ಟು ಓಡಿಹೋದ ಉದಾಹರಣೆಗಳು ಇವೆ, ಆದರೆ ಆ ಮೂರ್ಖರಿಗೆ ಯಾವತ್ತೂ ವರ್ಷಾನುಗಟ್ಟಲೆ ವಿಶ್ವವಿದ್ಯಾಲಯಗಳಲ್ಲಿ ಪಾಠ ಮಾಡುವ ಮೇಷ್ಟ್ರುಗಳ ವ್ಯಾಕರಣ ದೋಷ ಮತ್ತು ಉಚ್ಚಾರದೋಷಗಳ ಬಗ್ಗೆ ಅರಿವಾಗಿದ್ದರೆ ಹೀಗೆ ಮಧ್ಯದಲ್ಲಿಯೆ ಬಿಟ್ಟು ಓಡುತ್ತಿರಲಿಲ್ಲವೇನೋ. ಈ ಎಲ್ಲಾ ಸಂದಿಗ್ಧತೆಗಳ ನಡುವೆ ಆರಂಭವಾದ ಬದುಕಿನ ಸಂಘರ್ಷ ಕೆ.ಟಿ. ರಾಠೋಡ್, ಕರ್ನಾಟಕದ ಮಂತ್ರಿಯಾದಾಗ ನಿಸ್ವಾರ್ಥಿಯಾಗಿ ಸಮುದಾಯದ ಪರ ಹೋರಾಡಿ, ವಿದ್ಯೆ-ಉದ್ಯೋಗ-ತಿಳುವಳಿಕೆ ಮೂರು ಮಂತ್ರಗಳನ್ನು ವಿದ್ಯಾರ್ಥಿಗಳ ತಲೆಗೆ ತುಂಬಿದರು.

ವಸಾಹತುಶಾಹಿ ಸಂದರ್ಭದಲ್ಲಿ, ಇದೇ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಬಬ್ಬೂರ್ ಫಾರಂ ತಾಂಡದ ಜಾತ್ರ್ಯಾನಾಯ್ಕನವರು ನಾಲ್ವಡಿಯವರು ಈ ಭಾಗಕ್ಕೆ ಬಂದಾಗ ಅವರ ಸೈನ್ಯಕ್ಕೆ ಊಟ ನೀಡಿದ್ದಕ್ಕೆ ಸಂತೋಷಗೊಂಡ ನಾಲ್ವಡಿಯವರು ಅವರು ಕೇಳುತ್ತಾರೆ, ನಿಮಗೆ ಏನುಬೇಕು ಕೇಳಿ, ನಮಗೆ ಒಳ್ಳೆಯ ಆತಿಥ್ಯ ನೀಡಿದ್ದೀರಿ ಎಂದರು. ಪ್ರಭು, ಈ ಕೆಂಪು ಮಂದಿ ನಮ್ಮನ್ನು ಅಪರಾಧ ಮಾಡುವ ಬುಡಕಟ್ಟು ಎಂದು ಘೋಷಣೆ ಮಾಡಿ ಬಂಜಾರರ ಬದುಕನ್ನು ನರಕಮಾಡಿ(Notified- be)ದ್ದಾರೆ. ತಾವು ದಯಾಳುಗಳು ಬ್ರಾಹ್ಮಣೇತರರಿಗೆ ಮೀಸಲಾತಿಯನ್ನು ನೀಡುತ್ತಿದ್ದಾರೆ ಎಂದು ನಮಗೆ ತಿಳಿಯಿತು. ಕನಿಷ್ಠ ಬದುಕನ್ನು ಮಾಡುತ್ತ ಬದುಕಿರುವ ಈ ಬಂಜಾರ-ಲಂಬಾಣಿ ಸಮುದಾಯಕ್ಕೂ ತಾವು ಮೀಸಲಾತಿಯ ಚೌಕಟ್ಟಿನಲ್ಲಿ ಸೇರಿಸಬೇಕು ಎಂದರು. ನಾಲ್ವಡಿಯವರು ಮೀಸಲಾತಿಯ ಪಟ್ಟಿಯಲ್ಲಿ 'ಬಂಜಾರ-ಲಮಾಣಿ' ಸಮುದಾಯವನ್ನು ಸೇರ್ಪಡೆಮಾಡಿದರು.

ಮೈಸೂರಿನ ಸಂಸ್ಥಾನದಲ್ಲಿ ಮಾತ್ರ ಮೀಸಲಾತಿ ಇದ್ದ ಬಂಜಾರರಿಗೆ ಸ್ವಾತಂತ್ರ್ಯ ನಂತರ ಉತ್ತರಕರ್ನಾಟಕದಲ್ಲಿ ಗೊಂದಲವಾಯಿತು. ಆಗ ಮುಖ್ಯಮಂತ್ರಿಯಾಗಿದ್ದ ದೇವರಾಜ್ ಅರಸು ಎಲ್.ಜಿ. ಹಾವನೂರ್ ಆಯೋಗದ ಶಿಫಾರಸ್ಸಿನ ಮೇರೆಗೆ ಲಮಾಣಿ ಸಮುದಾಯವನ್ನು ಮೀಸಲಾಯಿತಿಯ ಪಟ್ಟಿಯಲ್ಲಿ ಸೇರ್ಪಡೆ ಮಾಡಿದ ನಂತರ ಮುಖ್ಯವಾಹಿನಿಗೆ ಬರಲು ಅನುಕೂಲವಾಯಿತು. ಏಕೆಂದರೆ ಫೇಟೆಯಾ (ಸೀರೆ) ಹೊಲೆಯ ಬೇಕಾದರೆ, ಕಾಚೆ (ಗಾಜು) ಗೂಂಡಿ, ದಾರ ಒಂದು ಹತ್ತು ನಮೂನೆಯದ್ದು ಬೇಕಿತ್ತು. ಇದನ್ನ ಖರೀದಿಸಲು ಅವರ ಬಳಿ ಕಾಸೆ ಇಲ್ಲದ ಕಾರಣ ಕಾಡಿನಿಂದ, ಬಾರಿ, ಕಾರಿ, ಕವಳಿ, ಕಂಚು, ಅಂಟು, ಅಂಟ್ವಾಳದ ಕಾಯಿ ಮುಂತಾದವುಗಳನ್ನು ಅಯ್ದು ತಂದು ರಂಗಾರ್‍ಯರ ಓಣಿ- ಒಂದೆಡೆ ನೇಕಾರ ಮತ್ತು ಬಣ್ಣಹಾಕುವ ಸಮುದಾಯದವರ ಓಣಿಗಳಲ್ಲಿ ತಿರುಗಾಡಿ ಹಣ್ಣಿಗೆ ದಾರವನ್ನು ಸಾಟಿಬದಲಿ ಮಾಡಿಕೊಂಡು, ಪೆಟಿಯಾ, ಛಾಂಟಿಯಾ (ಹೊಡ್ಕೊಳ್ಳುವುದು) ಕಾಂಚಳಿ-(ಕುಬುಸ)ವನ್ನು ವರ್ಷಾನುಗಟ್ಟಲೆ ಕಸೂತಿ ಮಾಡಿ ಹೊಲೆಯುತ್ತಿದ್ದರು.

ಕಿತ್ತು ತಿನ್ನುವ ಬಡತನ, ಕಾಡಿನ ನಡುವೆ ಇರುವ ತುಂಡು ಭೂಮಿ

ಅದು ಅವರದು ಸ್ವಂತದ್ದಲ್ಲ. ಪಟ್ಟವೂ ಇಲ್ಲ. ಬೆಳೆಬೆಳೆಯುವುದು ತಿಳಿಯದೆ ಕಂಗಾಲಾಗಿ, ಕಾಫಿ ತೋಟ, ಬೇರೆಯವರ ತೋಟಗಳಲ್ಲಿ, ಹೊಲಗದ್ದೆಗಳಲ್ಲಿ ಅಂಡುಹರಿಯುವಮಟ ಕೆಲಸಮಾಡಿ, ರಾತ್ರಿ ಮಾತ್ರ ತಪ್ಪದೆ ಹೆಂಡಸಾರಾಯಿ ಕುಡಿದೇ ತೀರಬೇಕು ಎನ್ನುವ ಮನೋಧರ್ಮ ಇದ್ದಿದ್ದರಿಂದ ಯಾವ ಲಮಾಣಿ ಕುಟುಂಬವೂ ಆರ್ಥಿಕವಾಗಿ ಸಬಲವಾಗಿರಲಿಲ್ಲ. ಅದು ಅಲ್ಲದೆ ಮಹಿಳೆಯೊಬ್ಬಳೆ ಹೆಚ್ಚು ಕಡಿಮೆ ಒಳಗೂ-ಹೊರಗೂ ದುಡಿಯುವ, ಮತ್ತು ಜವಾಬ್ದಾರಿ ವಹಿಸಬೇಕಿದ್ದ ಗಂಡಸು ಸೋಂಬೇರಿಯಾಗಿ ಅಂಡೂರಿ ಕೂರುವ ಕುಟುಂಬಗಳ ಸಂಖ್ಯೆ ಹೆಚ್ಚಿದ್ದರಿಂದಾಗಿ, ಅವರ ಮಕ್ಕಳು ಶಾಲೆಗೆ ಹೋಗಿ ಕಡದು ಡಬ್ಬ ಹಾಕುವುದಾದರೂ ಏನು?

ಕಾಫಿ ತೋಟಕ್ಕೆ ಹೋಗುವ ಮುನ್ನ ಶೋಷಕ ಲಮಾಣಿ ಸಮಾಜದ ಮೇಸ್ತ್ರಿ ಕಡಿಮೆ ದುಡ್ಡಿಗೆ ಜನರನ್ನು ಒಯ್ದು ಕಮಿಷನ್ ಎತ್ತಿ ಕಾಫಿ ಬೀಜ ಹರಿಯುವವರ ಮೇಲೆ ಹಾಕಿ ತಾನು ಲಾಭ ಮಾಡಿಕೊಳ್ಳತ್ತಿದ್ದ. ಹಳೆ ಸಂಸ್ಕೃತಿಗೆ ಬೇಸರಗೊಂಡು ಹೊಸತನಕ್ಕೆ ಆಗಲೆ ತಯಾರಾಗಿದ್ದ ಯುವಕರ ಸಮುದಾಯ ನೇರವಾಗಿ ಬದಲಾವಣೆಯ ಹೊಸ ಆಕರ್ಷಣೆಗೆ ಸಿಲುಕಿದ್ದರಿಂದಾಗಿ ಸಂಪ್ರದಾಯಿಕ ಉಡುಪು ಮತ್ತು ಆಚರಣೆಯ ಮೇಲೆ ಅಟ್ಯಾಕ್ ಮಾಡಿದರು. ಯಾವ ಮಹಿಳೆಯೂ ತಮ್ಮ ಉಡುಪನ್ನ ತೊಟ್ಟು ಪಟ್ಟಣಕ್ಕೆ ಬರುವಂತಿಲ್ಲ ಎನ್ನುವ ನಿಷೇಧ, ಹೋಳಿಹಬ್ಬದ ಆಚರಣೆಯಲ್ಲಿ ಹೆಂಗಸರು- ಯುವತಿಯರನ್ನು ಮುಂದೆ ಬಿಟ್ಟು, ಇಲ್ಲವೆ ತಮ್ಮೊಳಗೆ ಕೆಲವು ವಯಸ್ಸಿನ ಮಹಿಳೆಯರನ್ನು ಮುಂದೆ ಮಾಡಿ, ಪರಪುರುಷರ ಮೇಕ್ಕೈ ಮುಟ್ಟಿ ಹಣಕೇಳುವ ಸ್ಥಿತಿಯನ್ನು ಕೊನೆಗಾಣಿಸುವ ಕಾರ್ಯಕ್ಕೆ ಕೈಹಾಕಿದ್ದರಿಂದಾಗಿ ಈ ಎರಡೂ ಆಚರಣೆಗಳು ಒಂದು ಹಂತಕ್ಕೆ ನಿಂತವು. ಏಕೆಂದರೆ ಆಗಲೆ ಕೈಮಗ್ಗಗಳೂ ದಾರ ನೇಯುವುದನ್ನು ಬಿಟ್ಟು ಹೊಸ ಜಗತ್ತಿನೊಂದಿಗೆ ಸ್ಪರ್ಧೆಗೆ ಇಳಿಯಲಾಗದೆ ಸೋತು ಮೂಲೆ ಗುಂಪಾಗಿದ್ದವು. ಲಮಾಣಿ ಹೆಂಗಸರು ಫೇಟಿಯಾ ಬಿಟ್ಟು ಸೀರೆಗೆ ಶರಣಾದರು, ಹೋಳಿ ತಾಂಡಕ್ಕೆ ಮಾತ್ರ ಸೀಮಿತವಾಯಿತು. ಅನಾವಶ್ಯಕವಾಗಿ ಲಮಾಣಿ ಹೆಂಗಸರು ಮೈಮೇಲೆ ಬೀಳುತ್ತವೆ ಎಂದು ಆಡಿಕೊಳ್ಳೂವ ಹೊರಗಿನ ಜಗತ್ತಿಗೆ ಮರ್ಯಾದೆಯಿಂದ ಬದುಕುತ್ತಿದ್ದಾರೆಂಬ ಭಾವನೆ ಬಂತು.

ಹೀಗೆ, ವಸಾಹತುಶಾಹಿ ಭಾರತದಲ್ಲಿ ಸಣ್ಣ ವ್ಯಾಪಾರಿಗಳಾಗಿದ್ದ ಬಂಜಾರರು- ಮುಂಗಾರುಮಳೆಗೆ ಭೋರ್ಗರೆವ ಹಳ್ಳಗಳು ನದಿಗೆ ಸೇರಲು ಕಾತರದಿಂದ ಹರಿಯುತ್ತಿರುವಾಗ, ಹರಿವ ನೀರಿನ ಪ್ರವಾಹಕ್ಕೆ ಎದುರಾಗಿ ಈಜುವ ಮೀನುಗಳು ಹಳ್ಳದ ಪ್ರವಾಹ ಕಡಿಮೆಯಾದಾಗ ಕಂಗಾಲಾಗಿ ನೀರಿನ ಗುಂಡಿಗಳಲ್ಲೆ ನೆಲೆನಿಂತು ಮೀನುಗಾರರ ಬಲೆಗೆ, ಕೊಳದೊಳಗೆ ಸಿಲುಕಿ ಆಹಾರವಾಗುವಂತೆ ತಮ್ಮ ಬಣ್ಣ, ವೇಷಭೂಷಣಗಳಿಂದ ಆಕರ್ಷಿತ ಮಹಿಳೆಯರು ಶಿಕಾರಿಗಳ ಬಲೆಗೆ ಬಿದ್ದು ಒದ್ದಾಡುತ್ತಿದ್ದ ಕಾಲದ ಸಾಹಿತ್ಯ ಬರೆಯಲು ಲಮಾಣಿಗರ ಹತ್ತಿರ

ಅಕ್ಷರವಿರಲಿಲ್ಲ. ವಸಾಹತುಶಾಹಿ ಭಾರತದಲ್ಲಿ ಚಳ್ಳಕೆರೆ ತಾಲೂಕಿನ -- ಸಮೀಪ ಸತಿಯಾದ ಕರಮತೋಟ್ ಪಂಗಡದ ನನ್ನ ಮುತ್ತಜ್ಜಿ ಗೂಜಾಸತ್ತಿಯಾದ ಇತಿಹಾಸ ದಾಖಲಾಗದೆ ಇರಲು ಲಮಾಣಿಗರ Exclusive ಸಾಮಾಜಿಕ ಬದುಕು ಕಾರಣವಾಗಿದೆ. ಹೊರಗಿನ ಜಗತ್ತಿಗೆ ತೆರೆದುಕೊಳ್ಳದೆ ನಾಗರೀಕ - ಹೊರಜಗತ್ತಿನ ಮನುಷ್ಯರುಗಳೊಂದಿಗೆ ಭಟ್ಟಿ ಸರಾಯಿ ಮಾರಾಟಕ್ಕೆ ಮಾತ್ರ ಇಟ್ಕೊಂಡಿದ್ದರಿಂದ ಹಾಗೂ ತಾಂಡಗಳಿಗೆ ಕಂದಾಯಗ್ರಾಮಗಳ ಸ್ಥಾನಮಾನ ಸಿಗದ ಕಾರಣ ಶಿರಗಾನಹಳ್ಳಿ ಎನ್ನುವ ನನ್ನ ತಾಂಡಕ್ಕೆ ಲಮಾಣಿ ಸಮುದಾಯದ ಯಂಕಾನಾಯ್ಕ ಶಾಸಕರಾಗಿದ್ದರೂ ಕೂಡ ರಸ್ತೆ ಬರಲು ಅರವತ್ತು ವರ್ಷಗಳ ಕಾಲಾವಧಿ ಬೇಕಾಯಿತು. ವಿದ್ಯುತ್‌ದೀಪಗಳು ಬರಲು ಅರವತ್ತೈದು ವರ್ಷಗಳಾಯಿತು. ಇನ್ನು ಲಮಾಣಿ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿ ಸುಧಾರಣೆಯಾಗುದು ಯಾವಾಗ? ಸ್ಥಿತಿ ಹೀಗಿರುವ ಲಮಾಣಿ ಸಮುದಾಯದ ವೈ. ರೂಪ್ಲಾನಾಯ್ಕ ಎನ್ನುವ ಭಾರತೀಯ ಸೇವಾ ಅಧಿಕಾರಿ ಬಂಜಾರ-ಸಮುದಾಯದ ಭಾಷೆ, ಸಂಸ್ಕೃತಿ ಆಚಾರವಿಚಾರಗಳ ಬಗ್ಗೆ ಒಂದು ಹೊತ್ತಿಗೆಯನ್ನು ಹೊರತಂದರು. ಬಂಜಾರ ಲಮಾಣಿಗರು ಉತ್ತರಭಾರತದಿಂದ ವಲಸೆ ಬಂದವರು, ಮುಸ್ಲೀಮರ ಆಡಳಿತ ಒಂದು ಕಡೆಗೆ ಪೂರಕವಾದರೆ ಮತ್ತೊಂದು ಕಡೆಗೆ ಮಾರಕವಾಗಿತ್ತು. ಜೊತೆಗೆ ಸಣ್ಣ ವ್ಯಾಪಾರಸ್ಥರು ಮತ್ತು ಎತ್ತು ಮತ್ತು ಹಸುಗಳನ್ನು ಸಾಕುತ್ತಿದ್ದರಿಂದ ರಾಜಸ್ಥಾನದ ಮರಳುಗಾಡಿನಿಂದ ನೀರು ಮತ್ತು ಮೇವನ್ನು ಅರಸುತ್ತ ಹೇಗೆ ಲದೇಣಿಯ (ಹೇರು) ಹೇರಿಕೊಂಡು ಬಂದರು ಎಂಬುದನ್ನು ಬರೆದಿದ್ದಾರೆ. ಬಂಜಾರ ಸಮುದಾಯ, ಬದುಕು, ಸಂಸ್ಕೃತಿ ಹೊರಬದುಕಿನೊಂದಿಗೆ ಸಂಘರ್ಷ ಒಂದು ಕಡೆಯಾದರೆ, ಸಂಸ್ಕೃತಿಯನ್ನು ಉಳಿಸಿಕೊಂಡೆ ನಾಗರಿಕತೆಯ ಅನಿವಾರ್ಯತೆಯನ್ನು ಒಪ್ಪಿಕೊಳ್ಳುವ ಅಂತಹದ್ದು ಮತ್ತೊಂದು ಅನಿವಾರ್ಯತೆಯಾಗಿತ್ತು. ಈ ಎಲ್ಲಾ ಅನಿವಾರ್ಯತೆಗಳ ಹಿನ್ನೆಲೆಯಾಗಿ ಸೃಜನಾತ್ಮಕ ಸಾಹಿತ್ಯದ ಅನಾವರಣಗೊಳಿಸಿದ ಮೊದಲ ತಲೆಮಾರಿನ ಬರಹಗಾರರಲ್ಲಿ ಮೊದಲಿಗರು ಬೆನಕನಹಳ್ಳಿ ಜಿ. ನಾಯ್ಕ ಒಂದು ಕಾದಂಬರಿ ಮತ್ತು ಕತೆಗಳ ಬರೆದಿರುವ ಇವರು, ಬರವಣಿಗೆಯ ಆರಂಭದ ಹಂತದಲ್ಲಿಯೇ ನಿಧನರಾದರು. ತಾಂಡದ ಚಿತ್ರಣವನ್ನು ಮೊದಲ ಬಾರಿಗೆ ಕನ್ನಡದ ಸಾಹಿತ್ಯ ಜಗತ್ತಿಗೆ ತೋರಿಸಿದರು. ಇವರ ಯಾವ ಕೃತಿಗಳು ಲಭ್ಯವಿಲ್ಲದ ಕಾರಣ ಒಂದು ಸಣ್ಣಕತೆಯಲ್ಲಿ ಬಂಚಾರ ಸಮುದಾಯದ ಆಂತರಿಕ ರಚನೆಯಲ್ಲಿ ಇರುವ ವೈಪರೀತ್ಯವನ್ನು ಹೊರಹಾಕುವ ಪ್ರಯತ್ನವನ್ನು ಮಾಡಿದ್ದಾರೆ. ಬಂಜಾರ ಸಮುದಾಯ ಅನೇಕ ಪಂಥ-ಪಂಗಡಗಳನ್ನು ಹೊಂದಿದ್ದು ಎರಡು ಮುಖ್ಯ ಧಾರೆಗಳಲ್ಲಿ ಹಂಚಿ ಹೋಗಿದೆ ಅವುಗಳಲ್ಲಿ ಒಂದು ರಾಥೋಡ್ ಮತ್ತೊಂದು ಚವ್ಹಾಣ್. ಇವುಗಳನ್ನು ಬಿಟ್ಟು ಲಮಾಣಿಗರಿಗೆ ಮನೋರಂಜನೆಗೆ ದಾಡಿಗಳು (ಭಾಟ್), ಅವರ ದನಗಳನ್ನು ಮೇಯಿಸಲು ಥಾಲ್ಯ, ಬಂಗಾರ ಮಾಡುವ

ಸೋನಾರ್, ಕಬ್ಬಿಣದ ಕೆಲಸ ಮಾಡುವ ಲೋಹಾರ್‌ಗಳಿದ್ದರು. ಆರಂಭದಲ್ಲಿ ಇವರೆಲ್ಲ ಒಂದಾಗಿರಬೇಕು. ಕಾಲಬದಲಾದಂತೆ ನಾಯಕನಾದ ಡಾಡಿಯ ಸ್ಥಿತಿಗಂಭೀರವಾಗತೊಡಗಿತು. ಢಾಲ್ಯ, ಬಂಜಾರರ ಮನೆಯ ಹೊರಗಡೆ ನಿಂತು ರೊಟ್ಟಿ ಕೇಳುವುದು, ದನ ಮೇಯಿಸುವ ಕಾರ್ಯದಲ್ಲಿ ತೊಡಗುವುದು ಇಷ್ಟೇ ಅವನ ಕಾಯಕವಾಗಿತ್ತು. ಅವನಿಗೆ ಸಂಪತ್ತು ಕ್ರೂಢೀಕರಿಸುವ ಯಾವುದೇ ಅಧಿಕಾರ ಇರಲಿಲ್ಲ, ಈ ಹಿನ್ನೆಲೆಯಲ್ಲಿ ಹೇಗೆ ಸಮುದಾದೊಳಗೆ ಶೋಷಣೆಗೊಳಗಾಗಿದ್ದ ಮತ್ತು ಭೂಮಿಗಾಗಿ ಹೋರಾಟ ಮಾಡಿದ್ದ ಎಂಬುದನ್ನು ಗುರುತಿಸಿದ್ದಾರೆ. ಅವರ ನಂತರ ಬರೆದ ಬಿ. ಟಿ. ಲಲಿತಾನಾಯ್ಕ ಬಂಡಾಯದ ಸಮಯದಲ್ಲಿ ಮುಂಚೂಣಿಯಲ್ಲಿದ್ದವರು, ದಲಿತ–ಬಂಡಾಯದ ಕೊಂಡಿಯಾಗಿ ಕೆಲಸ ಮಾಡಿದ ಇವರು ಕತೆ, ಕಾದಂಬರಿ ಕಾವ್ಯದ ಮೂಲಕ ವಸಹಾತೋತ್ತರ ಬಂಜಾರರ ಸ್ಥಿತಿಗತಿಗಳನ್ನು ಸಾಹಿತ್ಯ ಮೂಲಕ ಮುಖ್ಯಧಾರೆಯಲ್ಲಿ ಬದುಕಿರುವ ಜನರಿಗೆ ಪರಿಚಯಿಸುವ ಕೆಲಸ ಮಾಡಿದ್ದಾರೆ. ಹಬ್ಬ ಮತ್ತು ಬಲಿ – ಕಥಾ ಸಂಕಲನ, ಗತಿ ಕಾದಂಬರಿ ಹಾಗೂ ಅನೇಕ ಕವನ ಸಂಕಲನಗಳನ್ನು ಹೊರದಂತಿರುವ ಇವರ ಸಾಹಿತ್ಯದಲ್ಲಿ – ಭಟ್ಟಿ ಸರಾಯಿ ಮಾಡುವ, ಪೋಲೀಸರಿಂದ ಹೊಡೆತ ನಿಂತು ಸಮಾಜಿಕವಾಗಿ ಕುಗ್ಗಿಹೋದ ಲಮಾಣಿಗರ ಬದುಕಿನ ಅನಾವರಣ ಮಾಡುತ್ತದೆ, ಕೃಷಿಕಾರ್ಮಿಕರಾಗುವ ಮೊದಲು ಅವರಿಗೆ ಅಂಟಿದ Notified ಅಪರಾಧಿ ಬುಡಕಟ್ಟು ದೃಷ್ಟಿಕೋನ ಸಮಾಜದ ಜನರಲ್ಲಿ ಎಷ್ಟು ಆಳವಾಗಿ ಬೇರೂರಿತ್ತು ಅಂದ್ರೆ, ಹೊಲಕ್ಕೆ ಕೆಲಸ ಮಾಡಲು ಕಲಿಯದ ಸ್ಥಿತಿ. ಈ ಸಂದರ್ಭದಲ್ಲಿ, ಕಾಡಿನ ಕಟ್ಟಿಗೆ ಮಾತ್ರ ಅವರ ಬದುಕಿಗೆ ಆಶ್ರಯವಾಗಿತ್ತು. ಕಟ್ಟಿಗೆಯನ್ನು ಹೊತ್ತು ಪಟ್ಟಣಗಳಿಗೆ, ದೊಡ್ಡ ಹಳ್ಳಿಗಳಿಗೆ ಹೋದ ಸಂದರ್ಭದಲ್ಲಿ ಅವರ ವೇಷಭೂಷಣ ಮತ್ತು ಬಣ್ಣಕ್ಕೆ ಪ್ರಭಾವಿತರಾದ ಮೇಲ್ವರ್ಗದ ಜನರು ಮಾಡುವ ಶೋಷಣೆ, ದಬ್ಬಾಳಿಕೆ, ಅತ್ಯಾಚಾರಕ್ಕೆ ಬಲಿಯಾದ ಲಮಾಣಿ ಹೆಂಗಸರ ಧ್ವನಿಯಾಗಿತ್ತು. ಇವರ ಸಾಹಿತ್ಯ. ಕುಡಿತ ಒಂದೇ ಇಡಿ ಬಂಜಾರ ಸಮುದಾಯದ ಆರ್ಥಿಕ ಹಿನ್ನೆಡೆಗೆ ಕಾರಣ. ಕುಡಿತದ ಚಟಕ್ಕೆ ಬಲಿಯಾದ ಲಂಭಾಣಿ ಪುರುಷ ಹೆಂಡತಿ ಹೇಗಾದರೂ ಮಾಡಿ ದುಡ್ಡು ಸಂಪಾದಿಸಿದರೆ ಸಾಕು ಎಂಬ ಮಾನಸಿಕ ಸ್ಥಿತಿಗೆ ತಲುಪಿ ಅವನು ಸ್ತ್ರೀಪೀಡಕನಾಗುವ ಪರಿಯನ್ನು ಹಬ್ಬ ಮತ್ತು ಬಲಿಯಲ್ಲಿ ಸೂಕ್ಷ್ಮವಾಗಿ ಹೊರಹಾಕುತ್ತಾರೆ. ಬಡತನ ಕಾರಣಕ್ಕಾಗಿ ಎಂಟು–ಒಂಬತ್ತು ವರ್ಷದ ಮಕ್ಕಳನ್ನು ಶಾಲೆಯ ಬದಲಿಗೆ ಉಳ್ಳವರ ಮನೆಯಲ್ಲಿ ಜೀತಕ್ಕಿಟ್ಟ ಅನೇಕ ಉದಾಹರಣೆಗಳಿವೆ. ಚಿಕ್ಕ ವಯಸ್ಸಿನಲ್ಲೆ ದೈಹಿಕ ಶೋಷಣೆ, ಮಾನಸಿಕ ಒತ್ತಡಕ್ಕೆ ಬಲಿಯಾದ ಮಕ್ಕಳು ಸಾವಿಗೀಡಾದರೂ, ಮನೆ ತುಂಬ ಮಕ್ಕಳು ಮಾಡಿಕೊಂಡ ಇವರಿಗೆ ಆ ಯಾವ ಮನೋಭಾವನೆಗಳೇ ಇಲ್ಲದಿರುವಾಗ ಸತ್ತ ಜಾಗಕ್ಕೆ ಮತ್ತೊಂದು ಮಗುವನ್ನು ಕಳುಹಿಸುವ ತಂದೆ ತಾಯಿಗಳು ಕಾರಣರಾಗುತ್ತಿದ್ದಾರೆ. ಕಟ್ಟಿಗೆ ಬದುಕಿಗೆ ಆಸರೆಯಾಗಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯೊಂದಿಗಿನ ಸಂಘರ್ಷವು ಇವರ

ಬರವಣಿಗೆಯ ವಸ್ತು ಆಗಿರುವುದು ಕಂಡು ಬರುತ್ತದೆ.

ಇದೇ ಸಾಲಿಗೆ ಬರುವ ಮತ್ತೊಬ್ಬ ಕತೆಗಾರ ಸಣ್ಣರಾಮ ಅವರು ಕೆಂಮಾವು(2002) ಕಾಮದಹನ (2007) ಕಾಯುತ್ತಿದ್ದಾರೆ (2014) ಮೂರು ಕಥಾಸಂಕಲನಗಳನ್ನು ಹೊರತಂದಿದ್ದಾರೆ. ಆ ಮೂರು ಸಂಕಲನಗಳಲ್ಲಿ ವೈವಿಧ್ಯಮಯ ಬದುಕನ್ನು ಕಟ್ಟಿ ಕೊಡುತ್ತ, ಬದಲಾಗುತ್ತಿರು ಸಾಮಾಜಿಕ, ಆರ್ಥಿಕ ಸ್ಥಿತಿಯಲ್ಲಿ ಲಮಾಣಿಗರ ಬದಲಾವಣೆಯನ್ನು ಗುರುತಿಸಲು ಪ್ರಯತ್ನ ಮಾಡುತ್ತಾರೆ. ಇತ್ತೀಚಿನ ಅವರ ಕಾಯುತ್ತಿದ್ದಾರೆ ಸಂಕಲನದಲ್ಲಿ–ಜಾಗತೀಕರಣದಿಂದಾದ ಪರಿಣಾಮವನ್ನು ಹಿಡಿದಿಡುವ ಯತ್ನ ಮಾಡಿದ್ದಾರೆ.

ಕೆಂಮಾವು–ಸಂಕಲನ ತಾಂಡ ಮತ್ತು ನಗರದ ಬದುಕಿನ ಸಂಘರ್ಷಮಯ ವಿವಿಧ ಆಯಾಮಗಳಿಗೂ ಹೊರಹಾಕಿರುವ ಯತ್ನಮಾಡಿದ್ದಾರೆ. ಕುಬೇರನಾಯ್ಕ ಬೆಂಗಳೂರಿನ ಐಷಾರಾಮಿ ಬದುಕಿಗೆ ಬೆರಗಾಗಿ ಬೆಂಗಳೂರಿನ ಒಂದು ಭಾಗವಾಗುವುದು, ಬೆಂಗಳೂರಿನ ಕಲುಷಿತ ವಾಯು ಸೇವನೆಯಿಂದ ಆರೋಗ್ಯವಾಗಿದ್ದನು ಉಬ್ಬಸ ಕಾಯಿಲೆಗೆ ತುತ್ತಾಗುವುದು ನವಿರಾಗಿ ವಿವರಿಸಿರುವುದನ್ನು ಇಲ್ಲಿ ಕಾಣುತ್ತೇವೆ. ಕುಬೇರನಾಯ್ಕ ಅನಿವಾರ್ಯ ಕಾರಣದಿಂದ ತಾಂಡಕ್ಕೆ ಒಂದು ಒಂದಿಷ್ಟುದಿನ ತಾಂಡಕ್ಕೆ ಬಂದಾಗ ಅವನ ಆರೋಗ್ಯದಲ್ಲಾದ ಬದಲಾವಣೆ ಅವನಿಗೆ ಚಕಿತಗೊಳಿಸುತ್ತದೆ. ಆದರೆ ಬದುಕಿನ ಅನಿವಾರ್ಯತೆಯನ್ನು ತಳ್ಳಿಹಾಕಲು ಆಗದೆ ಮತ್ತೆ ಬೆಂಗಳೂರು ಮಹಾನಗರಕ್ಕೆ ವಾಪಸು ಆಗುವುದರೊಂದಿಗೆ ಕತೆ ಅಂತ್ಯವಾಗುತ್ತದೆ.

ಅವರ ಮೂರನೆಯ ಸಂಕಲನ ಕಾಮದಹನ–ಒಂದು ಒಳ್ಳೆಯ ಆಂತರ್ಯವನ್ನು ಹೊಂದಿರುವ ಸಂಕಲನವಾಗಿದೆ. ಕಾಮದಹನ ಮನುಷ್ಯನ ಮನೋಅಭಿಪ್ಸೆ, ಮನೋಕಾಮನೆಯನ್ನು ಹೊರಹಾಕುವಲ್ಲಿ ಯಶಸ್ವಿಯಾಗದೆ, ಕಾಮದಹನದ ದಿನವೆ ನಾಯಕ ಸ್ವಂತ ಚಿಕ್ಕಪ್ಪನ ಹೆಂಡತಿಯೊಂದಿಗೆ ಸರಸವಾಡುವುದು, ಕಾಮ ಎನ್ನುವ ಮನೋವಿಕಾರ ಭಾವನೆಯ ಅತಿರೇಕದ ಪರಮಾವಧಿಯನ್ನು ತೋರಿಸುತ್ತದೆ.

ಸೃಜನಶೀಲ ಸಾಹಿತ್ಯದಲ್ಲಿ ಮತೊಬ್ಬ ಕತೆಗಾರ ತನ್ನದೇ ಬರವಣಿಗೆಯ ಜಗದಿಂದ ಕನ್ನಡ ಸಾಹಿತ್ಯದಲ್ಲಿ ನೆಲೆಯೂರಿದವರು ಕೃಷ್ಣನಾಯಕ್. ಲದೇಣಿಯಾ(2005) ಕತ್ತಲು ಕರಗುವ ಪರಿ(2010) ಎರಡು ಸಂಕಲನಗಳಲ್ಲಿ ಗುಲ್ಬರ್ಗಾ, ಬಿಜಾಪುರ ಜಿಲ್ಲೆಗಳ ಬಂಜಾರರ ಬದುಕಿನ ವಿವಿಧ ಆಯಾಮಗಳನ್ನು ತಮ್ಮ ಕತೆಗಳಲ್ಲಿ ಹಿಡಿದಿರುವ ಸಣ್ಣ ಪ್ರಯತ್ನ ಮಾಡಿದ್ದಾರೆ.

ಲದೇಣಿಯಾ ಸಂಕಲನದ ತಲೆ ಬರಹವೆ ಹೇಳುವಂತೆ ವಲಸೆಗಾರರಾಗಿದ್ದ ಬಂಜಾರರು, ಯಾವುದೇ ಒಂದು ಭಾಗದಲ್ಲಿ ನೆಲೆನಿಲ್ಲದವರಾಗಿದ್ದರು. ವಸಹಾತೋತ್ತರ ಬದಲಾಗುತ್ತಿರುವ ಪರಿಸ್ಥಿತಿಗೆ ಪೂರಕವೆನ್ನುವಂತೆ ಕತೆಯನ್ನು

ನಾಯಕರು ಬರೆದಿದ್ದಾರೆ. ಬಂಜಾರ ಸಂಸ್ಕೃತಿಗೆ, ಬದುಕಿಗೆ ಬೆರಗಾದ ಪಾಟೀಲ್ ಸಂಶೋಧಕ ಪ್ರಾಧ್ಯಾಪಕ ತಾನು ನೋಡಿದ ವಿವರಣೆಯೊಂದಿಗೆ ನಿರೂಪಿಸುವ ಕತೆ ಇದಾಗಿದೆ.

ಇವರ ಇನ್ನೊಂದನೆ ಕತೆ 'ತಡಸ ತಾಂಡದ ಮರಿಯಮ್ಮನ ಜಾತ್ರೆ' ಕತೆ ಬಂಜಾರರೊಳಗೆ ತುಂಬಿರುವ ಮೌಢ್ಯದ ಸುತ್ತಲು ಹೆಣೆದ ಕತೆ ಇದಾಗಿದೆ. ದೇವರು, ದೇವತೆಗಳು ಪೂಜಾರಿಯ ಮೈಯೊಳಗೆ ಬಂದು ಹಬ್ಬ ಮಾಡಲು ಜನರನ್ನು ಎಚ್ಚರಿಸುವ ಭಯ ಹುಟ್ಟಿಸುವ ಮಾನಸಿಕ ಒತ್ತರ ಹೇರುವ ಮತ್ತು ಸಾಲಮಾಡಿ ಹಬ್ಬಕ್ಕೆ ಕುರಿ, ಕೋಳಿ, ಸರಾಯಿ ಜೋಡಿಸುವ ಪ್ರಕ್ರಿಯೆಯಲ್ಲಿ ತೊಡಗುವ ಪರಿ, ಬಂಜಾರ ಪೂಜಾರಿಗಳನ್ನ ಸಾಧ್ಯಗಳನ್ನ ಅಲ್ಲಿ ಕೊಡವ ಪ್ರಾಮುಖ್ಯತೆ, ಪೂಜೆ, ಮೆರವಣಿಗೆ ಜೊತೆಗೇನೆ ದೇವಿಗೆ ಬಲಿಕೊಟ್ಟ ಕುರಿಗಳು ಎಷ್ಟೋ? ಅದರ ರಕ್ತದಿಂದ ತರ್ಪಣಗೊಂಡ ಭೂದೇವಿ. ದೇವಿಗೆ ತೃಪ್ತಿಯಾಯಿತೋ ಇಲ್ಲ ಸಾಲಕೊಡುವವನಿಗೆ ಪತ್ರ ತಗೊಂಡವನಿಗೆ ಸಂಪೂರ್ಣ ಖುಷಿಯಾಗಿತ್ತು.

ಇನ್ನೂ ಶಿರಗಾನಹಳ್ಳಿ ಶಾಂತನಾಯ್ಕ ಪ್ರಸ್ತುತ ಬಂಜಾರ ಸಮುದಾಯದ ಇತಿಹಾಸ, ಭವಿಷತ್ ಮತ್ತು ವರ್ತಮಾನದ ಹೆಜ್ಜೆ ಗುರುತುಗಳನ್ನು ಗುರುತಿಸುತ್ತ, ಲಮಾಣಿ ಸಮುದಾಯದ ಸಂಸ್ಕೃತಿ ಸಂಪ್ರದಾಯಗಳ ಒಟ್ಟು ಆಶಯದ ಕುರಿತು ಬರೆಯುತ್ತಿದ್ದು ಗುಡ್ಡಜ್ಜ-ಕಥಾಸಂಕಲನ, ಮೀನು ಮತ್ತು ಹುಡುಗಿ, ಲಮಾಣಿ ಆತ್ಮಕಥನ ಕಾವ್ಯ, ಹಳೆಭಾವನೆಯ ಹೊಸಮನುಷ್ಯ ಕಾವ್ಯ ಕಾದಂಬರಿ, ನಾಟಕ, ವೈಚಾರಿಕ ಲೇಖನಗಳು ಹೀಗೆ ಎಲ್ಲಾ ಪ್ರಕಾರಗಳಲ್ಲಿ ಲಂಬಾಣಿ ಸಂಸ್ಕೃತಿಯನ್ನು ಅನಾವರಣ ಗೊಳಿಸುತ್ತಲೇ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಲಮಾಣಿ ಸಾಹಿತ್ಯ ಅತ್ಯಂತ ಸಮೃದ್ಧವಾಗಿದ್ದು, ಇಂದೂಮತಿ ಲಮಾಣಿಯವರು ಕಾವ್ಯವನ್ನ ಬರೆಯುತ್ತಿದ್ದಾರೆ. ವಿರೇಶ್ ಜಿ. ನಾಯ್ಕ ಅವರ ಮೂಳೆಯೆಂಬ ಮಾಯಾಲೋಕ, ಜಾಂಪಣ್ಣ ಆಶಿಯಾಳ್ ಅವರ ಘಜಲ್‌ಗಳು ಹಾಗೂ .... ಅವರ ಹೈಕುಗಳು ಪ್ರಮುಖವಾಗುತ್ತಿವೆ.

ಇನ್ನೂ ಬಂಜಾರ ಜನಾಂಗ, ಸಂಸ್ಕೃತಿ, ಸಂಶೋಧನೆ ಕುರಿತು ಡಾ. ಖಂಡೋಬ, ಡಿ. ಬಿ. ನಾಯಕ, ಡಾ. ಹರಿಲಾಲ್ ಪವಾರ್ ಯಥೇಚ್ಚವಾಗಿ ಬರೆದಿದ್ದಾರೆ. ಮತ್ತೊಂದು ಭರವಸೆಯನ್ನು ಬಂಜಾರ ಸಾಹಿತ್ಯದಲ್ಲಿ ಸೃಷ್ಟಿಸಿರುವ ಡಾ. ಪಂಡಿತ್ ರಾಠೋಡ್, ಚಿಂತಕ, ಸಂಶೋಧಕರಾಗಿದ್ದ ಸಂಸ್ಕೃತಿ ಜನಾಂಗೀಯ ಅಧ್ಯಯನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಹಾಗೇನೆ ನಾರಾಯಣ ಪವಾರ್ ಅವರು ಇತ್ತೀಚೆಗೆ ಬಂಜಾರ ಸಮುದಾಯದ ತಳಮಳಗಳನ್ನು ಗುರುತಿಸಲು ಪ್ರಯತ್ನಿಸುತ್ತಿದ್ದಾರೆ.

ಇದು ಬರಹಗಾರರ, ಚಿಂತಕರ ಪರಿಚಯವಾದರೆ ಭಾರತದ ಉದ್ದಗಲಕ್ಕೂ

ಬಂಜಾರ ಭಾಷೆ, ಸಂಸ್ಕೃತಿ, ಜನಾಂಗ ವೇಷಭೂಷಣ, ಜನಪದ ಹಾಡುಗಳು, ಮೌಖಿಕ ಸಂಪ್ರದಾಯ ಕುರಿತು ಸಾಕಷ್ಟು ಚಿಂತನೆಗಳು ನಡೆಯುತ್ತವೆ. ಗಣಕಯಂತ್ರ ಮತ್ತು ಅಂತರ್ ಜಾಲ ಇಡೀಜಗತ್ತನ್ನೇ ಬಹಳ ಹತ್ತಿರಕ್ಕೆ ತಂದಿವೆ. ಹಿಟ್ಲರ್‌ನ ಕಾಲದಲ್ಲಿ ಕೊಲೆಯಾದ ಸಾವಿರಾರು ಬಂಜಾರರು ಸಾಹಿತ್ಯದಲ್ಲಿ ಚರ್ಚೆಗೆ ಬಂದಿದ್ದರೆ, ಸಂಶೋಧನೆಗೆ ವಿಷಯವಾಗಿದ್ದಾರೆ. ಅಷ್ಟೇ ಅಲ್ಲ ದೆಹಲಿಯಲ್ಲಿ ಬರೆಯುತ್ತಿರುವದು, ಸೂರಜ್ ಬಡತ್ಯಾ, ಪಂಜಾಬ್‌ನಲ್ಲಿ ಬಾರ್ಜಿಕ್ ಬಂಜಾರರ ಧ್ವನಿಯಾಗಿರುವ ಮೋಹನ್‌ತ್ಯಾಗಿ, ಗುಜರಾತದ ಬಂಜಾರರಿಗೆ ಹತ್ತಿರವಾಗಿರುವ ಗೋವರ್ಧನ್ ಬಂಜಾರ, ಮಹಾರಾಷ್ಟ್ರದಲ್ಲಿ ನೂರಾರು ಯುವಪೀಳಿಗೆಯಲ್ಲಿ ಮುಂಚೂಣಿಯಲ್ಲಿರುವ ವಿತಾರರೋಡ್, ಹೆಣ್‌ರಾಠೋಡ್, ಮೋತಿರಾಜ್ ರಾಠೋಡ್ ಬಂಜಾರರ ಮುಖವಾಣಿಯಾಗಿ ಬರೆಯುತ್ತಿದ್ದಾರೆ.

ನಾನು ಹೇಳಿದ ಪ್ರತಿಯೊಬ್ಬರ ಸಾಹಿತ್ಯ ಬಂಡಾಯ ಸಾಹಿತ್ಯವಾಗಿದ್ದು ಈ ವ್ಯವಸ್ಥೆಯ ಒಳಗಿನ ಅಸಮಾನತೆಯೊಂದಿಗೆ ಅನುಸಂಧಾನ ನಡೆಸುವುದರೊಂದಿಗೆ ವ್ಯವಸ್ಥೆಯನ್ನು ಪ್ರಶ್ನಿಸುವ ಹಾಗೂ ವ್ಯವಸ್ಥೆಯನ್ನು ನಿರಾಕರಿಸುವ ಆಶಯಗಳು ಬಂಜಾರ ಸಾಹಿತ್ಯದಲ್ಲಿವೆ. ಮುಸ್ಲೀಮರೊಂದಿಗೆ ಸಂಘರ್ಷ, ವಸಾಹತು ಸಾಮ್ರಾಜ್ಯದೊಡನೆ ಸಂಘರ್ಷ ಮಾಡುತ್ತ ಸ್ವಾತಂತ್ರ್ಯಗೊಂಡ ನಾಯಕರ ಕಾಲಘಟ್ಟದಲ್ಲಿ ಸಂಪೂರ್ಣ ತಮ್ಮ ಅಸ್ಮಿತೆಯನ್ನು ಕಳೆದುಕೊಂಡು ಅದರ ಹುಡುಕಾಟದಲ್ಲಿ ಬದುಕಿರುವ ನೂರಾರು ಬುಡಕಟ್ಟುಗಳಲ್ಲಿ ಲಂಬಾಣಿ ಸಂಸ್ಕೃತಿಯೂ ಕೂಡ ಒಂದು.

●

13

ವಲಸೆಯ ಹಾದಿಯಲ್ಲಿ

– ಶ್ರೀದೇವಿ ಕೆರೆಮನೆ

ಸೃಷ್ಟಿ ನಾಗೇಶ್ ಒಂದಿಷ್ಟು ಪುಸ್ತಕಗಳನ್ನು ಕಳಿಸಿದ್ದರು. ಅದರಲ್ಲಿ ಮಲಾಣ್ ಕೂಡ ಒಂದು. ನೋಡಿದ ಕೂಡಲೇ ಬೇರೆಲ್ಲ ಕೆಲಸ ಬಿಟ್ಟು ಅದನ್ನೇ ಓದಲಾರಂಭಿಸಿದೆ. ಯಾಕೆಂದರೆ ಅದು ನಾನು ತುಂಬಾ ಗೌರವಿಸುವ ಶಾಂತಾ ನಾಯ್ಕ ಶಿರಗಾನಹಳ್ಳಿಯವರ ಪುಸ್ತಕ. ಹಿಂದೊಮ್ಮೆ ಸುಮಾರು ನಾನು ಹೈಸ್ಕೂಲಿನಲ್ಲಿದ್ದಾಗ ಅವರು ಕಾರವಾರದ ಆಕಾಶವಾಣಿಯಲ್ಲಿದ್ದವರು. ಆಗಲೇ ಇವಳು ಬರೆಯುತ್ತಾಳೆ ನೋಡಿ ಎಂದು ಬೆನ್ನು ತಟ್ಟಿದವರು. ಹೀಗಾಗಿ ಅವರ ಹೆಸರು ನೋಡಿದಾಕ್ಷಣ ಅದನ್ನೇ ಮೊದಲು ಓದಬೇಕೆನಿಸಿತ್ತು. ಈ ಸಲ ಸೃಷ್ಟಿ ನಾಗೇಶ್ ಹೇಳಿದ ಇದನ್ನು ಮೊದಲು ಓದಿ ಎನ್ನುವ ಎಲ್ಲ ಮಾತುಗಳನ್ನೂ ಗಾಳಿಗೆ ತೂರಿಯಾಗಿತ್ತು.

ಇದೊಂದು ಶತಮಾತಗಳ ವಲಸೆಯ ಕಥೆ. ರಾಜಸ್ಥಾನದ ಒಂದು ಹಳ್ಳಿಯಿಂದ ಕರ್ನಾಟಕ, ಆಂದ್ರದ ಕಡೆಗೆ ಗುಳೆ ಬಂದಂತಹ ಈ ಜನಾಂಗದ ಕಥೆಯನ್ನು ಓದಿದರೆ ಮೈನವಿರೇಳದೇ ಇರದು. ಕೆಲವು ಕಡೆ ಕೋಪ, ಕೆಲವು ಕಡೆ ಕಣ್ಣೀರು ನಮ್ಮನ್ನು ಕೇಳದೇ ನುಸುಳದಿದ್ದರೆ ನೀವು ಈ ಕಾದಂಬರಿಯನ್ನು ಓದಿದ್ದೂ ವ್ಯರ್ಥ ಎನ್ನುವಷ್ಟು ಸೊಗಸಾಗಿ ಮೂಡಿ ಬಂದಿದೆ.

ಬಂಜಾರಾ ಜನಾಂಗವು ರಾಜಸ್ಥಾನದ ಹಳ್ಳಿಗಳಲ್ಲಿ ವೈಭವದಿಂದ ಜೀವನ ಮಾಡಿಕೊಂಡಿದ್ದವರು. ವ್ಯಾಪಾರ ವಹಿವಾಟಿನಿಂದಾಗಿ ಸಾಕಷ್ಟು ಗಟ್ಟಿ ಕುಳ ಎನ್ನಿಸಿಕೊಂಡವರು. ಆದರೆ ಯಾವಾಗ ದೆಹಲಿಯಲ್ಲಿ ಮುಸ್ಲಿಂ ಆಡಲಿತ ಪ್ರಾರಂಭವಾಯಿತೋ ಅದರಲ್ಲೂ ಔರಂಗಜೇಬ್ ದೆಹಲಿಯ ಸಿಂಹಾಸನವನ್ನೇರಿದನೋ ಆಗ ಪ್ರಾರಂಭವಾಯಿತು ನೋಡಿ, ಬಂಜಾರಾಗಳ ದುರ್ವಿಧಿ.

ಈ ಕಾದಂಬರಿ ಪ್ರಾರಂಭವಾಗುವುದೂ ಕೂಡ ದಕ್ಷಿಣಕ್ಕೆ ವಲಸೆ ಹೋಗುವ ಸೈನ್ಯದೊಂದಿಗೆ ಸೇರಿಕೊಳ್ಳುವ ಇಬ್ಬರು ಸಹೋದರರ ಕಥೆಯೊಂದಿಗೆ. ಅವರು

ದಕ್ಷಿಣದ ಕಡೆಗೆ ವಲಸೆ ಹೋಗಲು ನಿರ್ಧರಿಸಿರುವುದೂ ಕೂಡ ಮುಸ್ಲಿಂ ಯುವಕರು ತಮ್ಮ ಸಹೋದರಿಯರನ್ನು 'ಆಗ್ವಾ' ಮಾಡಿಕೊಂಡು ಹೋದಾರೆಂಬ ಭಯದಿಂದಲೇ. ಬಂಜಾರಾ ಹುಡುಗಿಯರು ತಾಂಡಾದಿಂದ ಹೊರಗೆ ಬರುವುದೇ ದೀಪಾವಳಿ ಹಬ್ಬದಂದು ಮಾತ್ರ. ತಾಂಡಾದ ಆದಿದೇವತೆ ಮರಿಯಮ್ಮನ ಮಟ್ಟೋದ ಮುಂದೆ ನೃತ್ಯ ಮಾಡಲು. ಆಗ ಮಾತ್ರ ಮುಸ್ಲಿಂ ಯುವಕರಿಗೆ ಆ ಹುಡುಗಿಯರು ಕಾಣಸಿಗುತ್ತಿದ್ದುದು. ಹೀಗಾಗಿ ಗುಂಪು ಗುಂಪಾಗಿ ಬರುವ ಮುಸ್ಲಿಂ ಯುವಕರು ಬಂಜಾರಾ ಯುವತಿಯರನ್ನು ಅಪಹರಿಸಿಕೊಂಡು ಹೋಗಿಬಿಡುತ್ತಿದ್ದರು. ಹಾಗೆ ಅಪಹರಿಸಿಕೊಂಡು ಹೋದ ನಂತರ ಆ ಯುವತಿಯರು ಅತ್ತ ಮುಸ್ಲಿಂ ಕೂಡ ಆಗಲಾರದೇ, ಇತ್ತ ಬಂಜಾರಾ ಸಮುದಾಯಕ್ಕೂ ಸೇರಿದವರಾಗಿ ಉಳಿಯದೇ ಜೀವನದಲ್ಲಿ ನೊಂದು ಬದುಕೇ ಬೇಸರವಾಗಿ ಆತ್ಮಹತ್ಯೆಗೂ ಹೇಸದ ಸ್ಥಿತಿ ತಲುಪಿಬಿಡುತ್ತಿದ್ದರು. ಈ ಕಾರಣದಿಮದಾಗಿಯೇ ಎತ್ತುಗಳನ್ನು ಸಾಕಿಕೊಂಡು ದೊಡ್ಡ ವ್ಯಾಪಾರಸ್ಥರಾಗಿದ್ದ ಬಂಜಾರ ಸಮುದಾಯ ಗುಜರಾತ ಕಡೆಗೆ ಅತ್ತ ಉತ್ತರಪ್ರದೇಶ ಹಾಗೂ ಮಧ್ಯಪ್ರದೇಶದ ಕಾಡುಗಳೊಳಗೆ ಸೇರಿಕೊಂಡು ಬುಡಕಟ್ಟುಜನಾಂಗದವರಂತೆ ವಾಸಿಸಲು ಪ್ರಾರಂಭಿಸಿದ್ದರು. ಆದರೆ ಬಂಜಾರರ ವ್ಯಾಪಾರದ ನೈಪುಣ್ಯತೆ, ಅವರ ವ್ಯವಹಾರಿಕ ಜ್ಞಾನ ಮತ್ತು ಎಲ್ಲದ್ದಕ್ಕಿಂತ ಮುಖ್ಯವಾಗಿ ಅವರ ಧೈರ್ಯ ಸಾಹಸ ಹಾಗೂ ದೇಹದೃಢತೆಯಿಂದಾಗಿ ಮುಸ್ಲಿಂ ಆಡಳಿತಗಾರರಿಗೆ ಬಂಜಾರರ ಮಾರ್ಗದರ್ಶನ ಅನಿವಾರ್ಯವಾಗಿದ್ದಿತು. ಇತ್ತ ಬಂಜಾರರಿಗೂ ಮುಸ್ಲಿಂ ಆಡಳಿತದಿಂದ ದೂರ ಸರಿದು ತಮ್ಮ ಹೆಣ್ಣುಮಕ್ಕಳ ರಕ್ಷಣೆ ಮಾಡಿಕೊಳ್ಳುವ ಆತುರದಲ್ಲಿದ್ದರು. ಇಂತಹುದ್ದೇ ಹೊತ್ತಿನಲ್ಲಿ ತಮ್ಮ ತಂಗಿ ರೂಪ್ಲಿ ಪಾರೂವನ್ನು ರಕ್ಷಣೆ ಮಾಡುವ ಭರದಲ್ಲಿ ಹತ್ತು ಮುಸ್ಲಿಂ ಯುವಕರನ್ನು ಕೊಂದು ಹಾಕಿದ್ದ ಮೀಟು ಹಾಗೂ ಥಾವು ಔರಂಗಜೇಬನ ಸೇನಾಧಿಪತಿಯರಲ್ಲಿ ಒಬ್ಬನಾದ ಜುಲ್ಮಾನ್‌ಖಾನ ಎಂಬುವವನಿಗೆ ತಿಳಿದರೆ ಇಡೀ ತಾಂಡಾ ಸರ್ವನಾಶವಾಗುವುದನ್ನು ಅರಿತು ಸಂಕೆಭಾಕ್ರಿ ಎನ್ನುವ ತಾಂಡಾವನ್ನು ಬಿಟ್ಟು ಜೈಪುರದ ಹತ್ತಿರ ದಕ್ಷಿಣ ಭಾರತದ ವ್ಯಾಪಾರಕ್ಕೆಂದು ತಮ್ಮೊಂದಿಗೆ ಸೈನ್ಯವನ್ನು ಆಯ್ಕೆ ಮಾಡುತ್ತಿರುವ ಜಂಗಿ ಭಂಗಿ ಎಂಬ ಸಹೋದರರ ಕಡೆ ಬಂದಿದ್ದರು. ಅವರ ಬಳಿ ತಾವು ಚವ್ಹಾಣರು ಎಂದು ಕೆಲಸಕ್ಕೆ ಸೇರಿಕೊಂಡು ಹೊರಡುವ ಮಹಾ ವಲಸೆಯ ಕಥೆ ಇದು. ಆ ವಲಸೆಯಲ್ಲಿಯೇ ಮದುವೆ ಮಾಡಿಕೊಳ್ಳುವ ಮೀಟುವಿನ ಬಾಳಿನ ತಿರುವಿನ ಕಥೆ ಇಲ್ಲಿದೆ.

ಚಿಕ್ಕವಳಿರುವಾಗ ನನಗೆ ರಾಧಾ ಕೃಷ್ಣರ ಕಥೆ ಅಚ್ಚರಿ ಹುಟ್ಟಿಸುತ್ತಿತ್ತು. ಇಡೀ ಜಗತ್ತಿನಲ್ಲಿ ಅತ್ಯುನ್ನತ ಪ್ರೇಮಕ್ಕೆ ಉದಾಹರಣೆಯಾಗಿ ನೀಡುವ ಈ ಕಥೆಯ ನಾಯಕಿ ರಾಧಾ ಕೃಷ್ಣನ ಪತ್ನಿಯಲ್ಲ. ಆಕೆ ಬರೀ ಕೃಷ್ಣನ ಪ್ರೇಯಸಿ. ಆಕೆಗೊಬ್ಬ ಗಂಡನಿದ್ದಾನೆ. ಅವಳದ್ದೇ ಆದ ಒಂದು ಸಂಸಾರವಿದೆ. ಆದರೆ ಕೃಷ್ಣನ ಮೇಲಿರುವ ಅವಳ ಪ್ರೇಮಕ್ಕೆ ಯಾವುದೇ ಹೋಲಿಕೆಯಿಲ್ಲ. ಅಚ್ಚರಿಯೆಂದರೆ ಈ ಪ್ರೇಮ ಎಂದೂ ಅನೈತಿಕ ಎಂದು ಅನ್ನಿಸಿಕೊಳ್ಳಲೇ ಇಲ್ಲ. ತೀರಾ ಮಡಿವಂತರಿಂದ ಹಿಡಿದು ತೀರಾ

ಕರ್ಮಠ ಸಂಪ್ರದಾಯಿಗಳವರೆಗೆ ಎಲ್ಲರೂ ಈ ಪ್ರೇಮವನ್ನು ಅತ್ಯಂತ ಸಹಜ ಎಂದು ಒಪ್ಪಿಕೊಂಡಿದ್ದರು. ಆದರೆ ನಿಜ ಜೀವನಕ್ಕೆ ಬಂದ ಕೂಡಲೇ ಈ ತರಹದ ಪ್ರೇಮಗಳೆಲ್ಲ ಅನೈತಿಕ ಅಥವಾ ಹಾದರ ಎನ್ನಿಸಿಕೊಳ್ಳುತ್ತದೆ. ಬಾಜಿರಾವ್ ಎಂಬ ಮರಾಠಾ ಶೂರ ಮಸ್ತಾನಿ ಎಂಬ ಮುಸ್ಲಿಂ ಯುವತಿಯನ್ನು ಪ್ರೇಮಿಸಿದರೆ ಅದು ಅಪ್ಪಟ ಸಾಮಾಜಿಕ ಬಹಿಷ್ಕಾರಗೊಂಡ ಪ್ರೇಮವಾಗುತ್ತದೆ. ಕೊನೆಯಪಕ್ಷ ಬಾಜಿರಾವ್ ಹಾಗೂ ಮಸ್ತಾನಿಯ ಈ ಪ್ರೇಮ ಕಥಾನಕವಾಗಿಯಾದರೂ ಅದೆಷ್ಟೋ ಕಾಲದ ನಂತರ ಒಪ್ಪಿತವಾಗುತ್ತದೆ. ಆದರೆ ಜನಸಾಮಾನ್ಯರ, ನಮ್ಮ ನಿಮ್ಮ ನಡುವೆಯೇ ಇಂತಹ ಪ್ರೇಮವನ್ನು ಕಂಡರೆ ನಾವು ಹೇಗೆ ಅವರೊಡನೆ ವ್ಯವಹರಿಸಬಹುದು ಎಂದು ಒಮ್ಮೆ ಯೋಚಿಸಿ ನೋಡಿ. ವಿವಾಹದ ಆಚೆಗಿರುವ ಗಂಡು ಹೆಣ್ಣಿನ ಸಂಬಂಧವನ್ನು ನಾವು ಯಾವ ಕಾರಣಕ್ಕೂ ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಕೆಲವು ವರ್ಷಗಳ ಹಿಂದೆ ಒಬ್ಬ ವಿವಾಹಿತ ಯುವತಿ ಮೈಮೇಲೆ ಸೀಮೆ ಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳು. ಕಾರಣವಿಷ್ಟೇ. ಅರಬ್ ದೇಶದಲ್ಲಿ ಕೆಲಸ ಮಾಡುತ್ತಿದ್ದ ಆಕೆಯ ಗಂಡ ಊರಿಗೆ ಬಂದವನು ಅವಳ ಬಳಿ ಬರದೇ ಸೀದಾ ಅವನ ತಾಯಿಯ ಬಳಿ ಹೋಗಿದ್ದ. ಅದಕ್ಕೆ ಕಾರಣವೂ ಇತ್ತು. ಈ ಯುವತಿ ಬೇರೆ ಯುವಕನೊಂದಿಗೆ ಸಂಬಂಧ ಇಟ್ಟುಕೊಂಡಿದ್ದಾಳೆ ಎಂದು ಆತನಿಗೆ ತಿಳಿಸಲಾಗಿತ್ತು. ಗಂಡ ಬರುತ್ತಾನೆ ಎಂದು ಎರಡು ದಿನ ಕಾದ ಆಕೆ ನಂತರ ಬೆಂಕಿ ಹಚ್ಚಿಕೊಂಡಿದ್ದಳು. ಆಗಲೆಲ್ಲ ಆಕೆ ರಾತ್ರಿ ಹೊತ್ತು ಹೊರಗೆ ನಿಂತು ಒಬ್ಬನ ಬಳಿ ಮಾತನಾಡುತ್ತಿರುತ್ತಾಳೆ ಎನ್ನುವ ಮಾತುಗಳು ಕೇಳಿಬರುತ್ತಿತ್ತು. ನಿಜಕ್ಕೂ ನನಗೆ ಅಚ್ಚರಿ. 'ಆ ಯುವಕನೊಂದಿಗೆ ಆಕೆಯ ಸಂಬಂಧ ಇದ್ದಿದ್ದೇ ನಿಜವಾದರೆ ಮನೆಯ ಹೊರಗೆ ನಿಂತು ಮಾತನಾಡುವ ಅಗತ್ಯವಾದರೂ ಏನಿದೆ? ಹೊರಗೆ ನಿಂತು ಮಾತನಾಡುತ್ತಿದ್ದಾಳೆಂದರೆ ಅವರಿಬ್ಬರ ನಡುವೆ ನಾವೆಲ್ಲ ಅನುಮಾನಿಸುವ ಸಂಬಂಧ ಇರಲಿಕ್ಕಿಲ್ಲ. ಅದು ಕೇವಲ ಸ್ನೇಹವಿರಬಹುದು.' ಎಂದು ಅವಳ ಪರವಾಗಿ ಮಾತನಾಡಿದ್ದೆ. ಆದರೆ ಏನೇ ಆದರೂ ವಿವಾಹದ ಆಚೆಗಿನ ಹೆಣ್ಣು ಗಂಡಿನ ಸ್ನೇಹ ಕೂಡ ಅನುಮಾನಕ್ಕೆ ಕಾರಣವಾಗುತ್ತದೆ ಎಂಬುದನ್ನು ಗಮನಿಸುವಾಗ ಈ ಕಾದಂಬರಿಯಲ್ಲಿನ ಅಂತಹುದ್ದೊಂದು ಸಂಬಂಧ ಹೇಗೆ ಇಡೀ ಬಂಜಾರಾ ಜನಾಂಗವನ್ನು ಇಕ್ಕಟ್ಟಿಗೆ ಸಿಲುಕಿಸುತ್ತದೆ ಎಂಬುದನ್ನು ಗಮನಿಸಬೇಕಿದೆ.

ಮೀಟು ಹೊರಟಿದ್ದು ಆಸೀಫ್‌ಖಾನ್ ಎನ್ನುವವನೊಡನೆ. ಆದರೆ ಆತನ ಮಗಳು ಮೀಟುವಿನ ಶೌರ್ಯಕ್ಕೆ ಮರುಳಾಗಿ ಆತನಿಗೆ ಒಲಿದು ಬಂದಿದ್ದಳು. ಇತ್ತ ಆಗತಾನೆ ಮದುವೆಯಾದ ಮೀಟು ಸೈನಾಜ್‌ಳ ಒತ್ತಾಯಕ್ಕೆ ಅನಿವಾರ್ಯವಾಗಿ ಅವಳೊಂದಿಗೆ ಸಂಬಂಧ ಬೆಳೆಸಬೇಕಾಗಿತ್ತು. ಅವಳ ಮದುವೆಯ ನಂತರವೂ ಈ ಸಂಬಂಧ ಮುಂದುವರೆದು ಆಕೆ ಮಿಟುವಿನಿಂದ ಒಬ್ಬ ಮಗನನ್ನು ಪಡೆಯುವ ಆಕೆ ಬಾಣಂತಿಯ ನಂಜಿನಿಂದ ಸಾವನ್ನಪ್ಪುತ್ತಾಳೆ. ಆದರೆ ಮುಂದೊಮ್ಮೆ ಅವಳ ಗಂಡ ಲತೀಫ್‌ಖಾನ್‌ನಿಗೆ ಇವರ ವಿಷಯ ಗೊತ್ತಾಗಿದ್ದಲ್ಲದೇ ಮಾವನ ಅಧಿಕಾತರವನ್ನು ಪಡೆಯುವುದಕ್ಕೋಸ್ಕರ ಮೀಟುನನ್ನು ಕೊಂದು ಹಾಕುವುದರೊಂದಿಗೆ ಕಥೆ

ಮತ್ತೊಂದು ತಿರುವು ಪಡೆಯುತ್ತದೆ.

ಮೀಟುವಿನ ತಮ್ಮ ಥಾವೂ ಅಣ್ಣನ ಹೆಂಡತಿ ಹಾಗೂ ಮಗ ದೇಸೂನನ್ನು ತುಂಬ ಜಾಗ್ರತೆಯಿಂದ ಕಾಪಾಡಿಕೊಳ್ಳುತ್ತಾನಾದರೂ ಪೀಳಿಗೆಗಳು ಮುಂದುವರೆದಂತೆ ಹಳೆಯ ಬಾಂಧವ್ಯದ ಎಳೆ ಬಿಚ್ಚಿಕೊಳ್ಳುತ್ತ ಸಡಿಲವಾಗುತ್ತದೆ. ಇತ್ತ ಥಾವೂ ಕೂಡ ಹೈದರಾಬಾದಿನ ಕಡೆ ವ್ಯಾಪಾರಕ್ಕೆಂದು ಮಗ ಲಚ್ಮೆ ಜೊತೆ ಹೋದವನು ಅಲ್ಲಿ ನಿಜಾಮರ ಜೊತೆಗಿದ್ದ ಲತೀಫ್‌ಖಾನನ ಮಗನ ಸೈನಿಕರಿಂದ ಸತ್ತು ಹೋಗುತ್ತಾನೆ. ಇರಿತದ ಗಾಯದ ನಂಜೇರಿ ಲಚ್ಮ ಕೂಡ ಮರಣ ಹೊಂದುತ್ತಾನೆ. ಲಚ್ಮನ ಹೆಂಡತಿ ಗುಜಾ ಸತಿಯಾಗುತ್ತಾಳೆ. ಆಕೆ ದೈವಿಸ್ಥಾನ ಪಡೆಯುತ್ತಾಳೆ. ಇಂದಿಗೂ ಭರಮ್‌ಕೋಟ್‌ದ ಜನಾಂಗ ಗುಜಾಸತಿಯನ್ನು ಪ್ರಾರ್ಥಿಸಿಯೇ ಮುಂದುವರೆಯುವ ಸಂಪ್ರದಾಯವಿದೆ.

ಮುಂದೆ ದೇಸು ಹೈದರಾಬಾದಿನ ಕಡೆ ಪುನಃ ವ್ಯಾಪಾರಕ್ಕೆ ಹೊರಟಾಗ ಮತ್ತೆ ಲತೀಫ್‌ಖಾನನ ಮಗ ಜಂಗ್ಲಿಖಾನ್‌ನ್ನು ಭೇಟಿಯಾಗುವ ಸಂದರ್ಭ ಎದುರಾಗುತ್ತದೆ. ತನ್ನಂತೆಯೇ ಇರುವ ಬಂಜಾರಾನನ್ನು ನೋಡಲು ಆಸಕ್ತನಾದ ಜಂಗ್ಲಿಖಾನನನ್ನು ಸಂಧಿಸಿದಾಗ ಇಬ್ಬರಿಗೂ ಒಳಮರ್ಮ ಅರ್ಥವಾದರೂ ಏನೂ ಅರಿವಾಗದಂತೆ ಇಬ್ಬರೂ ದೂರವಾಗಿದ್ದರೂ ದರೋಡೆಕೋರರು ದಾಳಿ ಮಾಡಿದಾಗ ಪುನಃ ಜಂಗ್ಲಿಖಾನನೇ ಬಂದು ದೇಸುವಿನ ರಕ್ಷಣೆ ಮಾಡಿದ್ದ. ಇದು ಕಥೆಯೊಳಗೆ ಕಾಣುವ ಮಾನವ ಸಂಬಂಧದ ಮಿತಿ ಮತ್ತು ಶ್ರೇಷ್ಠತೆಯನ್ನು ತೋರಿಸುತ್ತದೆ. ಆದರೆ ದೇಸುವಿನ ಚಿಕ್ಕಪ್ಪ ಥಾವೂನ ಮಗ ತೋತ್ಯಾ ಬೇರೆಯಾಗಿದ್ದ. ಸಂಬಂಧಗಳು ನಿಧಾನವಾಗಿ ಹರಿದು ಹೋಗತೊಡಗಿತ್ತು.

ಇದಾದ ನಂತರ ಈ ಬಂಜಾರರಿಗೆ ದೊಡ್ಡ ಏಟು ಬಿದ್ದಿದ್ದು ಬ್ರಿಟೀಷ್ ಆಡಳಿತದಲ್ಲಿ. ಸ್ವತಃ ವ್ಯಾಪಾರಿಗಳಾದ ಬ್ರಿಟೀಷರು, ಈ ಚಿಕ್ಕಪುಟ್ಟ ವ್ಯಾಪಾರಿಗಳನ್ನೆಲ್ಲ ಹೊಸಕಿ ಹಾಕಿಬಿಟ್ಟಿದ್ದರು. ತಮ್ಮ ಅನುಮತಿಯಿಲ್ಲದೇ ವ್ಯಾಪಾರ ಮಾಡುತ್ತಾರೆ ಎನ್ನುವ ಕಾರಣಕ್ಕಾಗಿ ಬಂಜಾರರನ್ನೆಲ್ಲ ದರೋಡೆಕೋರರೆಂದು ಬಿಂಬಿಸಿ ಬಿಟ್ಟಿದ್ದರು. ಬ್ರಿಟೀಷರಿಂದ ತಮ್ಮನ್ನು ಕಾಪಾಡಿಕೊಳ್ಳುವ ಸಲುವಾಗಿ ಮತ್ತೆ ಈ ಜನಾಂಗ ಕಾಡುಗಳನ್ನೇ ಆಶ್ರಯಿಸಬೇಕಾದದ್ದು ವಿಪರ್ಯಾಸ. ದೇಸೂನ ನಂತರ ಧನಸಿಂಗ್, ಅವನ ನಂತರ ಹನುಮನಾಯ್ಕ ಹಾಗೆಯೇ ಸಾಗಿ ಸೂರ್ಯನಾಯ್ಕನವರೆಗಿನ ಕಥೆಯನ್ನು ಹೇಳುತ್ತದೆ.

ಇಡೀ ಕಾದಂಬರಿಯ ಕೊನೆಯ ಹಂತದಲ್ಲಿ ಬಂಜಾರಾ ಜನಾಂಗ ಹೇಗೆ ಆಧುನಿಕತೆಯತ್ತ ಮುಖ ಮಾಡಿದೆ ಎನ್ನುವುದನ್ನು ಹಂತಹಂತವಾಗಿ ತಿಳಿಸುತ್ತದೆ. ಭಮರ್‌ಕೋಟ್ಯಾದ ಕವಲುಗಳು ಬೇರೆಬೇರೆಯಾಗಿ ಈಗಿನ ಕರಮ್‌ತೋಟ್ ಜನಾಂಗದ ಸೂರ್ಯನಾಯ್ಕ ಉಪನ್ಯಾಸಕನಾಗಿದ್ದ. ಹೆಂಡತಿ ವಂದನಾ ಕೂಡ ಸಂಶೋಧನೆ ಮಾಡಿ ವಿದ್ಯಾವಂತೆ ಅನ್ನಿಸಿಕೊಂಡಿದ್ದಳು. ನೇರ ನಡೆನುಡಿಯ

ಸೂರ್ಯ ನಾಯ್ಕ ಬದುಕನ್ನು ಸರಳವಾಗಿ ಎದುರಿಸಿದವನು. ಬಡತನದ ಬದುಕಿನಿಂದ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿಕೊಂಡಿದ್ದನಾದರೂ ಸಹೋದ್ಯೋಗಿಗಳ ತುಳಿತಕ್ಕೂ ಒಳಗಾದವನು. ತನ್ನ ಮಕ್ಕಳಾದರೂ ಮೇಲೆ ಬರಲಿ ಎಂದು ಕಾಯುತ್ತಿರುವವನು

ಇಷ್ಟೆಲ್ಲದರ ನಡುವೆ ಇಡೀ ಕಾದಂಬರಿಯಲ್ಲಿ ಬಂಜಾರಾಗಳ ಪದ್ಧತಿಗಳು, ಆಚಾರ ವಿಚಾರಗಳು ಯಥೇಶ್ಚವಾಗಿ ಕಾಣಸಿಗುತ್ತವೆ. ಪ್ರತಿ ಸಂಪ್ರದಾಯದ ಸ್ಥೂಲ ಚಿತ್ರಣವನ್ನು ಕೊಡುವುದರಲ್ಲಿ ಕಾದಂಬರಿಕಾರರು ಯಶಸ್ವಿಯಾಗುತ್ತಾರೆ. ಜೊತೆಗೆ ಬಂಜಾರಾ ಜನಾಂಗದ ಭಾಷೆಯ ಸಣ್ಣ ಪರಿಚಯವೂ ಸಿಗುತ್ತದೆ.

ಚಿಕ್ಕವಳಿದ್ದಾಗ ಲಂಬಾಣಿ ಜನಾಂಗದ ಉಡುಪು ನೋಡುವುದೇ ಒಂದು ವಿಶೇಷ ಎನ್ನಿಸುತ್ತಿತ್ತು ನನಗೆ. ಕಟ್ಟಡ ಕೆಲಸ ಮಾಡಲು ಬಂದ ಬಂಜಾರಾ ಹೆಂಗಸರ ಬಳಿ ಮಾತನಾಡುತ್ತ ನಾಣ್ಯಗಳನ್ನು ಪೋಣಿಸಿ ಹೊಲೆದ ಅವರ ದುಪಟ್ಟಾಗಳನ್ನು ಮುಟ್ಟಿಮುಟ್ಟಿ ನೋಡಿ ಖುಷಿಪಡುತ್ತಿದ್ದೆ. ಯಾರ ಬಳಿಯಲ್ಲಾದರೂ ಸರಿ ಸಲೀಸಾಗಿ ಸ್ನೇಹ ಬೆಳೆಸುವ ನನ್ನ ಗುಣ ಆ ಹೆಂಗಳೆಯರ ಬಳಿ ಹೋಗುವಂತೆ ಮಾಡುತ್ತಿತ್ತು. ಕಾದಂಬರಿ ಓದಿ ಮುಗಿಸಿದ ನಂತರ ಶಾಂತಾ ನಾಯ್ಕರಿಗೆ ಫೋನ್ ಮಾಡಿ "ನನಗೆ ನಿಮ್ಮ ಹೆಂಗಸರು ಹಾಕುವಂತಹ ಡ್ರೆಸ್ ಬೇಕು" ಪುಟ್ಟ ಮಕ್ಕಳಂತೆ ಹಠ ಹಿಡಿದು ಹೇಳಿದ್ದೆ. "ಮುಂದಿನ ಸಲ ಇಲ್ಲಿಗೆ ಬಂದಾಗ ಕೊಡಸ್ತೀನಿ. ಆದರೆ ಈಗ ಅದನ್ನು ಮಾಡೋದು ಕಡಿಮೆ ಆಗಿದೆ. ಹೇಳಿ ಮಾಡಿಸಬೇಕು." ಎಂದಿದ್ದಾರೆ. ಚಂದದ ನಾಣ್ಯ ಹೊಲಿದು ಮಾಡಿದ ಆ ದುಪಟ್ಟಾಗೋಸ್ಕರ ಈಗ ಕಾಯುತ್ತಿದ್ದೇನೆ.

ಪುಸ್ತಕ : **ಮಲಾಣ್**

ಲೇಖಕರು: **ಶಾಂತಾ ನಾಯ್ಕ ಶಿರಗಾನಹಳ್ಳಿ**

ಬೆಲೆ: **310/-**

ಪ್ರಕಾಶಕರು: **ದೇಸಿ ಪುಸ್ತಕ**

14

ಪ್ರೊ. ಎಸ್. ಶಾಂತನಾಯ್ಕರವರ ಆಯ್ದ ನಾಟಕಗಳಲ್ಲಿ ಬುಡಕಟ್ಟು ಪ್ರಜ್ಞೆ

ಡಾ. ಅಣ್ಣಾಜಿ ಕೃಷ್ಣಾರೆಡ್ಡಿ
ಪ್ರದರ್ಶನ ಕಲಾ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಯಲ, ಬಳ್ಳಾರಿ.
ಮೊ: 9986752680

ಪ್ರೊ. ಎಸ್. ಶಾಂತನಾಯ್ಕರವರ ನಾಟಕಗಳನ್ನು ನೋಡಿದಾಗ ಸಮಕಾಲೀನ ಕನ್ನಡ ರಂಗಭೂಮಿಯಲ್ಲಷ್ಟೇ ಅಲ್ಲ, ಭಾರತೀಯ ರಂಗಭೂಮಿಯಲ್ಲೂ ಮಹತ್ವದ ನಾಟಕಗಳಾಗಿ ಕೂಡ ನೋಡಬಹುದು. ಬುಡಕಟ್ಟು ಸಮುದಾಯಗಳಲ್ಲಿನ ಸಾಹಿತ್ಯದ ಒಲವು, ಅಲ್ಲಿನ ಸೈದ್ಧಾಂತಿಕ ಬದ್ಧತೆ ಹಾಗೂ ಸಮೂಹ ಮಾಧ್ಯಮದ ಅರಿವು ಇವರ ರಂಗಕೃಷಿಯಲ್ಲಿನ ಚಟುವಟಿಕೆಗಳು ಮೂಲ ತಳಪಾಯವಾಗಿದ್ದು, ಅವರ ನಾಟಕಗಳು ಹೊಸತನವನ್ನು ನೀಡುವುದರ ಜೊತೆ ಮತ್ತು ತಮ್ಮ ನಾಟಕದ ವಸ್ತುವಿಗೆ ವಿಭಿನ್ನ ದೃಷ್ಟಿ ನೀಡುವುದಕ್ಕೆ ಹೆಸರು ಮಾಡಿದ ಇವರ ಆಸಕ್ತಿಗೆ ನಾವೆಲ್ಲಾ ಗೌರವಿಸಲೇಬೆಕು. ರಂಗಭೂಮಿಗೆ ಮಣ್ಣಿನ ವಾಸನೆಯನ್ನು ಗ್ರಹಿಸುವ ಶಕ್ತಿಯಿದೆ. ಕನ್ನಡ ಭಾಷೆಯನ್ನೇ ತೆಗೆದುಕೊಳ್ಳಿ. ರಂಗಭೂಮಿ ಮೂಲಕ ಅವರು ಬುಡಕಟ್ಟು ಪ್ರಜ್ಞೆಯನ್ನು ಹಾಗೂ ಸಾಹಿತ್ಯ, ಭಾಷೆಯನ್ನು ಗ್ರಹಿಸಿರುವ ರೀತಿ ತುಂಬ ಭಿನ್ನವಾದದ್ದು. ರಂಗಭೂಮಿಗೆ ಮಾತು ಮುಖ್ಯ, ಸಾಹಿತ್ಯಕ್ಕೆ ಬರವಣಿಗೆ ಮುಖ್ಯ. ಮಾತಿಗೆ ಸಂವಹನ ಮುಖ್ಯ, ಬರವಣಿಗೆಗೆ ವ್ಯಾಕರಣ ಮುಖ್ಯ, ಮಾತಿನ ಅರೆಬರೆತನ ರಂಗಭೂಮಿಯನ್ನು ಬಾಧಿಸುವುದಿಲ್ಲ, ಆದರೆ ಸಾಹಿತ್ಯವನ್ನು ಬಾಧಿಸುತ್ತದೆ. ಸಮಕಾಲೀನ ಲೇಖಕರಲ್ಲಿ ಕನ್ನಡ ಕಾವ್ಯಗಳಲ್ಲಿನ ವಿಷಯವಸ್ತು, ಭಾಷಾ ಪ್ರಯೋಗ, ರಚನಾತ್ಮಕ ಶೈಲಿಯ ದೋಷಗಳನ್ನು ಮುಕ್ತವಾಗಿ ಚರ್ಚಿಸುತ್ತಾ ಮೇರು ಕೃತಿಯಾಗುವಲ್ಲಿ ಅವರ ಈ ನಾಟಕಗಳು. ಸರಳ ಸಾಹಿತ್ಯ ವಿಮರ್ಶೆಯನ್ನು ತನ್ನ ಸಮುದಾಯಗಳಲ್ಲಿ ಹುಡುಕಾಟ ಮಾಡುತ್ತಿರುವುದನ್ನು ಗಮನಿಸಬಹುದು.

ಅವರು ವಿಶ್ವವಿದ್ಯಾಲಯದ ಆಚೆಗೂ ರಂಗಭೂಮಿಯ ಎಲ್ಲಾ ಆಯಾಮಗಳನ್ನು ಮತ್ತು ರಂಗೇತರ ಚಟುವಟಿಕೆಯ ಸಾಧ್ಯತೆಗಳನ್ನು ಕಂಡುಕೊಳ್ಳುವುದರ ಜೊತೆಗೆ

ಸಾಹಿತ್ಯ ರಚನೆ, ನಾಟಕ ರಚನೆ, ಕಲಾವಿನ್ಯಾಸ, ಸಂಘಟನೆ, ದೇಸಿ ಚಳುವಳಿ, ಸಮುದಾಯ, ಕುಶಲೆ, ಬಂಜಾರ ಸಂಸ್ಥೆಗಳು, ಸದಸ್ಯರಾಗಿ ಕವಿಗಳಾಗಿ – ಸಾಂಸ್ಕೃತಿಕ ಸಂದರ್ಭದಲ್ಲಿ ಅಪರೂಪದ ವ್ಯಕ್ತಿತ್ವದವರಾಗಿದ್ದಾರೆ. ಇವೆಲ್ಲವೂ ರಂಗಾಸಕ್ತಿಯಲ್ಲಿ ಕ್ರೂಡಿಕರಣಗೊಳ್ಳುವುದರಿಂದ ಪ್ರೊ. ಎಸ್. ಶಾಂತನಾಯ್ಕರವರ ನಾಟಕಗಳು ಮತ್ತು ಸಾಹಿತ್ಯ ಮತ್ತು ರಂಗ ಪ್ರಯೋಗಗಳು ವಿಶಿಷ್ಟ ಹಾಗೂ ಅನನ್ಯ ಅನುಭವದಿಂದ ಕೂಡಿವೆ. ನಿಜ ಹೇಳಬೇಕೆಂದರೆ, ಒಳ್ಳೆಯ ನಾಟಕವಾಗಲಿಕ್ಕೆ ಕ್ರಾಂತಿಯ ಮನೋಭಾವ ಅದರ ಉದ್ದೇಶ ಧ್ಯೇಯ ಅನಿವಾರ್ಯವಲ್ಲ, ಸಮಾಜದ ಯಥಾವತ್ ಚಿತ್ರಣವೂ ಅನಿವಾರ್ಯವಲ್ಲ. ಆದರೆ ಒಳ್ಳೆಯ ನಾಟಕಕ್ಕೆ ಗಟ್ಟಿಯಾದ ರಂಗಕ್ರಿಯೆ ಅನಿವಾರ್ಯ. ಜನರನ್ನು ರಂಜಿಸಲಿಕ್ಕೆಂದೇ ತಿಣಿಕಿ ಬರೆದ ನಾಟಕಗಳನ್ನು ಜನ ಸಮುದಾಯಗಳನ್ನು ತಲುಪಲು ಬೇಕಾದ ಪ್ರಕ್ರಿಯೆಗಳು ಸತ್ಯವಾದವು.

ಸಂಘಟನೆ, ನಿರ್ದೇಶನ, ನಾಟಕ ಉಪನ್ಯಾಸಕರಾಗಿ ರಚನೆಗಳಲ್ಲಿ/ಕಾದಂಬರಿ. ಕಾವ್ಯ ಕವನ. ನಾಟಕಗಳಲ್ಲಿ– ಹೀಗೆ ಹಲವಾರು ಆಯಾಮಗಳನ್ನು ತಮ್ಮದೇ ದೃಷ್ಠಿಕೋನದ ನಿಟ್ಟಿನಿಂದ ಆಧುನಿಕ ರಂಗಭೂಮಿಯನ್ನು ಕಳೆದ ನಾಲ್ಕು ದಶಕಗಳಿಂದ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಶಾಂತನಾಯ್ಕರವರು. ರಂಗಭೂಮಿಯ ಹೊರಗೂ ತಮ್ಮ ಸೃಜನಶೀಲ ಚಟುವಟಿಕೆಗಳನ್ನು ವಿಸ್ತರಿಸಿ ಸದಾ ಕ್ರೀಯಾಶೀಲರಾಗಿರುವ ಅವರು ಹೆಜ್ಜೆ ಇಟ್ಟ ಕಡೆಯಲ್ಲೆಲ್ಲಾ ತಮ್ಮ ವಿಶಿಷ್ಟ ಗುರುತು ಮೂಡಿಸಿದ್ದಾರೆ. ಪ್ರಗತಿಪರ ನಾಟಕಗಳನ್ನು ರಂಗಭೂಮಿಗೆ ತೋರಿಸಿದ ಅವರು ನಾಟಕಗಳು, ಲೇಖನಗಳು, ಕವನಗಳು, ಕಾದಂಬರಿಗಳು, ಚಿಂತನೆಗಳು, ಹೋರಾಟಗಳು ರಂಗಭೂಮಿಯ ಚರಿತ್ರೆಯ ದೃಷ್ಟಿಯಿಂದ ಅವಶ್ಯವೆನಿಸುತ್ತದೆ.
ಮೊದಲು ಕ್ರಾಂತಿಕಾರಿ ಮನೋಭಾವದಲ್ಲಿ ತಮ್ಮ ಪಯಣ ಆರಂಭಿಸಿದ ಇವರು ತಮ್ಮ ಈ ಐದು ನಾಟಕಗಳಲ್ಲಿ ಬಹಳ ಮಹತ್ವನ್ನ ಸಾರಿ ಹೇಳಿದ್ದಾರೆ. ಬುಡಕಟ್ಟಿನ ಸಾಮಾಜಿಕ ಜಾನಪದ ಪ್ರಜ್ಞೆಗಳನ್ನು ನಾಟಕಗಳಲ್ಲಿ ನಂಬಿಕೆ ಇಟ್ಟು ಅವುಗಳ ಮೂಲಕ ಆಶಯದೊಂದಿಗೆ ಇಡೀ ಕನ್ನಡ ರಂಗಭೂಮಿಯ ರಂಗ ಸಾಹಿತ್ಯ, ವಿಮರ್ಶೆ, ನಟ, ನಾಟಕ, ನಾಟಕಕಾರ, ನಿರ್ದೇಶಕರ ಕುರಿತು ನೇರವಾಗಿ, ಖಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ.

ನಾಟಕಗಳ ಬಗ್ಗೆ

ಜಾಗತೀಕರಣವೂತಿಮ್ಮಜ್ಜಿ ಕೋಳಿಯೂ

ಈ ನಾಟಕದಲ್ಲಿ ನಮಗೆ ಕಾಣಿಸುವುದು ಕೆಲವು ಕೋಳಿ ಸಾಕಾಣಿಕೆಯ, ಕೋಳಿ ಮಾರುವ ಕೋಳಿ ಕೊಂಡುಕೊಳ್ಳುವ ಪಾತ್ರಗಳು ಆದರೆ ಅವು ನಿತ್ಯಜೀವನದಲ್ಲಿ ನಮಗೆ ಕಾಣಿಸುವ ಅನೇಕ ತರಹದ ವ್ಯಾಪಾರ ದೃಕ್ಪಥವುಳ್ಳ ವ್ಯಾಪಾರಸ್ಥರ ಜೀವನಕ್ಕೆ ಪ್ರತಿರೂಪದ ಪಾತ್ರಗಳಾಗಿವೆ.

ಜಾಗತೀಕರಣ ಆದಾಗಿನ ವ್ಯಾಪಾರಸ್ಥರ ಪರಿಸ್ಥಿತಿಯನ್ನು ಕಣ್ಣಿಗೆ ಕಟ್ಟಿದ ಹಾಗೆ ತಿಮ್ಮಜ್ಜಿ ಮತ್ತು ರಂಗಮ್ಮ ಪಾತ್ರಗಳಲ್ಲಿ ಕಾಣಬಹುದು. ಈ ಪಾತ್ರಗಳಲ್ಲಿ ಇಂದಿನ ಮನನೊಂದು ಅದೇ ಗುಂಗಿನಲ್ಲಿ ಬದುಕನ್ನು ಸಾಗಿಸುತ್ತಿರುವ ಚಿಕ್ಕಚಿಕ್ಕ ವ್ಯಾಪಾರಿಗಳ ಮನಃಸ್ಥಿತಿಯನ್ನು ಕಾಣಬಹುದು. ಅದೇ ರೀತಿ ಸಮಾಜದಲ್ಲಿ ಸಾಮಾನ್ಯ ಜನ ಯಾವುದು, ಹೇಗೆ ಬರುತ್ತದೆ, ಏನಾಗುತ್ತದೆ ಎನ್ನುವುದನ್ನು ಯೋಚಿಸದೆ ತಮಗೆ ನಿಲುಕುವ ಅನುಕೂಲವಾಗುವಂತಹ ಬೆಲೆಗಳಲ್ಲಿಯೇ ಯಾವುದೇ ವಸ್ತುಗಳನ್ನು ಕೊಳ್ಳುತ್ತಾರೆ. ಆದರೆ ಪ್ರಾಮಾಣಿಕವಾಗಿ ವಸ್ತುಗಳ ಗುಣಮಟ್ಟದ ಪ್ರಮಾಣವನ್ನು ನಾಲ್ಕು

ಕಾಲಕ್ಕೆ ನಿಲ್ಲು ರೀತಿ ಮಾಡಿದ್ದರೂ ಅದುದು ಬಾರಿ ಎನಿಸಿದರೆ ತಗೊಳ್ಳುವ ಮನಃಸ್ಥಿತಿ ಇಲ್ಲವೆಂಬುದು ಇಂದಿನ ಪರಿಸ್ಥಿತಿ ಆಗಿದೆ. ಇನ್ನು ಉಳಿದ ಪಾತ್ರಗಳಲ್ಲಿ ಮರಿತಿಬ್ಬೇಗೌಡ, ಚನ್ಯಾ ಮತ್ತು ಇತರೆ ಪಾತ್ರಗಳು ನಮ್ಮ ವಸ್ತುಗಳ ಮೇಲೆ ಅಲ್ಲಗಳೆಯುವ ಮನಸ್ತತ್ವವನ್ನು ತೋರಿಸುತ್ತವೆ. ಹಾಗೆಯೇ ವಿದೇಶಿ ವಸ್ತುಗಳ ಮೇಲೆ ವ್ಯಾಮೋಹವೂ ಸಹಾ ಯಾವ ರೀತಿ ಉಂಟಾಗುತ್ತವೆ ಎನ್ನುವ ಒಂದು ವಿಷಯವನ್ನು ಈ ನಾಟಕದಲ್ಲಿ ನಮ್ಮ ಗಮನಕ್ಕೆ ಬರುತ್ತದೆ.

ಏನೇ ಆಗಲಿ ಒಟ್ಟಾರೆ ಇಲ್ಲಿ ಈ ನಾಟಕದಲ್ಲಿ ಕಾಣುವುದು ನಮ್ಮ ಸುತ್ತಮುತ್ತಲಿನ ಪ್ರಪಂಚ. ಒಬ್ಬರ ಮೇಲೆ ಒಬ್ಬರು ವಿಜಯಾವಕಾಶಗಳಿಗಾಗಿ ಹೇಗೆ ಮೋಸ ವಂಚನೆಗಳನ್ನು ಮಾಡಲು ಕೂಡಾ ಹಿಂಜರಿಯುವುದಿಲ್ಲವೆಂದು ಮರಿತಿಬ್ಬೇಗೌಡನ ಕೋಳಿ ಸೋಲಲು ಕಾರಣವನ್ನು ಕೊಟ್ಟ ವ್ಯಕ್ತಿಗಳ ಮೂಲಕ ಹೇಳಿಕೊಟ್ಟಿದ್ದಾರೆ. ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ಕಡಿಮೆ ಬೆಲೆ ಅಂದಕೂಡಲೇ ಆ ವಸ್ತುವಿನ ಗುಣಮಟ್ಟವನ್ನು ನೋಡದೆ ಆ ವಸ್ತುವನ್ನು ಸ್ವಂತ ಮಾಡಿಕೊಳ್ಳುವ, ಹಾಗೆಯೇ ಗುಣಮಟ್ಟ ಎಷ್ಟೇ ಇದ್ದರೂ ಸ್ವಂತಿಕೆಯನ್ನು ಸ್ವಂತ ವ್ಯಕ್ತಿತ್ವ ಉಳ್ಳ ವ್ಯಕ್ತಿಗಳನ್ನು ಅಲ್ಲಗಳೆದು ಅನುಕರಣಾ ಸಿದ್ಧಾಂತಕ್ಕೆ ಬದಲಾಗುವಂತಹ ವಿಚಿತ್ರ ಮನಸ್ಸುಳ್ಳ, ವಿಚಿತ್ರ ವ್ಯಕ್ತಿತ್ವವುಳ್ಳ ಸಮಾಜವನ್ನು ಪಾತ್ರಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ನಾಟಕಕಾರರೇ ಹೇಳಿದ ರೀತಿ "ಎಲ್ಲಿಯೂ ಜಾಗತೀಕರಣದ ಸುಳಿವನ್ನು ಪ್ರಸ್ತಾಪಿಸದೆ ಗ್ರಾಮೀಣ ಬದುಕಿನಲ್ಲಾಗುತ್ತಿರುವ ದುರಂತವನ್ನು ಈ ನಾಟಕ ದಾಖಲಿಸುತ್ತ ಹೋಗುವುದೇ ನಾಟಕದ ಸ್ವಾರಸ್ಯ ಹಾಗೂ ಸತ್ವ ಆಗಿದೆ". ಇದು ಒಂದು ವಿಡಂಬನಾತ್ಮಕವಾಗಿ ಸಮಾಜವನ್ನು ಕಣ್ಣ ಮುಂದೆ ತರುವ ನಾಟಕವಾಗಿದೆ.

ಅಡವಿ

ಈ ನಾಟಕದಲ್ಲಿ ನಮ್ಮ ಜೀವನದ ಚಿತ್ರಣವನ್ನೇ ನಾಟಕಕಾರರು ಬಿಚ್ಚಿಟ್ಟಿದ್ದಾರೆ. ಈಗ ನಡೆಯುತ್ತಿರುವ ಪ್ರಕೃತಿ ಪ್ರಳಯಗಳಿಗೆ ನಾವು ಎಲ್ಲರೂ ಹೇಗೆ ಭಾಗಿಯಾಗಿದ್ದೇವೆ ಎಂದು ಇಲ್ಲಿಯ ಪಾತ್ರಗಳ ಮುಖಾಂತರ ತೋರಿಸಿಕೊಟ್ಟಿದ್ದಾರೆ.

ಇಲ್ಲಿ ಕೆಲವೇ ಪಾತ್ರಗಳು ಇರಬಹುದು ಆದರೆ ಆ ಪಾತ್ರಗಳು ಆಯಾ ವರ್ಗಕ್ಕೆ ಪ್ರಾತಿನಿಧ್ಯ ವಹಿಸುತ್ತವೆ. ಇಲ್ಲಿ ವರ್ಗ ಎಂದರೆ ಜಾತಿ ಅಲ್ಲ. ವೃತ್ತಿ ವರ್ಗವಾಗಿದೆ. ಅಂದರೆ ಇಲ್ಲಿಯ ಪಾತ್ರಗಳಿಗೆ ಹೆಸರುಗಳು ಇರುವುದಿಲ್ಲ ಬದಲಾಗಿ ಅವರು ಮಾಡುವ ಕಾಯಕವನ್ನು ಸೂಚಿಸಿರುತ್ತಾರೆ. ಇದು ನಾಟಕಕಾರರ ಒಂದು ಅದ್ಭುತ ಊಹೆಯೆಂದು ಹೇಳಬಹುದು. ಯಾಕೆಂದರೆ ಪಾತ್ರಗಳಿಗೆ ಹೆಸರುಗಳನ್ನು ಕೊಟ್ಟರೆ ಮತ್ತೆ ಅವರು ಯಾರು? ಏನು? ಎನ್ನುವುದನ್ನು ಹೆಸರಿಸಬೇಕಾಗುತ್ತದೆ, ಪಠ್ಯ ನಾಟಕ ಓದುವವರಿಗೆ ಮತ್ತು ನಾಟಕ ನೋಡುವ ಪ್ರೇಕ್ಷಕರಿಗೆ ಗೊಂದಲ ಉಂಟಾಗುವ ಸಾಧ್ಯತೆ ಇದೆ ಮತ್ತು ಪಾತ್ರಗಳ ಲಕ್ಷಣಗಳಬನ್ನು ಹೇಳುವ ಅವಶ್ಯಕತೆ ಇರುತ್ತದೆ. ಆದರೆ ಈಗ ಈ ನಾಟಕದಲ್ಲಿ ಓದುಗರಿಗೆ ಮತ್ತು ಪ್ರೇಕ್ಷಕರಿಗೆ ಅವರ ವೃತ್ತಿಯ ವರ್ಗ ಏನು ಮತ್ತು ಈ ನಾಟಕದಲ್ಲಿ ಅಥವಾ ಈ ಕಥೆಯಲ್ಲಿ ಅವರ ಪ್ರಾಮುಖ್ಯತೆ ಏನು ಎಂದು ಗೊಂದಲವಿಲ್ಲದೆ ತಿಳಿಯುತ್ತದೆ.

ಈ ನಾಟಕಕಾರರ ಮತ್ತೊಂದು ಅದ್ಭುತ ಊಹೆಯೆಂದರೆ ನಾಟಕದ ಆದಿಯಲ್ಲೇ ಒಂದನೆಯ ಮಾತಿನಲ್ಲೇ ಸಮಸ್ಯೆಯನ್ನು ತಿಳಿಸಿ ಮುಂದೆ ಬರುವ ಉಳಿದ ಪಾತ್ರಗಳ ಮುಖಾಂತರ ಚರ್ಚೆ ಮಾಡಿ ಪರಿಹಾರ ಕಂಡುಹಿಡಿಯುವ ಒಂದು ಪೂರ್ತಿ ಸ್ವರೂಪದ ಒಂದು ನಾಟಕ ಇದಾಗಿದೆ. ಪ್ರತಿಯೊಂದು ಸಮಸ್ಯೆಗೂ ಸಮಸ್ಯೆ ಸೃಷ್ಠಿ ಮತ್ತು ಸಮಸ್ಯೆಯ ಫಲ ಎರಡೂ ಇರುವಂತೆಯೇ ಈ ನಾಟಕದಲ್ಲಿ ಪ್ರಸ್ತಾಪಿಸಿದಂತ ಸಮಸ್ಯೆಗೆ ಫಲ ಅನುಭವಿಸುವ ಪಾತ್ರಗಳಾದ ಕಾಡು ಪ್ರಾಣಿಗಳ ಪಾತ್ರಗಳು ಕಾಡಿನಲ್ಲಿಯ ಒಂದೊಂದರ ವರ್ಗದ ಪಾತ್ರಗಳು ಬರುತ್ತವೆ. ಕೊನೆಗೆ ಸಮಸ್ಯೆಗೆ ಪರಿಷ್ಕಾರ ಪಕೃತಿ ರಕ್ಷಣೆಯೇ ಎಂದು ಹೇಳಿದ ವಿಧಾನ ಮತ್ತು ನಾಟಕಕಾರರ ಪರಿಸರ ಕಾಳಜಿ ಚೆನ್ನಾಗಿದೆ.

ಈಗಾಗಲೇ ನಾನು ಮಾರಾಟವಾಗಿದ್ದೇನೆ

ಈ ನಾಟಕವೆಲ್ಲಾ ಪೀಕಿ ಎನ್ನುವ ಪಾತ್ರದ ದೃಷ್ಟಿಕೋನದಿಂದ ನಡೆಯುತ್ತದೆ. ಇಲ್ಲಿ ಮಾರಾಟವಾಗಿದ್ದ ಪೀಕಿ ಪಾತ್ರವೇ ಮುಖ್ಯವಾಗಿದೆ. ಒಂದು ತಾಂಡದ ಸಾಮಾಜಿಕ-ಆರ್ಥಿಕ ವಿಚಾರಗಳನ್ನು, ಅಲ್ಲಿರುವ ಅನೇಕರ ಮನಃಸ್ಥಿತಿಗಳು ಈ ನಾಟಕದಲ್ಲಿ ನೋಡಬಹುದು. ನಾಟಕದಲ್ಲಿರುವ ತಾಂಡದಲ್ಲಿ ನಿಯಮಗಳಿವೆಯೋ ಅಥವಾ ಅಲಿಖಿತ ನಿಯಮಗಳೋ ಗೊತ್ತಿಲ್ಲ ಗಂಡ ಕೆಲಸ ಮಾಡುವುದಿಲ್ಲ ಹೆಂಡತಿ ಕೆಲಸಮಾಡಿ ಮನೆಯನ್ನು ಪೋಷಣೆ ಮಾಡುತ್ತಿರುತ್ತಾಳೆ. ಮತ್ತೆ ಖಾಲಿ ಇದ್ದವನ ಮೆದುಳು ದೆವ್ವಗಳ ಮನೆ ಎನ್ನುವ ಹಾಗೆ ದುಶ್ಚಟಗಳಿಗೆ ಬಲಿಯಾಗುತ್ತಾನೆ. ಅದೇ ರೀತಿ ಇಂತಹ ವ್ಯಕ್ತಿಗಳನ್ನು ಅವರ ದುಶ್ಚಟಗಳನ್ನು, ಅವರ ಮನೆಯ ಪರಿಸ್ಥಿತಿಯನ್ನು ಅವಕಾಶವಾಗಿ ತೆಗೆದುಕೊಂಡು ದಂಧೆ ಮಾಡುವ ವ್ಯಕ್ತಿಗಳ ರೂಪವಾಗಿ ಜೋಗಿರ, ಮೇರಿಯಮ್ಮ ಪಾತ್ರಗಳು ಕಾಣುತ್ತವೆ. ಆ ದಂಧೆಗೆ ಒಳಗಾದ ವ್ಯಕ್ತಿಗಳಲ್ಲಿ ಬಲಿಯಾಗುವ ಚೋಕ್ಲ, ಬಂಗಾರಿಗಳ ಮಕ್ಕಳ ತರಹ ಎಷ್ಟೋ ಮಂದಿಯ ಬಾಳಿನ ಕಹಿ ಘಟನೆಗಳನ್ನು

ಒಳಗೊಂಡಿರುತ್ತದೆ. ಅವುಗಳನ್ನು ನಮ್ಮ ಕಣ್ಣ ಮುಂದೆ ತರಿಸುತ್ತದೆ ಈ ನಾಟಕ. ಹಾಗೆಯೇ ಕೆಲವು ಪರಿಸ್ಥಿತಿಗಳಿಗೆ ಸಿಲುಕಿ ಕಷ್ಟ ಅನುಭವಿಸುತ್ತಿರುವ ಮನಸುಗಳಿಗೆ ಪರಿಹಾರ ಸಿಗದೇ ಇದ್ದಾಗ ಅವರ ಬಾಳು ಏನು ಎನ್ನುವುದನ್ನು ಗಮನಿಸಬೇಕೆನ್ನುವ ಕುತೂಹಲವನ್ನು ಈ ನಾಟಕ ಮೂಡಿಸುತ್ತದೆ. ಈ ನಾಟಕದಲ್ಲಿಯ ಪೀಕಿಗೆ ನಡೆದಂಥ ಘಟನೆಯನ್ನು ಅನುಭವಿಸುತ್ತಿರುವ ನೊಂದ ಜೀವಗಳು ಎಷ್ಟೋ ಇರುತ್ತವೆ. ಆ ಪರಿಸ್ಥಿತಿಯನ್ನು ಪಠ್ಯ ನಾಟಕ ಅಥವಾ ದೃಶ್ಯ ನಾಟಕವನ್ನು ಓದಿದ ಅಥವಾ ನೋಡಿದ ಪ್ರೇಕ್ಷಕರ ಮನಸ್ಸು ಯೋಚಿಸುವ ರೀತಿ ಮಾಡುತ್ತದೆ.

ಹೀಗೊಬ್ಬ ಹುಡುಗನ ಸ್ವಗತ

ಈ ನಾಟಕದಲ್ಲಿ ಯುವಪೀಳಿಗೆಯು ಒಂದು ಜೀವನದಿಂದ ಇನ್ನೊಂದು ಜೀವನದ ಕಡೆಗೆ ಪಯಣ ಮಾಡಿದಾಗ ಆಗಿನ ಆ ಯುವ ಮನಸ್ಸಿನ ಪರಿಸ್ಥಿತಿಯನ್ನು ಬಹಿರಂಗಗೊಳಿಸುತ್ತದೆ. ಹಾಗೆಯೇ ಈ ನಾಟಕಕಾರ ಮತ್ತೊಂದು ಪ್ರಯೋಗದಂತೆ ಈ ನಾಟಕವನ್ನೆಲ್ಲಾ ಹುಡುಗನ ಸ್ವಗತರೂಪದಲ್ಲಿ ನಡೆಸಿದ್ದಾರೆ. ಇಲ್ಲಿಯೂ ಸಹ ಪಾತ್ರಗಳಿಗೆ ಹೆಸರಿಲ್ಲ. ಯಾಕೆಂದು ಯೋಚನೆ ಬಂದರೆಇದು ಸಮಾಜದ ಎಲ್ಲರಿಗೂ ಅನ್ವಯವಾಗುವಂತಹ ಪಾತ್ರಗಳು.

ಈ ನಾಟಕದಲ್ಲಿ ಬರುವ ಪಾತ್ರಗಳಲ್ಲಿ ತಂದೆ ತಾಯಿಗಳ ಪಾತ್ರಗಳಲ್ಲಿ ಮಕ್ಕಳ ಭವಿಷ್ಯತ್ತಿನ ಬಗ್ಗೆ ಆಸೆ ಆಕಾಂಕ್ಷಗಳನ್ನು ನೋಡುತ್ತೇವೆ. ಹಾಗೆಯೇ ಸ್ನೇಹಿತರ ಪಾತ್ರಗಳಲ್ಲಿ ನೋಡುವುದಾದರೆ ಐಷಾರಾಮಿ ಜೀವನಕ್ಕೊಳಗಾದವರ ದಾರಿತಪ್ಪುವ ಅವಕಾಶ ಇದ್ದಾಗ ತಾನು ಅಲ್ಲದೆ ಎಲ್ಲರನ್ನೂ ತನ್ನ ದಾರಿಗೆ ಎಳೆದುಕೊಳ್ಳಬೇಕು ಎನ್ನುವ ಮನಃಸ್ಥಿತಿಯನ್ನು ಹಾಗೆಯೇ ಮೂಲ ಆಶಯವನ್ನು ಮರೆತ ಎಷ್ಟೋ ಯುವಕರ ಮನಃಸ್ಥಿತಿಯನ್ನು ಬಿಚ್ಚಿಟ್ಟಿದ್ದಾರೆ. ಹಾಗೆಯೇ ಗುರುಗಳ ಅಸಹಾಯಕತೆಯನ್ನು ಸಹಾ ಮೆಷ್ಟ್ರು ಎನ್ನುವ ಪಾತ್ರದ ಮುಖಾಂತರ ತೋರಿಸಿದರು.

ದಾರಿತಪ್ಪುವ ಎಷ್ಟೋ ಮನಸುಗಳನ್ನು ಈ ನಾಟಕದಲ್ಲಿ ನಮಗೆ ನಾಟಕಕಾರರು ತೋರಿಸುತ್ತಾ ಹೇಳಿದ ಮತ್ತೊಂದು ಸಾರ್ವಜನಿಕವಾದ ವಿಷಯ ಏನೆಂದರೆ ಕೈ ಸುಟ್ಟ ಮೇಲೆ ಎದೆ ಮುಟ್ಟುಕೊಂಡ ಹಾಗೆ ಎನ್ನುವ ಗಾದೆ ಮಾತಿನ ರೀತಿ ಕಳೆದು ಹೋದ ಸಮಯವು ಮರಳಿ ಬರುವುದಿಲ್ಲ ಎಂದು ತಿಳಿಸಿದ್ದಾರೆ.

ಈ ನಾಟಕವೆಲ್ಲ ಸ್ವಗತರೂಪದಲ್ಲಿ ಹೇಳಿದ್ದರಿಂದ ಒಂದು ಪಾತ್ರದಲ್ಲಿಯ ಮನಸಿನ ತೊಳಲಾಟ, ಆ ಪಾತ್ರದ ಸುತ್ತಮುತ್ತಲಿನ ಪಾತ್ರಗಳ ಕ್ರಿಯೆಗೆ ಪ್ರತಿಕ್ರಿಯೆತೋರಿಸುತ್ತದೆ. ಕೊನೆಗೆ ತಪ್ಪು ಯಾರದು ಎನ್ನುವ ಪ್ರಶ್ನೆಯಲ್ಲಿಯೇ ಸಮಾಧಾನ ಸಿಗುವಂತೆ ಹೇಳಿದ್ದಾರೆ.

ಹೋರಾಟ

ಈ ನಾಟಕದ ಕಥಾವಸ್ತುವನ್ನು ನಾಟಕಕಾರರು ಆಂಗ್ಲರ ಕಾಲದ ಕಾಲಘಟ್ಟವನ್ನು ತೆಗೆದುಕೊಂಡಿದ್ದಾರೆ. ಹಾಗೆಯೇ ಆಂಗ್ಲರು ನಮ್ಮ ದೇಶದವರನ್ನು ಹೇಗೆ ದೋಚುತ್ತಿದ್ದರು? ಇಲ್ಲಿಯವರನ್ನು ಹೇಗೆ ಹೀನಾಯವಾಗಿ ಕಾಣುತ್ತಿದ್ದರು? ಎನ್ನುವಂತಹ ಅಂದಿನ ಪರಿಸ್ಥಿತಿಯನ್ನು ನಮಗೆ ಪರಿಚಯಿಸಿದ್ದಾರೆ.

ಈ ನಾಟಕಕಾರರು ಅವರ ದೃಷ್ಟಿಕೋನದಲ್ಲಿ ಆಂಗ್ಲರ ಕಾಲಘಟ್ಟದಲ್ಲಿ ಇದ್ದಂತಹ ಪರಿಸ್ಥಿತಿ ಎಂದು ತೋರಿಸಿದರೂ ಇಂದಿಗೂ ಜ್ವಲಿಸುತ್ತಿರುವ ಸಮಸ್ಯೆಗಳು ಇದರಲ್ಲಿ ಕಾಣಿಸಿಕೊಂಡಿದ್ದಾವೆ ಎಂದರೆ ತಪ್ಪಾಗಲಾರದು. ಇಂದಿಗೆ ಹೇಗೆ ಈ ಪರಿಸ್ಥಿತಿ ಅನ್ವಯ ಎಂದರೆ ಈ ನಾಟಕದಲ್ಲಿ ಕಾರ್ಮಿಕ ಜೀವಿಗಳ, ಕೂಲಿ ಕೆಲಸಗಾರರ ಪರಿಸ್ಥಿತಿಯನ್ನು ಬಂಡವಾಳ ಶಾಹಿಗಳ ದೌರ್ಜನ್ಯವನ್ನು ಕಣ್ಣಿಗೆ ಕಟ್ಟುವಂತೆ ತಿಳಿಸಿದ್ದಾರೆ.

ಕಾಡನ್ನು ನಂಬಿಕೊಂಡಿರುವ ಕಾಡಿನ ಮಕ್ಕಳನ್ನು ತಮ್ಮ ಸ್ವಾರ್ಥಕ್ಕಾಗಿ ಯಾವ ರೀತಿ ಉಪಯೋಗಿಸಿಕೊಳ್ಳುತ್ತಿದ್ದರು ಎನ್ನುವ ವಿಷಯವನ್ನು ಕ್ಯಾಪ್ಟನ್ ಪಾತ್ರದ ಮುಖಾಂತರ ದೌರ್ಜನ್ಯಕಾರರ ದೌರ್ಜನ್ಯವನ್ನು ಪರಿಚಯಿಸಿದರು. ಹಾಗೆಯೇ ಅವರ ಬೆನ್ನಾಗಿ, ಅವರ ಭಿಕ್ಷೆಯನ್ನು ಹೇಸಿಕೊಳ್ಳದೆ ಉಪಯೋಗಿಸುವಂತಹ ವ್ಯಕ್ತಿಗಳ ಸಮೂಹಕ್ಕೆ ಬ್ರಿಟೀಷ್ ಸೈನಿಕನ ಪಾತ್ರವನ್ನು, ಕರುಣೆ, ಅನುಕಂಪ ಇದ್ದರೂ ವೃತ್ತಿಧರ್ಮದಿಂದ ಏನನ್ನೂ ಮಾಡಲು ಆಗದ ನಿಸ್ಸಹಾಯಕ ಪಾತ್ರವಾಗಿ ಸೈನಿಕನನ್ನು ನಮ್ಮ ಕಣ್ಣ ಮುಂದೆ ನಿಲ್ಲಿಸಿದ್ದಾರೆ.

ಈ ನಾಟಕದಲ್ಲಿ ಮತ್ತೊಂದು ಮಹತ್ವದ ವಿಷಯವೆಂದರೆ ಕಾಡಿನ ಮಕ್ಕಳ ಸ್ವೇಚ್ಛೆಗೆ ಭಂಗ ತಂದ ನಂತರ ಅವರ ಬಾಳು ಬಂದೀಗಳಿಗಿಂತ ಹೇಗೆ ಹೀನಾಯವಾಗುತ್ತದೆ? ಅವರು ಹಿಂದೆ ಜೀವನೋಪಾಯಕ್ಕಾಗಿ ಮಾಡುವ ಕೆಲಸವನ್ನು ಮುಂದೆ ಬಂದೀಗಳ, ಖೈದಿಗಳ ರೀತಿಯಲ್ಲಿ ಮಾಡುವ ಹಾಗೆ ಹೇಗೆ ರೂಪಾಂತರಗೊಂಡಿದೆ? ಅದೇ ರೀತಿ ಭದ್ರತೆಯಿಲ್ಲದ ಜೀವನ ಹೇಗೆ ಭಯಂಕರವಾಗಿ ಇರುತ್ತದೆ? ಎಂದು ತೋರಿಸುತ್ತಾ ಹಕ್ಕುಗಳಿಗಾಗಿ ಹೋರಾಡಿದರೆ ತಪ್ಪಿಲ್ಲ ಎನ್ನುವ ಸಂದೇಶವನ್ನು ಕೂಡಾ ನಾಟಕದಲ್ಲಿ ಪಾರಿ, ಹನಮ, ಚಂದಿಯಾ ಮುಂತಾದ ಪಾತ್ರಗಳಲ್ಲಿ ತೋರಿಸಲಾಗಿದೆ.

ಜೀವನದ ಕೊನೆಯೆಂಬುದು ಎಲ್ಲೋ ಇಲ್ಲ ನಮ್ಮ ಕೈಯಲ್ಲಿಯೇ ಇದೆ ಎಂದು ಯೋಚಿಸುವಂತೆ ಲಚ್ಮನಾಯ್ಕನ ಪಾತ್ರವನ್ನು ನಡೆಸಿದ ರೀತಿ ಅದ್ಭುತವಾಗಿ ಬಂದಿದೆ. ಅಂತ್ಯ ಸಮಯದಲ್ಲೂ ಛಲವನ್ನು ಹೊಂದಿದರೆ ಸಾಧನೆ ಮಾಡಲು ಅವಕಾಶವಿದೆಯೆಂದು ತಿಳಿಸಿದ್ದಾರೆ.

●

15

ಜಾಗತೀಕರಣ : ಬುಡಕಟ್ಟು ಸಮುದಾಯಗಳ ಬಡತನದ ಶ್ರೇಣೀಕರಣ

ಡಾ. ಹೊನ್ನೂರಾಲಿ ಐ.
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೋಕಾ, ಬಳ್ಳಾರಿ ತಾಲ್ಲೂಕು.
ಮೊಬೈಲ್ ಸಂ. 9844913304
ಇಮೇಲ್ ವಿಳಾಸ: honnurali@gmail.com

ಪ್ರಸ್ತಾವನೆ

ಜಾಗತೀಕರಣವೆಂದರೆ ಸ್ಥಳೀಯ ಅಥವಾ ಪ್ರಾದೇಶಿಕ ಸಂಗತಿಗಳನ್ನು ಜಾಗತೀಕರಿಸುವ ಪ್ರಕ್ರಿಯೆಯೆಂದು ಪರಿಭಾವಿಸಲಾಗುತ್ತದೆ. ಜಾಗತೀಕರಣ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಮಾನವ ಜೀವನವನ್ನು ಪ್ರಭಾವಿಸುವ ಬಹು ಆಯಾಮಗಳ ಸಂಗತಿಯಾಗಿದೆ. ಯಾವುದೇ ಪ್ರದೇಶದ, ಯಾವುದೇ ಹಂತಗಳಲ್ಲಿ ಜೀವಿಸುವ ಸಮುದಾಯಗಳ ಜೀವನ ಶೈಲಿಯನ್ನು ಬದಲಾಯಿಸುವಲ್ಲಿ ಆರ್ಥಿಕ, ಸಮಾಜೋ-ಸಾಂಸ್ಕೃತಿಕ ಮತ್ತು ರಾಜಕೀಯ ಶಕ್ತಿಗಳನ್ನು ಒಟ್ಟಾಗಿ ಕಾರ್ಯನಿರ್ವಹಿಸುವಂತೆ ಮಾಡುವ ಶಕ್ತಿ ಈ ಆರ್ಥಿಕ ಸಿದ್ಧಾಂತಕ್ಕೆ ಇದೆ. ಬುಡಕಟ್ಟು ಸಮುದಾಯಗಳ ಏಕರೂಪಿ ಸಂಸ್ಕೃತಿಯನ್ನು ಪ್ರಭಾವಿಸುವಲ್ಲಿ ಜಾಗತೀಕರಣ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ಗ್ರಹಿಸಲಾಗಿದೆ. ಬುಡಕಟ್ಟು ಸಮುದಾಯಗಳ ಬದುಕಿನಲ್ಲಿ ಅಸಮಾನತೆ, ಬಡತನ ಮತ್ತು ಮೂಲಭೂತ ಸೌಕರ್ಯಗಳ ವಂಚಿತತೆಯನ್ನು ಸೃಷ್ಟಿಸುವಲ್ಲಿಯೂ ಜಾಗತೀಕರಣ ಪ್ರಮುಖ ನಕಾರಾತ್ಮಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿದೆ ಎನ್ನುವ ಚರ್ಚೆಗಳು ಹಿಂದಿಗಿಂತ ಇಂದು ಹೆಚ್ಚು ಜೀವಂತವಾಗಿವೆ. ಭಾರತ ಅನಿವಾರ್ಯವಾಗಿ ಒಪ್ಪಿಕೊಂಡ ಇಂತಹ ಬಂಡವಾಳಶಾಹಿ ಆರ್ಥಿಕ ಸಿದ್ಧಾಂತವೇ ಜಾಗತೀಕರಣ. ಜಾಗತೀಕರಣವು ಶ್ರೀಮಂತರನ್ನು ಸಿರಿವಂತರನ್ನಾಗಿಸುವ ನಿರ್ಲಕ್ಷಿತ ಹಾಗೂ ಬುಡಕಟ್ಟು ಸಮುದಾಯಗಳನ್ನು ಶಾಶ್ವತವಾಗಿ ಬಡವರನ್ನಾಗಿ ಉಳಿಸಿಕೊಳ್ಳುವ ಆರ್ಥಿಕ ಸಿದ್ಧಾಂತವಾಗಿ ಬೇರೂರಿದೆ. ಪ್ರಸ್ತುತ ಪ್ರಬಂಧವು ಜಾಗತೀಕರಣವು ಬುಡಕಟ್ಟು ಸಮುದಾಯಗಳನ್ನು ಹೇಗೆ ಶಾಶ್ವತವಾಗಿ ಬಡವರನ್ನಾಗಿ ಉಳಿಸಿದೆ ಎಂಬುದರ

ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದೆ.

ಜಾಗತೀಕರಣ ಪರಿಕಲ್ಪನೆ

ಇಂದು ಬುಡಕಟ್ಟು ಸಮುದಾಯಗಳ ಬದುಕು ಸಂಪೂರ್ಣವಾಗಿ ಪಲ್ಲಟಗೊಂಡಿದೆ. ಇದರ ಮುಖ್ಯ ಕಾರಣ. ನಮ್ಮನ್ನು ಆಳುವವರು ಹುಟ್ಟು ಹಾಕಿರುವ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆ ಪರತಂತ್ರ ಜೀವಿಯಾಗಿದ್ದು, ಸಂದರ್ಭಕ್ಕೆ ತಕ್ಕಂತೆ ಗೋಸುಂಬೆಯಂತೆ ಬಣ್ಣ ಬದಲಾಯಿಸುತ್ತಿರುತ್ತವೆ. ಈ ವ್ಯವಸ್ಥೆಯಲ್ಲಿ "ಇಡೀ ಜಗತ್ತೇ ಒಂದು ಹಳ್ಳಿ" ಎಂದು ಅರ್ಥೈಸುವಾಗ "ಜಾಗತೀಕರಣ" ಎನ್ನುವುದು ಎಲ್ಲರಿಗೂ ಸಮಾನವಾಗಿ ಪ್ರಭಾವಿಸಿಲ್ಲ. ಕೆಲವರಿಗೆ ಸ್ವರ್ಗವಾಗಿ ಉಳಿದವರಿಗೆ ನರಕವಾಗಿ ಪರಿಣಮಿಸಿದೆ. ಜಾಗತೀಕರಣ ಎಂಬ ಪರಿಕಲ್ಪನೆ ಬಡವನನ್ನು ಬಡವನಾಗಿಯೂ, ಸಿರಿವಂತನನ್ನು ಶ್ರೀಮಂತನಾಗಿ ಮುಂದುವರೆಸಿಕೊಂಡು ಹೋಗುವ ಮಾಂತ್ರಿಕತೆಯನ್ನು ಒಳಗೊಂಡಿದೆ.[1] ಜಾಗತೀಕರಣವನ್ನು ಆ್ಯಡಂಸ್ಮಿತ್ ಸಿದ್ಧಾಂತದ ಆಧಾರದಲ್ಲಿ ಪರಾಮರ್ಶಿಸುವುದು ಇಂದು ಅನಿವಾರ್ಯವಾಗಿದೆ. 1776 ರಲ್ಲಿ ಪ್ರಕಟವಾದ ಆ್ಯಡಂಸ್ಮಿತ್‌ರ ಕೃತಿ 'ಆ್ಯನ್ ಇನ್ಕ್ವೈರಿ ಇನ್ ಟು ದ ನೇಚರ್ ಆಂಡ್ ಕಾಜಸ್ ಆಫ್ ವೆಲ್ತ್ ಆಫ್ ನೇಷನ್'ನಲ್ಲಿ ಮಂಡಿಸಿರುವ "ಆರ್ಥಿಕ ಸ್ವಹಿತಾಸಕ್ತಿಯ ಸಿದ್ಧಾಂತ" ಖಾಸಗೀಕರಣವನ್ನು ನಿಯಂತ್ರಿಸುತ್ತದೆ. ಇಲ್ಲಿ ಅದರ ಸಿದ್ಧಾಂತವು "ಹಿತಾಸಕ್ತಿಯ ಸಿದ್ಧಾಂತ" ಕೂಡ ಆಗಿರದೆ ಕೇವಲ "ಆರ್ಥಿಕ ಸ್ವಹಿತಾಸಕ್ತಿಯ ಸಿದ್ಧಾಂತ"ವಾಗಿದೆ ಎಂಬುದು ಗಮನಾರ್ಹ ಸಂಗತಿ. ಅಂತೆಯೇ ಆ್ಯಡಂಸ್ಮಿತ್ ಸಿದ್ಧಾಂತವೆಂದರೆ, ಸಂಕುಚಿತ ಬದುಕನ್ನು ತೀರಾ ಸಂಕುಚಿತಗೊಳಿಸುವ ಸಿದ್ಧಾಂತವಾಗಿದೆ ಎನ್ನುವ ಅಮರ್ತ್ಯಸೇನ್‌ರ ಮಾತುಗಳು ಉಲ್ಲೇಖನಕ್ಕೆ ಅರ್ಹವಾಗಿವೆ. ನಮ್ಮ ಮುಂದಿರುವ ಜಾಗತೀಕರಣವು ಆರ್ಥಿಕ ಸ್ವಹಿತಾಸಕ್ತಿಯನ್ನಷ್ಟೇ ಪ್ರತಿಪಾದಿಸುತ್ತದೆ. ಅದಕ್ಕಾಗಿ ಕತ್ತುಕುಯ್ಯುವ ಪೈಪೋಟಿಯನ್ನು ಒಪ್ಪಿಕೊಳ್ಳುತ್ತದೆ. ಪೈಪೋಟಿ ನಡೆಸಿ ಜಯಿಸಬಲ್ಲವರನ್ನು ಮಾತ್ರ ಉಳಿಯಗೊಡುತ್ತದೆ.[2] ಇಂತಹ ಸ್ವಹಿತಾಸಕ್ತಿಯನ್ನು ಮಾತ್ರ ಪ್ರತಿಪಾದಿಸುವ ಜಾಗತೀಕರಣವು ವಂಚಿತ ಸಮುದಾಯಗಳಾದ ದಲಿತರು ಮತ್ತು ಬುಡಕಟ್ಟು ಸಮುದಾಯಗಳೊಂದಿಗೆ ಹೇಗೆ ಮುಖಾಮುಖಿಗೊಂಡಿದೆ ಎನ್ನುವುದು ಮೂಲಭೂತವಾದ ಪ್ರಶ್ನೆ.

ಜಾಗತೀಕರಣ ಮತ್ತು ದಲಿತರು

1986ರ 8ನೇ ಉರುಗ್ವೆ ಸುತ್ತಿನ ಮಾತುಕತೆಯ ನಂತರ ಡೆಂಕಲ್ ಪ್ರಸ್ತಾವನೆಯನ್ನು ಅಂಗೀಕರಿಸಿ ಬ್ಯಾಂಕಿಂಗ್, ವಿಮೆ, ದೂರ ಸಂಪರ್ಕ, ಕೃಷಿ, ಬೌದ್ಧಿಕ ಆಸ್ತಿಯ ಹಕ್ಕು ಮತ್ತು ವ್ಯಾಪಾರಿ ಸಂಬಂದಿ ಮುಂತಾದ ಸೇವೆಗಳನ್ನು 'ಗ್ಯಾಟ್' ಪರಧಿಗೆ ತರಲಾಯಿತು. ಈ ಅನಿಷ್ಠ ವ್ಯೂಹದ ಮೂಲಕ ವಿವಿಧ ದೇಶಗಳು ತಮ್ಮ

ಆಂತರಿಕ ಸಂಗತಿಗಳಲ್ಲಿ ಹೊಂದಿದ್ದ ಸ್ವಾಯತ್ತತೆಯನ್ನು ಕಸಿದುಕೊಂಡವು. ಇದು ಜಾಗತೀಕರಣವೆನ್ನುವ ಹೆಸರು ಪಡೆಯಿತು. ಭಾರತ ಜಾಗತೀಕರಣವನ್ನು 1993ರ ಡಿಸೆಂಬರ್ 15ರಂದು ಒಪ್ಪಿಕೊಂಡಿತು. ಈ ಕಾಲಘಟ್ಟದ ಭಾರತದಲ್ಲಿ ಸುಮಾರು 27 ಕೋಟಿ ಇದ್ದ ಬಡತನ ರೇಖೆಯ ಕೆಳಗಿದ್ದವರ ಸಂಖ್ಯೆ ಇಂದು ದ್ವಿಗುಣಗೊಂಡಿದೆ. ಇದರ ಅರ್ಥ ಜಾಗತೀಕರಣವು ಕೆಲವರಿಗಷ್ಟೇ ಸಕಾರಾತ್ಮಕವಾಗಿ ಪ್ರಭಾವಿಸಿದ್ದು, ಬಹುಸಂಖ್ಯಾತರಿಗೆ ವಿಶೇಷವಾಗಿ ದಲಿತರು ಮತ್ತು ಬುಡಕಟ್ಟು ಸಮುದಾಯಗಳಿಗೆ ನಕಾರಾತ್ಮಕ ಪ್ರಭಾವ ಬೀರಿವೆ. ಹಾಗಾಗಿ ಜಾಗತೀಕರಣ ಬುಡಕಟ್ಟು ಜನಾಂಗಗಳ ವಿರೋಧಿ ನೀತಿಯಾಗಿ ಸಾಬೀತುಗೊಂಡಿದೆ. ಇಂದಿನ ಜಾಗತೀಕರಣ ಮಾನವೀಯತೆ ಮತ್ತು ನೈತಿಕತೆಯ ಬಗ್ಗೆ ಮಾತನಾಡುವುದಿಲ್ಲ. ಇದರ ಬದಲಾಗಿ ಶ್ರೀಮಂತ ರಾಷ್ಟ್ರಗಳಿಗೆ ಮತ್ತು ಶ್ರೀಮಂತ ವರ್ಗಗಳಿಗೆ ಈಗಾಗಲೇ ಹೊಂದಿರುವುದಕ್ಕಿಂತ ಹೆಚ್ಚು ಪ್ರಯೋಜನ ಪಡೆಯುವ ಕುರಿತು ಮಾತನಾಡುತ್ತದೆ. ಈ ಪ್ರಕ್ರಿಯೆಯಲ್ಲಿ ಇತರರು ಪಾಲ್ಗೊಳ್ಳುವ ಮೂಲಕ ಪ್ರಯೋಜನ ಪಡೆಯಬಹುದೆಂಬ ವಾದ ಮಂಡಿಸುತ್ತದೆ. ಆದರೆ ಇದು ದಲಿತ ಸಾಂಸ್ಕೃತಿಕ ಜೀವನಕ್ಕೆ ಸಂಬಂಧಿಸಿದಂತೆ ಯಾವ ಸಂಗತಿಗಳೂ ನಿಜವೆಂದು ಸಾಬೀತುಗೊಂಡಿಲ್ಲ. ಏಕೆಂದರೆ ಜಾಗತೀಕರಣ ಪೂರ್ವದಲ್ಲಿ ದಲಿತರಿಗೆ ಹಲವಾರು ರಕ್ಷಣಾತ್ಮಕ ಕ್ರಮಗಳು ಅಸ್ತಿತ್ವದಲ್ಲಿದ್ದವು. ಉದ್ಯೋಗ ಮತ್ತು ಉನ್ನತ ಶಿಕ್ಷಣದಲ್ಲಿ ದಲಿತರಿಗೆ ಪ್ರಮಾಣಾನುಗುಣ ಪ್ರಾತಿನಿಧ್ಯ, ಅಸ್ಪೃಶ್ಯತೆ ನಿಷೇಧ, ಹಕ್ಕುಗಳ ರಕ್ಷಣೆ, ದೌರ್ಜನ್ಯ ಪ್ರತಿಬಂಧಕ ಶಾಸನಗಳು ಹಾಗೂ ಭೂಸುಧಾರಣಾ ಶಾಸನಗಳು ಇದರ ಜೊತೆಗೆ ದಲಿತರ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸಬಲೀಕರಣಕ್ಕಾಗಿ ವಿಶೇಷ ಕಲ್ಯಾಣ ಕಾರ್ಯಕ್ರಮಗಳು ಅಸ್ತಿತ್ವದಲ್ಲಿದ್ದವು. ಇವುಗಳ ಅಸ್ತಿತ್ವದ ಹೊರತಾಗಿಯೂ ಅತಿಹೆಚ್ಚು ಬಡತನ ಬುಡಕಟ್ಟು ಸಮುದಾಯಗಳಲ್ಲಿ ಮಡವುಗಟ್ಟಿದೆ. 1950ರಲ್ಲಿ ಜಾರಿಗೊಂಡ ಭಾರತದ ಸಂವಿಧಾನದಲ್ಲಿ ದಲಿತರ ರಕ್ಷಣೆಗಾಗಿ ವಿವಿಧ ಕ್ರಮಗಳನ್ನು ಪ್ರಸ್ತಾಪಿಸಲಾಗಿದೆ. ಅವುಗಳನ್ನು ಮುಂದಿನ ಭಾಗದಲ್ಲಿ ಮಂಡಿಸಿದೆ.[3]

ವಿಶ್ವಸಂಸ್ಥೆ, ಭಾರತದ ಸಂವಿಧಾನ ಮತ್ತು ಮಾನವ ಹಕ್ಕುಗಳು

1948ರ ಡಿಸೆಂಬರ್ 10ರಂದು ವಿಶ್ವಸಂಸ್ಥೆಯ ಮಹಾಸಭೆಯು ಘೋಷಿಸಿದ ಮಾನವ ಹಕ್ಕುಗಳು ಘೋಷಣೆಯ ಪ್ರಕಾರ ಮಾನವರು ಸಮಾನವಾಗಿ ಹುಟ್ಟಿದರು. ಆದುದರಿಂದ ಹಕ್ಕು, ಘನತೆಗಳಲ್ಲಿ ಎಲ್ಲರೂ ಸಮಾನರಾಗಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯು ಜನನ, ವಾಸಸ್ಥಳದ ತಾರತಮ್ಯವಿಲ್ಲದೆ ಘೋಷಣೆಯಲ್ಲಿ ಉಲ್ಲೇಖಿಸಲಾದ ಎಲ್ಲಾ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳಿಗೆ ಅರ್ಹನಾಗಿರುತ್ತಾನೆ. ವ್ಯಕ್ತಿಯ ಕುಲ-ಗೋತ್ರ, ವರ್ಣ, ಲಿಂಗ, ಭಾಷೆ, ಧರ್ಮ ಮತ್ತು ರಾಜಕೀಯ ಅಥವಾ ಯಾವುದೇ ತತ್ವ ಸಿದ್ಧಾಂತ, ಯಾವುದೇ ತಾರತಮ್ಯವಿಲ್ಲದೇ ಪ್ರತಿಯೊಬ್ಬ ವ್ಯಕ್ತಿಗೂ ಸ್ವತಂತ್ರವಾಗಿ ಬದುಕುವ ಮತ್ತು ಜೀವರಕ್ಷಣೆ ಮಾಡಿಕೊಳ್ಳುವ ಹಕ್ಕು ಹೊಂದಿರುತ್ತಾನೆ. ಯಾರನ್ನೂ

ಗುಲಾಮರನ್ನಾಗಿ ಮಾಡಲಾಗದು. ಕಾನೂನಿನ ದೃಷ್ಟಿಯಲ್ಲಿ ಪ್ರತಿಯೊಬ್ಬನಿಗೂ ವ್ಯಕ್ತಿಯೆಂಬ ನೆಲೆಯಲ್ಲಿ ಒಂದು ಸ್ಥಾನವಿರುತ್ತದೆ. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಪ್ರತಿಯೊಬ್ಬ ವ್ಯಕ್ತಿಗೂ ಸಂವಿಧಾನ ಅಥವಾ ಕಾನೂನುದತ್ತವಾದ ಮೂಲಭೂತ ಹಕ್ಕುಗಳಿಗೆ ವ್ಯತಿರಿಕ್ತವಾದ ಕಾನೂನುಗಳ ವಿರುದ್ಧ, ಅಧಿಕಾರ ಹೊಂದಿದ ರಾಷ್ಟ್ರೀಯ ನ್ಯಾಯಮಂಡಳಿಯ ಮೂಲಕ ಕ್ರಮ ಕೈಗೊಳ್ಳುವ ಅಧಿಕಾರ ಪ್ರತಿಯೊಬ್ಬ ವ್ಯಕ್ತಿಯೂ ಹೊಂದಿರುತ್ತಾನೆ.[4] ಭಾರತದ ಮಾನವ ಹಕ್ಕುಗಳ ಕಾಯಿದೆ 1993ರ ಪ್ರಕಾರ ಜೀವನ ಸ್ವಾತಂತ್ರ್ಯ ಸಮಾನತೆ ಮತ್ತು ಘನತೆಗೆ ಹಕ್ಕುಗಳು ಸಂಬಂಧಿಸಿವೆ. ಸ್ವತಂತ್ರವಾಗಿ ಜನಿಸಿದ ವ್ಯಕ್ತಿ ಕಾನೂನಿನ ಚೌಕಟ್ಟಿನಲ್ಲಿ ಜೀವನ ನಡೆಸುವುದೇ ಅವನ ಹಕ್ಕು[5] ಮಾನವ ಹಕ್ಕುಗಳಲ್ಲಿ ವಿವಿಧ ಪ್ರಕಾರಗಳಿವೆ. ಅವುಗಳಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ನಾಗರೀಕ ಮುಂತಾದ ಪ್ರಕಾರಗಳನ್ನು ಕಾಣುತ್ತೇವೆ. ಇವುಗಳಲ್ಲಿ ಮುಖ್ಯವಾದವುಗಳನ್ನು ಮೂಲಭೂತ ಹಕ್ಕುಗಳೆಂದು ಪರಿಗಣಿತವಾಗುತ್ತವೆ. ಮಾನವನ ಅಭ್ಯುದಯಕ್ಕೆ ಅಗತ್ಯವಾದ, ಸಂವಿಧಾನದಲ್ಲಿ ಆಳವಡಿಸಲ್ಪಟ್ಟ ಹಾಗೂ ನ್ಯಾಯಾಲಯಗಳಿಂದ ರಕ್ಷಿಸಲ್ಪಟ್ಟ ಹಕ್ಕುಗಳನ್ನು ಮಾನವ ಹಕ್ಕುಗಳೆಂದು ಪರಿಭಾವಿಸಲಾಗುತ್ತಿದೆ. ಮಾನವನ ಜೀವನ ವಿಕಾಸದಲ್ಲಿ ಇವುಗಳ ಅಸ್ತಿತ್ವ ಮಹತ್ತರವಾದದ್ದು. ಜಸ್ಟೀಸ್ ಎಸ್.ಆರ್.ನಾಯಕರ ಪ್ರಕಾರ, ಮಾನವ ಹಕ್ಕುಗಳು ಜೀವನ ಸ್ವಾತಂತ್ರ್ಯಕ್ಕೆ ಅಗತ್ಯವಾಗಿವೆ. ಮನುಷ್ಯನ ಸಮಾನತೆ ಮತ್ತು ಘನತೆಗೆ ಇವುಗಳು ಪೂರಕವಾಗಿವೆ. ವ್ಯಕ್ತಿತ್ವದ ಬೆಳವಣಿಗೆ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಮಹತ್ತರ ಪಾತ್ರವಹಿಸುತ್ತವೆ. ಗುಲಾಮಗಿರಿ ಮತ್ತು ಅಮಾನುಷ ಸಂಕೋಲೆಗಳಿಂದ ವಿಮುಕ್ತಗೊಳಿಸುತ್ತವೆ. ವ್ಯಕ್ತಿ, ಗುಂಪು ಮತ್ತು ಸಮುದಾಯದ ಹಿತಾಸಕ್ತಿಗಳ ರಕ್ಷಣೆಗೆ ಸಹಕಾರಿಯಾಗಿದ್ದು, ವ್ಯಕ್ತಿಗಳು ಸಾಮಾಜಿಕ ಜವಾಬ್ದಾರಿ ಮತ್ತು ಕರ್ತವ್ಯಗಳಿಗೆ ಗಮನಕೊಡಲು ಮಾನವ ಹಕ್ಕುಗಳು ಉಪಯುಕ್ತವಾಗಿವೆ.[6]

ವಿಶ್ವಸಂಸ್ಥೆಯ ಇಂತಹ ಉದಾತ್ತ ಘೋಷಣೆಯ ಹಿನ್ನೆಲೆಯಲ್ಲಿ ಭಾರತದ ಸಂವಿಧಾನ ತನ್ನ ನಾಗರೀಕರಿಗೆ ಆರು ಮೂಲಭೂತ ಹಕ್ಕುಗಳನ್ನು ನೀಡಿದೆ. ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆ ವಿರುದ್ಧ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು ಮತ್ತು ಸಂವಿಧಾನಾತ್ಮಕ ಪರಿಹಾರ ಹಕ್ಕು ಮುಂತಾದ ಹಕ್ಕುಗಳನ್ನು ಸಂವಿಧಾನ ಬದ್ಧವಾಗಿ ನೀಡಲಾಗಿದೆ. ಈ ಮೂಲಭೂತ ಹಕ್ಕುಗಳನ್ನು ಪ್ರಜಾಪ್ರಭುತ್ವದ ಅಡಿಗಲ್ಲುಗಳಾಗಿದ್ದು, ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವೆಂದು ಪರಿಭಾವಿಸಲಾಗಿದೆ. ಸಂವಿಧಾನ ನಾಗರೀಕರಿಗೆ ನೀಡಿರುವ ಹಕ್ಕುಗಳು ಸಂವಿಧಾನ ಬದ್ಧವಾಗಿದ್ದರೂ ಅವುಗಳು ತನ್ನಿಂದ ತಾನೇ ಜನರ ಬಡತನ ನಿವಾರಣೆಯ ಅಸ್ತ್ರಗಳಾಗಿ ಪರಿವರ್ತಿತವಾಗುವುದಿಲ್ಲ. ಜನರ ಬಡತನ ನಿವಾರಣೆಗೆ ಸಂವಿಧಾನವು ಪ್ರಭುತ್ವಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವುದು ಅಗತ್ಯವಾಗುತ್ತದೆ. ಇಂತಹ ವ್ಯವಸ್ಥೆಯನ್ನು ಭಾರತದ ಸಂವಿಧಾನ ರೂಪಿಸಿದೆ. ಬಡತನ ನಿವಾರಣೆಗೆ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳನ್ನು ಮೂರನೇ

ಅಧ್ಯಾಯದ ಹಕ್ಕುಗಳಲ್ಲಿ ಮತ್ತು ನಾಲ್ಕನೆಯ ಅಧ್ಯಾಯದ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಬಿಂಬಿತವಾಗಿವೆ.

ಭಾರತದ ಬಡತನ ನಿವಾರಣೆಯ ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳು

ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವಿಲ್ಲದ ರಾಜಕೀಯ ಪ್ರಜಾಸತ್ತೆ ಯಾವಾಗಲೂ ಅಸ್ಥಿರವಾಗಿರುತ್ತದೆ. ಆರ್ಥಿಕ ಪ್ರಜಾಸತ್ತೆ ಸಾಮಾಜಿಕ ಸ್ಥಿರತೆಯನ್ನು ಬಲಿಷ್ಠಗೊಳಿಸಲು ಸಹಾಯ ಮಾಡುತ್ತದೆ. ಮಿಗಿಲಾಗಿ ಅದು ರಾಜಕೀಯ ಪ್ರಜಾಪ್ರಭುತ್ವದ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ.[7] ಎಂದು ಗ್ರಹಿಸಲಾಗುತ್ತದೆ. ಇಂತಹ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ಮತ್ತು ಬಡತನ ನಿರ್ಮೂಲನೆ ಮಾಡಲು ರಾಜ್ಯ ನಿರ್ದೇಶಕ ತತ್ವಗಳು ಪ್ರಭುತ್ವಗಳಿಗೆ ನಿರ್ದೇಶನ ನೀಡಿವೆ. ನಾವು ಜನತಾಂತ್ರಿಕ ಸಂವಿಧಾನವನ್ನು ಅಂಗೀಕರಿಸಿ ಎಪ್ಪತ್ತು ವರ್ಷಗಳನ್ನು ಪೂರೈಸಿದ್ದೇವೆ. ಭಾರತದ ಗಣರಾಜ್ಯದ ಅತ್ಯಂತ ಮಹತ್ವದ ಧ್ಯೇಯ ಧೋರಣೆಗಳನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಘೋಷಿಸಿಕೊಂಡಿದ್ದೇವೆ. ಅದರಲ್ಲಿ 'ಭಾರತ ಒಂದು ಸಾರ್ವಭೌಮ, ಸಮಾಜವಾದಿ, ಜನತಾಂತ್ರಿಕ ಗಣರಾಜ್ಯವೆಂದು' ಘೋಷಿಸಿದೆ. ಭಾರತದ ಎಲ್ಲಾ ನಾಗರೀಕರಿಗೆ 'ಸಾಮಾಜಿಕ, ಆರ್ಥಿಕ, ರಾಜಕೀಯ, ನ್ಯಾಯ, ಸ್ಥಾನಮಾನ ಮತ್ತು ಸದಾವಕಾಶಗಳ ಸಮಾನತೆ; ರಾಷ್ಟ್ರದ ಏಕತೆಯನ್ನು ರಕ್ಷಿಸಿ, ಭ್ರಾತೃತ್ವ ಭಾವನೆಯನ್ನು ವೃದ್ಧಿಸಿ, ವ್ಯಕ್ತಿಯ ಘನತೆ- ಗೌರವದ ಭದ್ರತೆಯನ್ನು ರಕ್ಷಿಸುವ8 ಮುಂತಾದುವುಗಳನ್ನು ಒದಗಿಸಿಕೊಡುವ ಪ್ರತಿಜ್ಞೆಯನ್ನು ಕೈಗೊಳ್ಳಲಾಗಿದೆ. ಪ್ರಜೆಗಳ ಬದುಕಿನಲ್ಲಿ ಅಂತರ್ಗತಗೊಂಡ ಆಳವಾದ ಬಡತನವನ್ನು ತೊಡೆದು ಹಾಕಲು ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳಲ್ಲಿ ಸೂಕ್ತ ನಿರ್ದೇಶನಗಳನ್ನು ಅಳವಡಿಸಲಾಗಿದ್ದರೂ ಜಾಗತೀಕರಣ ಬುಡಕಟ್ಟು ಸಮುದಾಯಗಳನ್ನು ಬಡತನದಲ್ಲಿಯೇ ಉಳಿಯುವಂತೆ ಮಾಡಿದೆ. ಮುಂದಿನ ಭಾಗದಲ್ಲಿ ಇದರ ಚರ್ಚೆಯನ್ನು ಮಂಡಿಸಿದೆ.

ಮೂಲಭೂತ ಹಕ್ಕುಗಳು ಮತ್ತು ಬಡತನ ನಿರ್ಮೂಲನೆ

ಸಂವಿಧಾನದ 21ನೇ ವಿಧಿಯ ಅನ್ವಯ ಯಾವುದೇ ವ್ಯಕ್ತಿಯ ಜೀವನ ಅಥವಾ ವೈಯಕ್ತಿಕ ಸ್ವಾತಂತ್ರ್ಯವನ್ನು ಕಾನೂನು ಬಾಹಿರವಾಗಿ ಕಸಿದುಕೊಳ್ಳುವಂತಿಲ್ಲ. 23(01)ನೇ ವಿಧಿ ಅನ್ವಯ ಬೇಗಾರ್ ಮತ್ತು ಇದೇ ರೀತಿಯ ಬಲವಂತ ದುಡಿಮೆಗಳನ್ನು ನಿಷೇಧಿಸಲಾಗಿದೆ. ಅನೈತಿಕ ಅಥವಾ ಇತರ ಉದ್ದೇಶಗಳಿಗಾಗಿ ಮಹಿಳೆಯರು, ಮಕ್ಕಳು ಮತ್ತು ಬಲಹೀನರನ್ನು ಶೋಷಣೆಗೆ ಒಳಪಡಿಸಬಾರದು. 24ನೇ ವಿಧಿ ಅನ್ವಯ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕಾರ್ಖಾನೆ, ಗಣಿ ಅಥವಾ ಅಪಾಯವನ್ನುಂಟು ಮಾಡುವ ಕೆಲಸದಲ್ಲಿ ನೇಮಿಸಬಾರದು. ಈ

ಎಲ್ಲಾ ವಿಧಿಗಳು ಸಂವಿಧಾನದ ಮೂರನೇ ಅಧ್ಯಾಯದ ಮೂಲಭೂತ ಹಕ್ಕುಗಳ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದ್ದು, ಇವುಗಳು ನಾಗರೀಕರು ಅನುಭವಿಸುತ್ತಿರುವ ಬಡತನ ನಿವಾರಣೆಯ ಅಸ್ತ್ರಗಳಾಗಿವೆ.[9] ಈ ನಿವಾರಣಾ ಅಸ್ತ್ರಗಳು ರಾಜ್ಯ ನಿರ್ದೇಶಕ ತತ್ವಗಳಲ್ಲಿಯೂ ಮುಂದುವರೆದಿವೆ.

ರಾಜ್ಯ ನಿರ್ದೇಶಕ ತತ್ವಗಳು ಮತ್ತು ಬಡತನ ನಿರ್ಮೂಲನೆ

ರಾಜ್ಯ ನಿರ್ದೇಶಕ ತತ್ವಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವ ಹಕ್ಕುಗಳು ಇಲ್ಲವಾದರೂ ಇವುಗಳು ದೇಶದ ಆಡಳಿತಕ್ಕೆ ಮೂಲಭೂತ ನಿಯಮಗಳಾಗಿವೆ. ಈ ನಿಮಯಗಳು ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರವನ್ನು ಕಡಿಮೆ ಮಾಡಿ ಸಮಾಜವಾದಿ ಸಮಾಜವನ್ನು ಸ್ಥಾಪಿಸುವಲ್ಲಿ ಕ್ರಿಯಾಶೀಲವಾಗಿವೆ ಮತ್ತು ಸಮಾಜದಲ್ಲಿ ಅಂತರ್ಗತಗೊಂಡ ಬಡತನ ನಿರ್ಮೂಲನೆಯ ಪ್ರಬಲ ಅಸ್ತ್ರವಾಗಿವೆ. 38(1) ನೇ ವಿಧಿಯ ಪ್ರಕಾರ ರಾಜ್ಯವು ಪ್ರಜೆಗಳ ಕಲ್ಯಾಣವನ್ನು ಸಾಧಿಸಲು ಪ್ರಯತ್ನಿಸಿ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ಉಂಟಾಗುವಂತೆ ಮಾಡಬೇಕು. 39ನೇ ವಿಧಿಯ ಅನ್ವಯ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ರಾಜ್ಯವು ನಿಯಮಗಳನ್ನು ರೂಪಿಸಬೇಕು.

1) ಎಲ್ಲಾ ಪೌರರಿಗೂ ಸಮಾನವಾಗಿ ಜೀವನಕ್ಕೆ ಬೇಕಾಗುವ ಸಾಧನಗಳನ್ನು ಒದಗಿಸತಕ್ಕದ್ದು.

2) ಸಮಾಜದ ಭೌತಿಕ ಸಂಪನ್ಮೂಲಗಳ ಒಡೆತನ ಮತ್ತು ನಿಯಂತ್ರಣಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ವಿತರಣೆ ಮಾಡುವುದು.

3) ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಕೆಲವರಲ್ಲೇ ಕೇಂದ್ರೀಕೃತವಾಗದಂತೆ ಆರ್ಥಿಕ ಪದ್ಧತಿಯನ್ನು ಅನುಸರಿಸುವುದು.

4) ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದು.

5) ಕಾರ್ಮಿಕರ, ಮಕ್ಕಳ ಆರೋಗ್ಯ ಹಾಗೂ ಶಕ್ತಿಯನ್ನು ದುರುಪಯೋಗ ಪಡಿಸಬಾರದು ಹಾಗೂ ಹಣದ ಅವಶ್ಯಕತೆಯಿಂದ ವಯಸ್ಸು ಮತ್ತು ದೇಹಶಕ್ತಿಗೆ ಸರಿಯಲ್ಲದ ಕೆಲಸವನ್ನು ಮಾಡುವಂತೆ ಪ್ರಜೆಗಳನ್ನು ಬಲತ್ಕಾರ ಮಾಡಬಾರದು, ಹಾಗೂ

6) ಮಕ್ಕಳು ಆರೋಗ್ಯವಾಗಿ ಬೆಳೆಯಲು ಅವಕಾಶಗಳನ್ನು ಮತ್ತು ಸೌಲಭ್ಯ ನೀಡಿ ಅವರ ಸ್ವಾತಂತ್ರ್ಯ ಮತ್ತು ವ್ಯಕ್ತಿತ್ವದ ಬೆಳವಣಿಗೆಗಳಿಗೆ ಅನುಕೂಲಗಳನ್ನು ಉಂಟು ಮಾಡಬೇಕು ಎಂದು ಸ್ಪಷ್ಟಪಡಿಸಿದೆ.

ಅದೇ ಪ್ರಕಾರ ರಾಜ್ಯ ನಿರ್ದೇಶಕ ತತ್ವಗಳ 41ನೇ ವಿಧಿಯ ಪ್ರಕಾರ

ವಿದ್ಯಾಭ್ಯಾಸದ ಹಕ್ಕುಗಳಿಗೆ ಬೇಕಾದ ನಿಯಮಗಳನ್ನು ರೂಪಿಸಲು ಪ್ರಯತ್ನಿಸಿ ನಿರುದ್ಯೋಗಿಗಳಿಗೆ, ವೃದ್ಧರಿಗೆ, ರೋಗಿಗಗಳಿಗೆ ಮತ್ತು ವಿಕಲಚೇತನರಿಗೆ ಹಣ ಸಹಾಯ ಮಾಡತಕ್ಕದ್ದು ಎಂದು ತಿಳಿಸುತ್ತದೆ. ಕೆಲಸಕ್ಕೆ ಬೇಕಾಗುವ ಅಗತ್ಯ ಮತ್ತು ಮಾನವೀಯ ಪರಿಸ್ಥಿತಿಗಳನ್ನು ಮತ್ತು ಹೆರಿಗೆ ಸೌಲಭ್ಯವನ್ನು ರಾಜ್ಯ ಒದಗಿಸಬೇಕೆಂದು 42ನೇ ವಿಧಿ ತಿಳಿಸುತ್ತದೆ. 43ನೇ ವಿಧಿಯ ಪ್ರಕಾರ ಎಲ್ಲಾ ರೀತಿಯ ಕಾರ್ಮಿಕರಿಗೆ ಉತ್ತಮ ಜೀವನವನ್ನು ನಡೆಸಲು ವಿರಾಮ, ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕ ಅವಕಾಶಗಳನ್ನು ಅನುಭವಿಸಲು ರಾಜ್ಯ ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಪ್ರಯತ್ನಿಸತಕ್ಕದ್ದು. 45ನೇ ವಿಧಿಯ ಪ್ರಕಾರ ಆರು ವರ್ಷದವರೆಗೆ ಎಲ್ಲಾ ಮಕ್ಕಳಿಗೆ ಬಾಲ್ಯ ಪೋಷಣೆ ಮತ್ತು ಶಿಕ್ಷಣವನ್ನು ಕೊಡಲು ರಾಜ್ಯವು ಪ್ರಯತ್ನಿಸಬೇಕು. ಹಿಂದುಳಿದವರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ವಿದ್ಯಾಭ್ಯಾಸ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಅಭಿವೃದ್ಧಿಗೊಳಿಸಿ, ಈ ವರ್ಗಗಳ ಜನರನ್ನು ಸಾಮಾಜಿಕ ಅನ್ಯಾಯ ಮತ್ತು ಎಲ್ಲಾ ರೀತಿಯ ಶೋಷಣೆಗಳಿಂದ ರಾಜ್ಯವು ರಕ್ಷಿಸಬೇಕೆಂದು 46ನೇ ವಿಧಿ ಸ್ಪಷ್ಟಪಡಿಸುತ್ತದೆ. 47ನೇ ವಿಧಿಯು ಪ್ರಜೆಗಳ ಪೌಷ್ಠಿಕ ಆಹಾರ ಪದಾರ್ಥಗಳ ಮತ್ತು ಜೀವನ ಮಟ್ಟವನ್ನು ಹೆಚ್ಚಿಸುವುದು ಹಾಗೂ ಸಾರ್ವಜನಿಕ ನೈರ್ಮಲ್ಯವನ್ನು ಕಾಪಾಡುವುದು ತನ್ನ ಆದ್ಯ ಕರ್ತವ್ಯವೆಂದು ರಾಜ್ಯವು ಭಾವಿಸಿ ಆರೋಗ್ಯಕ್ಕೆ ಮಾರಕವಾದ ಪಾನೀಯಗಳನ್ನು ನಿಷೇಧಿಸಿ ಮದ್ಯಪಾನವನ್ನು ಜಾರಿಗೆ ತರಬೇಕೆಂದು ರಾಜ್ಯವನ್ನು ಒತ್ತಾಯಿಸುತ್ತದೆ.[10] ಈ ರೀತಿಯಾಗಿ ನಮ್ಮ ಸಂವಿಧಾನವು ಭಾರತದ ಗಣರಾಜ್ಯ ಸ್ಥಾಪಿಸುವುದರ ಮೂಲಭೂತ ಉದ್ದೇಶವನ್ನು ಸ್ಪಷ್ಟವಾಗಿ ನಿರೂಪಿಸಿದೆ. ಬದುಕಿನ ಹಕ್ಕನ್ನು ಅರ್ಥಪೂರ್ಣವಾಗಿ ಪರಿಣಾಮಕಾರಿಯಾಗಿಸುವುದಷ್ಟೇ ಅಲ್ಲ ಎಲ್ಲಾ ಆರ್ಥಿಕ ಅಸಮಾನತೆಯನ್ನು ನಿರ್ಮೂಲನೆ ಮಾಡಿ ವ್ಯಕ್ತಿಯ ಘನತೆ ಮತ್ತು ಗೌರವದ ಸಮಾನತೆಯ ಬದುಕಿಗೆ ಅವಶ್ಯವಿರುವ ಎಲ್ಲಾ ಅನುಕೂಲಗಳನ್ನು ಸೃಷ್ಟಿಸುವ ಮತ್ತು ಅವಕಾಶಗಳನ್ನೊದಗಿಸುವ ಕಾಯ್ದೆಬದ್ಧ ಜವಾಬ್ದಾರಿಯನ್ನು ಪ್ರಭುತ್ವಗಳ ಹೆಗಲ ಮೇಲೆ ಸಂವಿಧಾನ ಇಟ್ಟಿದೆ. ಸಂವಿಧಾನದ ಆಶಯಗಳು ಇಂದು ಕಾರ್ಯಗತಗೊಂಡಿದೆಯೇ? ಎನ್ನುವುದು ಇಂದಿನ ಮುಖ್ಯವಾದ ಪ್ರಶ್ನೆ. ಇಂದಿನ ದೇಶದ ವಾಸ್ತವಿಕ ಚಿತ್ರಣ ಈ ಪ್ರಶ್ನೆಗೆ ನಕಾರಾತ್ಮಕ ಉತ್ತರ ನೀಡುತ್ತವೆ. ಬಡತನ ಇಂದಿಗೂ ನಿರ್ಲಕ್ಷಿತ ಸಮುದಾಯಗಳಲ್ಲಿ ಅಂತರ್ಗತಗೊಂಡಿದೆ ಎನ್ನುವುದು ಸ್ಪಷ್ಟ. ಇದರ ಪ್ರಮುಖ ಕಾರಣ ಜಾಗತೀಕರಣ ಎನ್ನುವುದು ನಿರ್ವಿವಾದ ಬುಡಕಟ್ಟು ಸಮುದಾಯಗಳಿಗೆ ಸಂವಿಧಾನಾತ್ಮಕ ರಕ್ಷಣೆ ನೀಡಿದಾಗ್ಯೂ ದಲಿತರ ಭೂ ಒಡೆತನದ ಮೇಲೆ ಜಾಗತೀಕರಣವು ಕರಾಳ ಛಾಯೆಯನ್ನು ವ್ಯಾಪಿಸಿರುವುದನ್ನು ನೋಡಬಹುದಾಗಿದೆ. ದಲಿತರು ಇಂದು ಭೂಹೀನರಾಗುತ್ತಿರುವ ಸಂಗತಿಯನ್ನು ಸರ್ಕಾರದ ವರದಿಗಳೇ ಬಹಿರಂಗ ಪಡಿಸುತ್ತವೆ.

ಜಾಗತೀಕರಣ ಮತ್ತು ದಲಿತರ ಭೂ ಒಡೆತನದ ಹಕ್ಕು

"ನಿಮಗೆ ಭೂಮಿ ಇಲ್ಲ. ಏಕೆಂದರೆ ಬೇರೆಯವರು ಅದನ್ನು ಕಬಳಿಸಿದ್ದಾರೆ; ನಿಮಗೆ ಸ್ಥಾನಮಾನವಿಲ್ಲ. ಏಕೆಂದರೆ ಅದನ್ನು ಬೇರೆಯವರು ಏಕಸ್ವಾಮ್ಯಪಡಿಸಿಕೊಂಡಿದ್ದಾರೆ. ವಿಧಿಯನ್ನೆಂದೂ ನಂಬಬೇಡಿ. ನಿಮ್ಮ ಶಕ್ತಿಯಲ್ಲಿ ನಂಬಿಕೆ ಇಡಿ." ಇದು 20ನೇ ಶತಮಾನದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ದಲಿತರ ಸ್ಥಾನಮಾನದ ಬಗ್ಗೆ ಕಂಡುಕೊಂಡ ಸತ್ಯವನ್ನು ಜಾಗತೀಕರಣದ ಬೆಳಕಿನಲ್ಲಿ ಪರಾಮರ್ಶಿಸಬೇಕಾದ ಅಗತ್ಯ ಇಂದು ಹೆಚ್ಚಾಗಿದೆ. 1986ರ ವಿಶ್ವ ಬ್ಯಾಂಕ್ ವರದಿ ಹೇಳಿರುವ ಪ್ರಕಾರ ಕೃಷಿ ಉತ್ಪನ್ನದ ವಿವಿಧ ಹಂತಗಳಾದ ಉತ್ಪತ್ತಿ, ಸೇವನೆ, ಮತ್ತು ಮಾರುಕಟ್ಟೆ ವ್ಯವಸ್ಥೆಯಲ್ಲಿ ಸರ್ಕಾರ ಭಾಗಿದಾರರಾಗಿರುವುದರಿಂದ ಅದಕ್ಷತೆಗೆ ಕಾರಣವಾಗಿ ಕೃಷಿ ಇಳುವರಿ ಮತ್ತು ಆದಾಯ ಕುಂಠಿತಗೊಂಡಿದೆ. ಈ ಹಿನ್ನೆಲೆಯಲ್ಲಿ ವಿಶ್ವಬ್ಯಾಂಕ್ ಭಾರತಕ್ಕೆ ಕೆಲವು ನೀತಿಗಳನ್ನು ಅನುಸರಿಸಲು ಕೋರಿಕೊಂಡಿದೆ. ಅವುಗಳೆಂದರೆ, ಭೂಮಿತಿ ಕಾಯ್ದೆಯನ್ನು ರದ್ದುಪಡಿಸುವುದು, ಕೈಗಾರಿಕಾ ಉದ್ದೇಶಗಳಿಗಾಗಿ ಭೂಮಿ ತ್ವರಿತವಾಗಿ ಪಡೆಯಲು ಕಾನೂನುಗಳನ್ನು ಸಡಿಲಗೊಳಿಸುವುದು. ಹೂಡಿಕೆದಾರರಿಗೆ ಸರ್ಕಾರಿ ಜಮೀನನ್ನು ಒದಗಿಸುವುದು, ದೊಡ್ಡ ಕೈಗಾರಿಕೆಗಳಿಗಾಗಿ ರಾಜ್ಯ ನಡಾವಳಿಗಳು ಭೂ ಪರಿವರ್ತನೆಯನ್ನು ಅನುಮೋದಿಸುವುದು ಮತ್ತು ಸರ್ಕಾರಿ ಇಲಾಖೆಗಳಲ್ಲಿರುವ ಭೂ ಗುತ್ತಿಗೆ/ಮಾರಾಟದ ಶುಲ್ಕವನ್ನು ಪರಿಶೀಲಿಸುವುದು. ಭಾರತ ಸರ್ಕಾರವು ಜಾಗತೀಕರಣದ ಒತ್ತಡದಿಂದಾಗಿ ದಲಿತ ವಿರೋಧಿ ಕ್ರಮಗಳನ್ನು ಅನುಸರಿಸಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಭೂ ಸುಧಾರಣಾ ಕ್ರಮಗಳನ್ನು ತಡೆಹಿಡಿಯಲಾಗಿದೆ. ಭೂ ಒಡೆತನ ಮಿತಿಯನ್ನು ಹಿಂಪಡೆಯಲಾಗಿದೆ. ಸಣ್ಣ ಗೇಣಿದಾರರಿಗೆ ನೀಡುತ್ತಿದ್ದ ಪ್ರೋತ್ಸಾಹವನ್ನು ನಿಲ್ಲಿಸಲಾಗಿದೆ. ತಾಂತ್ರಿಕ ಮತ್ತು ವೃತ್ತಿ ಶಿಕ್ಷಣದಲ್ಲಿ ಖಾಸಗಿಯವರಿಗೆ ಪ್ರವೇಶ ನೀಡಿರುವುದರಿಂದ ಇವುಗಳು ದಲಿತರಿಗೆ ದುಬಾರಿಯಾಗಿವೆ. ಬಡ ದಲಿತರು ಖಾಸಗೀ ಕಂಪನಿಗಳನ್ನು ಪ್ರವೇಶಿಸುವುದು ಕಷ್ಟಕರವಾಗಿದೆ, ಇದರ ಜೊತೆಗೆ ಕೈಗಾರಿಕೆ, ಬ್ಯಾಂಕಿಂಗ್, ವಿಮೆ ಮುಂತಾದವುಗಳನ್ನು ಖಾಸಗೀಕರಿಸಲಾಗಿದ್ದು, ಇವುಗಳು ದಲಿತರ ಪರವಾಗಿ ಕಾರ್ಯನಿರ್ವಹಿಸುತ್ತಿಲ್ಲ. ದಲಿತರ ಬಡತನ ನಿವಾರಣಾ ಯೋಜನೆಗಳಿಗೆ ಸರ್ಕಾರ ವೆಚ್ಚ ಕಡಿತಗೊಳಿಸಿದೆ. ಈ ಎಲ್ಲಾ ಕಾರಣಗಳಿಂದಾಗಿ ಬಡತನವು ದಲಿತರು ಮತ್ತು ಬುಡಕಟ್ಟು ಸಮುದಾಯಗಳಲ್ಲಿ ಮಡುವುಗಟ್ಟಿದೆ. ಭಾರತೀಯ ಸಮಾಜ ಖಂಡರೂಪಿಯಾಗಿದ್ದು, ಜಾತಿ, ವರ್ಗ, ಲಿಂಗ ಮತ್ತು ಪ್ರಾದೇಶಿಕವಾರು ವಿಭಜಿಸಲ್ಪಟ್ಟಿದ್ದು, ಶ್ರೇಣೀಕೃತವಾಗಿ ರೂಪಗೊಂಡಿದೆ. ಶತಮಾನಗಳಿಂದ ಸ್ಥಿರತೆಯನ್ನು ಕಾಯ್ದುಕೊಂಡಿರುವ ಈ ವ್ಯವಸ್ಥೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ಸತ್ವಯುತ ಸ್ವಾತಂತ್ರ್ಯದಿಂದ ವಂಚಿತರಾಗಿದ್ದಾರೆ. ಬಯಸದ ದುಡಿಮೆಯನ್ನು ಇಂದಿಗೂ ನಿರ್ವಹಿಸುತ್ತಿದ್ದಾರೆ. ಅಭಿವೃದ್ಧಿ ಸ್ವಾತಂತ್ರ್ಯ ಮತ್ತು ಸಮಾನತೆ ಮೇಲ್‌ಸ್ತರದ ಸಮುದಾಯಗಳಲ್ಲಿ ಮಡುವುಗಟ್ಟಿದೆ. ಹಾಗಾಗಿ ಬಡತನವು ದುರ್ಬಲ ವರ್ಗಗಳಲ್ಲಿ ಕೇಂದ್ರೀಕೃತಗೊಂಡಿದೆ. ಭಾರತದ ಮತ್ತು

ಕರ್ನಾಟಕದ ಸಂದರ್ಭದಲ್ಲಿ ವಿವಿಧ ಸಮುದಾಯಗಳಲ್ಲಿ ಕೇಂದ್ರೀಕರಣಗೊಂಡಿರುವ ಬಡತನವನ್ನು ಮುಂದಿನ ಭಾಗದಲ್ಲಿ ಮಂಡಿಸಿದೆ.

ಗ್ರಾಮೀಣ ಬಡತನ ಮತ್ತು ಬುಡಕಟ್ಟು ಸಮುದಾಯಗಳು

ಕರ್ನಾಟಕ ಸರ್ಕಾರ ಪ್ರಕಟಿಸಿರುವ 2003–04ರ ಆರ್ಥಿಕ ಸಮೀಕ್ಷೆಯಲ್ಲಿ ಅಭಿವೃದ್ಧಿಯು ಉನ್ನತ ಜಾತಿ ವರ್ಗಗಳಲ್ಲಿ ಕೇಂದ್ರೀಕರಣಗೊಂಡಿದ್ದರೆ, ಬಡತನವು ಕೆಳಜಾತಿಗಳಲ್ಲಿ ಮಡುವುಗಟ್ಟಿದೆ. ಸರ್ಕಾರದ ಆರ್ಥಿಕ ಸಮೀಕ್ಷೆಯ ಪ್ರಕಾರ ಗ್ರಾಮೀಣ ಭಾರತಕ್ಕೆ ಸಂಬಂಧಿಸಿದಂತೆ ಬಡತನದ ಪ್ರಮಾಣವು ಪರಿಶಿಷ್ಟ ಜಾತಿಗಳಲ್ಲಿ ಶೇ.38.82 ರಷ್ಟು, ಪರಿಶಿಷ್ಟ ವರ್ಗಗಳಲ್ಲಿ ಶೇ.45.12 ರಷ್ಟು, ಹಿಂದುಳಿದ ಜಾತಿಗಳಲ್ಲಿ 27.46 ರಷ್ಟು ಮತ್ತು ಇತರೆ ಜಾತಿಗಳಲ್ಲಿ ಶೇ.15.52 ರಷ್ಟು ಕೇಂದ್ರೀಕೃತಗೊಂಡಿದೆ. ಕರ್ನಾಟಕದ ಗ್ರಾಮೀಣ ಪ್ರದೇಶದ ಅಂಕಿ–ಅಂಶಗಳು ಹೇಳುವ ಪ್ರಕಾರ ಕರ್ನಾಟಕದ ಪರಿಶಿಷ್ಟ ಜಾತಿಗಳಲ್ಲಿ ಶೇ.26.87 ರಷ್ಟು, ಪರಿಶಿಷ್ಟ ವರ್ಗಗಳಲ್ಲಿ ಶೇ.24.78ರಷ್ಟು ಮತ್ತು ಇತರೆ ಜಾತಿಗಳಲ್ಲಿ ಶೇ.12.11 ಬಡತನ ಕೇಂದ್ರೀಕೃತಗೊಂಡಿದೆ. ಸರ್ಕಾರ ಪ್ರಕಟಿಸಿರುವ ಅಂಕಿ–ಅಂಶಗಳೇ ಕುತೂಹಲಕಾರಿ ಸಂಗತಿಗಳನ್ನು ಸ್ಪಷ್ಟವಾಗುತ್ತವೆ. ರಾಷ್ಟ್ರೀಯ ಮಟ್ಟದ ಗ್ರಾಮೀಣ ಪ್ರದೇಶಗಳಲ್ಲಿ ಅತೀ ಹೆಚ್ಚು ಬಡತನ ಪರಿಶಿಷ್ಟ ಪಂಗಡಗಳಲ್ಲಿ ಮಡುವುಗಟ್ಟಿದೆ. ಪರಿಶಿಷ್ಟ ಜಾತಿಗಳು ಬಡತನದಲ್ಲಿ ಎರಡನೆಯ ಸ್ಥಾನವನ್ನು, ಹಿಂದುಳಿದವರು ಮೂರನೇ ಸ್ಥಾನದಲ್ಲೂ ಮತ್ತು ಇತರೆ ಜಾತಿಗಳು ಬಡತನದಲ್ಲಿ ಕೊನೆಯ ಸ್ಥಾನದಲ್ಲಿವೆ. ಭಾರತ ಮತ್ತು ಕರ್ನಾಟಕದ ನಗರ ಪ್ರದೇಶದ ಬಡತನದ ಶ್ರೇಣೀಕರಣದಲ್ಲಿ ಹೆಚ್ಚು ವ್ಯತ್ಯಾಸವಿಲ್ಲ.[11] ಅದರ ಚರ್ಚೆಯನ್ನು ಮುಂದಿನ ಭಾಗದಲ್ಲಿ ಮಂಡಿಸಿದೆ.

ನಗರ ಬಡತನ : ಭಾರತ ಮತ್ತು ಕರ್ನಾಟಕದ ಶ್ರೇಣೀಕರಣ

ಬಡತನದ ಶ್ರೇಣೀಕರಣಕ್ಕೆ ಸಂಬಂಧಿಸಿದಂತೆ ಅಂಕಿ–ಅಂಶಗಳು ಹೇಳುವ ಪ್ರಕಾರ, ಭಾರತದ ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿಗಳಲ್ಲಿ ಶೇ. 38.12 ರಷ್ಟು, ಪರಿಶಿಷ್ಟ ವರ್ಗಗಳಲ್ಲಿ ಶೇ.35.29 ರಷ್ಟು, ಹಿಂದುಳಿದ ಜಾತಿಗಳಲ್ಲಿ ಶೇ.26.69ರಷ್ಟು ಮತ್ತು ಇತರೆ ಜಾತಿಗಳಲ್ಲಿ ಶೇ.16.15 ರಷ್ಟು ಬಡವರಿದ್ದಾರೆ. ಕರ್ನಾಟಕದ ಅಂಕಿ–ಅಂಶಗಳು ರಾಷ್ಟ್ರೀಯ ಚಿತ್ರಣಕ್ಕಿಂತ ಭಿನ್ನವಾಗಿಲ್ಲ. ಕರ್ನಾಟಕದ ನಗರಗಳಲ್ಲಿ ಪರಿಶಿಷ್ಟ ಜಾತಿಗಳಲ್ಲಿ ಶೇ.47.50 ರಷ್ಟು, ಪರಿಶಿಷ್ಟ ವರ್ಗಗಳಲ್ಲಿ ಶೇ.59.93 ರಷ್ಟು, ಹಿಂದುಳಿದ ವರ್ಗಗಳಲ್ಲಿ ಶೇ.29.09 ರಷ್ಟು, ಮತ್ತು ಇತರೆ ಜಾತಿಗಳಲ್ಲಿ ಶೇ.16.81 ರಷ್ಟು ಬಡತನವಿದೆ. ಭಾರತದ ಗ್ರಾಮೀಣ ಭಾಗಗಳಲ್ಲಿ ಅತೀ ಹೆಚ್ಚು ಬಡತನ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಗಳಲ್ಲಿ ಮಡುವುಗಟ್ಟಿದೆ. ಅದೇ ರೀತಿ ನಗರ ಭಾಗಗಳಲ್ಲಿಯೂ ಬಡತನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಕೇಂದ್ರೀಕೃತಗೊಂಡಿದೆ. ಕರ್ನಾಟಕವು ಇದಕ್ಕೆ ಹೊರತಾಗಿಲ್ಲ. ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿ ಅತೀ

ಹೆಚ್ಚು ಬಡತನ ಮಡುವುಗಟ್ಟಿದೆ. ಜಾಗತೀಕರಣದ ನಕಾರಾತ್ಮಕ ಪ್ರಭಾವದಿಂದಾಗಿ ದಲಿತರು ಮತ್ತು ಬುಡಕಟ್ಟು ಸಮುದಾಯಗಳು ನಿರ್ವಹಿಸುವ ವೃತ್ತಿಗಳಲ್ಲೂ ಬಡತನ ಕೇಂದ್ರೀಕೃತಗೊಂಡಿದೆ. ಅದರ ವಿಶ್ಲೇಷಣೆಯನ್ನು ಮುಂದಿನ ಭಾಗದಲ್ಲಿ ಮಂಡಿಸಿದೆ.

ವೃತ್ತಿ ಸಂಬಂಧಿ ಬಡತನ: ಭಾರತ ಮತ್ತು ಕರ್ನಾಟಕದಲ್ಲಿ ಶ್ರೇಣೀಕರಣ

ಅಭಿವೃದ್ಧಿ, ಸ್ವಾತಂತ್ರ್ಯ, ಬಡತನ ಮತ್ತು ಸಾಕ್ಷರತೆಯನ್ನು ಭಾರತೀಯ ಸಮಾಜದಲ್ಲಿ ಅಖಂಡವಾಗಿ ಪರಿಭಾವಿಸಿಕೊಳ್ಳುವುದು ಕಷ್ಟಕರ ಸಂಗತಿಯಾಗಿದೆ. ಭಾರತದ ಸಂದರ್ಭದಲ್ಲಿ ಇವುಗಳು ಜಾತಿ ಶ್ರೇಣೀಕರಣಕ್ಕೆ ಅನುಗುಣವಾಗಿ ರೂಪುಗೊಳ್ಳುತ್ತವೆ. ಬಡತನವು ಸಂಪೂರ್ಣವಾಗಿ ನಿವಾರಣೆಯಾದರೂ ಕೆಳಜಾತಿಗಳಲ್ಲಿ ಅದರ ನಿವಾರಣೆ ಅಸಾಧ್ಯ. ಬಡತನವು ಜಾತಿಗನುಗುಣವಾಗಿ ರೂಪುಗೊಂಡಂತೆ, ಅದು ವೃತ್ತಿಗನುಗುಣವಾಗಿ ರೂಪುಗೊಳ್ಳುತ್ತದೆ.

ಗ್ರಾಮೀಣ ವೃತ್ತಿ ಬಡತನ: ಭಾರತ ಮತ್ತು ಕರ್ನಾಟಕದ ಚಿತ್ರಣ

ಕರ್ನಾಟಕ ಸರ್ಕಾರದ 2003–04 ರ ಆರ್ಥಿಕ ಸಮೀಕ್ಷೆಯ ಅಂಕಿ–ಅಂಶಗಳು ಹೇಳುವಂತೆ ಭಾರತದ ಗ್ರಾಮೀಣ ಭಾಗದಲ್ಲಿ ಅತೀ ಹೆಚ್ಚು ಬಡತನ ಶೇ.41.46 ರಷ್ಟು ಕೃಷಿ ಕೂಲಿಕಾರರಲ್ಲಿ, ಶೇ. 27.01ರಷ್ಟು ಇತರೆ ದುಡಿಮೆಗಾರರಲ್ಲಿ, ಶೇ.23.78 ರಷ್ಟು ಕೃಷಿಯೇತರ ಸ್ವಯಂ ಉದ್ಯೋಗ ಹೊಂದಿರುವವರಲ್ಲಿ ಮತ್ತು ಶೇ.20.43 ರಷ್ಟು ಕೃಷಿ ಸ್ವಯಂ ಉದ್ಯೋಗ ಹೊಂದಿರುವವರು ಬಡತನ ಹೊಂದಿದ್ದಾರೆ. ಕರ್ನಾಟಕದಲ್ಲೂ ಶೇ.25.05 ರಷ್ಟು ಕೃಷಿ ಕೂಲಿಕಾರರಲ್ಲಿ ಶೇ. 19.29ರಷ್ಟು ಇತರೆ ದುಡಿಮೆಗಾರರಲ್ಲಿ, ಶೇ.13.12ರಷ್ಟು ಕೃಷಿಯೇತರ ಸ್ವಯಂ ಉದ್ಯೋಗದಾರರಲ್ಲಿ ಮತ್ತು ಕೃಷಿ ಸ್ವಯಂ ಉದ್ಯೋಗದಾತರಲ್ಲಿ ಶೇ.12.57 ರಷ್ಟು ಬಡತನ ಕಂಡು ಬರುತ್ತದೆ. ನಗರ ಭಾಗದಲ್ಲೂ ಬಡತನದ ಈ ಚಿತ್ರಣ ಮುಂದುವರೆದಿದೆ.

ನಗರ ವೃತ್ತಿ ಬಡತನ : ಭಾರತ ಮತ್ತು ಕರ್ನಾಟಕದ ಸನ್ನಿವೇಶ

ಭಾರತದ ನಗರ ಮಟ್ಟದಲ್ಲಿ ಹಂಗಾಮಿ ನೌಕರರಲ್ಲಿ ಶೇ.50.98 ರಷ್ಟು, ಸ್ವಯಂ ಉದ್ಯೋಗದಾರರಲ್ಲಿ ಶೇ.27.46 ರಷ್ಟು, ಶೇ.17.45 ರಷ್ಟು ಇತರೆ ಉದ್ಯೋಗದಾರರಲ್ಲಿ ಬಡತನ ಕೇಂದ್ರೀಕೃತಗೊಂಡಿದೆ. ಕರ್ನಾಟಕದ ಸಂದರ್ಭದಲ್ಲಿ ಅಂಕಿ–ಅಂಶಗಳು ಹೇಳುವ ಪ್ರಕಾರ ನಗರ ಪ್ರದೇಶಗಳಲ್ಲೂ ಶೇ.52.98 ರಷ್ಟು ಹಂಗಾಮಿ ನೌಕರರಲ್ಲಿ ಶೇ.27.91 ರಷ್ಟು ಸ್ವಯಂ ಉದ್ಯೋಗದಾತರಲ್ಲಿ ಮತ್ತು ಶೇ.17.45 ರಷ್ಟು ಇತರೆ ಉದ್ಯೋಗದಾತರಲ್ಲಿ ಬಡತನ ಕಂಡು ಬರುತ್ತದೆ. ಸರ್ಕಾರದ ದತ್ತಾಂಶಗಳು ಹೇಳುವ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಭೂರಹಿತ ಕೂಲಿ ಕಾರ್ಮಿಕರಲ್ಲಿ ಬಡತನದ ಪ್ರಮಾಣವು ಅತ್ಯಧಿಕವಾಗಿದ್ದರೆ, (ಶೇ.41.46) ನಗರ ಪ್ರದೇಶದಲ್ಲಿ ಅದು ಹಂಗಾಮಿ

ನೌಕರ ವರ್ಗದಲ್ಲಿ ಅಧಿಕವಾಗಿದೆ. (ಶೇ.50.51). ಆದರೆ ಇದು ಭೂಮಾಲೀಕರಲ್ಲಿ, ಸಾಗುವಳಿದಾರರಲ್ಲಿ ಹಾಗೂ ಇತರೆ ವರ್ಗಗಳಲ್ಲಿ ಕಡಿಮೆ ಇದೆ.[12]

ಗ್ರಾಮೀಣ ಪ್ರದೇಶದ ಭೂರಹಿತ ಕೃಷಿ ಕೂಲಿಕಾರರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ದುಡಿಮೆದಾರರ ಪ್ರಮಾಣ ಅಧಿಕವಾಗಿರುವುದು ಅಧ್ಯಯನಗಳಿಂದ ದೃಢಪಟ್ಟಿದೆ. ಅದೇ ರೀತಿ ನಗರ ಪ್ರದೇಶದ ಹಂಗಾಮಿ ದುಡಿಮೆದಾರರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ದುಡಿಮೆಗಾರರ ಪ್ರಮಾಣ ಅತ್ಯಧಿಕವಾಗಿದೆ. ಅನುಚಾನವಾಗಿ ಸಾಮಾಜಿಕ ಅಸಮಾನತೆಯಿಂದ ನರಳುತ್ತಾ ಬಂದಿರುವ ಜಾತಿ–ವರ್ಗಗಳು ವೃತ್ತಿ ಸಂಬಂಧವಾಗಿಯೂ ಸಾಪೇಕ್ಷವಾಗಿ ಅಧಿಕಮಟ್ಟದ ಬಡತನವನ್ನು ಅನುಭವಿಸುತ್ತವೆ. ವೃತ್ತಿ ಸಂಬಂಧಿ ಶ್ರೇಣೀಕರಣಕ್ಕೂ ಮತ್ತು ಜಾತಿ ಸಂಬಂಧಿ ಶ್ರೇಣೀಕರಣಕ್ಕೂ ನಡುವೆ ಸಂಬಂಧವಿದೆ. ಅಸಮಾನತೆ ಕೊನೆಗೊಳ್ಳದವರೆಗೆ, ಜಾತಿ ಶೃಂಖಲೆ ನಿಲ್ಲದವರೆಗೆ ಸಮಾಜದ ಅಂಚಿನಲ್ಲಿ ಬದುಕು ದೂಡುತ್ತಿರುವ ವಂಚಿತರಿಗೆ ರಾಜಕೀಯ ಸ್ವಾತಂತ್ರ್ಯ ಹಾಗೂ ಅಭಿವೃದ್ಧಿಯ ಫಲಗಳು ದೊರೆಯುವುದು ಸಾಧ್ಯವಿಲ್ಲ. ಈ ಎಲ್ಲಾ ಸಂಗತಿಗಳಿಗೆ ಜಾಗತೀಕರಣ ಬೃಹತ್ ಅಡ್ಡಿಯಾಗಿ ನಿಂತಿದೆ.[13] ಜಾಗತೀಕರಣ ಜೀವಂತವಾಗಿರುವವರೆಗೂ, ಬುಡಕಟ್ಟು ಸಮುದಾಯಗಳ ಬಡತನ ಶಾಶ್ವತವಾಗಿ ಜೀವಂತವಾಗಿರುತ್ತದೆ. ನಿರ್ಲಕ್ಷಿತ ಸಮುದಾಯಗಳು ಜಾಗತೀಕರಣವನ್ನು ಎದುರಿಸುವ ಪರ್ಯಾಯಗಳನ್ನು ಹುಡುಕಿಕೊಳ್ಳುವುದು ಇಂದಿನ ಅನಿವಾರ್ಯತೆಯಾಗಿದ್ದು, ಸಂವಿಧಾನದ ರಕ್ಷಣೆಯಲ್ಲೇ ದಲಿತರು ಮತ್ತು ಬುಡಕಟ್ಟು ಸಮುದಾಯಗಳ ಭವಿಷ್ಯ ಅಡಗಿರುವುದು ವರ್ತಮಾನದ ಸತ್ಯಸಂಗತಿಯಾಗಿದೆ.

ಪರಾಮರ್ಶನ ಗ್ರಂಥಗಳು:

1. ಡಾ. ಡೊಮಿನಿಕ್, *ಜಾಗತೀಕರಣದ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು*, ಹೊಸಪೇಟೆ, ಸಖೀ ಪ್ರಕಾಶನ, 2007, ಪು.1–3
2. ಅರವಿಂದ ಚೊಕ್ಕಾಡಿ, "*ಆಧುನೀಕರಣ ಮತ್ತು ಜಾಗತೀಕರಣ*," ಟಿ.ಆರ್.ಚಂದ್ರಶೇಖರ (ಸಂ), ಅಭಿವೃದ್ಧಿ ಅಧ್ಯಯನ, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಸಂಪುಟ–3, ಸಂಚಿಕೆ–1, ಜುಲೈ.2003–2004,
3. ಡಾ. ಡೊಮಿನಿಕ್, *ಜಾಗತೀಕರಣದ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು*, ಹೊಸಪೇಟೆ, ಸಖೀ ಪ್ರಕಾಶನ, 2007, ಪು.8–9
4. ಮಹಮ್ಮದ್ ಸಲಾವುದ್ದೀನ್, *ಮಾನವ ಹಕ್ಕುಗಳು*, ಮಂಗಳೂರು, ಶಾಂತಿ ಪ್ರಕಾಶನ, 2005, ಪು.47–52
5. ಹೆಚ್.ಎಂ. ರಾಜಶೇಖರ, *ಭಾರತ ಸರ್ಕಾರ ಮತ್ತು ರಾಜಕೀಯ*, ಮೈಸೂರು, ಕಿರಣ್ ಪ್ರಕಾಶನ, 2013, ಪು.61

6. ಜಸ್ಟೀಸ್ ಎಸ್.ಆರ್.ನಾಯಕ್, ಹೆಚ್.ಎಂ.ರಾಜಶೇಖರ್, *ಪೂರ್ವೋಕ್ತ*, ಪು.68
7. ಜಸ್ವೀರ್ ಸಿಂಗ್, *ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ*, ಬಳ್ಳಾರಿ, ಲೋಹಿಯಾ ಪ್ರಕಾಶನ, 2000, ಪು.28
8. ಎಂ.ವಿ.ಪೈಲಿ, *ಇಂಡಿಯಾಸ್ ಕಾನ್‌ಸ್ಟಿಟ್ಯೂಷನ್*, ನ್ಯೂ ಡೆಲ್ಲಿ, ಎಸ್. ಚಾಂದ್ ಆಂಡ್ ಕಂಪನಿ ಲಿಮಿಟೆಡ್, 1994, ಪು.78
9. ಎಂ.ವಿ.ಪೈಲಿ, *ಇಂಡಿಯಾಸ್ ಕಾನ್‌ಸ್ಟಿಟ್ಯೂಷನ್*, ಪೂರ್ವೋಕ್ತ , ಪು.78–111
10. ಎಂ.ವಿ.ಪೈಲಿ, *ಇಂಡಿಯಾಸ್ ಕಾನ್‌ಸ್ಟಿಟ್ಯೂಷನ್*, ಪೂರ್ವೋಕ್ತ, ಪು.132–145
11. ಡಾ.ಟಿ.ಆರ್.ಚಂದ್ರಶೇಖರ, *ಕರ್ನಾಟಕ ಅಭಿವೃದ್ಧಿಯ ಆಕೃತಿ*, ಚನ್ನಪಟ್ಟಣ, ಪಲ್ಲವ ಪ್ರಕಾಶನ, 2007, ಪು.89
12. ಡಾ.ಟಿ.ಆರ್. ಚಂದ್ರಶೇಖರ, *ಕರ್ನಾಟಕ ಅಭಿವೃದ್ಧಿಯ ಆಕೃತಿ*, ಪೂರ್ವೋಕ್ತ ಪು.89–90
13. ಟಿ.ಆರ್.ಚಂದ್ರಶೇಖರ್, *ಕರ್ನಾಟಕ ಅಭಿವೃದ್ಧಿಯ ಆಕೃತಿ*, ಪೂರ್ವೋಕ್ತ ಪು.89–90

●

ಆದಿವಾಸಿ ಬದುಕಿನ ಒಳಸುಳಿಗಳು

ದಾರ, ಸೂಜಿ, ಪಿನ್ನ, ಉಸರು ಬುಲ್ಡಿ ಮಾರುವ ಹಂದಿ ಜೋಗಿ ಮೈಗೆ ಬಾರಿಸಿಕೊಳ್ಳುವ ದುರಮುರುಗೊರು, ಹನುಮಪ್ಪ, ರಾಮ, ಸೀತೆಯಂತೆ ವೇಷ ಹಾಕಿ ಭಿಕ್ಷೆ ಎತ್ತುವ ಹಗಲು ವೇಷಗಾರರು, ಗೊಂದಲಿಗರು, ಗರಾಸಿಯಾ, ವಾಗ್ರಿ, ಕಾಡು ಕುರುಬ, ಜೇನು ಕುರುಬ, ಮಲೆ ಕುಡಿಯಾ, ಸೋಲಿಗ, ಹಾಲಕ್ಕಿ ಒಕ್ಕಲಿಗ, ಲಂಭಾಣಿ, ಕೊರಚ, ಕೊರಮರಿಂದ ಹಿಡಿದು ಆದಿ ದ್ರಾವೀಡ, ಆದಿ ಕರ್ನಾಟಕದ ಜನರು ಒಂದಲ್ಲಾ ಒಂದು ಹಿನ್ನೆಲೆಯಲ್ಲಿ ಬುಡಕಟ್ಟು ಜನರೆ ಆಗಿದ್ದರು. ಹೀಗಾಗಿ ಅವರ ಅನುಭವ ದಾಖಲಾಗುವುದು ಅವಶ್ಯವಾಗಿದೆ. ಹೀಗಾಗಿ ಈ ಸಂಕಲನದಲ್ಲಿ ಬರುವ ಸುಮಾರು ಹದಿನಾಕು ಲೇಖನಗಳು ಅತ್ಯಂತ ವೈವಿಧ್ಯಮಯವಾಗಿರುವುದು ಶ್ಲಾಘನೀಯ. ಮೊದಲನೆ ಲೇಖನ ಆದಿವಾಸ ಆಹಾರ ಪದ್ಧತಿ ಮತ್ತು ಫಾಸ್ಟ್‌ಫುಡ್ ಸಂಸ್ಕೃತಿಯಿಂದ, ಆದಿವಾಸಿಗಳ ಬದುಕಿಗೆ ಬೆಳಕನ್ನು ಚೆಲ್ಲುವ ಮಲಾಣ್ ಕಾದಂಬರಿಯ ವಿಮರ್ಶೆಯವರೆಗೆ ವಿವಿಧ ಆಯಾಮಗಳನ್ನ ಹೊಂದಿರುವ ವಿಮರ್ಶೆ, ವೈಚಾರಿಕತೆ, ಸಂಶೋಧನೆ ಮೂರು ಪ್ರಕಾರಗಳ ಲೇಖನಗಳನ್ನ ಈ ಸಂಕಲನದಲ್ಲಿ ಕಾಣಬಹುದಾಗಿದೆ. ಈ ಮೂರು ಪ್ರಕಾರದ ಲೇಖನಗಳನ್ನ ಬರೆದಿರುವ ಬರಹಗಾರರು ಬಹಳ ಪ್ರಾಮಾಣಿಕತೆಯಿಂದ ಆ ಸಮುದಾಯಗಳಿಗೆ ನ್ಯಾಯ ಒದಗಿಸುವ ಹಿನ್ನೆಲೆಯಲ್ಲಿ ಬರೆದಿರುವುದು ಕಂಡು ಬರುತ್ತದೆ. ಹಾಗಾಗಿ ಇದೊಂದು ವಿಶಿಷ್ಟವಾದ ಲೇಖನಗಳ ಸಂಗ್ರಹವಾಗಿದ್ದು ಓದುಗರಿಗೆ ಒಂದು ಒಳ್ಳೆಯ ಅನುಭವವನ್ನು ಕೊಡುವುದರಲ್ಲಿ ಎರಡು ಮಾತಿಲ್ಲ.

(ಮುನ್ನುಡಿಯಿಂದ)

ಮುಖಪುಟ ಚಿತ್ರ ಕೃಪೆ: ಇಂಟರ್‌ನೆಟ್

ವಸಂತ ಪ್ರಕಾಶನ
ನಂ. 360, 10ನೇ 'ಬಿ'ಮುಖ್ಯ ರಸ್ತೆ, 3ನೇ ಬ್ಲಾಕ್
ಜಯನಗರ, ಬೆಂಗಳೂರು - 560 011
ದೂರವಾಣಿ: 40917099 / ಮೊ: 7892106719
email:vasantha_prakashana@yahoo.com
www.vasanthaprakashana.com

ಪ್ರಬಂಧಗಳು / Essays

ISBN 93-92935-20-X

ಬೆಲೆ: ₹ 110